ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಣೆಯೂ ಸಮಾವೇಶವಾಗಿವೆ.)

ಸಂಪಾದಕರು :

ಶ್ರೀನಿವಾಸ ಗುರಾಚಾರ್ಯ ಬೈಚವಾಳ, ಎಂ. ಎ.

ಕೂಗುವೊಂದಾಗಿ । ಕರುಳೊಂದಾಗಿ । ಹೃದಯವನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ದ್ವೇಷ ಮತ್ಸರ
ಮದಂಗಳ ನೀಗಿ ಸಾಗಲನುವಾಗಿರೈ । ಭೋಗಬಿಟ್ಟೇಳಿರೈ ।
ಕನ್ನಡವ್ವನ ಕುವರರೇ ॥ —ಋಗ್ವೇದ.

ಸಂಪುಟ ೮ಳ } ಜನೆವರಿ, ಫೆಬ್ರುವರಿ, ಮಾರ್ಚ ೧೯೪೬ { ವರ್ಷ ೧೮. ಸಂ ೧೦-೧೧-೧೨

ಕವಿ ಬೇಂದ್ರೆಯವರ ಚಿನ್ನದ ಹಬ್ಬ:—

ಕಳೆದ ಸಂಚಿಕೆಯಲ್ಲಿ ನಾವು ಬರೆದಂತೆ ಕವಿ ಬೇಂದ್ರೆ ಅವರ ಚಿನ್ನದ ಹಬ್ಬವನ್ನು ತಾ. ೧೭–೨–೧೯೪೬ನೆಯ ದಿನ ಧಾರವಾಡ ನಗರ ಸಭೆಯ ಆವರಣದ ಮೇಲೆ ವಿಜೃಂಭಣೆಯಿಂದ ಜರುಗಿಸಲಾಯಿತು. ಅಂದಿನ ಸಭೆಗೆ ಕನ್ನಡ ನಾಡಿನ ಕುಲಗುರುಗಳಾದ ಶ್ರೀ. ಮುದವೀಡು ಕೃಷ್ಣರಾಯರ. ಅಧ್ಯಕ್ಷರಾಗಿದ್ದುದು ಹರ್ಷದ ವಿಷಯ. ಸಭಾಮಂದಿರವು ಆಬಾಲ ವೃದ್ಧರಿಂದ ಕಿಕ್ಕಿರಿದು ತುಂಬಿತ್ತು. ಮಹಿಳೆಯರ ಗುಂಪು ಕನ್ನಡತಾಯಿ ರೂಪದಲ್ಲಿ ಬೇಂದ್ರೆಯವರನ್ನು ಹರಸಲು ಬಂದಂತೆ ತೋರುತ್ತಿತ್ತು. **ಉದಯವಾಗಲಿ, ಒಂದೆ ಕರ್ನಾಟಕ ಒಂದೆ** ಎಂಬ ಗೀತಗಳ ನಂತರ ಕಾರ್ಯಾರಂಭವು ಸಾಗಿತು. ಬೇಂದ್ರೆ ಸತ್ಕಾರ ಸಮಿತಿಯ ಅಧ್ಯಕ್ಷರಾದ ಶ್ರೀ. ರಾ. ಬ. ಎಲ್ ಜಿ ಸಬನೀಸ ವಕೀಲರು ಮತ್ತು ಉತ್ಸವ ಸಮಿತಿಯ ಅಧ್ಯಕ್ಷರಾದ ಪ್ರೊ. ಸ ಸ. ಮಾಳವಾಡ ಅವರು ಸ್ವಾಗತನಾಡಿದ ನಂತರ ಬೇಂದ್ರೆಯವರಿಗೆ ಹರಕೆಗಳನ್ನು ಕೋರಿಬಂದ ತಂತಿಗಳನ್ನು ಓದಲಾಯಿತು. ಈ ಹರಕೆಗಳಲ್ಲಿ ಪಾಂಡಿಚೇರಿ ಅರವಿಂದಾಶ್ರಮದ 'ಮಾ' ಅವರು ಕಳಿಸಿದ ಹರಕೆಯ ಓಲೆಯನ್ನು ಕಣ್ಣಿಗೂ ಹೃದಯಕ್ಕೂ ಹಚ್ಚಿಕೊಂಡು ತಾಯಿಗೆ ಶ್ರದ್ಧೆಯಿಂದ ಮನದಲ್ಲಿಯೆ ತಲೆಬಾಗಿದರು. ಅನೇಕರು ಬೇಂದ್ರೆಯವರಿಗೆ ಪೂಮಾಲೆಗಳನ್ನು ಅರ್ಪಿಸಿದರು ಅಧ್ಯಕ್ಷರನ್ನು ಮೊದಲುಗೊಂಡು, ಬೆಟಗೇರಿ ಕೃಷ್ಣ ಶರ್ಮರು, ಪ್ರೊ. ಧಾರವಾಡಕರರು, ಶ್ರೀಮತಿ ಕಮಲಾಬಾಯಿ ಜಮಖಂಡಿ, ಕುಮಾರಿ ಡಂಬಳ, ಶ್ರೀ. ಭೀಮಸೇನ ಸಾಸನೂರ, ಶ್ರೀ. ಆರ್. ಪಿ. ಬೆಳಗಾಂವಕರ, ಪ್ರೊ. ಮೆನೆಜಸ್, ಶ್ರೀ ಎನ್ಕೆ ಕುಲಕರ್ಣಿ, ಶ್ರೀ. ಬುರ್ಲಿ ಬಿಂದು ಮಾಧವ ಮೊದಲಾದವರು ಕವಿ ಬೇಂದ್ರೆ ಅವರ ಗುಣ ವರ್ಣನೆಮಾಡಿದರು, ಅವರ ಕವಿತ್ವ ಶಕ್ತಿಯನ್ನು ಶ್ಲಾಘಿಸಿದರು.

ಬಳಿಕ ಕವಿ ಬೇಂದ್ರೆಯವರು **ಎದ್ದುನಿಂತು 'ನೀವು ಸಲ್ಲಿಸುವ ಗೌರವ ನನಗಲ್ಲ** ನನ್ನನ್ನು ಕವಿಯನ್ನಾಗಿಸಿದ **ನನ್ನ ತಾಯಿಗೆ. ನನ್ನ ತಾಯಿಯನ್ನು** ಈ ನನ್ನ ದೇಹವೆಂ ದೇಗುಲದಲ್ಲಿ ಕುಳ್ಳಿರಿಸಿದ್ದೇನೆ. ನನ್ನ ನರಗಳ ತಂತಿಯನ್ನು ಮೀಂಟುತ್ತಾಳೆ, ಉಸುರಿನಿಂ ಕಾವ್ಯ ಹೊರಗೆಡಹುತ್ತಾಳೆ. ಆಕೆಯ ಹೆಸರಿನಿಂದ--ಅಂಬಿಕಾತನಯ ದತ್ತ ನೆಂಬ ಮುದ್ರಿಕೆಯಿಂದ ಕಾವ್ಯ ಬರೆಯುತ್ತೇನೆ. **ತಾಯಿಯನ್ನು ನೆನೆಯದವ ಮನುಷ್ಯನೆ?** ಹೆರವರ ದುಃಖವನ್ನು ಅರಿಯದವ ಮನುಷ್ಯನೇ? ಹೆರವರ ದುಃಖದ ಅರಿವಾದಾಗ ದುಃಖ ತನ್ನದಾಗುತ್ತದೆ ದುಃಖ ತನ್ನದೆಂದು ಭಾವಿಸಿದೊಡನೆ ಕಾವ್ಯ ಬರುತ್ತದೆ. **ದುಃಖದರಿನೇ ಕಾವ್ಯದ ಮೂಲ.** ಎಂದು ಮಿಂಚಿನಂತೆ ಮಾತಾಡಿ ಸತ್ಕಾರಮಾಡಿದವರ ಗುಣಗ್ರಾಹಕ ಶಕ್ತಿಯನ್ನು ಹೊಗಳಿ ಈ ಗುಣಗ್ರಾಹಕ ಶಕ್ತಿ ದಿನಾಲು ಜೀವನದಲ್ಲಿ ಕಾಣಿಸಿಕೊಳ್ಳಲಿ ಎಂದು ಭಾಷಣ ಮುಗಿಸಿದರು. ಬಳಿಕ ಅಧ್ಯಕ್ಷರ ಉಪಸಂಹಾರ ಭಾಷಣವಾದ ಮೇಲೆ ಅನೇಕ ನಾದಬ್ರಹ್ಮ ಪೂಜಾರಿಗಳು ಬೇಂದ್ರೆಯವರ ಕಾವ್ಯಗಳನ್ನು ಸುಶ್ರಾವ್ಯವಾಗಿ ಅಂದು ತೋರಿಸಿದರು.

ಶ್ರೀ. ಬೇಂದ್ರೆಯವರ ಸತ್ಕಾರ ನಿಧಿ ಇನ್ನೂ ಕೂಡುತ್ತಲಿರುವುದರಿಂದ ಅಂದ ಅವರಿಗೆ ನಿಧಿಯನ್ನು ಅರ್ಪಿಸಲಾಗಲಿಲ್ಲ; ಅವರ ಅಭಿನಂದನ ಗ್ರಂಥವನ್ನೂ ಪ್ರಕಟಿಸಲಾಗಲಿಲ್ಲ. ಗಲಗಲಿಯ ಗೆಳೆಯರು ಮಾತ್ರ **ಬೇಂದ್ರೆ ಮಾಜ್ಜಯ ವರ್ಷನ** ಎಂಬ ಗ್ರಂಥವನ್ನು ಪ್ರಕಟಿಸಿ ಬೇಂದ್ರೆಯವರಿಗೆ ಅರ್ಪಿಸಿದರು. ನಿಧಿ ಸಮರ್ಪಣೆ, ಅಭಿನಂದನ ಗ್ರಂಥ ಸಮರ್ಪಣೆ ಮೊದಲಾದ ಕಾರ್ಯಕ್ರಮಗಳು ಮೇ ತಿಂಗಳಲ್ಲಿ ಜರುಗಲಿವೆ. ಅಲ್ಲಿಯ ತನಕ ಕನ್ನಡ ಕಾವ್ಯ-ಸಾಹಿತ್ಯ ಪ್ರೇಮಿಗಳು ಹಣವನ್ನು ಶೇಖರಿಸಿ ಬೇಂದ್ರೆ ನಿಧಿಯ ಸಂಗ್ರಾಹಕರ ಕಡೆ ಕಳುಹಿಸಿಕೊಟ್ಟು ತಮ್ಮ ಗುಣಗ್ರಾಹಕ ಬುದ್ಧಿಯನ್ನು ತೋರಿಸಿ—ಕಾರ್ಯ ರೂಪಕ್ಕೆ ತಂದ ಕನ್ನಡ ಸಾಹಿತ್ಯದ ಹುಲುಸಾದ ಬೆಳೆಯನ್ನು ಪಡೆಯಲು ಪ್ರಯತ್ನಿಸಬೇಕೆಂದು ಸೂಚಿಸುತ್ತೇವೆ. ಚಿನ್ನದ ಹಬ್ಬದ ಸಂದರ್ಭದಲ್ಲಿ ನಮ್ಮ ಕಾಲೇಜಿನ ವರೆಗೂ ಬಂದು ಶಿಕ್ಷಕ ವಿದ್ಯಾರ್ಥಿಗಳಿಗೆ ತಮ್ಮ ಹಾಸ್ಯ-ಕಾವ್ಯಮಯವಾದ ಶೈಲಿಯಲ್ಲಿ ಶಿಕ್ಷಣಕಲೆಯನ್ನು ಕುರಿತು ಉಪದೇಶಮಾಡಿದುದಕ್ಕಾಗಿ ನಾವು ಇದೇ ಕೈಲಿ ಅಭಿನಂದನೆಗಳನ್ನು ಸಲ್ಲಿಸಿ ಬೇಂದ್ರೆಯವರಿಂದ ಇನ್ನೂ ಅನೇಕ ಕವನಗಳು ಹೊರಬೀಳಲಿ, ಕನ್ನಡಮ್ಮನ ಸೇವೆ ಅವರಿಂದ ಹೆಚ್ಚು ಹೆಚ್ಚಾಗಿ ಆಗಲಿ, ಅವರ ಆಯುರಾರೋಗ್ಯ ವರ್ಧಿಸಲಿ ಎಂದು ಹಾರೈಸಿ, ಇಂಥ ಅನೇಕ ಉತ್ಸವಗಳನ್ನು ಅವರು ಕಾಣಲೆಂದು ಪರಮಾತ್ಮನನ್ನು ಬೇಡುತ್ತೇವೆ.

ಪ್ರಾಥಮಿಕ ಶಿಕ್ಷಕರ ಸಂಪು:—

ಮುಂಬಯಿ ಪ್ರಾಂತದ ಪ್ರಾಥಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ. ದೊಂಡೆಯವರ ಹೇಳಿಕೆಯ ಮೇರೆಗೆ ದಕ್ಷಿಣ ಭಾಗದ ಪ್ರಾಥಮಿಕ ಶಾಲೆಗಳ ಶಿಕ್ಷಕರೂ ಶಿಕ್ಷಕಿಯರೂ ತಮ್ಮ ಸಂಬಳದ ಸ್ಕೇಲನ್ನು ಹೆಚ್ಚಿಸಬೇಕೆಂದು ಸರಕಾರಕ್ಕೆ, ಪರಿಣಾಮಕಾರಕವಾಗಿ ತಿಳಿಸುವ ಉದ್ದೇಶದಿಂದ ಸಂಪನ್ನ ಹೂಡಿದ್ದಾರೆ. ಟ್ರೇನಿಂಗ್ ಸಂಸ್ಥೆಗಳಲ್ಲಿ ತರಬೇತಿ ಹೊಂದುತ್ತಿರುವ ಶಿಕ್ಷಕ ಶಿಕ್ಷಿಕೆಯರ ಮೇಲೆ ಸಹ ಸಂಪಿನ ಪರಿಣಾಮವಾಗದೆ ಉಳಿದಿಲ್ಲ. ಸರಕಾರಿ ಟ್ರೇನಿಂಗ್ ಸಂಸ್ಥೆಗಳಲ್ಲಿ ಕೇವಲ ಬೆರಳಿನ ಮೇಲೆ ಎಣಿಸುವಷ್ಟು ಶಿಕ್ಷಕ ವಿದ್ಯಾರ್ಥಿಗಳು ಸಂಪಿನಲ್ಲಿ ಭಾಗವಹಿಸದೆ ಉಳಿದಿದ್ದಾರೆ.

ಶಿಕ್ಷಣಾಧಿಕಾರಿಗಳು ಸದ್ಯದ ತೊಡಕಿನ ಪ್ರಸಂಗದ ಅರಿವನ್ನು ಶಿಕ್ಷಕ-ವಿದ್ಯಾರ್ಥಿಗಳಿಗೆ ಮಾಡಿಕೊಟ್ಟು ಸಂಪಿನಲ್ಲಿ ಭಾಗವಹಿಸದೆ ಇರುವದು ಒಳ್ಳೆಯದೆಂದು ಹೇಳಿದಾಗೂ ಅವರು ಸಂಪಿನ ಮೇಲೆ ಹೋದವು ಸದ್ಯದ ಪರಿಸ್ಥಿತಿಯಲ್ಲಿ ಒಳಿತಾದುದಲ್ಲವೆಂದು ನಾವು ಹೇಳದೆ ಇರಲಾರೆವು.

ವಾದವಿವಾದ ಮಂಡಳದ ಸಂಕ್ಷಿಪ್ತ ವಾರ್ಷಿಕ ವರದಿಯು

ವಾಡಿಕೆಯಂತೆ ಕಾಲೇಜದ ವಾದವಿವಾದ ಮಂಡಳದ ಕಾರ್ಯಕಲಾಪಗಳು ಕಾಲೇಜದ ಉತ್ಸಾಹಿ ಪ್ರಾಧ್ಯಾಪಕರಾದ ಶ್ರೀ. ಎಸ್. ಜಿ. ಬೈಜವಾಳ. ಎಂ ಎ. ಎಸ್. ಟಿ. ಸಿ. ಡಿ. ಯವರ ಪ್ರೋತ್ಸಾಹನದ ಮೇರಿಗೆ ಜರುಗಿದವು. ಕಾಲೇಜದ ಈ ಚಟುವಟಿಕೆಗಳಿಗೆ, ಅನೇಕ ವಿದ್ಯಾಭಿಮಾನಿಗಳನ್ನೂ, ಸಾಹಿತಿಗಳನ್ನೂ ಬರಮಾಡಿಕೊಳ್ಳಲಾಯಿತು. ಶೈಕ್ಷಣಿಕ ಹಾಗೂ ಸಾಮಾಜಿಕ ವಿಷಯಗಳ ಮೇಲೆ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಇದು ಅಲ್ಲದೆ ಕಾಲೇಜದ ಪತಿಯಿಂದ ಶಿಕ್ಷಕ ನಿಧಾರ್ಥಿಗಳ ವಾದವಿವಾದಗಳೂ ಏರ್ಪಡಿಸಲಾಗಿದ್ದವು. ಪ್ರತಿಯೊಂದು ಕಾರ್ಯಗಳಲ್ಲಿ ಕಾಲೇಜದ ಶಿಕ್ಷಕರೂ, ಹಾಗೂ ವಿದ್ಯಾರ್ಥಿಗಳೂ ಉತ್ಸಾಹದಿಂದ ನೆರವಾಗಿ ವಿವಿಧ ಕಾರ್ಯಗಳನ್ನು ಸಾಂಗವಮಾಡಿದರು. ವರ್ಷದ ಮೊದಲಭಾಗದಲ್ಲಿ ಜರುಗಿದ ಕಾರ್ಯಗಳು ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈಗ ಎರಡನೇ ಭಾಗದಲ್ಲಿ ಜರುಗಿದ ಕಾರ್ಯ ಕಲಾಪಗಳು ಕೆಳಗಿನಂತಿವೆ.

ಉಪನ್ಯಾಸಗಳು

೧) ತಾ ೨೮—೯—೧೯೪೫ನೇ ದಿನ ಶ್ರೀಮಾನ್. ಶಿ. ಶಿ. ಬಸವನಾಳ ಎಂ. ಎ. ಇವರು 'ಕನ್ನಡ ಸಾಹಿತ್ಯ' ವೆಂಬ ವಿಷಯದ ಮೇಲೆ ಭಾಷಣ ಮಾಡಿದರು ಭಾಷಣಕಾರರು ಕನ್ನಡ ಸಾಹಿತ್ಯದ ಉಗಮ-ಬೆಳವಣಿಗೆಗಳನ್ನು ಕುರಿತು ವಿಹಂಗಮ ದೃಷ್ಟಿಯಿಂದ ಅವಲೋಕಿಸಿ, ಕನ್ನಡದ ಬೆಳಕನ್ನ ಅವೋಘವಾಗಿ ಹೊರಗೆಡವಿದರು.

೨) ತಾ ೧—೧೦—೧೯೪೫ನೇ ದಿನ ಕೇಂದ್ರ ಶಾಸನ ಸಭೆಯ ಸಭಾಸದರಾದ ಶ್ರೀಮಾನ್ ಜಿನರಾಜ ಹೆಗಡೆಯವರು ಸದ್ಯದ ಉಜ್ವಲ ಪ್ರಶ್ನೆಯಾದ 'ಕರ್ನಾಟ ಏಕೀಕರಣ' ದ ಬಗ್ಗೆ ಸುಮಾರು ೧॥ ತಾಸು ಸುಶ್ಯಾವ್ಯವ್ಯಾಖ್ಯಾನ ವನ್ನು ಮಾಡಿದರು. ಕನ್ನಡಿಗರು ಯಾವರೀತಿಯಿಂದ ಏಕೀಕರಣದ ಬಗ್ಗೆ ದುಡಿಯಬೇಕೆಂಬುದನ್ನೂ ಆ ಕೆಲಸಕ್ಕೆ ಬರತಕ್ಕ ಅತಂಕಗಳನ್ನೂ, ವಿಮರ್ಶಿಸಿ, ಮುಂದು ಮಾಡಬೇಕಾದ ಕಾರ್ಯಗಳನ್ನೂ ಗಮನಕೆ ತಂದು ಕೊಟ್ಟರು.

೩) ತಾ ೨೯—೧—೧೯೪೬ನೇ ದಿನ ಮೈಸೂರ ಆಕಾಶ ವಾಣಿಯ ಅಸಿ, ಡೈರೆಕ್ಟರರಾದ ಶ್ರೀ ಮಾನ್ ಎ. ಎನ್. ಮೂರ್ತಿರಾವ. ಎಂ. ಎ. ಇವರು " ಮಾಯಕಾದ ಮುಂದೆ ಮನುಷ್ಯ " ವೆಂಬ ವಿಷಯದ ವೇಲೆ ಮಾತನಾಡಿದರು. ವಿಷಯವು ಶಾಸ್ತ್ರೀಯವಾಗಿದ್ದರೂ ಒಳ್ಳೇ ರಸವತ್ತಾಗಿ ನಿವೇದಿಸಲ್ಪಟ್ಟಿತು.

೪) ತಾ ೧—೨—೧೯೪೬ನೇ ದಿನ ಪಂಡಿತ ಕೇಶವ ಶರ್ಮ ಗಲಗಲಿಯವರ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ವಿಷಯವು ನಿರಸವಾಗಿದ್ದರೂ, ಭಾಷಣಕಾರರು ಅಂದಿನ ವಿಷಯವಾದ "ಸಾಲಂಕೃತ ಕನ್ನಡ ಭಾಷೆ" ಎಂಬುದನ್ನು ಒಳ್ಳೇ ಮಾರ್ಮಿಕವಾಗಿ ಚರ್ಚಿಸಿದರು.

೫) ತಾ ೧೮—೨—೧೯೪೬ನೇ ದಿನ ಶ್ರೀ ಬೇಂದ್ರೆಯವರ ಭಾಷಣವನ್ನು ಏರ್ಪಡಿಸಲಾಗಿತ್ತು. ಬೇಂದ್ರೆಯವರು ಕಾವ್ಯಲಹರಿಯಲ್ಲಿ ಎಲ್ಲರೂ ತಲೆದೂಗುವಂತೆ ಭಾಷಣ ಮಾಡಿದರು ಸಭೆಯಲ್ಲಿ ಅವರಿಗೆ ಶುಭಾಕಾಂಕ್ಷೆಯನ್ನು ಕೋರಲಾಯಿತು.

ವರ್ಗ ಪದ್ಧತಿಯ ಲಾಭಗಳು

ವರ್ಗಕ್ಕೆ ಕಲಿಸುವ ಸಾಮೂಹಿಕ ಪದ್ಧತಿಯಿಂದ ಕೆಳಗೆ ಕಾಣಿಸಿದ ಲಾಭಗಳಾಗುತ್ತವೆ. :—

(೧) ವರ್ಗಗಳಲ್ಲಿಯೇ ಚರ್ಚಿತವಾಗುವ ರೀತಿಯು ಸಿದ್ಧಿಯ ವಿಶಿಷ್ಟ ಗುರಿಗಳನ್ನು ಪೂರೈಸುವದು. ಇಂತಿಷ್ಟು ಅವಧಿಯಲ್ಲಿ ಕಾರ್ಯವನ್ನು ಮುಗಿಸಬೇಕೆಂಬ ನಿರ್ಬಂಧವಿಲ್ಲದೆ ಹೋದರೆ ಅನೇಕ ವಿದ್ಯಾರ್ಥಿಗಳು ಮನಮುಟ್ಟಿ ದುಡಿಯದೆ ಇರುವ ಸಂಭವವುಂಟು. ವರ್ಗದಲ್ಲಿ, ಸ್ಪರ್ಧೆ ಮುಂತಾದ ವ್ಯವಸ್ಥೆ ಇರುವದರಿಂದ ವಿಶಿಷ್ಟ ಪ್ರಗತಿಯು ಸಾಧ್ಯವಾಗುವದು.

(೨) ವರ್ಗದ ಸಾಮಾನ್ಯ ಚರ್ಚೆಯು ಕಲಿಸುವ ವಿಧಾನವನ್ನು ಪೂರ್ತಿಗೊಳಿಸಿದಂತಾಗುವದು. ಇದಿಲ್ಲದಿದ್ದರೆ ಕಲಿಯುವವನಿಗೆ ತಾನು ಕಲಿತದ್ದು ಗೊತ್ತಾಗುವದಿಲ್ಲ, ಇಷ್ಟೇ ಅಲ್ಲ, ತಾನು ಕಲಿತದ್ದು ತನ್ನ ಕೈವಶವಾಯಿತೆಂಬ ಅರಿವೂ ಅವನಿಗೆ ಆಗುವದಿಲ್ಲ. ವರ್ಗದಲ್ಲಿಯ ಉಳಿದ ವಿದ್ಯಾರ್ಥಿಗಳು ಹೇಳಿದುದನ್ನು ಕೆಳುವದರಿಂದಲೇ ಇಂಥ ಪರಿಣಾಮವು ಉಂಟಾಗುವದು.

(೩) ಚರ್ಚೆಯಲ್ಲಿ ಭಾಗವಹಿಸುವದು ಬೌದ್ಧಿಕ ಹಾಗೂ ಭಾವನಾತ್ಮಕ ದೃಷ್ಟಿಯಿಂದ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ಪುಷ್ಟೀಕರಿಸುವದು. ಚರ್ಚೆಗೆ ಕೆಲವು ರೀತಿಯಿಂದ ಪ್ರೋತ್ಸಾಹನ ಕೊಟ್ಟ ವಿದ್ಯಾರ್ಥಿಯು ತನ್ನ ಮುಂದಿನ ಅಭ್ಯಾಸವನ್ನೂ ವಿಚಾರಸರಣಿಯನ್ನೂ ಜಾಗ್ರತೆಯಿಂದ ಕೈಕೊಳ್ಳಲು ಪ್ರೇರಿತನಾಗುವನು ತನ್ನ ಯೋಗ್ಯತೆಯ ಪರೀಕ್ಷೆಯಾದಂತಾಗಿ ಅದು ಬೆಳೆಯುತ್ತಲಿದೆ ಎಂಬ ಭಾವನೆಯುಂಟಾಗುತ್ತದೆ. ಬೇರೆ ವಿದ್ಯಾರ್ಥಿಗಳ ವಿವೇಚನೆಯನ್ನು ಕೇಳುವದರಿಂದ ಅದರಲ್ಲಿ ಹೆಚ್ಚಿನ ಜಾಣ್ಮೆಯನ್ನೂ ತನ್ನಲ್ಲಿ ಕಾಣಬರುವ ದೋಷಗಳನ್ನೂ ಅರಿತುಕೊಳ್ಳಲು, ತನ್ನನ್ನು ತಿದ್ದಿಕೊಳ್ಳಲು ಸಹಾಯವಾಗುವದು.

(೪) ವಿದ್ಯಾರ್ಥಿಗಳ ಶಂಕೆಗಳೂ ಅನುಮಾನಗಳೂ ದೂರಾಗುವವು.

(೫) ಈ ಅವಧಿಯಲ್ಲಿ ಪಠ್ಯಪುಸ್ತಕಗಳಲ್ಲಿಯ ಜ್ಞಾನಕ್ಕಿಂತ ಹೆಚ್ಚಿನ ಜ್ಞಾನವನ್ನೂ ಕೊಡಲ್ಪಟ್ಟು ಮತ್ತು ವಿದ್ಯಾರ್ಥಿಗಳು ತಮ್ಮಲ್ಲಿದ್ದ ಜ್ಞಾನದ ಲಾಭಗಳನ್ನು ಕೇಂದ್ರೀಕರಿಸಲು ಸಹಾಯವಾಗುವದು. ವರ್ಗದಲ್ಲಿ ಅಭ್ಯಸಿಸುವ ಪದ್ಧತಿಯಿಂದ ಪ್ರಯೋಗಗಳನ್ನೂ ಮಾದರಿಯ ಕತೆಗಳನ್ನೂ, ಚಿತ್ರಗಳನ್ನೂ ಸಾಮೂಹಿಕವಾಗಿ ವೇಳೆಯು ಅಪವ್ಯಯವಾಗದಂತೆ ಮಿತಿಯಿಂದಅಭ್ಯಾಸ ಮಾಡಲು ಅನುವು ದೊರೆಯುವದು.

(೬) ವರ್ಗದಲ್ಲಿ ಅನ್ಯೋನ್ಯ ಸಂಬಂಧಗಳನ್ನು ನಿರ್ಣಯಿಸುವದಕ್ಕೂ ಮತ್ತು ಜ್ಞಾನವನ್ನು ಹೊಂದಿಕೆಯಾಗಿ ಅರ್ಥವುಳ್ಳ ಪರಿಪೂರ್ಣತೆಯುಳ್ಳ ಅನುಭವದಂತೆ ವ್ಯವಸ್ಥೆಗೊಳಿಸಲು ಅನುಕೂಲವಾಗುವದು. ರಚನಾತ್ಮಕ ಶಿಕ್ಷಣವು ಇಂಥ ಯೋಜನೆಯಿಂದಲೇ ಸಾಧ್ಯವಾಗುವದು.

(೭) ಸಾಮೂಹಿಕ ಅನುಭವ ಮತ್ತು ಸಾಮಾನ್ಯಚರ್ಚೆ ಇವು ಸಂಗೀತ, ಕಲೆ, ಸಾಹಿತ್ಯ ಇವುಗಳಲ್ಲಿ ತೀರ ಮುಖ್ಯತ್ವವುಳ್ಳ ವಿಷಯಗಳಾಗಿವೆ.
ಎಲ್ಲರೂ ಕೂಡಿ ಕಂಡು ಹಿಡಿದ ರಸಾನುಭವವು ಪ್ರತಿಯೊಬ್ಬನ ರಸಗ್ರಹಣ ಶಕ್ತಿಯನ್ನು ರಸವತ್ತಾಗಿ ಬೆಳಸುತ್ತದೆ.

(೮) ವರ್ಗದಲ್ಲಿಯ ಸಮ್ಮೇಲನ ಅಥವಾ ಸಾಮೂಹಿಕ ಚರ್ಚೆಗಳು ಶಿಕ್ಷಣ ಕಾರ್ಯದಲ್ಲಿ ವಿನಿಮಯದ ಲಾಭವನ್ನು ಉಂಟು ಮಾಡಿಕೊಡುತ್ತವೆ. ಒಬ್ಬನಿಗಾಗಿ ಮಾಡಿದ ಪ್ರಯತ್ನವು ಹಲವರಿಗೆ ಅಥವಾ ಎಲ್ಲರಿಗೂ ಉಪಯೋಗವುಳ್ಳದ್ದಾಗುವದು
ವರ್ಗದಲ್ಲಿ ಸಾಮೂಹಿಕ ರೀತಿಯಲ್ಲಿ ನಡಿಸಿದ ವಾಠವು ಪಾಠವನ್ನು ಪುನಃ ಅಭ್ಯಾಸಿಸಿದಂತೆ. ಅಂದರೆ ಶಿಕ್ಷಕನೂ ವಿದ್ಯಾರ್ಥಿಗಳೂ ಕೂಡಿ ಸಹಕರಿಸಿದಂತಾಗುವದು. ಆ ಸಮಯದಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ವಿಚಾರಮಾಡಲು ಸಾಧ್ಯವಿದೆ; ಹೀಗೆ ಹೇಳಿದರೆ ಪರೀಕ್ಷಿಸುವ ಹೊಣೆಯೇ ಪೂರ್ಣವಾಯಿತೆಂದಲ್ಲ ಪ್ರಸಂಗಾನುಸಾರವಾಗಿ ಪರೀಕ್ಷೆಯ ಪ್ರಶ್ನೆಗಳನ್ನು ಕೇಳುತ್ತಿರಬಹುದು.

ವಿದ್ಯಾರ್ಥಿಗಳು ಗೊತ್ತುಪಡಿಸಿದ ವಿಷಯವನ್ನು ಚನ್ನಾಗಿ ಓದಿಕೊಂಡು ಬರಬೇಕು. ಚರ್ಚೆಯಾಗುವ ವಿಷಯದ ಸ್ವರೂಪಕ್ಕಿಂತ ಹೆಚ್ಚಿನ ಮಹತ್ವವುಳ್ಳ ವಿಷಯಗಳ ಸಮಾವೇಶವಾಗಬೇಕು. ಹೀಗಿಲ್ಲದಿದ್ದರೆ ಅದರ ಉದ್ದೇಶವೇ ನಿಷ್ಫಲವಾದಂತಾಗುವದು.

ಮೂಲ ಶಿಕ್ಷಣ ತರಬೇತಿ ವರ್ಗಗಳು.

(ಒಕ್ಕಲುತನದ ಶಾಲೆಗಳ ಮುಖ್ಯಾಧ್ಯಾಪಕರಿಗಾಗಿ)

ಮೂಲಶಿಕ್ಷಣ ರಿಫ್ರೆಶರ್ ಕೋರ್ಸ್ ವರ್ಗಗಳು ತಾ-೭-೧೦-೧೯೪೬ನೆಯ ದಿನ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲ್ ಅವರಾದ ಶ್ರೀಮಾನ್ ಎಸ್. ಜಿ. ಬೈಚವಾಳ ಎಂ. ಎ. ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದವು. ಮೂಲ ಶಿಕ್ಷಣ ಕೇಂದ್ರದ ಪ್ರಿನ್ಸಿಪಲರಾದ ಶ್ರೀಮಾನ್ ಆರ್. ಬ್ಹಿ. ದೇಸಾಯಿ, ಬಿ. ಎ., ಬಿ. ಟಿ. ಅವರು ವರ್ಧಾ ರಾಷ್ಟ್ರೀಯ ಶಿಕ್ಷಣ ಯೋಜನೆಯನ್ನು ಕುರಿತು ಪ್ರಾಸ್ತಾವಿಕವಾಗಿ ನಾಲ್ಕು ಮಾತುಗಳನ್ನು ಹೇಳಿ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು. ಶ್ರೀ. ಎನ್. ಆರ್. ಹಿರೇಮಠ ಬಿ. ಎಸ್‌ಸಿ; ಬಿ.ಟಿ; ಅವರು ಅನುವೋದನೆಯನ್ನಿತ್ತ ಬಳಿಕ ಶ್ರೀ. ಬೈಚವಾಳರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು. ಬಳಿಕ ಬೇಸಿಕ್ ಸ್ಕೂಲುಗಳ ಸುಪರವಾಯಿಜರರಾದ ಶ್ರೀಮಾನ್ ಕೆ. ಬಿ ಹೇರಗಾಂವಕರ ಬಿ. ಎಸ್ ಸಿ; ಬಿ. ಟಿ. ಅವರು ವರ್ಧಾ ರಾಷ್ಟ್ರೀಯ ಶಿಕ್ಷಣದ ಆದ್ಯಂತ ಇತಿಹಾಸವನ್ನು ಹೇಳಿದ ಬಳಿಕ ಅಧ್ಯಕ್ಷರು ತಮ್ಮ ಹಾಸ್ಯಪೂರಿತ ಉತ್ಸಾಹಭರಿತ ಶೈಲಿಯಲ್ಲಿ ಭಾಷಣ ಮಾಡಿದರು. ಅದರ ಸಾರವು ಕೆಳಗಿನಂತಿದೆ.

ವರ್ಧಾ ರಾಷ್ಟ್ರೀಯ ಶಿಕ್ಷಣವ ಕೊಡಿಯನ್ನು ಹೊರತಕ್ಕವರು ಹೇಗಿರಬೇಕೆಂಬುದನ್ನು ಕುರಿತು ಈ ದಿನ ನಾನು ಹೇಳಬೇಕೆಂದಿದ್ದೇನೆ ಈ ಮೊದಲು ನೀವು ಮೂಲ ಶಿಕ್ಷಣದ ಇತಿಹಾಸ ಮತ್ತು ಅದರ ಧ್ಯೇಯಗಳನ್ನು ಕುರಿತು ಕೇಳಿದ್ದೀರಿ. ಅದನ್ನು ಪುನಃ ಹೇಳುವದು ನಿಮಗೆ ಬೇಸರವನ್ನುಂಟುಮಾಡಬಹುದೆಂದು ಬಗೆದು, ಅದನ್ನು ಬಿಟ್ಟುಕೊಟ್ಟು ನಿಮ್ಮ ಹೊಣೆ ಗಾರಿಕೆಯ ಬಗ್ಗೆಯೆ ನಾಲ್ಕು ಮಾತುಗಳನ್ನು ಹೇಳುವುದು ನನಗೆ ಸೂಕ್ತವೆನಿಸುತ್ತದೆ.

ಈಗ ಅನೇಕ ಶಾಲೆಗಳಲ್ಲಿ ಕೊಡಲಾಗುತ್ತಿರುವ ಶಿಕ್ಷಣಕ್ಕೂ ನೀವು ಕೊಡಲಿರುವ ಶಿಕ್ಷಣಕ್ಕೂ ವ್ಯತ್ಯಾಸವಿದೆ. ನಿಮ್ಮ ಕರ್ತವ್ಯಕ್ಕೆ ಅನುಗುಣವಾಗಿ ನಿಮ್ಮ ಆದರ್ಶವಿರಬೇಕು. ನಿಮ್ಮ ಮುಂದಿರುವ ಆದರ್ಶ ಅತ್ಯಂತ ಉಜ್ವಲವಾದುದು. ಅದಕ್ಕೆ ಅನುಸಾರವಾಗಿ ನೀವು ಆದರ್ಶವಾದಿಗಳಾಗಿರಬೇಕು. ನೀವು ಕೊಡಲಿರುವ ಶಿಕ್ಷಣದ ಗೊತ್ತುಗುರಿಗಳನ್ನು ನೋಡಿದರೆ ನೀವು ಸ್ವಾಭಿಮಾನಿಗಳೂ ಸ್ವಾವಲಂಬಿಗಳೂ ರಾಷ್ಟ್ರೀಯ ಕಾರ್ಯಕರ್ತರೂ ಆಗಿರಬೇಕಾಗುವುದು. ಇತ್ತೀಚ್ಚಲಾಗಿ ವರ್ಧಾರಾಷ್ಟ್ರೀಯ ಶಿಕ್ಷಣ ಕ್ರಮದ ಬಗ್ಗೆ ಸರಿಯಾದ ಆಧಾರವಿಲ್ಲದ ಟೀಕೆ ಟಿಪ್ಪಣಿಗಳು ನಡೆದಿವೆ. ವ್ಯಾಖ್ಯಾನಗಳ ಮೂಲಕ, ಲೇಖನಗಳ ಮೂಲಕ ವರ್ಧಾ ರಾಷ್ಟ್ರೀಯ ಶಿಕ್ಷಣದ ಅಪಪ್ರಚಾರವು ನಡೆದಿದೆ. ಈ ಅಪಪ್ರಚಾರವನ್ನು ತಡೆಹಿಡಿಯಲು ನೀವು ಶಕ್ತಿವಂತರಾಗಬೇಕು. ನೀವು ವಿಶೇಷತಃ ಹಳ್ಳಿಗಳಲ್ಲಿ ಕೆಲಸ ಮಾಡಬೇಕಾಗಿರುವದರಿಂದ ಹಳ್ಳಿಗರ ಸಾದಾ ಜೀವನಕ್ಕೆ ಒಗ್ಗುವಂಥ ಜೀವನವನ್ನು–ಸಾದಾ ಸರಳ ಜೀವನವನ್ನು ಇಟ್ಟುಕೊಳ್ಳಬೇಕು; ಮಮತೆಯ ಮೂರ್ತಿಗಳಾಗಬೇಕು. ಹಳ್ಳಿಗರ ಜೀವನದೊಡನೆ ಸಮರಸವಾಗಬೇಕು. ಹೀಗೆ ನೀವು ನಿಮ್ಮ ಜೀವನವನ್ನು ಇಟ್ಟುಕೊಂಡರೆ ಮಾತ್ರ ನೀವು ನಿಮ್ಮ ಕೆಲಸದಲ್ಲಿ ಯಶಸ್ಸನ್ನು ಪಡೆದು ರಾಷ್ಟ್ರೋನ್ನತಿಗೆ ಕಾರಣರಾಗುವಿರಿ. ಈ ಶಿಕ್ಷಣ ಕ್ರಮದಲ್ಲಿ ಖಾದಿಗೆ ಅತ್ಯಂತ ಮಹತ್ವದ ಸ್ಥಾನವುಂಟು. ನಿಮ್ಮ ಮನೆ, ನಿಮ್ಮ ಅಂಗಗಳು ಖಾದಿಯಿಂದ, ಅದರ ಹಿನ್ನೆಲೆಯಲ್ಲಿರುವ ಸತ್ಯ-ಶುಭ್ರತೆಯಿಂದ ಪರಿಪೂರ್ಣವಾಗಿರಬೇಕು. ಇದಕ್ಕಾಗಿ ನಿಮ್ಮ ಮನಸ್ಸು ಸಿದ್ಧವಾಗಬೇಕು; ನಿಮ್ಮೊಳಗೆ ಸಾಹಸವೂ ಬೇಕು; ಕರ್ತೃತ್ವ ಶಕ್ತಿಯೂ ಬೇಕು. ಮನಸ್ಸು, ಸಾಹಸ, ಕರ್ತೃತ್ವ ಶಕ್ತಿ ಇಲ್ಲದವನು ಯಾವುದರಲ್ಲಿಯೂ ಯಶಸ್ಸನ್ನು ಪಡೆಯಲಾರನು.

ಮೂಲ ಶಿಕ್ಷಣದಲ್ಲಿ ಚಟುವಟಿಕೆಗೆ ಪ್ರಾಧಾನ್ಯವಿದೆ. ಆದುದರಿಂದ ಮೊದಲು ನೀವು ಸ್ವತಃ ಚಟುವಟಿಕೆಯುಳ್ಳವರಾಗಬೇಕು. ಕಪ್ಪೆ ನುಂಗಿದ ಹೆಬ್ಬಾವಿನಂತೆ ಆಲಸಿಗಳಾದರೆ

ಬಾಲಕರಲ್ಲಿ ಚಟುವಟಿಕೆ ಹೇಗೆ ಬಂದೀತು? ನೀವು ಚಟುವಟಿಕೆಯ ಪ್ರತೀಕವಾಗಬೇಕು. ಅನ್ಯರು ಅನುಕರಿಸುವಂತೆ ನಿಮ್ಮ ನಡತೆ, ಜೀವನ, ಆದರ್ಶ ಇರಬೇಕು. ಉತ್ಸಾಹ - ಆದರ್ಶದ ಬುಗ್ಗೆಯಾಗಿರಬೇಕು ನೀವು. ನೀವು ಕೈಕೊಳ್ಳಲಿರುವ ಕಾರ್ಯದಲ್ಲಿ ನಿಮಗೆ ಯಶಸ್ಸನ್ನು ಕೋರಿ, ಈ ದಿನ ಮಾಡಿದ ಸನ್ಮಾನಕ್ಕಾಗಿ ನಾನು ನಿಮ್ಮ ಪ್ರಿನ್ಸಿಪಾಲರಿಗೂ ಶಾಂತ ಚಿತ್ತದಿಂದ ಕೈಮುಗಿದು ನಿಮಗೂ ಅಭಿನಂದಿಸುತ್ತೇನೆ.

ಈ ವರ್ಗಗಳ ಮುಕ್ತಾಯ ಸಮಾರಂಭವೂ ಶ್ರೀಮಾನ್ ಬೈಚವಾಳ ಅವರ ಅಧ್ಯಕ್ಷತೆಯಲ್ಲಿ ೧೯—೧—೧೯೪೬ನೆಯ ದಿನ ಜರುಗಿತು. ಆ ದಿನವೂ ಅಧ್ಯಕ್ಷರು ವರ್ಧಾಶಿಕ್ಷಣದ ಹೊಣೆಯನ್ನು ಹೊರುವ ಶಿಕ್ಷಕ-ಶಿಕ್ಷಿಕೆಯರು ತಮ್ಮ ಅನುಭವ ವ್ಯಾಸಂಗವನ್ನು ಬೆಳೆಯಿಸಿಕೊಂಡು ಚಟುವಟಿಕೆಯ ಮುಖಾಂತರದ ಬೌದ್ಧಿಕ ಆನಂದವನ್ನು ವಿದ್ಯಾರ್ಥಿಗಳಿಗೆ ಕೊಡಲು ಶಕ್ತಿವಂತರಾಗಬೇಕೆಂದು ಹೇಳಿದರು. ಬೇಸಿಕ್ ಟ್ರೇನಿಂಗ್ ಸೆಂಟರಿನ ಶ್ರೀ. ವ್ಹಿ. ಆರ್. ಹಿರೇಮಠ ಅವರ ನೇತೃತ್ವದಲ್ಲಿ ಅಧ್ಯಾಪಕರೂ ಶಿಕ್ಷಕ-ಶಿಕ್ಷಿಕೆಯರೂ ಸೇರಿ ಏಕಾಂಕ ನಾಟಕ, ಸಂಗೀತ ಮುಂತಾದ ಕಾರ್ಯಕ್ರಮಗಳನ್ನು ಈ ತರಬೇತಿ ವರ್ಗಕ್ಕೆ ಬಂದ ಶಿಕ್ಷಕರಿಗಾಗಿ ಏರ್ಪಡಿಸಿದ್ದರು.

ಇದೇ ಬಗೆಯ ವರ್ಗಗಳು ಮತ್ತೆರಡು ಬಾರಿ ನಡೆದವು. ದ್ವಿತೀಯ ತರಬೇತಿ ವರ್ಗಗಳ ಪ್ರಾರಂಭೋತ್ಸವವು ತಾರೀಖು ೨೧—೧—೧೯೪೬ನೆಯ ದಿನ ಕೆ. ಇ. ಬೋರ್ಡ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ವಾಮನರಾವ .ಆರ್ ಮುಧೋಳಕರರ ಅಧ್ಯಕ್ಷತೆಯಲ್ಲಿ ಜರುಗಿತು. ಮುಕ್ತಾಯ ಸಮಾರಂಭವೂ ಇವರ ಅಧ್ಯಕ್ಷತೆಯಲ್ಲಿಯೆ ಆಯಿತು. ತೃತೀಯ ತರಬೇತಿ ವರ್ಗಗಳ ಪ್ರಾರಂಭೋತ್ಸವವು ತಾ. ೫—೨—೧೯೪೬ನೆಯ ದಿನ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನ ಸೇವಾನಿವೃತ್ತ ಪ್ರಿನ್ಸಿಪಾಲರಾದ ಶ್ರೀ ಮಾನ್ ಡಿ. ವ್ಹಿ. ಕಾಳೆ ಅವರ ಅಧ್ಯಕ್ಷತೆಯಲ್ಲಿ ಆಯಿತಲ್ಲದೆ ಮುಕ್ತಾಯ ಸಮಾರಂಭವೂ ಅವರ ಅಧ್ಯಕ್ಷತೆಯಲ್ಲಿಯೆ ಜರುಗಿತು. ಈ ಎರಡೂ ಮುಕ್ತಾಯ ಸಮಾರಂಭಗಳಲ್ಲಿಯೂ ವಿವಿಧ ವಿನೋದಾವಳಿಯ ಕಾರ್ಯಕ್ರಮಗಳು ಏರ್ಪಡಿಸಲ್ಪಟ್ಟಿದ್ದವು.

ಜೋಗು

ಮುಲ್ಕಿ ಪರೀಕ್ಷೆಯು ಮುಂದೆ ಬಿತ್ತು.

೧೯೪೬ ಎಪ್ರೀಲ್ ೧ನೆಯ ತಾರೀಖಿನಿಂದ ಪ್ರಾರಂಭವಾಗಲಿದ್ದ ಗಂಡು ಮಕ್ಕಳ ಮುಲ್ಕಿ ಪರೀಕ್ಷೆಯು ಕೆಲವು ಕಾರಣಗಳ ಮೂಲಕ ಮುಂದೆ ಹಾಕಲ್ಪಟ್ಟಿದೆಯೆಂದೂ, ಈ ಪರೀಕ್ಷೆಯು ಏಪ್ರಿಲ್ ತಿಂಗಳ ಕೊನೆಯ ವಾರದಲ್ಲಾಗಲಿ, ಮೇ ತಿಂಗಳ ಮೊದಲನೇ ವಾರವಲ್ಲಾಗಲಿ ಜರುಗುವದೆಂದೂ ನಿಶ್ಚಿತ ತಾರೀಖನ್ನು ಹಿಂದಿನಿಂದ ತಿಳಿಸಲಾಗುವುದೆಂದೂ, ಮುಂಬೈ ವಿದ್ಯಾಖಾತೆಯ ಮೆ || ಡಾಯರೆಕ್ಟರ ಸಾಹೇಬರು ಅಪ್ಪಣೆಕೊಡಿಸಿದ್ದಾರೆ.

ಟ್ರೇನಿಂಗ ಕಾಲೇಜ್ ಫಾರ್ ಮೆನ್, ಧಾರವಾಡ. (ಸಹಿ) ಎಸ್. ಜಿ- ಬೈಚವಾಳ

ಪ್ರಿನ್ಸಿಪಾಲ್

ತಾ ೩೦-೩-೧೯೪೬

ಟ್ರೇನಿಂಗ್ ಕಾಲೇಜ್-ಸರ್ಟಿಫಿಕೆಟ್ ಪರೀಕ್ಷೆಯ ಕಾರ್ಯಕ್ರಮ

೧೯೪೬

ಪ್ರ್ಯಾಕ್ಟಿಕಲ್ ಪರೀಕ್ಷೆ

೧. ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜ್, ಧಾರವಾಡ. ೧೩ ಮತ್ತು ೧೪ನೆಯ ಮಾರ್ಚ ೧೯೪೬ರ ಬದಲಾಗಿ ೨೮ ಮಾರ್ಚ ೧೯೪೬ರಿಂದ ಪ್ರಾರಂಭ.

೨. ಕೆ. ಇ. ಬೋರ್ಡ ಟ್ರೇನಿಂಗ್ ಕಾಲೇಜ್, ಧಾರವಾಡ. ೧೯, ೨೦, ಮತ್ತು ೨೧ನೆಯ ಮಾರ್ಚ ೧೯೪೬

೩. ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್, ಧಾರವಾಡ. ೨೨, ೨೩, ೨೫, ಮತ್ತು ೨೬ನೆಯ ಮಾರ್ಚ೧೯೪೬

ಲೇಖಿ ಪರೀಕ್ಷೆ

ದಿನ	ತಾರೀಖು	ವೇಳೆ ಇಂದ	ವರೆಗೆ	ವಿಷಯ
ಸೋಮವಾರ	೨೨-೪-೧೯೪೬	೧೧-೦	೧-೩೦	ಶಿಕ್ಷಣ-ಕಾಗದ ೧
	,,	೩ - ೦	೫-೩೦	ಶಾಸ್ತ್ರೀಯ ವಿಷಯ
ಮಂಗಳವಾರ	೨೩-೪-೧೯೪೬	೧೧-೦	೧-೩೦	ಅಂಕಗಣಿತ
	,,	೩ - ೦	೫-೩೦	ಭಾಷಾವಿಷಯ-ಕಾಗದ ೧
ಬುಧವಾರ	೨೪-೪-೧೯೪೬	೧೧- ೦	೧-೩೦	ಭೂಗೋಲ
	,,	೩ - ೦	೫-೩೦	ಭಾಷಾವಿಷಯ-ಕಾಗದ ೨
ಗುರುವಾರ	೨೫-೪-೧೯೪೬	೧೧ -೦	೧-೩೦	ಭೂಮಿತಿ ಮತ್ತು ಜಮಾ ಖರ್ಚು
	,,	೩ -೦	೫-೩೦	ಇತಿಹಾಸ
ಶುಕ್ರವಾರ	೨೬-೪-೧೯೪೬ (ಮುಂಜಾನೆ)	೮-೦	೧೦-೩೦	ಶಿಕ್ಷಣ - ಕಾಗದ ೨
	,,	೩-೦	೫-೩೦	ಐಚ್ಛಿಕ ಪ್ರಾಂತೀಯ ಭಾಷೆ (ಶಿಕ್ಷಕರಿಗಾಗಿ ಮಾತ್ರ) ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು (ವೋಕೇಶನಲ್ ಟ್ರೇನಿಂಗ್ ಸೆಂಟರ್, ಆಂಕಲೇಶ್ವರದ ಶಿಕ್ಷಕ ವಿದ್ಯಾರ್ಥಿಗಳಿಗೆ)

ಟೀಪು:—ಕಾರ್ಯಕ್ರಮ ವಿ. ಶಿಕ್ಷಕರಿಗೂ ವಿ. ಶಿಕ್ಷಕಿಯರಿಗೂ ಒಂದೇ ಇರುತ್ತದೆ. ಮೊದಲನೆಯ ವರ್ಷದ ಸೀನಿಯರ್ ವಿ. ಶಿಕ್ಷಕಿಯರಿಗೆ ಶುಕ್ರವಾರ ೨೬-೪-೧೯೪೬ನೆಯ ದಿನ ಪರೀಕ್ಷೆ ಇಲ್ಲ.

ಗಂಡು ಮಕ್ಕಳ ಉರ್ದು ಟ್ರೇನಿಂಗ್ ಕಾಲೇಜ್, ಪುಣೆ.

ಸರ್ಟಿಫಿಕೆಟ್ ಪರೀಕ್ಷೆ

ಮಧ್ಯಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ್ ಮೌ ಎಸ್. ಆರ್ ತಾವಡೆ ಅವರ ಸರಕ್ಯೂಲರ್ (೯-೩-೧೯೪೬) ಮೇರೆಗೆ ಪುಣೆಯ ಗಂಡು ಮಕ್ಕಳ ಉರ್ದು ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರು ಶಿಕ್ಷಕ ವಿದ್ಯಾರ್ಥಿಗಳಲ್ಲಿ ಸರ್ಟಿಫಿಕೆಟ್ ಪರೀಕ್ಷೆಯು ನಡೆಯುವದಿಲ್ಲವೆಂದು ಹಬ್ಬಿದ

ಸುದ್ದಿಯು ನಿರಾಧಾರವಾದುದೆಂದೂ ಪರೀಕ್ಷೆಯು ಮೊದಲು ಗೊತ್ತುಪಡಿಸಿದಂತೆ ನಡೆಯುವುದೆಂದೂ ಕೆಳಗೆ ಕಾಣಿಸಿದ ಪ್ರಕಾರ ಕಾರ್ಯಕ್ರಮವು ಗೊತ್ತುಪಡಿಸಲ್ಪಟ್ಟಿದೆಯೆಂದೂ ತಮ್ಮ ೧೪-೨-೧೯೪೬ನೆಯ ದಿನದ ಪತ್ರದಲ್ಲಿ ತಿಳಿಸುತ್ತಾರೆ.

೧ನೆಯ ವರ್ಷ

೧. ಪ್ರಾಕ್ಟಿಕಲ್ ಪರೀಕ್ಷೆಯ ಪ್ರಾರಂಭ :—— ೮—೪—೧೯೪೬ ಮುಂಜಾನೆ ೯।
೨. ಲೇಖಿ ಅಥವಾ ಬಾಯಿ ಪರೀಕ್ಷೆಯ ಪ್ರಾರಂಭ:—೨೨-೪—೧೯೪೬ ,, ೧೧ ,, ।

೨ನೆಯ ವರ್ಷ

೧. ಪ್ರಾಕ್ಟಿಕಲ್ ಪರೀಕ್ಷೆಯ ಪ್ರಾರಂಭ :—— ೧—೪—೧೯೪೬ ಮುಂಜಾನೆ ೯ ಗಂಟೆಗೆ
೨. ಲೇಖಿ ಪರೀಕ್ಷೆಯ ಪ್ರಾರಂಭ :——— ೨೨-೪—೧೯೪೬ ,, ೧೧ ಗಂಟೆ।

ಟೀಪು:— ಪ್ರಾಕ್ಟಿಕಲ್ ಪರೀಕ್ಷೆಗಾಗಿ ಉಮೇದವಾರರಿಗೆ ಕೊಟ್ಟ ವಿಷಯ ಮತ್ತು ವರ್ಗಗಳ ಮಾಹಿತಿ ಪತ್ರಿಕೆಯು ಎಂದಿನಂತೆ ಎರಡು ದಿನ ಮುಂಚಿತವಾಗಿ ಕಾಲೇಜಿನ ನೋಟೀಸ್ ಬೋರ್ಡಿಗೆ ಅಂಟಿಸಲ್ಪಡುವುದು.

ಪ್ರಶ್ನೋತ್ತರ ಪದ್ಧತಿ

ಲೇಖಕರು :— ಶ್ರೀ. ಎಸ್. ಜಿ. ಬೈಜವಾಳ, ಎಂ. ಎ.

ಕಲಿಸುವ ಮುಖ್ಯಸಾಧನವು ಸಾಮಾನ್ಯವಾಗಿ ಪ್ರಶ್ನೋತ್ತರವೆಂದು ಎಲ್ಲರಿಗೂ ತಿಳಿದ ವಿಷಯವಾಗಿದೆ ಪರಿಣಾಮಕಾರಿಯಾದ ಪ್ರಶ್ನೆಯನ್ನು ರಚಿಸುವದು ಕಲೆಯಾದುದರಿಂದ ಆ ಕಲೆಯ ಪರಿಪೂರ್ಣತೆಗಾಗಿ ಸೂಚನೆಗಳನ್ನು ಕೊಡುವದು ದುಸ್ತರವಾದ ವಿಷಯ. ಪ್ರಶ್ನೆಗಳನ್ನು ಕೇಳುವ ರೀತಿಯ ವಿಷಯಕ್ಕೆ ಕೆಲವು ವ್ಯವಹಾರಿಕ ಸೂಚನೆಗಳನ್ನು ಕೊಡಬಹುದು

ಪ್ರಶ್ನೆಯನ್ನು ಕೇಳುವದು ಗುರಿಹೊಡೆಯುವಂತಿದೆ. ತುಬಾಕಿಯನ್ನು ಹೊಡೆಯತಕ್ಕ ಸ್ಥಳದ ಕಡೆಗೆ ಸರಿಯಾಗಿ ಹಿಡಿಯದಿದ್ದರೆ ಗುರಿಯು ತಪ್ಪಿಹೋಗುವದು. ಪ್ರಶ್ನೆಯು ಸರಿಯಾದುದಿಲ್ಲದಿದ್ದರೆ ತಕ್ಕ ಪ್ರತಿಫಲವು ದೊರೆಯುವದಿಲ್ಲ. ಒಳ್ಳೆಯ ಪ್ರಶ್ನೆಯ ಮುಖ್ಯ ಲಕ್ಷಣಗಳು ಕೆಳಗೆ ಕಾಣಿಸಿದಂತಿವೆ.

(೧) ಪ್ರಶ್ನೆಗಳಲ್ಲಿ ಅಸಂಬದ್ಧ ವಿಷಯದ ಪ್ರವೇಶವಿರಕೂಡದು
(೨) ಶಕ್ಯವಿದ್ದಷ್ಟು ಸಂಬದ್ಧ ವಿಷಯಗಳ ಸಮಾವೇಶವಿರಬೇಕು.
(೩) ವಿದ್ಯಾರ್ಥಿಗಳಿಗೆ ಅವು ಸರಿಯಾಗಿ ತಿಳಿಯುವಂತಿರಬೇಕು.
(೪) ಪ್ರಶ್ನೆಗಳನ್ನು ಸಂದಿಗ್ಧವಲ್ಲದ ಸ್ಪಷ್ಟ ರೀತಿಯಲ್ಲಿ ರಚಿಸಿರಬೇಕು.
(೫) ಪಠ್ಯ ಪುಸ್ತಕದ ಶಬ್ದಗಳಲ್ಲಿಯೇ ಅವುಗಳನ್ನು ಯೋಜಿಸಕೂಡದು.
(೬) ವಿದ್ಯಾರ್ಥಿಗಳ ವಯಸ್ಸು, ಪರಿಪಕ್ವತೆ. ಯೋಗ್ಯತೆ ಮುಂತಾದವುಗಳನ್ನು ಲಕ್ಷಿಸಬೇಕು.

ಮನುಷ್ಯ ಪ್ರಾಣಿಗಳನ್ನು ಯಾವ ಯಾವ ಒಳಗುಂಪುಗಳಲ್ಲಿ ವಿಭಾಗಿಸಬಹುದು? ಈ ಪ್ರಶ್ನೆಯು ಸ್ಪಷ್ಟವಾಗಿಲ್ಲ. ಆದರೆ ಈ ಪ್ರಶ್ನೆಗೆ ಅವರ ವೈಜ್ಞಾನಿಕ ದೃಷ್ಟಿಯಿಂದ ಎಂಬುದನ್ನು ಜೋಡಿಸಿದರೆ ಪ್ರಶ್ನೆಯು ಸ್ಪಷ್ಟವಾಗುವದು.

(ನಿಶ್ಚಳವಾದ) ನಿಶ್ಚಿತ ಹಾಗೂ ಸ್ಪಷ್ಟ ಪ್ರಶ್ನೆಗಳನ್ನು ಕೇಳುವದು ಕೇಳುವವನ ಆಯಾ ವಿಷಯದಲ್ಲಿಯ ಜ್ಞಾನ ಮತ್ತು ಜಾಣತನವನ್ನು ಅವಲಂಬಿಸುವದು ಕೇಳತಕ್ಕ ವಿಷಯವನ್ನು ಅವನೇ ಆರಿಸತಕ್ಕದ್ದು.

ಪ್ರಶ್ನೆಗಳನ್ನು ಮೂರು ಪ್ರಕಾರವಾಗಿ ವಿಭಾಗಿಸಬಹುದು:—

೧) ವಿಷಯ ಸ್ವರೂಪ ದೃಷ್ಟಿಯಿಂದ:— (ಅ) ಸಂಗತಿಗಳನ್ನು ಹೊರಡಿಸುವ ಪ್ರಶ್ನೆಗಳು.
(ಆ) ವಿಚಾರ ಪ್ರಚೋದಕ ಪ್ರಶ್ನೆಗಳು.

ಇವೆರಡರಲ್ಲಿ ಎರಡನೆಯ ತರದ ಪ್ರಶ್ನೆಗಳು ಶ್ರೇಷ್ಠವೆಂದು ಕೆಲವರ ಊಹೆ. ಆದರೆ ಸರಿಯಾದ ಪಕ್ವವು ಸಿದ್ಧವಾಗದೆ ಸರಿಯಾದ ಸಂಬಂಧಗಳನ್ನು ಹೊರಡಿಸುವದು ಸಾಧ್ಯವಿಲ್ಲ.

೨) ವಿಷಯ ಪರಿಮಾಣ ದೃಷ್ಟಿಯಿಂದ:—(ಅ) ಸವಿಸ್ತರ–ಕೂಲಂಕಷ–ವಿಸ್ತೃತ.
(ಆ) ವಿಷಯದ ಮುಖ್ಯ ಭಾಗಗಳಿಗೆ ಸಂಬಂಧಿಸಿದ ಸಾರಾಂಶ ಪ್ರಶ್ನೆಗಳು.

ಮೊದಲು ಸವಿಸ್ತರ ಪ್ರಶ್ನೆಗಳನ್ನು ಕೇಳಿ ಆ ಮೇಲೆ ಸಾರಾಂಶ ಪ್ರಶ್ನೆಗಳನ್ನು ಹೊಂದಿಕೆಯಿಂದ ಕೇಳತಕ್ಕದ್ದು

೩) ಉದ್ದೇಶ ದೃಷ್ಟಿಯಿಂದ:—(ಅ) ಕಲಿಯುವ ಪ್ರಶ್ನೆಗಳು.
(ಆ) ಕಲಿಸುವ ಪ್ರಶ್ನೆಗಳು.
(ಇ) ಪರೀಕ್ಷಿಸುವ ಪ್ರಶ್ನೆಗಳು

(ಅ) ತನಗೆ ಗೊತ್ತಿಲ್ಲದ ವಿಷಯವನ್ನು ತಿಳಿದುಕೊಳ್ಳುವ ಪ್ರಶ್ನೆಯು ಕಲಿಯುವ ಪ್ರಶ್ನೆಯು. ಧಾರವಾಡಕ್ಕೆ ತಲುಪಲು ಯಾವ ದಾರಿಯಿಂದ ಹೋಗಬೇಕು? ಬೆಳಗಾಂವ ಇಲ್ಲಿಂದ ಎಷ್ಟು ದೂರ ಇದೆ? ಇಂಥ ಪ್ರಶ್ನೆಗಳನ್ನು ಮೋಟಂ ನಡಿಸುವವನು ಸಹಜವಾಗಿ ಕೇಳುವನು ವಿದ್ಯಾರ್ಥಿಗಳನ್ನು ಇಂಥ ಪ್ರಶ್ನೆಗಳನ್ನು ಕೇಳುವಂತೆ ಉತ್ತೇಜಿಸಬೇಕು ಶಿಕ್ಷಕನಾದರೂ ಇಂಥ ಪ್ರಶ್ನೆಗಳನ್ನು ಕೇಳಲು ಹಿಂಜರಿಯಬಾರದು. ಎಲ್ಲರೂ ಜ್ಞಾನಾರ್ಥಿಗಳೇ ಶಿಕ್ಷಕರು ಸಹ ಜ್ಞಾನವನ್ನು ದೊರಕಿಸಲು ಹವಣಿಸುತ್ತಿರುವರೆಂಬುದು ವರ್ಗದವರ ಜ್ಞಾನಾರ್ಜನೆಗೆ ಸರಿಯಾದ ಕಳೆಯನ್ನು ತಂದುಕೊಡುವದು.

(ಆ) ವಿಷಯವನ್ನು ವಿಕಾಸಗೊಳಿಸುವ ಪಾಠದಲ್ಲಿ ಕೇಳುವ ಪ್ರಶ್ನೆಗಳು ಕಲಿಸುವ ಪ್ರಶ್ನೆಗಳು.

(ಇ) ಬಾಯಿಂದ ಅಥವಾ ಲೇಖಿ ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳು ಪರೀಕ್ಷಿಸುವ ಪ್ರಶ್ನೆಗಳು.

ಪ್ರಶ್ನೆಗಳನ್ನು ಯಾವುದು ಮೊದಲು ಯಾವುದು ಹಿಂದುಗಡೆ ಕೇಳಬೇಕೆಂಬ ವಿಚಾರವನ್ನು ಮುಖ್ಯವಾಗಿ (೧) ಆಯಾವಿಷಯದ ವಿಶಿಷ್ಟ ಸ್ವರೂಪದ ಮೇಲೆ (೨) ಮತ್ತು ಶಿಕ್ಷಕನು ಕಲಿಸಬೇಕೆಂದು ಸಿದ್ಧಿಸಿದ ಯೋಜನೆಯ ಮೇಲೆ ಅವಲಂಬಿಸಿದೆ. ಮೊದಲನೆಯದು ತರ್ಕಬದ್ಧ ರೀತಿಯನ್ನೂ ಎರಡನೆಯದು ಮಾನಸಶಾಸ್ತ್ರೋಕ್ತ ರೀತಿಯನ್ನೂ ಮನ್ನಿಸುತ್ತವೆ. ಅಕ್ಷಾಂಶ ರೇಖಾಂಶ ಪಾಠವನ್ನು ಹೇಳುವ ಶಿಕ್ಷಕನು ಪಾಠಕ್ಕೆ ಮುಖ್ಯವಾಗಿ ಸಂಬಂಧಪಡಿಸಿದ ಯಾವುದಾದರೊಂದು ಪ್ರಚಲಿತ ಘಟನೆಗಳಲ್ಲಿ ಆಪತ್ತಿಗೀಡಾದ ಹಡಗವು ತನ್ನ ವಿಪತ್ತನ್ನು ಉಳಿದ ಹಡಗದವರಿಗೆ ತಿಳಿಸಲು ಯಾವ ಉಪಾಯವನ್ನು ಕೈಕೊಳ್ಳಬೇಕಾಗುವದು; ಸಮುದ್ರದ ಮೇಲೆ ತಾನಿದ್ದ ಸ್ಥಳದ ಆರಿವನ್ನು ಹೇಗೆ ಮಾಡಿಕೊಡಲು ಸಾಧ್ಯವಾಗುವದು; ಮುಂತಾದ ಪ್ರಶ್ನೆಗಳ ಸಹಾಯದಿಂದ ಅಕ್ಷಾಂಶ ರೇಖಾಂಶಗಳ ಕಲ್ಪನೆಯನ್ನು ಮಾಡಿಕೊಡುವದು ಮಾನಸಶಾಸ್ತ್ರೋಕ್ತ ರೀತಿಯನ್ನು ಅವಲಂಬಿಸಿದುತಾಯಿತು. ಯಾವುದೊಂದು ವಿಷಯವನ್ನು ಇದೇ ಮಾರ್ಗದಿಂದ ವಿಕಾಸಗೊಳಿಸಬೇಕೆಂಬ ನಿರ್ಬಂಧವಿಲ್ಲ. ಪ್ರಶ್ನೆಗಳನ್ನು ಯಾವುದೇ

ಒಂದು ನಿರ್ದಿಷ್ಟ ಮಾರ್ಗದಿಂದಲೇ ರಚಿಸಬೇಕೆಂಬ ನಿಯಂತ್ರಣವಿಲ್ಲ. ಪಾಠದ ಯೋಚನೆಯನ್ನು ಸಿದ್ಧಗೊಳಿಸಿದ ಮೇಲೆ ಅಕಸ್ಮಾತ್ತಾಗಿ ಅನಿರೀಕ್ಷಿತ ಉತ್ತರಗಳಾಗಲಿ ಪ್ರತಿ ಪ್ರಶ್ನೆಗಳಾಗಲಿ ಉದ್ಭವಿಸಿದಾಗ್ಯೂ ಶಿಕ್ಷಕನು ತನ್ನ ಮಾರ್ಗವನ್ನು ಬಿಟ್ಟು ದೂರ ಚಲಿಸಲಾರನು.

ವರ್ಗಕ್ಕೆ ಕಲಿಸುವ ಕಾರ್ಯವು ಮುಖ್ಯವಾಗಿ ಸಾಮೂಹಿಕವಿದ್ದು ತದನಂತರ ಕಾರ್ಯವಶದಿಂದ ವೈಯಕ್ತಿಕವಿದ್ದುದರಿಂದ ಕೆಳಗಿನ ಕ್ರಮಕ್ಕೆ ಸಂಬಂಧಿಸಿದ ಸೂಚನೆಗಳನ್ನು ಗಮನಿಸಬೇಕು:—ಈ ನಿಯಮಗಳನ್ನು ಪಾಲಿಸಿದರೆ ಕ್ರಮಚ್ಯುತಿಯಾಗದ ಒಳ್ಳೇ ಕ್ರಮಗಳು ಸ್ಥಿರಗೊಳ್ಳುವವು.

(೧) ನಿಮ್ಮ ಪ್ರಶ್ನೆಯನ್ನು ಮೊದಲು ಕೇಳಿ ಆಮೇಲೆ ಯಾರಿಗಾದರೂ ಆ ಪ್ರಶ್ನೆಯನ್ನು ಬಿಡಿಸಲು ಅಥವಾ ಚರ್ಚಿಸಲು ಬೊಟ್ಟುಮಾಡಿ ತೋರಿಸಿರಿ. ಹೀಗೆ ಮಾಡುವುದರಿಂದ ಎಲ್ಲರೂ ಜಾಗರೂಕರಾಗಿದ್ದು ಯಾರಿಗೂ ಸಂಕೋಚವೆನಿಸುವದಿಲ್ಲ. ಒಬ್ಬ ವಿದ್ಯಾರ್ಥಿಯ ಹೆಸರನ್ನು ತೆಗೆದುಕೊಂಡು ಪ್ರಶ್ನೆಯನ್ನು ಉಚ್ಚಾರಿಸಹತ್ತಿದರೆ ಉಳಿದ ಎಲ್ಲ ವಿದ್ಯಾರ್ಥಿಗಳು ಆಯಾ ವಿದ್ಯಾರ್ಥಿಯೇ ಬಲಿಯಾಗಿರುವನೆಂದು ಏನೂ ವಿಚಾರ ಮಾಡದೆ ನಿಶ್ಚಿಂತೆರಾಗಿ ಉಳಿಯುವರು.

(೨) ಪ್ರಶ್ನೆಗಳನ್ನು ಸಿಕ್ಕಹಡೆಯಲ್ಲಿ ಮನಬಂದಂತೆ ಹೆಂಚಿರಿ:—ವಿದ್ಯಾರ್ಥಿಗಳ ಹೆಸರುಗಳ ಎಲೆಗಳನ್ನು ಮೇಲೆ ಕೆಳಗೆ ಮಾಡುತ್ತ ಕೈಗೆಬಂದ ಎಲೆಯ ಹೆಸರಿನ ವಿದ್ಯಾರ್ಥಿಗೆ ಪ್ರಶ್ನೆಯನ್ನು ಕೇಳುತ್ತ ಹೋದರೆ ತಮ್ಮ ಸರತಿಯು ಪ್ರತಿಸಲ ಬರುವಸಂಭವವಿದೆಯೆಂದು ವರ್ಗದಲ್ಲಿಯ ಎಲ್ಲ ವಿದ್ಯಾರ್ಥಿಗಳೂ ಪ್ರಶ್ನೆಯನ್ನು ಲಕ್ಷಪೂರ್ವಕವಾಗಿ ಮನಮುಟ್ಟಿ ಬಿಡಿಸಲು ಹೆಣಗುವರು; ಪ್ರಶ್ನೆಗಳನ್ನು ವಿಶಿಷ್ಟರೀತಿಯಿಂದ ಕ್ರಮವಾಗಿ ಕೇಳಿದರೆ ಆಯಾ ವಿದ್ಯಾರ್ಥಿಯು ತನ್ನ ಸರತಿಗೆ ಬರುವ ಪ್ರಶ್ನೆಯ ಉತ್ತರವನ್ನಷ್ಟೇ ಸಿದ್ಧಗೊಳಿಸಿ ಉಳಿದ ಪ್ರಶ್ನೆಗಳ ವಿಷಯಕ್ಕೆ ವಿಚಾರವನ್ನೇ ಮಾಡದಿರುವ ಸಂಭವವಿದೆ. ವರ್ಗದಲ್ಲಿಯೂ ಪಾಠದಲ್ಲಿ ಭಾಗವಹಿಸುವದು ಹೆಮ್ಮೆಯ ವಿಷಯ, ಕೆಲವು ಶಿಕ್ಷಕರು ದಿನಾಲು ವಿಶಿಷ್ಟ ವಿದ್ಯಾರ್ಥಿಗಳನ್ನೇ ಮಾತಾಡಹಚ್ಚುವ ಸಂಭವವಿದೆ. ಹಾಗೆ ಮಾಡಬಾರದು.

(೩) ವಿದ್ಯಾರ್ಥಿಗಳ ಉತ್ತರಗಳನ್ನು ಪುನರುಚ್ಚರಿಸಬೇಡಿರಿ —ಶಿಕ್ಷಕನೇ ವಿದ್ಯಾರ್ಥಿಗಳ ಉತ್ತರಗಳನ್ನು ಪುನರುಚ್ಚರಿಸುತ್ತ ಹೋದರೆ ವಿದ್ಯಾರ್ಥಿಗಳು ತಮ್ಮವರಲ್ಲಿಯ ಉತ್ತರಗಳನ್ನು ಲಕ್ಷ್ಯಪೂರ್ವಕವಾಗಿ ಕೇಳುವ ರೂಢಿಯನ್ನು ಸಾಧಿಸಿಕೊಳ್ಳದೆ ಶಿಕ್ಷಕನ ಉತ್ತರಗಳನ್ನು ಮಾತ್ರ ಕೇಳುವರು. ಈ ರೂಢಿಯು ಬೇಳಲು ಕೆಲವು ಕಾರಣಗಳಿರುವವು. ಅವು ಕೆಳಗಿನಂತೆ ಇರುವವು.

(೧) ಹೊಸದಾಗಿ ಕಲಿಸುವ ಶಿಕ್ಷಕನು ಗಾಬರಿಯಾಗದೆ ಯಾವದಾದರೊಂದು ಕಾರ್ಯವು ಸತತವಾಗಿ ನಡೆಯುತ್ತಿರಬೇಕೆಂಬ ಹವಣಿಕೆಯಿಂದ ಹಾಗೆ ಮಾಡುತ್ತಿರಬಹುದು.

(೨) ಹುಡುಗರ ಉತ್ತರಗಳನ್ನು ಪುನಃ ಅನ್ನುವದು ಎರಡು ಪ್ರಶ್ನೆಗಳ ನಡುವಿನ ಕಾಲಾವಧಿಯನ್ನು ತುಂಬಲು ಸಹಾಯವಾಗುವದು.

(೩) ಹೊರಗಿನ ಸಪ್ಪಳದಿಂದ ಉತ್ತರವು ಎಲ್ಲರಿಗೂ ಕೇಳಸಲಿಕ್ಕಿಲ್ಲವೆಂಬ ಅನುಮಾನದಿಂದ ಪುನರುಚ್ಚಾರವಾಗುತ್ತಿರಬಹುದು.

(೪) ವಿದ್ಯಾರ್ಥಿಗಳನ್ನು ಕೂಡಿಸುವದರಲ್ಲಿ ದೋಷವಿದ್ದು ಹಿಂದಿನವರಿಗೆ ಕೇಳಬೇಕೆಂಬ ಉದ್ದೇಶವಿರಬಹುದು.

(೫) ಪ್ರಬಲವಾದ ಕಾರಣವೇನೆಂದರೆ ತಾನು ಆದೇ ಕೆಲವು ಹೊತ್ತಿನ ಹಿಂದೆ ಕೇಳಿದ ಮಾತನ್ನು ಪುನಃ ಅನ್ನುವ ಪ್ರವೃತ್ತಿ. ಹಾಗೆ ಅನ್ನುವದರಿಂದ ಆ ಮಾತನ್ನು ಗ್ರಹಿಸಿದಂತಾಗುವದು. ಈ ತರದ ರೂಢಿಯನ್ನು ಸರ್ವಥಾ ಶಿಕ್ಷಕನು ಮಾಡಿಕೊಳ್ಳಬಾರದು. ಈ ರೂಢಿಯು ಒಮ್ಮೆ ನೆಲೆಗೊಂಡರೆ ಶಿಕ್ಷಕನಿಗೆ ಉತ್ತರಗಳನ್ನು ಪುನಃ ಉಚ್ಚಾರಿಸದಿದ್ದರೆ ಏನನ್ನೋ ಕಳೆದುಕೊಂಡಂತಾಗಿ ಅವನ ಶಾಂತಿಯು ಭಂಗವಾಗುವದು. ಕಾಲಕಾಲಕ್ಕೆ ಶಿಕ್ಷಕನು ಆಗಿ ಹೋದ ವಿಷಯದ ಸಾರಾಂಶವನ್ನು ವಿದ್ಯಾರ್ಥಿಗಳ ಎದುರಿಗೆ ಇಟ್ಟರೆ ಅಥವಾ ಕೆಲವು ಕಾರಣಗಳ ಮೂಲಕ ಪ್ರಶ್ನೆಯು ಕೆಲವುಭಾಗವನ್ನು ಬುದ್ಧಿಪೂರ್ವಕವಾಗಿ ಪುನರುಚ್ಚಿಸಿದರೆ ಮೇಲಿನ ದೋಷವು ತಗಲದು.

ಕೆಲವು ಶಿಕ್ಷಕರು ತಮ್ಮ ವೈಶಿಷ್ಟ್ಯವೆಂದು ಪ್ರಶ್ನೆಗಳನ್ನು ವರ್ಗದ ಮುಂದೆ ಇಡುವ ಮೊದಲು ನಾನಾರೀತಿಯಿಂದ ಅದನ್ನು ರಚಿಸುವರು. ವರ್ಗದ ಲಕ್ಷ್ಯವನ್ನು ಕೇಂದ್ರೀಕರಿಸುವದಕ್ಕಾಗಿ ಥವಾ ಪ್ರಶ್ನೆಯನ್ನು ಹೇಗೆ ಚೆನ್ನಾಗಿ ರಚಿಸಬೇಕೆಂಬುದನ್ನು ಮೊದಲೇ ಸಿದ್ಧಗೊಳಿಸದೆ ಇದ್ದುದ ದ ಅನರುಹಾಗೆ ಮಾಡುತ್ತಿರಬಹುದು. ಆದರೆ ಇದರಿಂದ ವಿದ್ಯಾರ್ಥಿಗಳ ಲಕ್ಷ್ಯವು ಶಿಥಿಲಗೊ ೃತ್ತದೆ. ಅಘಟಿತ ಅಥವಾ ಅಸಾಧಾರಣವಾದ ಸಪ್ಪಳ ಮುಂತಾದ ವಿಶಿಷ್ಟ ಕಾರಣಗಳಲ್ಲದೆ ಮೈ ಹಾಕಿದ ಪ್ರಶ್ನೆಯನ್ನು ಎಂದೂ ಪುನರುಚ್ಚರಿಸಬಾರದು. ಪ್ರಶ್ನೆಯನ್ನು ಕೇಳಿದ ಹುಡು ನು ಸಾಕಷ್ಟು ಲಕ್ಷ್ಯದಿಂದ ಕೇಳದಿದ್ದರೆ ಬೇರೆ ವಿದ್ಯಾರ್ಥಿಗೆ ಕೇಳಬೇಕು. ಟೀಕೆ ಮುಂತಾದವುಗಳಿಗೆ ಸ್ಪದವೀಯಬಾರದು.

ಪ್ರಶ್ನೆಗಳ ಮುಖಾಂತರ ಪಾಠವನ್ನು ಸಾಗಿಸುವಾಗ ಪ್ರತಿಯೊಬ್ಬ ವಿದ್ಯಾರ್ಥಿಗೆ ಸರಿ ಯಾದ ಸಂಧಿಯನ್ನು ಒದಗಿಸಬೇಕು. ಹೀಗೆ ಮಾಡಲು ಅವನಿಗೆ ಅನೇಕ ಪೂರಕ ಪ್ರಶ್ನೆ ಳನ್ನು ಕೇಳುವ ಅವಶ್ಯಕತೆ ಬರಬಹುದು. ಆದರೆ ಉತ್ತರವನ್ನು ಕೊಡಲು ಸಾಮರ್ಥ್ಯ ಥವಾ ಸಮ್ಮತಿ ಇಲ್ಲದವನಿಂದ ಉತ್ತರ ಹೊರಡಿಸಲು ವಿಶೇಷ ಕಾಲವನ್ನು ಕಳೆಯಬಾರದು. ಪ್ರಚೋದನೆಯಿಂದ ಸಹಸಾ ಹೊರಡದೆ ಇದ್ದ ಉತ್ತರವನ್ನು ಹೊರಡಿಸಲು ವ್ಯರ್ಥ ವೇಳೆಯನ್ನು ಳೆಯುವದಕ್ಕಿಂತ ಶಿಕ್ಷಕನೇ ಉತ್ತರವನ್ನು ಪೂರೈಸುವದು ಇಷ್ಟವಾದುದು.

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಪ್ರಶ್ನೆಗಳಿಗೆ ಪೂರ್ಣ ವಾಕ್ಯಗಳಲ್ಲಿಯೇ ಉತ್ತರ ಳನ್ನು ಹೇಳಿಸಿಕೊಳ್ಳುವ ಪರಿಪಾಠವಿದೆ. ಆದರೆ ನಿರ್ಬಂಧವು ಸರಿಯಾಗಿ ಕಾಣುವದಿಲ್ಲ ಥವಾ ಉತ್ತವ. ಶಿಕ್ಷಣ ಕುರುಹೆಂದು ಈಜೆಗೆ ಒಪ್ಪುವದಿಲ್ಲ. ಅಶುದ್ಧ ಉತ್ತರಗಳನ್ನು ಸ್ವೀಕ ಸಬ ರದೆಂಬ ನಿಯಮವನ್ನು ಎಲ್ಲ ಶಿಕ್ಷಕರೂ ಪಾಲಿಸಬೇಕು. ಆದರೆ ಉತ್ತರಗಳಲ್ಲಿ ಕೃತ್ರಿಮತೆ ಯಿರದೆ ಸ್ವಾಭಾವಿಕತೆಯೇ ಇರಬೇಕೆಂದು ಒಪ್ಪತಕ್ಕ ಮಾತಾಗಿದೆ. ಕೆಲವು ಪ್ರಸಂಗಗಳಲ್ಲಿ ಂಪೇ ಶಬ್ದ ಅಥವಾ ತಲೆಯ ತೂಗುವಿಕೆ ಅತ್ಯುತ್ತಮ ಉತ್ತರವಾಗುವದು.

ವಿದ್ಯಾರ್ಥಿಗಳು ಉತ್ತರಗ ನ್ನು ವರ್ಗದ ಎದುರಿಗೆ ನಿಂತು ವರ್ಗಕ್ಕೇ ಹೇಳಬೇಕೆಂಬ ನಿಯ ಮವು ಕೆಲವು ಕಾಲದಲ್ಲಿ ಕೆಲವೆಡೆಯಲ್ಲಿ ಕಂಡು ಬರುವದು. ಆದರೆ ಹೀಗೆ ಮಾಡಿಸುವದು ಅಸಾ ಭಾವಿಕವಾದ ವಿಧಿ. ವಿದ್ಯಾರ್ಥಿಯು ಬೆಪ್ಪಾಗುವ ಸಂಭವವಿದೆ. ಜೀವನದಲ್ಲಿ ಪ್ರಶ್ನೆ ಕೇಳಿದವರಿಗೆ ಉತ್ತರಗಳನ್ನು ಕೊಡುವ ರೂಢಿಯು ಪ್ರಚಾರದಲ್ಲಿದೆ. ಹಾಗೆ ಮಾಡದಿದ್ದರೆ ಸಭ್ಯತನವನ್ನು ಕಳೆ ಯಿಕೊಂಡಂತಾಗುವದು ವಿದ್ಯಾರ್ಥಿಗಳ ಗುಂಪು ಯಾವದಾದರೊಂದು ಚರ್ಚೆಯಲ್ಲಿ ಭಾಗವಹಿ ಸುತ್ತಿದ್ದಾಗ್ಗೆ ಎಲ್ಲ ವಿದ್ಯಾರ್ಥಿಗಳಿಗೂ ಕೇಳುವಂತೆ ಉಚ್ಚ ಧ್ವನಿಯಲ್ಲಿ ಉತ್ತರವನ್ನು ಹೇಳುವದು ಸ್ವಾಭಾವಿಕ. ಅದರಂತೆ ದೀರ್ಘ ರಿಪೋರ್ಟನ್ನು ಓದುವದಿದ್ದರೆ ವರ್ಗದ ಎದುರಿನಲ್ಲಿ ನಿಂತು ದಬಹುದು. ಸ್ವಾಭಾವಿಕತೆಯೇ ಸರಿಯಾದ ಮಾರ್ಗವೆಂದು ಎಲ್ಲ ಶಿಕ್ಷಕರು ಅದನ್ನು ನಾಧಿಸಲು ಯತ್ನಿಸುತ್ತಿರಬೇಕು.

ಕಥೆಯನ್ನು ಹೇಳುವ ಕಲೆ

ಲೇಖಕರು : ಶ್ರೀ. ಎಸ್. ಜಿ. ಬೈಚವಾಳ, ಎಂ. ಎ.

ಕಥೆಯನ್ನು ಆಲಿಸುವ ಲವಲವಿಕೆಯು ಪೂರ್ವಕಾಲದಿಂದ ಬಂದಿದ್ದು, ಹೇಳುವ ಜಾಣತನವಾದರೂ ಕಾಲ ಕಾಲಕ್ಕೆ ಬೆಳೆಯುತ್ತಹೋಗಿ ಕಥೆ ಹೇಳುವದು ಕಲೆಯ ಮಟ್ಟಿಗೆ ಉನ್ನತಾವಸ್ಥೆಯನ್ನು ಪಡೆದಿದೆ. ಹಿರಿಯರು ಅಜ್ಜ ಅಜ್ಜಿ ಮುತ್ತಂದಿರು ಸಣ್ಣ ಮಕ್ಕಳಿಗೆ ಕಥೆ ಹೇಳುವ ಪರಿಪಾಠವು ಎಲ್ಲ ದೇಶಗಳಲ್ಲಿ ಎಲ್ಲ ಸಮಾಜಗಳಲ್ಲಿ ಮನರಂಜನೆಯ ಉತ್ತಮ ಸಾಧನವಾಗಿದೆ. ಕಥೆ ಹೇಳುವ ಕೌಶಲ್ಯವು ಕೆಲವರ ವಿಶಿಷ್ಟ ಅಭಿಮಾನದ ವಿಷಯವಾಗಿ ಅವರ ಬಾಯಿಂದ ಮೇಲಿಂದಮೇಲೆ ಕೇಳಿದ ಕಥೆಗಳನ್ನು ಪುನಃ ಪುನಃ ಕೇಳುವ ಕುತೂಹಲವು ಎಂದೂ ಕಡಿಮೆಯಾಗಲಿಲ್ಲ. ಚಿಕ್ಕಮಕ್ಕಳಲ್ಲಿ ವಿಶೇಷವಾಗಿ ಕಂಡುಬರುವ ಈ ಉತ್ಸಟ ಇಚ್ಛೆಯಿನ್ನು ಸರಿಯಾಗಿ ಪೂರ್ತಿಗೊಳಿಸಿ ಅವರ ಮನರಂಜನೆಯ ಕೂಡ ಶಿಕ್ಷಣವು ಸಾಗುತ್ತಿರುವಂತೆ ಶಿಕ್ಷಕನು ಕಥನಕೌಶಲ್ಯವನ್ನು ಒಂದು ಕಲೆಯನ್ನಾಗಿ ಅಭ್ಯಸಿಸಬೇಕಾಗುವದು. ಒಂದು ಕಥೆಹೇಳಿ ಮುಗಿಸುವಷ್ಟರಲ್ಲಿ ಬಾಲಕರೆಲ್ಲರೂ ಒಂದೇ ಧ್ವನಿಯಿಂದ ಬೇರೊಂದನ್ನು ಹೇಳಬೇಕೆಂದು ಶಿಕ್ಷಕನಿಗೆ ಆಗ್ರಹ ಮಾಡಿದರೆ ಮಾತ್ರ ಶಿಕ್ಷಕನ ಶೈಲಿಯು ಹದಗೊಂಡಿದೆಯೆಂದು ನಿಶ್ಚಿತವಾಗಿ ಹೇಳಬಹುದು. ಕಥೆಯು ಪ್ರವೇಶಗಳೆಲ್ಲ ಪ್ರತ್ಯಕ್ಷ ಎದುರಿಗೆ ನಡೆಯುತ್ತಿರುವ ಘಟನೆಗಳಂತೆ ಹೃದಯವನ್ನು ಭೇದಿಸಿದರೆ ಕಥೆಯು ಹೃದಯಭಿತ್ತಿಯ ಮೇಲೆ ಒಡಮೂಡಿನಿಲ್ಲುವದು. ಶೈಕ್ಷಣಿಕ ವೃಷ್ಟಿಯಿಂದ ಇಷ್ಟು ಮಹತ್ವವುಳ್ಳ ಕಲೆಯನ್ನು ಶಿಕ್ಷಕನು ಹೇಗೆ ಕೈವಶ ಮಾಡಿಕೊಳ್ಳಬಹುದೆಂಬುದೇ ಈ ಪ್ರಕರಣದ ಉದ್ದೇಶ.

ಕಥೆಯು ಪ್ರಾಮುಖ್ಯವಾಗಿ ಕಲಾತ್ಮಕ ಕೃತಿಯು. ಆನಂದವೇ ಅದರ ಮುಖ್ಯ ಹೇತುವು. ವಿಷಯ ನಿವೇದನೆ ಅಥವಾ ಗ್ರಹಣವು ಅದರ ಧ್ಯೇಯವಲ್ಲ. ಕಥೆಯನ್ನು ಹೇಳುವದರಿಂದ ಹೊಸ ಸಂಗತಿಗಳನ್ನೇನೂ ವಿದ್ಯಾರ್ಥಿಗಳು ಕಲಿತಿರಲಿಕ್ಕಿಲ್ಲ. ಆದರೆ ತಮಗಾದ ಆನಂದದ ಬಲದಿಂದ ಅವರ ಚಿತ್ತಗಳು ಪ್ರಫುಲ್ಲಿತವಾಗುವವು ಭಾವನಾಮಯ ಜೀವನವು ಕೊನೆರುವದು. ಕಲ್ಪನಾಸಾಮರ್ಥ್ಯವು ಬೆಳೆಯುವದು. ಅದರ ಲಾಭಗಳನ್ನು ಕೆಳಗಿನಂತೆ ವಿವರಿಸಬಹುದು: —

(೨) ಶಿಕ್ಷಕನಿಗೆ ವರ್ಗಗಳ ಪರಿಚಯ ಮಾಡಿಕೊಳ್ಳಲಿಕ್ಕೂ ಬಾಲಕರಿಗೆ ಮಾನಸಿಕಶ್ರಮವಾದ ಮೇಲೆ ಸುಖದಿಂದ ಕಥೆಯನ್ನು ಆಲಿಸಿ ಆನಂದಪಟ್ಟು ಶ್ರಮ ಪರಿಹಾರಮಾಡಿಕೊಳ್ಳಲಿಕ್ಕೂ ಅನುವಾಗುವದು.

(೮) ಶಿಕ್ಷಕ ವಿದ್ಯಾರ್ಥಿಗಳ ನಡುವೆ ಆನಂದದಾಯಕ ಸಂಬಂಧವನ್ನುಂಟುಮಾಡಲಿಕ್ಕೆ ಕಥೆಯು ಸಹಾಯವಾಗುವದು. ಶ್ರವಣಾನಂದನವಾಗುವದರಿಂದ ವಿದ್ಯಾರ್ಥಿಗಳ ಅವಧಾನವು ಸಹಜವಾಗಿ ದೊರೆಯುವದು.

(೩) ಕಥೆಯನ್ನೇ ಕೇಳುವ ರೂಢಿಯನ್ನು ಬೆಳಸಿದಂತೆ ಬಾಲಕರ ವೈಯಕ್ತಿಕ ಹಾಗೂ ಸಾಮೂಹಿಕ ಲಕ್ಷ್ಯವು ಕೇಂದ್ರೀಕರಿಸಲ್ಪಟ್ಟ ಸಂಗತಿಗಳ ಕಾಲಾನುಕ್ರಮ ಸಂಬಂಧವನ್ನು ಅರಿತುಕೊಳ್ಳಲಿಕ್ಕೂ ಕೊಟ್ಟ ಕಾರಣಗಳ ಪರಿಣಾಮವನ್ನು ಕಂಡು ಹಿಡಿಯಲಿಕ್ಕೂ ಸಾಧ್ಯವಾಗುವದು.

(೪) ಕಥೆಯಲ್ಲಿಯ ಆದರ್ಶದಂತೆ ವರ್ತಿಸಬೇಕೆಂಬ ಹಂಬಲವು ವಿದ್ಯಾರ್ಥಿಗಳಲ್ಲಿ ತೋರಬಹುದು. ಕಥೆಯಿಂದಲೇ ಹೊಳೆಯಬಹುದಾದ ನೈತಿಕಪಾಠವು ವಿದ್ಯಾರ್ಥಿಗಳ ಮನಸಿನಲ್ಲಿ ಬಿಂಬಿಸಬಹುದು.

ಕಥೆಯನ್ನು ಸುಗುಮವಾಗಿಯೂ ಪರಿಣಾಮಕಾರಿಯಾಗಿಯೂ ಹೇಳಬೇಕಾದರೆ ಕೆಳಗಿನ ಸೂಚನೆಗಳನ್ನು ಗಮನಿಸಬೇಕು.:—

೧) ಬಾಲಕರ ಬೌದ್ಧಿಕಮಟ್ಟಕ್ಕೆ ಸರಿಯಾಗುವಂತೆ ಯೋಗ್ಯಕಥೆಗಳನ್ನು ಆರಿಸಬೇಕು. ಹೇಳುವ ಭಾಷೆಯು ಕ್ಲಿಷ್ಟವಾಗಿ ಗಡುಚಾಗಿರಬಾರದು. ಕಥೆಯ ಮುಂದಿನಭಾಗವನ್ನು ಉತ್ಸುಕತೆಯಿಂದ ಕೇಳಲು ಹಾತೊರೆಯುತ್ತಿರಬೇಕು. ಪ್ರತ್ಯಕ್ಷಕೃತಿಯು ಚಿಕ್ಕಮಕ್ಕಳಿಗೆ ಹೆಚ್ಚಾಗಿ ಸೇರುವದು. ಕಲ್ಪನೆ ಅಥವಾ ವಿಚಾರಗಳ ಜಂಜಾಟವು ಅವರಿಗೆ ಬೇಡಾದ ವಿಷಯ. ಕಳ್ಳರನ್ನು ಹಿಡಿಸಿದ್ದು, ಸೆಳವಿನ ವಿರುದ್ಧ ದಿಶೆಗೆ ಈಸುವದು, ರಾಕ್ಷಸರ ಕೊಲೆ ಮುಂತಾದ ಅದ್ಭುತ ದೃಶ್ಯಗಳಿದ್ದ ಕಥೆಗಳು ಅವರಿಗೆ ಮೆಚ್ಚುಗೆಯವು.

(೨) ಕಥೆಯನ್ನು ಆರಿಸಿದ ಮೇಲೆ ಅದರ ಭಾಷೆಯನ್ನು ವಿದ್ಯಾರ್ಥಿಗಳಿಗೆ ರುಚಿಸುವಂತೆ ಮಾರ್ಪಡಿಸಬೇಕು. ಸಂಭಾಷಣೆಯ ಭಾಗವನ್ನು ಪ್ರಥಮ ಪುರುಷದಲ್ಲಿ ಅಥವಾ ತೃತೀಯ ಪುರುಷದ ರೂಪಗಳಲ್ಲಿ ಹೇಳಬೇಕೆಂಬುದನ್ನು ನಿರ್ಧರಿಸಬೇಕು. ಬಾಲಕರ ಮಟ್ಟಕ್ಕೆ ಶಿಕ್ಷಕನಾದರೂ ಇಳಿದು ಬಾಲಕರಂತೆಯೇ ಕಥಾಭಾಗದ ತಿರುಳನ್ನೂ ಆನಂದವನ್ನೂ ಸವಿಯುತ್ತಿರಬೇಕು- ಕಥೆಯನ್ನು ಏಕಾಂತದಲ್ಲಿ ಹೇಳುವ ರೂಢಿಯನ್ನು ಮಾಡಿ ಪುಸ್ತಕದ ಸಹಾಯವಿಲ್ಲದೆ ನಿರಾಯಾಸವಾಗಿ ಬಾಯಿಯಿಂದ ಹೇಳುವ ಸೌಕರ್ಯವನ್ನು ದೊರಕಿಸಬೇಕು. ಕಥೆಯು ಆನಂದವನ್ನು ಮುಖಚರ್ಯದ ಮೇಲೆ ಮೂಡಿಸುವದನ್ನು ಸಾಧಿಸಿಕೊಂಡು ಸಂಗತಿಗಳ ಕಾಲಾನುಕ್ರಮ ದೃಢಪಡಿಸಿಕೊಳ್ಳಬೇಕು.

(೩) **ಕಥೆ ಹೇಳುವ ಕೌಶಲ್ಯವನ್ನು ಪಡೆಯಬೇಕು:—**

(ಅ) ವರ್ಗದವರೆಲ್ಲರಿಗೂ ಚೆನ್ನಾಗಿ ಕಾಣುವಂತೆ ನಿಲ್ಲಬೇಕು.

(ಆ) ಒಮ್ಮೆಲೆ ಉರ್ಜಿತಿಯಿಂದ (ಆವೇಶದಿಂದ) ಪ್ರಾರಂಭಿಸಿರಿ; ಅಥವಾ ಸಾವಕಾಶವಾಗಿಯೂ ಗುಟ್ಟು ರಟ್ಟಾಗದಂತೆ ಗೌಪ್ಯ ರೀತಿಯಿಂದ ಕಥೆಯುಪ್ರಾರಂಭವಾಗಲಿ ಕಥಾನಕಭಾಗದ ಸ್ವರೂಪದಂತೆ ಧ್ವನಿಯಲ್ಲಿ ಏರಿಳಿತಗಳಾಗಬೇಕು. ಮಾತಾಡುವ ವೇಗವನ್ನಾದರೂ ಸಮಯಕ್ಕೆ ತಕ್ಕಂತೆ ಹೆಚ್ಚುಕಡಿಮೆ ಮಾಡಬೇಕು. ಪರಿಣಾಮವಾಗುವಂತೆ ವಿರಾಮ ಸ್ಥಳವನ್ನು ಉಪಯೋಗಿಸಬೇಕು. ಒಂದು ಮಹತ್ವದ ಶಬ್ದದ ಮೇಲೆ ಕೆಲವು ಹೊತ್ತು ನಿಂತು ಅದರಿಂದ ಸೂಚಿತವಾಗುವ ಸಂದರ್ಭ ಅಥವಾ ಕಥೆಯ ಫಲಿತಾಂಶವನ್ನು ವಿದ್ಯಾರ್ಥಿಗಳು ಊಹಿಸಲು ಅನುಕೂಲ ಮಾಡಿಕೊಡಬೇಕು. ಕೃತಿ, ವಿಚಾರ, ಭಾವನೆಗಳನ್ನು ಯೋಗ್ಯ ಅಭಿನಯದಿಂದಲೂ ಹಾವಭಾವಗಳಿಂದಲೂ ನಿದರ್ಶಿಸಬೇಕು. ಕಥೆಯ ರಸವನ್ನು ಸಂಪೂರ್ಣವಾಗಿ ಗ್ರಹಿಸಿದರೆ. ಅಭಿನಯಿಸಿದಂತೆ ಕಥೆಯೂ ಬಾಲಕರನ್ನು ರಂಜಿಸುವದು.

ಕಥೆಯನ್ನು ಹೇಳುತ್ತಿರುವಾಗ ಯಾವನೊಬ್ಬ ವಿದ್ಯಾರ್ಥಿಯ ಲಕ್ಷವನ್ನು ಸೆಳೆಯುವದಕ್ಕಾಗಿ ಕಥೆಯನ್ನು ತಡೆಯಬಾರದು. ಕಣ್ಣುಸನ್ನೆಯಿಂದ ಸಂಜ್ಞೆ ಮಾಡಿದರೆ ಕಥೆಯಲ್ಲಿ ಭಂಗವಾಗದೆ ಸರಾಗವಾಗಿ ಸಾಗುವದು. ಕಥೆಯಲ್ಲಿಯ ಕೆಲವು ಭಾಗವು ವಿವೇಚನೆಯಿಲ್ಲದೆ ಗ್ರಾಹ್ಯವಾಗದಿದ್ದರೆ ಆ ಭಾಗವನ್ನಾಗಲಿ ಶಬ್ದ ಸಮುಚ್ಚಯವನ್ನಾಗಲಿ ಕಥೆಯನ್ನು ಪ್ರಾರಂಭಿಸುವ ಮೊದಲು ತಿಳಿಸಿಡಬೇಕು.

(೪) **ಶಿಕ್ಷಕನ ಹೊಣೆಗಾರಿಕೆ:—** ಕಥೆಯನ್ನು ಹೇಳುವದಾದ ಕೂಡಲೆ ವಿದ್ಯಾರ್ಥಿಗಳು ತಮ್ಮ ಮನಸ್ಸಿನ ಮೇಲಾದ ಪರಿಣಾಮವನ್ನು ವ್ಯಕ್ತಪಡಿಸಲು ಆತುರಪಟ್ಟು ಶಿಸ್ತಿಗೆ ಭಂಗ ತರಬಹುದು. ಆಗ ಶಿಕ್ಷಕನು ನಿಯಂತ್ರಿಸಬಾರದು. ತಾನು ಹೇಳಿದ ಕಥೆಗೆ ಬೇಕಾಗುವ

ಪೂರಕ ಚಟುವಟಿಕೆಗಳ ಪೂರ್ವಸಿದ್ಧತೆಗಳನ್ನು ಮಾಡಿಟ್ಟುಕೊಂಡು ಬಾಲಕರನ್ನು ನಟ ಮಾಡಿಸುವದರಲ್ಲಿ; ಚಿತ್ರ, ಆಕೃತಿ, ಕಟ್ಟಡ, ಬರೆಹ, ಮುಂತಾದ ಕೃತಿಗಳಲ್ಲಿ; ಮಾಡೇ ಮಾಡಿಸುವದರಲ್ಲಿ ತೊಡಗಿಸಬೇಕು. ವಿದ್ಯಾರ್ಥಿಗಳು ತಮ್ಮ ಮನಸ್ಸಿನ ಮೇಲಾದ ಪ ಣಾಮವನ್ನು ಈ ತರತರದ ರೀತಿಗಳಲ್ಲಿ ವ್ಯಕ್ತಪಡಿಸುವದರಲ್ಲಿ ಕಥೆಯ ಲಾಭವನ ಯಾವ ರೀತಿಯಿಂದ ಪಡೆದರೆಂಬುದು ವ್ಯಕ್ತವಾಗುವದು. ಕಥೆಯು ಬಾಲಕರನ್ನು ಯಾ ದಾದರೊಂದು ನಿರ್ದಿಷ್ಟಕಾರ್ಯಕ್ಕೆ ಹಚ್ಚುವ ನೆವ ಅಥವಾ ತೋರಿಕೆಯ ಪ್ರಸಂಗವಾ ಬಾರದಂತೆ ಶಿಕ್ಷಕನು ಎಚ್ಚರ ಪಡತಕ್ಕದ್ದು.

ಕಥೆಗಳು

(ಅ) **ದೇವದೂತರ ಕಥೆಗಳು.**

ಓದಲು ಬರುವದಕ್ಕಿಂತ ಮೊದಲು ಉತ್ತಮ ಸಾಹಿತ್ಯದ ಸೊಬಗನ್ನು ಚಿಕ್ಕಮಕ್ಕಳ ಸೇವಿಸಬಹುದು.

(ಆ) **ಹುಚ್ಚಾಟದ ಕಥೆಗಳು.**

ಈ ಕಥೆಗಳಿಂದ ಹುಟ್ಟುವ ನಗೆಗಡಲು ವರ್ಗದ ವಾತಾವರಣವನ್ನು ಸವಿಗೊಳ್ಳು ಬಾಲಕರ ಮನಸ್ಸಿಗೆ ಒಂದು ತರದ ವ್ಯಾಯಾಮವನ್ನು ಕೊಟ್ಟಂತೆ ಆಗುವದು.

(ಇ) **ನಿಸರ್ಗವಿಷಯಗಳನ್ನೊಳಗೊಂಡ ಕಥೆಗಳು.**

ಪ್ರಾಣಿಗಳ ಚರಿತ್ರೆ ಮುಂತಾದವುಗಳನ್ನು ಅವುಗಳ ಮುಖದಿಂದ ಹೊರಡಿಸುವದು. ಇಂಥ ಕಥೆಗಳಿಂದ ನಿಸರ್ಗದ ಅಸ್ತವ್ಯಸ್ತ ಕಲ್ಪನೆಯಾಗದೆ ನಿಸರ್ಗಪರಿಚಯವಾದರೆ ಅ ಗಳನ್ನು ಹೇಳಬೇಕು; ಇಲ್ಲವಾದರೆ ತ್ಯಜಿಸಬೇಕು. ಬಾಲಕರು ಇಂಥ ಕಥೆಗಳನ್ನು ಕೇಳುವಾಗ ಅಯಾ ಪ್ರಾಣಿಗಳಂತೆ ಅಭ್ಯಾಸಗೊಂಡು ಸುಖದುಃಖಿಗಳನ್ನು ಅನುಭವಿ ಬಹುದು. ಇಂಥವುಗಳಿಂದ ಮುಂದೆ ಐತಿಹಾಸಿಕ ನಾಯಕರ ಚರಿತ್ರೆಯ ತಿರುಳನ್ನು ಸವಿಯಲು ಅವರಂತೆ ಆಶೆಆಕಾಂಕ್ಷೆಗಳ ಹೊಯ್ದಾಟದಲ್ಲಿ ಸಿಲುಕಿ ಮನೋರಾಜ್ಯದ ಸವಿ ನಸುಗಳಲ್ಲಿ ಸುಳಿದಾಡಬಹುದು.

(ಈ) **ಐತಿಹಾಸಿಕ ಕಥೆಗಳು.**

ಈ ಕಥೆಗಳು ಇತಿಹಾಸದ ಅಭ್ಯಾಸದ ಮೂಲ ಸ್ಫೂರ್ತಿದಾಯಕ ಆಧಾರವೇ ಆಗಿ ಚರಿತ್ರ ನಾಯಕರ ಉಪಾಸನೆಯೂ ದೇಶಾಭಿಮಾನವೂ ಇವುಗಳ ಕಥನದಿಂದ ಸುಲ ಸಾಧ್ಯ. ಜಾಣ ಮುತ್ಸದ್ದಿತನ, ಕಾಡುಸ್ಥಿತಿಯ ಕೂಡ ಹೋರಾಟ, ಉದಾತ್ತ ಪ್ರೇಮ ನಿಸ್ಸೀಮ ಭಕ್ತಿ, ಸ್ವಾರ್ಥತ್ಯಾಗ, ಅದ್ಭುತ ಶಾರೀರಕ ಬಲ ಮುಂತಾದವುಗಳು; ತಮ ದೇಶದವರ ಬಗ್ಗೆ ಉಜ್ವಲಪ್ರೀತಿ, ವಿಶ್ವಾಸ ಅಭಿಮಾನಗಳನ್ನು ಹೆಚ್ಚಿಸಿ ವಿದ್ಯಾರ್ಥಿಗಳನ ಪ್ರೌಢರಾದಾಗ ದೇಶ ಸೇವೆಯನ್ನು ಮಾಡುವಂತೆ ಪ್ರೇರಿಸುತ್ತವೆ.

(ಉ) **ಪತ್ತೆದಾರಿ ಕಥೆಗಳು – ಕಾದಂಬರಿಗಳು.**

ಇವು ಪ್ರೌಢದೆಶೆಯ ವಿದ್ಯಾರ್ಥಿಗಳಿಗೆ ರುಚಿಸತಕ್ಕವುಗಳು. ಉಚ್ಚಶಿಕ್ಷಣಾಲಯ ಗಳಲ್ಲಿ ಅವುಗಳ ವಿಮರ್ಶಾತ್ಮಕ ಅಭ್ಯಾಸವನ್ನು ವಿದ್ಯಾರ್ಥಿಗಳು ಕೈಕೊಳ್ಳಬಹುದ ಇದರಿಂದ ಅವರ ವರ್ತನದ ಮೇಲೆ ಪರಿಣಾಮವಾಗುವ ಸಂಭವವಿದೆ.

ನರಕದಲ್ಲಿ ಸ್ವರ್ಗ

ತಿರುಗೆ ತಿರುಗುತ್ತಿರುವ ಕಣ್ಣು ಮಿಣುಕುತ್ತಿಹವು
ಅದಿರುದುಟಿ ಕೆಚ್ಚನೆಯೆ ಅರಳುತಿಹವು
ಸುಳ್ಳೆ ಹಾಡುತ್ತ ಅಡ್ಡಾಡುತಿವೆ ಎದೆ ಹಲವು
ಮಬ್ಬುಗವಿಯುತ್ತಿಹವು ಮಿಂಚುತಿಹವು
ಯಾವ ಯಕ್ಷಿಣಿ ಮಾಯೆ! ಯಾವ ಲೋಕದ ರೂಪೋ!
ಕಲ್ಪನೆಯ ನಿಲುಕಿಸಿಯು ಹೇಳಲರಿಯೆ
ನೆತ್ತರದ ಓಕುಳಿಯೆ, ಅಪ್ಪುಗೆದೋಟಿಯೇ
ಆಹ ಸ್ವರ್ಗವೆ—ಎಂದೆ, ನರಕ ತೆರೆಯೆ

--ಅಂಬಿಕಾತನಯ ದತ್ತ

ಶೈಕ್ಷಣಿಕ ಪ್ರಯೋಗಗಳು

ಲೇಖಕರು : ಶ್ರೀ. ಕೆ. ಜಿ. ಸದಾದ್ವೀನ
(ಇಂಡಿಯನ್ ಲಿಸ್ನರಪ ಕೃಪೆಯಿಂದ)

ಹಿಂದುಸ್ತಾನದಲ್ಲಿ ಪರಂಪರಾಗತ ಶಿಕ್ಷಣ ಪದ್ಧತಿಯ ಮುಖ್ಯ ಲಕ್ಷಣಗಳನ್ನು ಪರಿಶೀಲಿಸಿ ನೋಡುವಾ. ಶಿಕ್ಷಣವು ಪ್ರಾಮುಖ್ಯವಾಗಿ ಪುಸ್ತಕೀಯವೂ ಬೌದ್ಧಿಕ ಸ್ವರೂಪದ್ದೂ ಇದ್ದು ಬಹ್ವಂಶದಿಂದ ಪುಸ್ತಕಗಳನ್ನೇ ಅಲಂಕರಿಸಿಕೊಂಡಿತ್ತು. ಅದು ವೈಯಕ್ತಿಕ ಶೀಲ ಘಟನೆಯಲ್ಲಿ ವಿಶೇಷ ಲಕ್ಷ್ಯವನ್ನು ಪೂರೈಸಿದ್ದರೂ ಮತ್ತು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಿಕಟಸಂಬಂಧಕ್ಕೆ ಅನುಕೂಲವಾಗಿದ್ದರೂ ಶಿಕ್ಷಣದಲ್ಲಿ ವ್ಯಾವಹಾರಿಕ ಅಥವಾ ಸಾಮಾಜಿಕ ಅಭ್ಯಸನಕ್ಕೆ ಮಾನ್ಯವೂ ನಿಶ್ಚಿತವೂ ಆದ ಸ್ಥಾನವು ಅದಕ್ಕೆ ದೊರೆಯಲಿಲ್ಲ.

ಈ ವಿಷಯವನ್ನು ಇನ್ನೂ ಹೆಚ್ಚು ವಿಮರ್ಶಿಸಿದಲ್ಲಿ ಆಗಿನ ಪರಿಸ್ಥಿತಿಯಲ್ಲಿ ಬೌದ್ಧಿಕ ಅಂಗಕ್ಕೆ ಮಹತ್ವಸ್ಥಾನವನ್ನು ಕೊಡಲು ಕೆಲವು ಯೋಗ್ಯಕಾರಣಗಳಿದ್ದವೆಂದು ಕಂಡುಬರುತ್ತದೆ. ಶಾಲೆಗಳಿಂದಲೇ ಜರುಗಬಹುದಾದ ಶಿಕ್ಷಣದ ಕೆಲವು ಅಂಗಗಳನ್ನು ಮಧ್ಯ ಕಾಲದ ಜೀವನ ಪರಿಸ್ಥಿತಿಯಲ್ಲಿ ಶಾಲೆಗಳಲ್ಲದ ಅನೇಕ ಸಂಸ್ಥೆಗಳು ಸ್ವಾಭಾವಿಕವಾಗಿ ಕೈಕೊಳ್ಳುತ್ತಿದ್ದವೆಂಬುದು ಅರ್ವಾಚೀನಕಾಲದ ವಿಚಾರಕ್ರಾಂತಿಯ ಫಲವೆನ್ನಬಹುದು. ಕುಟುಂಬವೇ ನಿಜವಾಗಿ ಶೀಲಘಟನೆಯ ಹಾಗೂ ಔದ್ಯೋಗಿಕ ಶಿಕ್ಷಣದ ಘಟಕವಾಗಿತ್ತು. ಬಾಲಬಾಲಿಕೆಯರು ತಮ್ಮ ಕೌಟುಂಬಿಕ ಜೀವನದಲ್ಲಿ ಹಾಗೂ ಉದ್ಯೋಗ ಧಂದೆಗಳಲ್ಲಿ ಪ್ರತ್ಯಕ್ಷ ಭಾಗವಹಿಸಿ ಶೀಲಘಟನೆಯ ಸಮಗ್ರ ಶಿಕ್ಷಣವನ್ನು, ಉದ್ಯೋಗ ಧಂದೆಗಳ ಕೆಲವು ಶಿಕ್ಷಣವನ್ನು ಪಡೆಯುತ್ತಿದ್ದರು. ಆ ಕಾಲಕ್ಕೆ ಕಸಬುಗಾರರನ್ನು ವ್ಯವಸಾಯಗಾರರನ್ನು ತರಬೇತು ಗೊಳಿಸುವ ಸಂಸ್ಥೆಗಳೂ ಇದ್ದವು. ಅಲ್ಲಿ ಬಾಲಕರು ಅವಶ್ಯವಿದ್ದ ಅಲ್ಪಸ್ವಲ್ಪ ತಾಂತ್ರಿಕ

ಶಿಕ್ಷಣವನ್ನು ಹೊಂದುತ್ತಿದ್ದರು. ಅವರು ಮದರಸಾ ಮುಖ್ತಬ, ಇಲ್ಲವೆ ಪಾಠಶಾಲಾಧ್ಯಾಪಕನ ಕಡೆಗೆ ಬಂದಾಗ ಸರ್ವತೋಮುಖವಾದ, ಸರ್ವಾಂಗಪರಿಪೂರ್ಣವಾದ ಶಿಕ್ಷಣವನ್ನೂ ಬಯಸುತ್ತಿರಲಿಲ್ಲ. ಆದರೆ ಮುಖ್ಯವಾಗಿ ಪುಸ್ತಕಗಳಿಂದ ಬಾಯಮಾತಿನ ಮುಖಾಂತರವೇ ಶಿಕ್ಷಣವನ್ನು ಕಲಿಯುತ್ತಿದ್ದರು. ಭಾಷೆ, ಧರ್ಮ, ಹಾಗು ಧರ್ಮಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ಮಾತ್ರ ಅವರ ಪಠ್ಯವಿಷಯಗಳಲ್ಲಿ ಸಮಾವೇಶವಾಗುತ್ತಿದ್ದವು. ಮುದ್ರಣಯಂತ್ರದ ಶೋಧನೆಗಿಂತ ಪೂರ್ವಕಾಲದಲ್ಲಿ ಪುಸ್ತಕಗಳು ಕ್ವಚಿತವಾಗಿ ದೊರೆಯುವಂಥವೂ ಬೆಲೆಯುಳ್ಳವೂ ಆಗಿದ್ದರಿಂದ ಅವುಗಳನ್ನು ತಮ್ಮವನ್ನಾಗಿ ಮಾಡಿಕೊಂಡರೆ ಮಹತ್ಪದ ಕಾರ್ಯವನ್ನು ಮಾಡಿದೆವೆಂದು ಭಾವಿಸುತ್ತಿದ್ದರು. ಹಿಂದುಸ್ತಾನದ ಶಿಕ್ಷಣದಲ್ಲಿ ಧರ್ಮ, ವ್ಯಕ್ತಿತ್ವ, ಬೌದ್ಧಿಕ ಅಂಗ, ಇವುಗಳ ಸಮಾವೇಶವುಳ್ಳ ಸಾಂಪ್ರದಾಯವು ಉಂಟಾಯಿತು. ಇಂಥ ಸಂಸ್ಥೆಗಳಿಂದ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಅಧ್ಯಾಪನದ ಅರ್ಹತೆಯನ್ನು ಪಡೆಯುವದಕ್ಕಾಗಲಿ ರಾಜಕೀಯ ಅಧಿಕಾರ ಸ್ಥಳಗಳನ್ನು ಪಡೆಯುವದಕ್ಕಾಗಲಿ ಹವಣಿಸಲಿಲ್ಲ. ಅವರಿಗೆ ಪಾಂಡಿತ್ಯ ಪ್ರಧಾನವಾದ ಧಾರ್ಮಿಕ ಶಿಕ್ಷಣವು ಮಾತ್ರ ದೊರಕುತ್ತಿತ್ತು. ಆದರೆ ತುಲನಾತ್ಮಕ ದೃಷ್ಟಿಯಿಂದ ಸಿದ್ಧವಾಗಿರುವ ಪಠ್ಯವಿಷಯ ಸಂಕೋಚ, ಪುಸ್ತಕ ವಿದ್ಯೆಯ ಅಭಿವರ್ಧನ, ಸ್ಮರಣಶಕ್ತ್ಯುಪಯೋಗದ ಅತಿರೇಕ, ಇವೆಲ್ಲವೂ ಆಗಿನ ಶಿಕ್ಷಣವನ್ನು ಹಾಳು ಮಾಡದೆ ಇರಲಿಲ್ಲ. ಬರಬರುತ್ತ ಈ ಶಿಕ್ಷಣವು ಸಂಪ್ರದಾಯ ಪ್ರಾಧಾನ್ಯ—ಶಬ್ದಾಡಂಬರ, ಹೆರವರ ಕಲ್ಪನಾಭಿಪ್ರಾಯಗಳ ಸ್ಮರಣ, ವಶೀಕರಣ ಮುಂತಾದವುಗಳಿಗಾಗಿ ಅವನತಿಯನ್ನು ಪಡೆಯಿತು. ಆದುದರಿಂದ ೧೯ನೇ ಶತಮಾನದಲ್ಲಿ ಸಾಮಾಜಿಕ, ಶೈಕ್ಷಣಿಕ, ಹಾಗೂ ಸಾಂಸ್ಕೃತಿಕ ಜೀವನದಲ್ಲಿ ಬದಲಾವಣೆಯಾಗಬೇಕೆಂದು ಸಾರ್ವತ್ರಿಕ ಅತುರತೆಯುಳ್ಳ ಹೆಬ್ಬಾಯವು ಕಂಡು ಬಂದಿತು.

ಈ ಬದಲಾವಣೆಯು ಯಾವರೀತಿಯಿಂದ ರೂಢಿಗೆ ಬಂದಿತು? ಈ ಪ್ರಶ್ನೆಗೆ ವಾಡಿಕೆಯ ಉತ್ತರವೆಂದರೆ ಈಗಿನ ಇಂಗ್ಲಿಷ ಶಿಕ್ಷಣವು ಪ್ರಚಾರದಲ್ಲಿ ಬಂದು, ಪರಿಸ್ಥಿತಿಯಲ್ಲಿ ಆಮೂಲಾಗ್ರ ಬದಲಾವಣೆಯನ್ನುಂಟುಮಾಡಿತು. ಈ ಅಭಿಪ್ರಾಯಕ್ಕೆ ನಾನು ಒಪ್ಪಲಾರೆನೆಂದು ಹೇಳಬಲ್ಲೆ. ಇಂಗ್ಲಿಷ ಭಾಷೆಯು ಮಾಧ್ಯಮವೆಂದು ಉಪಯೋಗಿಸಲ್ಪಟ್ಟಾಗ ಮತ್ತು ಭಾಷೆಯ ದೃಷ್ಟಿಯಿಂದ ಹಿಂದುಸ್ತಾನ ಪ ಪೌರಾತ್ಯ ಭಾಷೆಗಳಿಗಿಂತ ಪಠ್ಯವಿಷಯಗಳು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಾಗ ಯಾವ ತೀಕ್ಷ್ಣ ಬದಲಾವಣೆಗಳಿಗಾಗಲಿ, ಶಿಕ್ಷಣದಲ್ಲಿ ಹೊಸ ಪ್ರಯೋಗಗಳಿಗಾಗಲಿ ಆಗಿದ್ದಿಲ್ಲ! ಅದೇ ನಿಯಮಿತ ಹಾಗೂ ನಿಯೋಜಿತ ಪಠ್ಯ ಪುಸ್ತಕಗಳ ಅಭ್ಯಾಸವು, ನಿರ್ದಾಕ್ಷಿಣ್ಯದಿಂದ ಗೊತ್ತುಪಡಿಸಿದ ಅದೇ ವಿಷಯಗಳ ಅಭ್ಯಾಸವು, ಶಬ್ದಗಳ ಅಭ್ಯಾಸದ ಮೇಲಿನ ಅದೇ ವಿಶಿಷ್ಟವ ಮಹತ್ವವು, ಅದೇ ಸ್ಮರಣಶಕ್ತಿಯ ಮೇಲಿನ ಆಘಾತ, ಪುಸ್ತಕೀಯ ಜ್ಞಾನ ಜಂಜಾಟದಿಂದ ಉಂಟಾದ ಅದೇ ಜೀವನದ ವಿಪರ್ಯಾಸವು ಕಂಡು ಬರುತ್ತಿದ್ದವು. ವಿಶೇಷವಾದ ಭೇದವೆಂದರೆ, ಶಿಕ್ಷಣ ಅಭ್ಯಾಸಕ್ಕೆ ಕಾಂತಿಯನ್ನು ಬೀರಿದ ಧರ್ಮದ ಮುಂದಪ್ರಕಾಶವು ನಿಃಶೇಷವಾಗಿ ಅಳಿದುಹೋಗಿ ಶಿಕ್ಷಣವೆಂದರೆ ಧರ್ಮಕ್ಕೆ ಸಂಬಂಧವಿಲ್ಲದ ಚಟುವಟಿಕೆಯೆಂದು ಸ್ಪಷ್ಟವಾಗಿ ಕಾಣುವಷ್ಟು ಶಿಕ್ಷಣ ಸ್ವರೂಪವು ಬದಲುಗೊಂಡಿತು. ಈ ತರಹದ ಶಿಕ್ಷಣವು ನಿಮ್ಮ ಆತ್ಮರಕ್ಷಣೆಯನ್ನು ಮಾಡದಿದ್ದಾಗ್ಯೂ ಜೀವನಾಧಾರವಾದ ಕೆಲಸವನ್ನು ದಯಪಾಲಿಸಬಹುದು.

ಹಿಂದುಸ್ತಾನದಕೂಡ ಇಂಗ್ಲಿಷ ಸಂಸ್ಕೃತಿ ಹಾಗೂ ಸುಧಾರಣೆಗಳ ಸಂಯೋಗವು ನಮ್ಮ ಶೈಕ್ಷಣಿಕ ಜೀವನದ ಮೇಲೆ ಯಾವತರದ ಪರಿಣಾಮವನ್ನು ಉಂಟು ಮಾಡಿಲ್ಲವೆಂದು

ಗಾನು ಪ್ರತಿಪಾದಿಸುವದಿಲ್ಲ. ಆದರೆ ಕ್ಲಿಪ್ತ ವೇಳೆಯ ಸಿಡಿಗುಂಡಿನಂತೆ ಅದರ ಪರಿಣಾಮವು ಕೆಲದಿನಗಳ ನಂತರ ಗೋಚರವಾಗುವಂತಹದಿತ್ತು. ಪಾಶ್ಚಾತ್ಯ ಜೀವನ ಹಾಗೂ ಅವರ ವಿಚಾರಸರಣಿಗಳನ್ನು ಅಭ್ಯಸಿಸಬೇಕೆಂಬ ಅಭಿಲಾಷೆ, ಆಧುನಿಕ ವಿಜ್ಞಾನದ ಬಗ್ಗೆ ಜಾಗ್ರತವಾದ ಅಭಿರುಚಿ, ಜನಸಾಮಾನ್ಯರ ಯೋಗ್ಯತೆಯನ್ನು ಯಥಾರ್ಥವಾಗಿ ಕಂಡುಹಿಡಿಯುವ ಉದ್ದೇಶದಿಂದ ಸಾವಕಾಶವಾಗಿ ರೂಪಗೊಳ್ಳುತ್ತಿರುವ ನವಕಾಂತಿಯು ಸಫಲವಾಗಬೇಕೆಂದು ಕೈಕೊಂಡ ಯತ್ನ, ಹಿಂದುಸ್ತಾನದ ಆರ್ಥಿಕ ಸ್ಥಿತಿಯನ್ನು ದಿಗ್ಬಂಧನಗೊಳಿಸಿದ ಆಂತರಿಕ ಮತ್ತು ಬಾಹ್ಯ ಅಸಂಖ್ಯ ಬಂಧನಗಳನ್ನು ಕಿತ್ತೊಗೆಯಬೇಕೆಂಬ ಉತ್ಕಟ ಆಶೆ ಇವೇ ಮೊದಲಾದ ಹೊಸ ಸಾಮಾಜಿಕ ರಾಜಕೀಯ ಸಂಸ್ಕೃತಿಯ ಚಟುವಟಿಕೆಗಳಿಗೆ ಅದು ಚಾಲನೆಯನ್ನು ಕೊಟ್ಟಿತು. ಆದರೆ ಇವೆಲ್ಲವುಗಳು ಶೈಕ್ಷಣಿಕ ನಿಶ್ಚಲತೆಯನ್ನು ತತ್‌ಕ್ಷಣವೇ ಪ್ರತ್ಯಕ್ಷವಾಗಿ ಹೊಡೆದೋಡಿಸಲಿಲ್ಲ. ಯಾಕೆಂದರೆ ಶಿಕ್ಷಣವು ಆದಿ ಬುನಾದಿಯಿಂದ ಕಾಲಾನುರೋಧಾಭಾವದಿಂದ ಬಳಲಿದೆ. ಶಿಕ್ಷಣದ ಬಾಹ್ಯಸ್ವರೂಪವು ಬದಲಾದಾಗ್ಯೂ ದೀರ್ಘಕಾಲದವರೆಗೆ ಅದರ ಅಂತಃಸ್ಫೂರ್ತಿಯಾಗಲಿ ಪಠ್ಯವಿಷಯಗಳಾಗಲಿ ಬದಲಾಗದೆ ಉಳಿದವು. ಹಿಂದುಸ್ತಾನದ ಪರಿಸ್ಥಿತಿಯಲ್ಲಿ ಉಂಟಾಗುತ್ತಿರುವ ಬದಲಾವಣೆಗಳ ಮೂಲಕ ಹಾಗೂ ಪಾಶ್ಚಾತ್ಯ ಶೈಕ್ಷಣಿಕ ಆಂದೋಲನದ ಸಂಪರ್ಕದ ಮೂಲಕ ಹೊಸ ವಿಚಾರಗಳಲ್ಲಿ ಹುದುಗಿರುವ ಪರಿವರ್ತನ ಶಕ್ತಿಯು ತನ್ನ ಸಾಮರ್ಥ್ಯವನ್ನು ಎಡೆಬಿಡದೆ ತೋರುತ್ತಲಿತ್ತು. ರೂಢಿಯಲ್ಲಿದ್ದ ಶೈಕ್ಷಣಿಕ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗೆ ಹೊಟ್ಟೆ ತುಂಬಿಕೊಳ್ಳುವ ಸಾಧನೆಯನ್ನು ಕೂಡ ಸಾಧ್ಯಮಾಡಿಕೊಡುವಷ್ಟು ಯೋಗ್ಯತೆಯು ಇಲ್ಲವೆಂದು ಮೇಲಿಂದ ಮೇಲೆ ಕಂಡುಬಂದಿತ್ತು. ಮುಂಬರಿಯಲು ಹಂಬಲಿಸುವ ಎಲ್ಲರನ್ನು ಪುಸ್ತಕ ಪ್ರಾಧಾನ್ಯವುಳ್ಳ ಶಾಲೆಯೊಳಗಿಂದ ಮ್ಯಾಟ್ರಿಕ್ಯುಲೇಶನ್ ಪಾವಟಿಗೆಗಳನ್ನು ಹತ್ತಿಸಿ ವಿಶ್ವವಿದ್ಯಾಲಯದ ಪದವಿಯನ್ನು ದೊರಕಿಸುವ ದೈವದ ಕಡೆಗೆ ಸಾಗಿಸಿ, ನಿರುದ್ಯೋಗಿಯಾಗಿ ಉಳಿಯುವ ಸಂಭವದ ಸಂಕಟವನ್ನು ಪರಿಸುಮಂತೆ ಮಾಡಬಹುದಾದ ಏಕನೇವ ಗುರಿಯುಳ್ಳದ್ದಾಗಿತ್ತು. ಹೀಗಾಗಿ ಬಹು ಮುಖವುಳ್ಳ ಜೀವನದ ಬೇಡಿಕೆಗಳನ್ನು ಪೂರೈಸಲು ಅಥವಾ ಜೀವದ ಪುನರ್ರಚನೆಯಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡಲು ಸಾಧ್ಯವಾಗಲಿಲ್ಲ. ತದವಿರುದ್ಧವಾಗಿ ಮೊದಲನೇ ಜಾಗತಿಕ ಮಹಾಯುದ್ಧವು ಮುಗಿದನಂತರ ಎಷ್ಟೋ ಪಾಶ್ಚಾತ್ಯ ದೇಶಗಳಲ್ಲಿ ಶಿಕ್ಷಣವು ತೀರ ಹೊಸ ಹೆಜ್ಜೆನ್ನಿಟ್ಟುದು ಕಂಡುಬಂದಿತು. ಸ್ವಾತಂತ್ಯ, ಚಟುವಟಿಕೆ, ಸಹಕಾರ, ವೈಯಕ್ತಿಕತೆ, ಶಿಶುಪ್ರಾಧಾನ್ಯ, ಮುಂತಾದ ಆಹ್ವಾನಗಳೂ ಹೊಸ ಹೊಸ ಪ್ರಯೋಗಗಳೂ, ವಿಚಾರಗಳೂ ಪದ್ಧತಿಗಳೂ ರೂಢಿಯಲ್ಲಿ ಬಂದವು. ಇವೆರಡು ಬಲವಾದ ಶಕ್ತಿಗಳ ಪರಿಣಾಮವಾಗಿ ಹಿಂದುಸ್ಥಾನದ ಶೈಕ್ಷಣಿಕ ಪ್ರಪಂಚದಲ್ಲಿ ಎರಡು ಧೋರಣೆಗಳನ್ನು ಕಾಣಬಹುದು. ಮೊದಲನೆನೇದಾಗಿ ಶಿಕ್ಷಣವನ್ನು ವ್ಯವಸಾಯಮಯವಾಗಿ ಬದಲಿಸಲು ಯತ್ನಿಸಿ ಅದನ್ನು ಉದ್ಯೋಗ ಹಾಗೂ ಉತ್ಪಾದಕ ಕೆಲಸಗಳಿಗೆ ಹೆಚ್ಚು ಸಂಬಂಧ ಉಳ್ಳದ್ದಾಗಿ ಮಾಡುವದು. ಎರಡನೇದಾಗಿ ಬಾಲಕರಲ್ಲಿಯ ನಿರ್ಮಾಪಕ ಶಕ್ತಿಯನ್ನು ಹೊರಹೊಮ್ಮುವಂತೆಮಾಡಿ ಅವರ ವ್ಯಕ್ತಿತ್ವವನ್ನು ಉತ್ತಮ ರೀತಿಯಿಂದ ಬಲಪಡಿಸಿಕೊಳ್ಳುವಂತೆ ಶೈಕ್ಷಣಿಕ ತಂತ್ರಗಳ ಹೊಸ ಹೊಸ ಪ್ರಯೋಗಗಳನ್ನೂ ಮತ್ತು ಕ್ರಮಗಳನ್ನೂ ಹುಡುಕಿ ತೆಗೆಯುವ ಉಲ್ಲಾಸ. ಇದಲ್ಲದೆ ಒಂದೇ ಶೈಕ್ಷಣಿಕ ಪದ್ಧತಿಯಲ್ಲಿ ಇವೆರಡು ಧೋರಣೆಗಳ ಲಾಭಗಳನ್ನು ಸೇರಿಸಿಕೊಂಡು ಹಿಂದುಸ್ತಾನದ ಶಿಕ್ಷಣಕ್ಕೆ ಹಿಂದುಸ್ತಾನ ಅಥವಾ ಹಿಂದು ಮುಸಲ್ಮಾನರ ಆದರ್ಶ ಮತ್ತು ಸಂಸ್ಕೃತಿಗಳ ವಿಶಿಷ್ಟಸ್ವರೂಪವು ಬರುವಂತೆ ಮಾಡಲು ಕೆಲವು ಪ್ರಶಂಶನೀಯ ಪ್ರಯತ್ನಗಳು ನಡೆದಿವೆ. ಉದಾ—ಅಲೀಗಡದಲ್ಲಿ ಸೈಯದ ಅಹಮ್ಮದಖಾನರ, ಶಾಂತಿನಿಕೇತ-

ನದಲ್ಲಿ ಟಾಗೋರರ ಮತ್ತು ಇತ್ತೀಚೆಗೆ ಸೇವಾಗ್ರಾಮದಲ್ಲಿ ಗಾಂಧಿಜಿಯವರ, ದಿಲ್ಲಿಯಲ್ಲಿ ಡಾ. ಜಾಕೀರ ಹುಸೇನರ ಪ್ರಯತ್ನಗಳನ್ನು ನೋಡಬಹುದು. ಪಾಶ್ಚಾತ್ಯ ಪದ್ಧತಿಗಳಿಂದ ಸಿಗಬಹುದಾದ ಲಾಭಗಳನ್ನು ತೆರವಾಗಿ ತೆಗೆದುಕೊಳ್ಳಲು ಸಮಾಧಾನ ಹೊಂದದೆ ಶಿಕ್ಷಣಕ್ಕೆ ಹೊಸ ಜೀವ ಕಳೆಯನ್ನು ತುಂಬಲು ಹೊಸ ಉದ್ದೇಶವನ್ನು ಕಲ್ಪಿಸಲು ಹಿಂದೂಜನರ ಪ್ರತಿಭಾಸಾಮರ್ಥ್ಯ ಹಾಗೂ ಸಂಸ್ಕೃತಿಗಳಲ್ಲಿಯ ಆಂತರಿಕ ಮೂಲಸಾಧನೆಗಳನ್ನು ಹುಡುಕಿ ಉಪಯೋಗಿಸಲು ಯತ್ನಿಸಿದರು.

ಈ ವಿಶಿಷ್ಟ ಸಂಸ್ಥೆಗಳನ್ನು ಬಿಟ್ಟು ಹಿಂದುಸ್ತಾನದ ಕ್ಷೈತಿಜರೇಖೆಯನ್ನು ಒಟ್ಟಾಗಿ ನಿರೀಕ್ಷಿಸಲಾಗಿ ದೇಶದ ತುಂಬ ಅಲ್ಲಲ್ಲಿ ವಿರಳವಾದ ಶೈಕ್ಷಣಿಕ ಪ್ರಯೋಗಗಳನ್ನು ಕಾಣಬಹುದು; ಉದಾ:— ಅನೇಕ ಉತ್ತಮ ಮಾಂಟೀಸರಿ ಹಾಗು ಶಿಶುವಿಹಾರ ಶಾಲೆಗಳೂ ಸರ್ವಸಾಧಾರಣವಾಗಿ ಡಾಲ್ಟನ್ ಪದ್ಧತಿಯನ್ನು ಕಾರ್ಯರೂಪದಲ್ಲಿ ತರಲು ಹಲಕೆಲವು ಪ್ರಯತ್ನಗಳು ಮತ್ತು ಮೋಗಾದಲ್ಲಿ ಉತ್ತಮ ಯಶಸ್ವಿಯಾಗಿ ನಡಿಸಿದ ಯೋಜನ ಪದ್ಧತಿ, ಬಾಲಕರ ಸುಖ ಸ್ವಾತಂತ್ರ್ಯ ಚಟುವಟಿಕೆ ಈ ಧ್ಯೇಯಗಳನ್ನು ಕಾರ್ಯರೂಪದಲ್ಲಿ ತರಲು ವಿದ್ಯಾಭವನದಂಥ ಕೆಲವು ಪುರೋಗಾಮಿ ಶಾಲೆಗಳು ಇವೆಲ್ಲವುಗಳನ್ನು ಅವುಗಳ ಮಟ್ಟಿಗೆ ಸ್ವತಂತ್ರವಾಗಿ ವಿಚಾರಿಸಿದರೆ ಅವು ಸಂತೃಪ್ತಿ ಮುಖ್ಯವಾದವುಗಳಿವೆ. ಆದರೆ ಸಾಮಾನ್ಯದೃಷ್ಟಿಯಿಂದ ನೋಡಲಾಗಿ, ಅವು ಅಲ್ಲಿಗೊಂದು ಇಲ್ಲಿಗೊಂದು ನಡೆವಂಥವೂ ಪರಸ್ಪರ ಸಂಬಂಧ ರಹಿತವೂ ಇದ್ದುದರಿಂದ ಇಡೀ ದೇಶದ ಸಾಮಾನ್ಯ ಶಿಕ್ಷಣದಲ್ಲಿ ಬೆರೆತುಕೊಂಡಿಲ್ಲ. ಹಿಂದುಸ್ತಾನದ ಜೀವನ ಸ್ವರೂಪಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವ ಬೇಡಿಕೆಗಳನ್ನಾಗಲಿ ಪ್ರೇರಕ ಶಕ್ತಿಯನ್ನಾಗಲಿ ಪೂರೈಸಲು ಈ ಪ್ರಯತ್ನಗಳಲ್ಲಿಯ ಎಷ್ಟೊ ಪ್ರಯತ್ನಗಳು ಯತ್ನಿಸಿಲ್ಲ. ಆದರೆ ಮುಖ್ಯವಾಗಿ ಪಾಶ್ಚಾತ್ಯ ಮಾದರಿಗಳನ್ನು ಅನುಕರಿಸುವದು ಸ್ತುತ್ಯವಿದ್ದಾಗ್ಯೂ ಸ್ಫೂರ್ತಿರಹಿತವಾದ ಪ್ರಯತ್ನಗಳಾಗಿವೆ.

ಮೂಲ ಶಿಕ್ಷಣ :——

ಮೂಲ ರಾಷ್ಟ್ರೀಯ ಶಿಕ್ಷಣದ ಯೋಜನೆಗೆ ಸಂಬಂಧಿಸಿದ ಶೈಕ್ಷಣಿಕ ಪುನರ್ರಚನೆಯು ಇವೆಲ್ಲವುಗಳಿಂದ ತೀರಭಿನ್ನವಾದುದೂ ಗರ್ಭಿತಾರ್ಥವುಳ್ಳದ್ದೂ ಇರುತ್ತದೆ. ಹಿಂದುಸ್ತಾನದ ಯುದ್ಧೋತ್ತರ ಶೈಕ್ಷಣಿಕ ಬೆಳವಣಿಗೆಗೆ ಸಂಬಂಧಿಸಿದ ಯೋಜನೆಯಲ್ಲಿ ಇದರ ಸಮಾವೇಶವು ಕೆಲಮಟ್ಟಿಗಾಗಿದೆ ಇದು ತೀರ ಹೊಸ ಅಥವಾ ಕ್ರಾಂತಿಕಾರಕ ಶೈಕ್ಷಣಿಕ ತತ್ವವೆಂದು ಹೇಳುವದು ಸರಿಯಾಗಲಾರದು. ಯಾಕಂದರೆ ಈ ಶಿಕ್ಷಣವು ಉಳಿದ ದೇಶಗಳಲ್ಲಿ ನಡೆದಿರುವ ಪ್ರಾಗತಿಕ ಶೈಕ್ಷಣಿಕ ಆಂದೋಲನಗಳನ್ನು ಬಹುಮಟ್ಟಿಗೆ ಹೋಲುತ್ತದೆ. ಆದರೆ ಮುಖ್ಯ ಹೇತುವಿನ ಪ್ರಾಧಾನ್ಯ ಹಾಗೂ ಅದರ ಉಜ್ವಲ ಪ್ರೇರಣಶಕ್ತಿ ಈ ದೃಷ್ಟಿಯಿಂದ ನೋಡಲಾಗಿ ಈ ಶಿಕ್ಷಣವು ಹಿಂದುಸ್ತಾನದ ವಿಶಿಷ್ಟ ಪರಿಸ್ಥಿತಿಗೆ ಅನುಗುಣವಾಗುವಂತೆ ಹಿಂದೂಜನರ ಮನಸ್ಸಿನ ಸ್ವತಂತ್ರವಾದ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ. ಚಟುವಟಿಕೆಯೇ ಶಿಕ್ಷಣದ ಮೂಲಸಾಧನವೆಂಬ ತತ್ವವನ್ನು ಇದಾದಗೂ ಒಪ್ಪುತ್ತದೆ. ಆದರೆ (ಈ ಧ್ಯೇಯವನ್ನು ಸಾಧಿಸಲು) ಪ್ರತ್ಯಕ್ಷ ಅನುಭವ ಹಾಗೂ ಜನಸಾಮಾನ್ಯರಸಂಗಡ ಬೆರೆತು ನಿರೀಕ್ಷಿಸುವದು ಇದರಿಂದಲೇ ಈ ಧ್ಯೇಯವನ್ನು ಸಾಧಿಸಲು ಬಯಸುವದೇ ಹೊರತು ಸಾಂಪ್ರದಾಯಿಕ ಮಾನಸಶಾಸ್ತ್ರ ದೃಷ್ಟಿಯ ಮುಖಾಂತರದಿಂದಲ್ಲ. ಜನರು ನಿಜವಾಗಿ ಕಲಿಯಬೇಕಾದರೆ ಕೆಲಸ ವ್ಯವಸಾಯ ಉತ್ಪಾದಕ ಚಟುವಟಿಕೆ ಇವುಗಳಿಂದಲೇ ಕಲಿಯುವರು. ಮನುಷ್ಯನ ಇಚ್ಛಾನುಸಾರವಾಗಿ ಅವನ ಕೈಯಲ್ಲಿ ಬಂದು ಬೀಳಬಹುದಾದ ಕಲ್ಪವೃಕ್ಷದ ಫಲವಲ್ಲಿ ಸ್ವರ್ಗದಿಂದ ನಿರಾಯಾಸವಾಗಿ ಸುರಿಯಬಹುದಾದ ಸುಧೆಯಲ್ಲ; ಪ್ರತಿದಿವಸದ ಬೇಡಿಕೆ ಹಾಗೂ ಅನುಭವಗಳು ಜ್ಞಾನಾರ್ಜನದ ಮೂಲಾಧಾರವಾಗಬೇಕು. ಈ ಮಾತಿನ ನೈಜವನ್ನು

ನಂತರದ ಅಂತಸ್ತಿನಲ್ಲಿ ಭ್ರಾಂತನಾದ ಪುಸ್ತಕ-ಪಿಶಾಚಿಯು ಹೊರತು ಯಾರು ಅಲ್ಲಗಳೆಯುವರು ? ಜಾನ್ಮೈಯುಳ್ಳ ಉತ್ಪಾದಕ ಕಾರ್ಯದ ಮುಖಾಂತರವೇ ಶಿಕ್ಷಣವು ಜೀವನಕ್ಕೆ ನಿಕಟ ಸಂಬಂಧ ಉಳ್ಳದ್ದಾಗಬಲ್ಲದು. ಹಳ್ಳಿಯ ಜನರ ಜೀವನಕ್ಕೆ ನಿಕಟ ಸಂಬಂಧವುಳ್ಳ ಹೆಚ್ಚು ದೃಢವಾದ ಶಿಕ್ಷಣ ಪದ್ಧತಿಯನ್ನು ಅನುಸರಿಸುವದೇ ಸುಗಮ ಮಾರ್ಗವಾಗಿದೆ. ಅಲ್ಲದೆ ಚಿಕ್ಕ ಮಕ್ಕಳು ತಯಾರಿಸಿದ ಸಾಮಾನುಗಳಿಂದಲೇ ಶೈಕ್ಷಣಿಕ ವೆಚ್ಚದ ಬಹುಭಾಗವನ್ನು ದೊರಕಿಸಬೇಕೆಂದು ಇಚ್ಛಿಸಲಾಗಿದೆ. ಈ ಮಾರ್ಗದಿಂದ ಆರ್ಥಿಕ ಸಹಾಯವು ಸಾಕಷ್ಟು ದೊರೆಯಬಹುದೊ ಎಂಬುದನ್ನು ಅನುಭವವಿಲ್ಲದೆ ನಿಶ್ಚಯವಾಗಿ ಇಷ್ಟೊಂದು ಬೇಗ ಹೇಳಲು ಸಾಧ್ಯವಿಲ್ಲ. ಆದರೆ ಈ ಯೋಜನೆಯು (ನಿದ್ರಾದೇವಿಯ ಕುವರರಾದ) ನಿದ್ರಾಂಗನೆಯ ಮೋಹನಾಸ್ತ್ರಕ್ಕೊಳಗಾದ ಶಾಲೆಯನ್ನು ನವಚೇತನದಿಂದ ಚೇತರಿಸಬಹುದೆಂಬದನ್ನು ಯಾರೂ ವಿರೋಧಿಸಲಾರರೆಂಬದು ನಿಸ್ಸಂದೇಹವಾದ ಮಾತು. ದೇಶದ ಅನೇಕ ಭಾಗಗಳಲ್ಲಿಯೂ ಅನೇಕ ಮೂಲ ಶಿಕ್ಷಣ ಕೇಂದ್ರಗಳನ್ನು ನಾನು ಕಣ್ಣಾರೆ ಕಂಡಿದ್ದೇನೆ. ಎಲ್ಲೆಲ್ಲಿಯೂ ಅಲ್ಲದೆ(ಅನೇಕ ಕಡೆಗೆ)ಸಾದಾ ಶಾಲೆಗಳಲ್ಲಿಯೂ ಕೂಡ ಮೂಲ ಶಿಕ್ಷಣದ ಉತ್ಸಾಹಕ್ಕೆ ಪ್ರವೇಶ ದೊರೆತಾಗ, ಅದು ಬಾಲಕರ ಜೀವನದ ನಸ್ಪೋದಯವನ್ನು ಆನಂದ, ಆಶಾ ಪ್ರವರ್ತನೆ, (ಹುರುಪು ಹುಮ್ಮಸ್ಸು)ಗಳಿಂದ ತುಂಬಿ ತುಳುಕುವಂತೆ ಮಾಡಿದೆಯೆಂದು ನಾನು ಧಾರಾಳವಾಗಿ ಹೇಳುವೆ. ಹಿಂದುಸ್ತಾನದ ವಿಶಾಲ ಶಿಕ್ಷಣ ಕೇಂದ್ರದಲ್ಲಿ ಸದ್ಯಕ್ಕೆ ಮೂಲ ಶಿಕ್ಷಣವು ಗಾತ್ರ ದೃಷ್ಟಿಯಿಂದ ಕೇವಲ ಘೋರಣೆಯಂತೆ ಅಥವಾ ಮಿಣಿಮಿಣಿ ಮಿನುಗುವ ಚಿಕ್ಕ ದೀಪದಂತೆ ಕಾಣಬರುವದು. ಆದರೆ ಇದೇ ಮಿನುಗುವ ದೀಪವು ಆಶಾಕಿರಣದ ಪ್ರಚಂಡ ಜ್ಯೋತಿಯಾಗುವದಿಲ್ಲವೇ ?

ಯಾವದೊಂದು ವಿಶಿಷ್ಟ ಪದ್ಧತಿ ಅಥವಾ ಕ್ರಮಕ್ಕೆ ನಾನು ಹೆಚ್ಚು ಪ್ರಾಶಸ್ತ್ಯವನ್ನು ಕೊಡುವೆನೆಂದು ಗ್ರಹಿಕೆ ಮಾಡಬಯಸುವದಿಲ್ಲ. ಕಲಿಸುವ ಕ್ರಮಗಳು, ಪದ್ಧತಿಗಳು, ಪಠ್ಯ ವಿಷಯಗಳು, ಕ್ರಮಗಳು, ಸಂವಿಧಾನ ಇವೆಲ್ಲವುಗಳ ಮಹತ್ವವನ್ನು ಮೀರುವ ಒಂದು ವಿಷಯ ನಿದೆ. ಅದಾವುದೆಂದರೆ ಶಿಕ್ಷಣದ ವ್ಯಕ್ತಿತ್ವ ಘೋರಣ, ಪ್ರಾಮಾಣಿಕತನ, ಮತ್ತು ವಿಶಿಷ್ಟ ಯೋಗ್ಯತೆ. ಸಾಂಪ್ರದಾಯಕ ಶಿಕ್ಷಣದಲ್ಲಿ ಶಿಕ್ಷಕನಿಗೆ ಅತಿಮಹತ್ವದ ಸ್ಥಾನವಿದ್ದಿತು. ಆದರೆ ಇತ್ತೀಚೆಗೆ ಅವನೊಬ್ಬ ಕೆಲವು ಅಂಶದಿಂದ ನಿರುತ್ಸಾಹಿಯಾದ ಸಾಮಾಜಿಕ ಕೆಲಸಗಾರನೆಂದು ತಿಳಿಯುತ್ತಾರೆ. ಅವನ ಯೋಗ್ಯತೆಯನ್ನು ತಿಂಗಳಿಗೆ ಇಂತಿಷ್ಟು ಹೆಚ್ಚು ಅಥವಾ ಕಡಿಮೆ ಸಂಬಳದಾಳು ಎಂದುಪೇಕ್ಷಿಸುತ್ತಾರೆ. ಶಿಕ್ಷಣಪ್ರಪಂಚದಲ್ಲಿ ಪ್ರಾಯೋಗಿಕ ಉತ್ಸಾಹವನ್ನು ಪ್ರೋತ್ಸಾಹಿಸಿ ಅದನ್ನು ಜಾಗ್ರತಗೊಳಿಸಲು ಇಚ್ಛಿಸಿದರೆ ಶಿಕ್ಷಣವ್ಯವಸಾಯಕ್ಕೆ (ತಕ್ಕ) ಸರಿಯಾದ ಯೋಗ್ಯತೆಯುಳ್ಳವರನ್ನೆ ಬರಮಾಡಿಕೊಳ್ಳಬೇಕು. ಕಾರ್ಯವನ್ನು ಕೈಕೊಳ್ಳಲು ಅವರಿಗೆ ಬೌದ್ಧಿಕ ಹಾಗೂ ಸಾಂಪತ್ತಿಕ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿಕೊಡಬೇಕು. ಅಲ್ಲದೆ, ಅವರಿಗೆ ಸಮಾಜದಲ್ಲಿ ಸರಿಯಾದ ಸ್ಥಾನ, ಮಾನಗಳು ದೊರೆಯುವಂತೆ ನೋಡತಕ್ಕದ್ದು. ಇಂಥ ಸಾಮಾಜಿಕ ಮನ್ನಣೆಯು ಅವರಿಗೆ ದೊರೆಯದಿದ್ದರೆ ಯೋಗ್ಯ ಮತ್ತು ಪ್ರಾಗತಿಕ ಅಥವಾ ಪ್ರಾಯೋಗಿಕ ಶಿಕ್ಷಣವು ನಮಗೆ ಎಂದೂ ಲಭಿಸದು. ಶಿಕ್ಷಕನು ನಿಜವಾದ ಕರ್ತೃತ್ವ ಶಾಲಿ ಇದ್ದರೆ ಅವನು ಉಳಿದೆಲ್ಲ ಗುಣಗಳಿಂದ ಕೂಡಿದವನೇ ಸರಿ. ಆದರೆ ಅವನು ಬೌದ್ಧಿಕ ಹಾಗೂ ಸಾಂಪತ್ತಿಕ ಸಾಮಾಜಿಕ ದೃಷ್ಟಿಯಿಂದ ತೇಜೋಹೀನನಾಗಿದ್ದರೆ ಅವನ ಕೈಯಲ್ಲಿ ಜೊಕ್ಕ ಚಿನ್ನವೂ ಕೂಡ ಹೇಡಿಮಣ್ಣಾಗದೆ ಇರಲಾರದು.

ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ಏಪ್ರಿಲ್ ೧೯೪೬-ಕಾರ್ಯಕ್ರಮಗಳು

ತಾರೀಖು ವಾರ	ವೇಳೆ ಇಂದ	ವೇಳೆ ವರೆಗೆ	ಕನ್ನಡ ಮತ್ತು ಮರಾಠಿ	ಅಗ್ರಿಕಲ್ಚರಲ್ ಬಾಯಸ್ ಕೋರ್ಸ್	ಉರ್ದು
ಶ. ಸೋ.	೧೧	೧೧-೪೫	ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	ಉಮೇದವಾರರ ಹಾಜರಿ ತೆಗೆದುಕೊಳ್ಳುವದು.
	೧೨	೨	ನಿಬಂಧ ಅಥವಾ ರಿಪೋರ್ಟು ಪತ್ರಬರೆಹ. (ಗುಣಗಳು-೧೦೦)	ನಿಬಂಧ ಅಥವಾ ರಿಪೋರ್ಟ ಪತ್ರ ಬರಹ (ಗು. ೧೦೦)	ನಿಬಂಧ ಅಥವಾ ರಿಪೋರ್ಟ ಪತ್ರಬರಹ (ಗು. ೧೦೦)
	೩	೬	ಆರೋಗ್ಯವಿಜ್ಞಾನ ಅಥವಾ ಶಾರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ. ಆರಂಭದ ಶಾಸ್ತ್ರೀಯ ವಿಷಯ (ಗು. ೧೦೦)	ಆರಂಭದ ಶಾಸ್ತ್ರೀವಿಷಯ (ಗು. ೨೫) ಆರೋಗ್ಯಶಾಸ್ತ್ರ (ಗು. ೨೫)	ಆರೋಗ್ಯವಿಜ್ಞಾನ ಅಥವಾ ಶಾರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಆರಂಭದ ಶಾಸ್ತ್ರೀಯ ವಿಷಯ (ಗು. ೧೦೦)
೯. ಮಂ.	೧೧	೨	ಅಂಕಗಣಿತ (ಗು. ೧೦೦)	ಅಂಕಗಣಿತ (ಗು. ೫೦) ಮಹತ್ವಮಾಪನ (ಗು. ೨೫) ಜಮಾಖರ್ಚು (ಗು. ೨೫)	ಅಂಕಗಣಿತ (ಗು. ೧೦೦)
	೩	೬	ಇತಿಹಾಸ (ಗು. ೫೦) ಭೂಗೋಲ (ಗು. ೫೦)	ರಾಜ್ಯಕಾರಭಾರ (ಗು. ೨೫) ಸಹಕಾರ (ಗು. ೨೫) ಭೂಗೋಲ (ಗು. ೫೦)	ಇತಿಹಾಸ (ಗು. ೫೦) ಭೂಗೋಲ (ಗು. ೫೦)
೧೦. ಬು.	೧೨	೨			ಪ್ರಾಂತಿಕ ಭಾಷೆ-ಕನ್ನಡ ಅಥವಾ ಮರಾಠಿ ಅಥವಾ ಉರ್ದು (ಗು. ೫೦)
	೩	೫			ಪತ್ರ ಅಥವಾ ರಿಪೋರ್ಟ ಬರೆಹ = (ಗು. ೫೦)
೧೧. ಗು.	೧೧	೨	ಭೂಮಿತಿ (ಗು. ೫೦) ಜಮಾಖರ್ಚು (ಗು. ೫೦)	ಒಕ್ಕಲುತನ(ಗು. ೫೫)ಪ್ರಕೃತಿ ವಿಮರ್ಶೆ (ಗು. ೫೦)	ಭೂಮಿತಿ (ಗು. ೫೦) ಜಮಾಖರ್ಚು (ಗು. ೫೦)
	೩	೬	ಪ್ರಾಂತಿಕ ಭಾಷೆ ಅ (ಗು. ೨೫) ಬ (ಗು. ೨೫)	ಪ್ರಾಂತಿಕ ಭಾಷೆ ಅ (ಗು. ೨೫) ಬ (ಗು. ೨೫)	
೧೨. ಶು.				* ಪ್ರಾಯೋಗಿಕ ಪರೀಕ್ಷೆ ೭ನೆಯ ಸದರು(ಗು.೫೦) + ಪ್ರಾಯೋಗಿಕ ಪರೀಕ್ಷೆ ೬ನೆಯ ಸದರು (ಗು. ೫೫)	ಪ್ರಾಂತಿಕ ಭಾಷೆ-ಕನ್ನಡ ಅಥವಾ ಮರಾಠಿ ಅಥವಾ ಉರ್ದು (ಗುಣ ಅ ೨೫, ಬ ೨೫)

ವಿ. ಸೂ. ಪರೀಕ್ಷೆಯ ಮೊದಲನೆಯ ದಿನ ಉಮೇದವಾರರು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

* ಕನ್ನಡ-ಉರ್ದು ಅಥವಾ ಮರಾಠಿ-ಉರ್ದು ಉಮೇದವಾರರಿಗೆ ಕನ್ನಡ ಅಥವಾ ಮರಾಠಿಯಲ್ಲಿ; ಉರ್ದು-ಕನ್ನಡ; ಉರ್ದು-ಮರಾಠಿ ಉಮೇದವಾರರಿಗೆ ಉರ್ದುವಿನಲ್ಲಿ.

+ ಸ್ಥಾನಿಕ ಕಮಿಟಿಯು ಪ್ರೆಸಿಡೆಂಟರು ತಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಆಫೀಸರರ ಸಲಹೆಯಿಂದ ವೇಳೆಯನ್ನು ಗೊತ್ತುಪಡಿಸುವರು.

= ಕನ್ನಡ ಉರ್ದು ಅಥವಾ ಮರಾಠಿ ಉರ್ದು ಉಮೇದವಾರರಿಗೆ ಉರ್ದುವಿನಲ್ಲಿ; ಉರ್ದು ಕನ್ನಡ ಅಥವಾ ಉರ್ದು ಮರಾಠಿ ಉಮೇದವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ.

ಕನ್ನಾಡು ಮತ್ತು ಕನ್ನಡ.

ಲೇಖಕರು : ಶ್ರೀ ಶಂ. ಬಾ. ಜೋಶಿ

' ಕನ್ನಡ ' ಎಂಬುದು ದೇಶವಾಚಕ ಶಬ್ದವೆಂದು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಕೀರ್ತಿ ಶೇಷ ಶ್ರೀವಾನ್ ಆರ್ ನರಸಿಂಹಾಚಾರ್ಯರು ೧೯೦೭ರಲ್ಲಿ ಪ್ರಕಟಿಸಿದ ಕವಿಚರಿತೆಯ ಮೊದಲ ನೆಯ ಸಂಪುಟದ ಮುನ್ನುಡಿಯಲ್ಲಿ ಈ ಮಾತನ್ನು ೂದಲು ಹೇಳಿದರು ಮತ್ತು ' ಕನ್ನಡ ' ಂದರೆ ಕರಿದು+ನಾಡು ಎಂಬ ಅರ್ಥವಿರಬೇಕೆಂದು ಸೂಚಿಸಿದರು. ಆದರೆ, ಮುಂದೆ ಅವರಿಗೆ ೫೦ ವರ್ಷಗಳಿಗಿಂತ ಹೆಚ್ಚು ಕಾಲ ಈ ವಿಷಯದಲ್ಲಿ ತಮ್ಮೊಳಗೆ ನಡೆಸಿದ ವಿಚಾರ, ವಿಮರ್ಶೆ ಮತ್ತು ಸಂಶೋಧನೆಗಳಿಂದ ಈ ಅರ್ಥವು ಸಮಂಜಸವೆಂದು ತೋರಲಿಲ್ಲ. ೧೯೨೯ರಲ್ಲಿ ಕವಿ ಚರಿತೆಯ ಮೂರನೆಯ ಸಂಪುಟ ಪ್ರಕಟವಾಯಿತು. ಅದರ ಮುನ್ನುಡಿಯಲ್ಲಿ ಅವರು ಮತ್ತೆ ಈ ಮಾತನ್ನೆತ್ತಿ ಕೆಲವೊಂದು ವಿವೇಚನೆಯನ್ನು ಮಾಡಿರುವರು. ಅದರಲ್ಲಿ ' ಕನ್ನಡ ' ಂಬುದರ ಮೂಲರೂಪವು ' ಕನ್ನಾಡು ' ಎಂದಿರಬೇಕಾಗಿ ಊಹಿಸಿ ಹೇಳಿದರು.

' ಕನ್ನಾಡು ' ಎಂಬರೂಪವು ಕೇವಲ ಊಹೆಯ ವಿಷಯವೇ ಆಗಿರದೆ ಆ ಬಗೆಯ ಪ್ರಯೋಗಗಳು ಶಿಲಾಶಾಸನಾದಿಗಳಲ್ಲಿ ಇದ್ದುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಅಲ್ಲದೆ ತಮಿಳು ಪ್ರಾಚೀನ ಗ್ರಂಥಗಳಲ್ಲಿಯೂ ' ಕನ್ನಾಡು ' ಮತ್ತು ' ಕನ್ನಾಡಿಗನ್ ' ಎಂಬ ಪ್ರಯೋಗಗಳು ಗಲವೆಡೆಗೆ ಬಂದಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಆದುದರಿಂದ ' ಕನ್ನಡ ' ಂಬುದು ದೇಶವಾಚಕ ಪದವೆಂದೂ ಅದರ ಶುದ್ಧರೂಪವು ' ಕನ್ನಾಡು ' ಎಂಬುದಾಗಿಯೇ ಇರುವುದೆಂದೂ ಈಗ ನಿಸ್ಸಂದಿಗ್ಧವಾಗಿ ಸಿದ್ಧವಾಗಿದೆ.

ಇನ್ನು ' ಕನ್ನಡ ' ಎಂಬಲ್ಲಿರುವ ಕೊನೆಯ ನಡ ಎಂಬುದು ನಾಡು ಶಬ್ದದ ಒಂದು ರೂಪ ಂಬ ಮಾತು ನಿಶ್ಚಿತವಾದರೂ ಅದರ ಪೂರ್ವಪದವಾದ ಕನ್ ಎಂಬುದರ ಅರ್ಥವನ್ನು ರಿತು ಮಾತ್ರ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವು ಹಾಗೇ ಉಳಿದಿತ್ತು, ೧೯೫೯ರಲ್ಲಿ ಕನ್ನಡದ ನೆಲೆ ' ಎಂಬ ಗ್ರಂಥವು ಪ್ರಕಟವಾಗಿ ಇನ್ನೂ ಕೆಲವು ಸಂಗತಿಗಳು ಆಗ ಬೆಳ ಗೆ ಬಂದವು. ' ಕನ್ನಡ ' ಎಂದರೆ ಕರಿದು+ನಾಡು ಎಂದೂ ಅಲ್ಲ ಅಥವಾ ಕರು (ಎಂದರೆ ಸ್ತಾರವಾದ)+ನಾಡು ಎಂದೂ ಅಲ್ಲ. ಕನ್ ಎಂಬದು ಒಂದು ಜನಾಂಗವಾಚಕ ಪದವೆಂದು ಮನುಸ್ಮೃತಿ, ಮತ್ಸ್ಯಪುರಾಣ, ಭವಿಷ್ಯೋತ್ತರಕಹಾ ಮೊದಲಾದ ಪ್ರಾಚೀನ ಸಂಸ್ಕೃತ ಮತ್ತು ಪ್ರಾಕೃತ ಗ್ರಂಥಗಳ ಆಧಾರದಿಂದ ಈ ಮಾತಿನ ಮೇಲೆ ಹೊಸ ಬೆಳಕು ದೊರಕಿತು ಮತ್ತು ಫಾದರ ಹಿರಾಸರು, ಇತ್ತೀಚಿನ ಮಹೆಂಜೋದಾರೋದಲ್ಲಿ ದೊರೆತ ಲೇಖನಗಳ ಆಧಾ ರದಿಂದ, ಈ ಮಾತನ್ನೇ ಪುಷ್ಟೀಕರಿಸಿರುವರು. ಆದಕಾರಣ ಕನ್ನಡ ಎಂದರೆ ಕನ್ ಎಂಬ ಜನಾಂಗದ ನಾಡು ' ಕನ್ನಡರ ನಾಡು ಎಂಬ ಮಾತು ನಿರ್ವಿವಾದವಾಗಿ ಗೊತ್ತಾಗು ತ್ತದೆ. ಆದರೆ ' ಕನ್ನಡ ' ಎಂಬುದಕ್ಕೆ ಮೂಲದಲ್ಲಿ ದೇಶವಾಚಕ ಅರ್ಥವಿದ್ದೂ ರೂಢಿಯಿಂದ ಅದಕ್ಕೆ ಭಾಷಾವಾಚಕ ಅರ್ಥವೇ ಪ್ರಾಮುಖ್ಯತೆಯಿಂದ ಅಂಟಿಕೊಂಡುದು ದುರ್ದೈವದ ಸಂಗತಿಯಾಗಿದೆ. ' ಕನ್ನಡ ' ಎಂದರೆ ಭಾಷೆ ಎಂದೇ ಸಾಮಾನ್ಯವಾಗಿ ಲೋಕದ ತಿಳು ವಳಿಕೆಯಾಗಿದೆ! ಆದುದರಿಂದ ಕರ್ನಾಟ ಎಂಬರ್ಥದಲ್ಲಿ ' ಕನ್ನಡನಾಡು ' ಎಂದು ಹೇಳುವ ರೂಢಿಯು, ತನ್ನ ಸೆಳವಿನಲ್ಲಿ ವಿದ್ವಾಂಸರನ್ನು ಕೂಡ ಎಳೆದುಕೊಂಡಿದೆ! ಅಕಳ ಗೋಮೂತ್ರ, ಕಸಿಪದ್ದಿ, ಸಹ್ಯಾದ್ರಿಪರ್ವತ, ಭಪ್ಪನ್ನೈವತ್ತಾರು (ದೇಶ). ಮೊದಲಾದ ಮಾತುಗಳಂತೆ

'ಕನ್ನಡ–ನಾಡು' ಎಂಬಲ್ಲಿಯೂ ದ್ವಿರುಕ್ತಿದೋಷವು ಬರುತ್ತದೆ. ಹೀಗೆ ದ್ವಿರುಕ್ತಿದೋಷ ಉಂಟಾಗುವುದಕ್ಕೆ ಕಾರಣವೇನು? ಶಬ್ದದ ಮೂಲಾರ್ಥದ ಅರಿವು ಕಡಿಮೆಯಾದ ಹಾಗೆ ಬಗೆಯ ತಪ್ಪು ಮಾತುಗಳು ತಲೆದೋರುತ್ತವೆ. ಅದರೆ ಅಪಾರ್ಥದ ಅನುಚಿತ ಪ್ರಯೋಗಗಳು, ಅವನ್ನಾಡುವವರ ಬೆಲೆಯನ್ನು ಕಡಿಮೆಮಾಡುತ್ತವೆ. ಅಷ್ಟೇ ಏಕೆ ಮಿಲ್ಟನ್ ಮಹಾಕವಿಯು ಒಂದೆಡೆಗೆ ಹೇಳಿರುವಂತೆ '. ತಮ್ಮ ಭಾಷೆಯ ಸರಿಯಾದ ಅರ್ಥದ ಅರಿವು ಇಲ್ಲದೆ, ಅಪಾರ್ಥದಲ್ಲಿ, ಸಂದಿಗ್ಧಾರ್ಥದಲ್ಲಿ ಪದಗಳನ್ನು ಪ್ರಯೋಗಿಸುವ ಜನರನಾಡ ಅವರ ಭಾಷೆಯೊಡನೆಯೇ ಅವನತಿಯನ್ನು ಹೊಂದುತ್ತದೆ." (..... I am much more inclined to believe that the down fall of a dominion and humiliation of its high estate will ensue when the essentia rightness of language falls into disrepute.) ಎಂದು ಹೇಳಿದ್ದಾನೆ 'ಕನ್ನಡ'—'ಕನ್ನಾಡ' ಮಟ್ಟಿಗಂತೂ ಈ ಮಾತು ಸಂಪೂರ್ಣಸತ್ಯವಾಗಿದೆ ಎಂದ ಎಲ್ಲರೂ ಒಪ್ಪಬೇಕಾಗಿದೆ. ನಮ್ಮ ನುಡಿಯ ಇಳಿಗಾಲದೊಡನೆ ನಾಡಿನ ಅಳಿಗಾಲಕ್ಕೂ ಪ್ರಾರಂಭವಾಯಿತು.

'ಕನ್ನಡ' ಎಂಬುದರ ಶುದ್ಧರೂಪವು ಕನ್ನಾಡು ಎಂಬುದೇ ಆಗಿದೆ ಎಂದು ನಿವಾದಮೇಲೆ—ಎಲ್ಲ ವಿದ್ವಾಂಸರೂ ಏಕಕಂಠದಿಂದ ಸಮ್ಮತಿಸುತ್ತಿರುವರೆಂದಮೇಲೆ ದೇಶವೆಂ ಅರ್ಥದಲ್ಲಿ 'ಕನ್ನಾಡು' ಎಂಬ ಪದವನ್ನೇ ಏಕೆ ಪ್ರಯೋಗಿಸಬಾರದು? 'ಕನ್ನಾಡು' ಎಂಬುವುದರಿಂದ 'ಕನ್ನಡ–ನಾಡು' ಎಂಬಲ್ಲಿ ಬರುವ ತಿಳಿಗೇಡಿತನದ ಅರೋಪವೂ ದೂರವಾಗುವುದು. ಮತ್ತು ಪುರಾತನ ಕಾಲದಿಂದ ಉಪಯೋಗದಲ್ಲಿದ್ದ 'ಕನ್ನಾಡು' ಎಂಬ ಒಂದು ಪ್ರಯೋಗವನ್ನು ಬಳಕೆಯಲ್ಲಿ ತಂದ ಶ್ರೇಯಸ್ಸೂ ದೊರೆಯುವುದು.

'ಕನ್ನಡ' ಎಂಬ ಪದವು ಈಗ ಸಂದಿಗ್ಧಾರ್ಥ ಉಳ್ಳದ್ದಾಗಿದೆ. ಆದುದರಿಂದ ಮಾನಲ್ಲಿ 'ಕರ್ಣಾಟ' ಎಂಬ ಸಂಸ್ಕೃತಪದವು ಹೆಚ್ಚಾಗಿ ರೂಢಿಯಲ್ಲಿ ಬಂದಿದೆ. 'ಕರ್ಣಾಟ ಅಥವಾ 'ಕರ್ನಾಟ' ಎಂದರೆ ದೇಶ ಮತ್ತು 'ಕನ್ನಡ' ಎಂದರೆ ಭಾಷೆ ಎಂಬ ರೂಢಿಯ ತಲೆದೋರಿದೆ. ಈ ತಪ್ಪುರೂಢಿಯನ್ನು ತಪ್ಪಿಸಬೇಕಾಗಿದ್ದರೆ 'ಕನ್ನಾಡು' ಎಂಬ ಶುದ್ಧರೂಪವನ್ನು ಬಳಕೆಯಲ್ಲಿ ತರುವುದು ಒಂದು ಒಳ್ಳೆಯ ಉಪಾಯವಾಗಿದೆ.

'ಕನ್ನಡ'—'ಕನ್ನಡ' ಎಂದರೆ ದೇಶವೆಂದು ನಿಶ್ಚಿತವಾಗಿ ಗೊತ್ತಾದಬಳಿಕ ಆ ಪದವನ್ನು ಭಾಷೆ ಎಂಬ ಅರ್ಥದಲ್ಲಿ ಬಳಸುವಲ್ಲಿ ಯಾವ ಚಾಣ್ಕ್ಷ್ಯ? ಯಾವ ಔಚಿತ್ಯ? ಭಾಷೆ ಎಂಬ ಅರ್ಥದಲ್ಲಿ 'ಕನ್ನಡ' ಎಂದಿಷ್ಟೇ ಹೇಳುವದಕ್ಕಿಂತ 'ಕನ್ನಡ ನುಡಿ' (ಎಂದರೆ ಕನ್ನಡಿನ ನುಡಿ ಎಂಬುವದು ಲೇಸು. ಆದರೆ 'ಕನ್ನಡ ನುಡಿ' ಮತ್ತು 'ಕನ್ನಾಡ ನುಡಿ' ಎಂದು ಹೇಳುವದ ಸ್ವಲ್ಪ ಉದ್ದವಾಗುತ್ತದೆ. ಮತ್ತು ಸ್ವಲ್ಪ ಗಡಚೂ ಆಗುತ್ತದೆ. ಆದಕಾರಣ ಕನ್ನಾಡ ನಾಡು–ಕನ್ನಾಡು, ಆಗಿರುವಂತೆ ಕನ್ನಾಡ ನುಡಿ – 'ಕನ್ನುಡಿ' ಎಂದು ಏಕೆ ಮಾಡಬಾರದು? ಕನ್ನುಡಿ ಎಂದರೆ ಕನ್ನ ಎಂಬ ಜನಾಂಗದ ನುಡಿ 'ಕನ್ನುಡಿ' ಇವ. ಕೇಳುವುದಕ್ಕೆ ಸುಲಭವೂ ಅರ್ಥಪೂರ್ಣವೂ ಆದ ಶಬ್ದವಾಗಿದೆ. ಇತ್ತೀಚೆಗೆ ಹೊಸ ಶಬ್ದಗಳ ಅವಶ್ಯಕತೆಯು ತಲೆದೋರಿದಂತೆ 'ನಿಲ್ದಾಣ' (ಸ್ಟೇಶನ್). 'ಬಾನುಲಿ' (ಆಕಾಶವಾಣಿ). ಮೊದಲಾದ ಹೊಸ ಮಾತುಗಳನ್ನು ಸಿದ್ಧಪಡಿಸಿಕೊಂಡು ಬಳಕೆಯಲ್ಲಿ ತಂದಿಲ್ಲವೇ? ಅದರಂತೆ 'ಕನ್ನುಡಿ' ಎಂಬುದನ್ನೂ ಇನ್ನು ಮೇಲೆ ರೂಢಿಸಲು ಅಡ್ಡಿಯೇನು? ಏಕೆಂದರೆ ದೇಶ ಎಂಬ ಅರ್ಥದ 'ಕನ್ನಡ' ವನ್ನು ಭಾಷೆ ಎಂಬರ್ಥದಲ್ಲಿ ಉಪಯೋಗಿಸುವುದರಿಂದ ಲೋಕಕ್ಕೆಲ್ಲ ನಮ್ಮ ಅರಿವುಗೇಡಿತನವನ್ನೆ ಪ್ರದರ್ಶಿಸಿಕೊಂಡಂತಾಗುವುದಿಲ್ಲವೇ?

ಪತ್ರಗಳ ಮುಖ್ಯಾಂಶಗಳು

ಸಮ್ಮೇಲನಗಳು :— ಅಂಕೋಲಾದಲ್ಲಿ ಸುಮಾರು ೬೫ ಶಿ. ಶಿ. ಯರು ಕೂಡಿದ್ದರು. ಮುಂಡರಗಿಯಲ್ಲಿ ಬಾಲಕರು 'ಕುರುಕ್ಷೇತ್ರವನ್ನು' ಅಭಿನಯಿಸಿದರು. ಇಂಗಳಗಿಯಲ್ಲಿ ಹದಿನೆಂಟು ಶಾಲೆಗಳ ಶಿಕ್ಷಕರು ಕೂಡಿದ್ದರು. ಯಾಳವಾರದಲ್ಲಿ ಶ್ರೀ. ಪ್ರಿ. ನಂದಿಮಳ ಹಾಗು ಪ್ರಿ. ಕುರ್ತಕೋಟಿ ಅವರು ಆಗಮಿಸಿದ್ದರು. ೪೫೦ ವಿದ್ಯಾರ್ಥಿಗಳ ಮೆರವಣಿಗೆ ಹೊರಟಿತ್ತು. ಕಾಳೀಕೋಟೆಯಲ್ಲಿ ಮೆ|| ಭುಂಡಿವಾಡ ಅವರ ಹಿರಿಯತನದಲ್ಲಿ ಆದ ಸಮ್ಮೇಲನದಲ್ಲಿ ಹೆಣ್ಣು ಮಕ್ಕಳು ಅಭಿನಯಿಸಿದ ಏಕಾಂಕ ನಾಟಕಕ್ಕೆ ೫ ರೂ. ಗುಪ್ತದಾನ ದೊರೆಯಿತು. ಕುಮಟೆಯಲ್ಲಿ ಮೆ|| ನಾಡಕರ್ಣಿ ಸಾಹೇಬರ ಹಿರಿಯತನದಲ್ಲಿ ಆದ ಸಮ್ಮೇಲನದಲ್ಲಿ ಜಾಣ ಮಕ್ಕಳಿಗೆ ೪೬ ರೂ. ಮೆಚ್ಚುಗೆ ದೊರೆಯಿತು. ಯಕ್ಕುಂಡಿಯಲ್ಲಿ ಬೀಟ ಆಫೀಸರರ ಹಿರಿಯತನದಲ್ಲಿ ಆದ ಸಮ್ಮೇಲನದಲ್ಲಿ ಸ್ವಾಮಿಗಳು ಮಕ್ಕಳಿಗೆ ೫ ರೂ. ಹಾಗು ಬೆಳ್ಳಿಯ ಪದಕಗಳನ್ನು ಕೊಟ್ಟು ಆಶೀರ್ವದಿಸಿದರು. ಹಲ್ಯಾಪುರದಲ್ಲಿ ೧೫ ಊರುಗಳ ಶಿ. ಶಿ. ಕೂಡಿದ್ದರು. ಊರ ಹಿರಿಯರು ಅತಿಥಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದರು ಜಾಣ ವಿದ್ಯಾರ್ಥಿಗಳಿಗೆ ೧೬ ರೂ. ಗಳ ಪುಸ್ತಕಗಳನ್ನು ಮೆಚ್ಚುಗೆಯಾಗಿ ಕೊಟ್ಟರು. ಕರಜಗಿಯಲ್ಲಿ ಮೆ|| ಶಿಂತ್ರೆ ಸಾಹೇಬರ ಹಿರಿಯತನದಲ್ಲಿ ನೆರೆದ ಸಮ್ಮೇಲನದಲ್ಲಿ ಪ್ರಾ. ಶಾ. ಪ್ರ. ಪ. ಪಾಸಾದವರಿಗೆ ಮೆಚ್ಚುಗೆಯನ್ನು ಕೊಡಲಾಯಿತು. ರಾತ್ರಿ 'ಇಲಿಕ್ಯನ್' ಎಂಬ ಏಕಾಂಕ ನಾಟಕವಾಯಿತು.

ವಾಚನಾಲಯಗಳು :— ಸೊರಟೂರಲ್ಲಿ ಊರಹಿರಿಯರು ೩೭ ರೂ. ಕೂಡಿಸಿದರು. ಇದರಿಂದ ವಿದ್ಯಾರಣ್ಯ ಸ್ಕೂಲ್ ವಾಚನಾಲಯವು ಆರಂಭವಾಯಿತು. ಹಂದಿಗುಂದದ ಮಲ್ಲಿಕಾರ್ಜುನ ವಾಚನಾಲಯಕ್ಕೆ ಶ್ರೀ. ಜಾದಾನಿ ಅವರು ೫ ರೂ. ಕೊಟ್ಟರು. ಕೊಡಗಾನೂರು ವಾಚನಾಲಯವು ಚೆನ್ನಾಗಿದೆ ಬೆಳವಣಿಕೆಯ ಶಾಲಾವಾಚನಾಲಯಕ್ಕೆ ಶ್ರೀ. ಕಟಗೇರಿ ಅವರು ೫ ರೂ ಕೊಟ್ಟರು. ಕೆರೆಕೋಣದಲ್ಲಿ ಗಾಂಧಿವಾಚನಾಲಯವು ಆರಂಭವಾಯಿತು. ಬೆಲ್ಲದ ಬಾಗೇವಾಡಿಯಲ್ಲಿ ಹೆಣ್ಣು ಮಕ್ಕಳ ವಾಚನಾಲಯಕ್ಕಾಗಿ ಶ್ರೀಮತಿ ದುಂಡವ್ವ ತೋಟಿಗೇರ ಅವರ ಪ್ರಯತ್ನದಿಂದ ೧೧೦ ರೂ. ಕೂಡಿದವು. ನವಡಿ ಮಕ್ಕಳ ವಾಚನಾಲಯಕ್ಕೆ ಸರಪಂಚರಾದ ಶ್ರೀ. ಸಂಗಯ್ಯನವರು ೨೫ ರೂ. ಕೊಟ್ಟರು. ಕದರಮಂಡಲಗಿ ಶಾಲಾವಾಚನಾಲಯಕ್ಕಾಗಿ ಶ್ರೀ. ಶಂಕರಪ್ಪ ನಂದಿಹಳ್ಳಿ ಅವರು ೭ ರೂ. ಕೊಟ್ಟರು.

ಶಾರೀರಕ ಚಟುವಟಿಕೆಗಳು :— ವಳಸಂಗದ ಊರಹಿರಿಯರು ಮಕ್ಕಳ ಚಟುವಟಿಕೆಗಳನ್ನು ಕಂಡು ೮ ರೂ. ಮೆಚ್ಚುಗೆಯಾಗಿ ಕೊಟ್ಟರು. ತಿಲ್ಹಾಪುರದಲ್ಲಿ ಊರವರು ಮಕ್ಕಳಿಗೆ ಪಾಟಿ ಪುಸ್ತಕ ಬೆಂಡು ಬತ್ತಾಸಗಳನ್ನು ಕೊಟ್ಟರು. ಹಳ್ಳಿಕೇರಿಯ ಸ್ಕೂಲ್ ಪಂಚರು ೬ ರೂ. ಗಳ ಚುರಮರಿಯನ್ನು ಕೊಟ್ಟು ಪ್ರೋತ್ಸಾಹಿಸಿದರು. ಹಲ್ಯಾಪುರದ ಸ್ಕೂ. ಕ. ಚೇ. ದಿವಾನ ಸಾಹೇಬರು ಸ್ವಂತ ಹಣದಿಂದ ಮಿಠಾಯಿ ತರಿಸಿಕೊಟ್ಟರು. ಬೆಳವಣಿಕೆಯಲ್ಲಿ ಶ್ರೀ. ಭರಮಪ್ಪಡ್ಡಿ ಅವರು ೧೬ ವಿದ್ಯಾರ್ಥಿಗಳ ಸಮವಸ್ತ್ರಗಳಿಗಾಗಿ ೨೫೦ ರೂ. ಕೊಟ್ಟರು. ಶ್ರೀ. ಕಟಗೇರಿ ಅವರು ಬೆಳ್ಳಿಯ ಗದೆಯನ್ನು ಕೊಟ್ಟರು. ಕುರಬಗೊಂಡ ಶಾಲೆಯ ಮಕ್ಕಳು ಹಾವೇರಿಯಲ್ಲಿ ಆದ ಪಂದ್ಯಾಟಗಳಲ್ಲಿ "ಪರಾಕ್ರಮಶಾಲೆ" ಯವರು ಎಂದು ಹೆಸರು ಪಡೆದರು. ೫೧ ರೂ. ಗಳ ಸೈಜ್ಜಿಗೆ ದೊರೆಯಿತು. ಕಲಾದಗಿಯ ಪಾಟಿಯ ಕಾರಖಾನೆಯವರು ಮಕ್ಕಳ ಆಟಗಳನ್ನು ಕಂಡು ೬೦ ಪಾಟಿಗಳನ್ನು ಮೆಚ್ಚುಗೆಯಾಗಿ ಕೊಟ್ಟರು.

ಶಾಲೆಯ ಉಪಕರಣಗಳು :— ಹುಲೇಕಲ್ಲು ಶಾಲೆಯನ್ನು ಸಂದರ್ಶಿಸಿ ಶ್ರೀ. ತಿಮ್ಮಪ್ಪ ನಾಯರು ಒಂದು ಜಾಗಟೆಯನ್ನು ಕೊಟ್ಟರು. ಮಾಂಜರಿ ಶಾಲೆಗೆ ಒಂದು ಜಾಗಟೆಯನ್ನು ಕೊಡುವದಾಗಿ ಶ್ರೀ. ಸಾವಂತ ಅವರು ವಾಗ್ದಾನ ಮಾಡಿದ್ದಾರೆ.

ಸಭೆ-ಸಮಾರಂಭ-ಉತ್ಸವಗಳು :— ಹುಬ್ಬಳ್ಳಿಯಲ್ಲಿ ೨-೧೨-೪೫ನೆಯ ದಿವ ಪಾಲಕರ ದಿನಾಚರಣೆಯಾಯಿತು. ಆಲೂರ (ಹಾನಗಲ್ಲ ತಾಲೂಕ) ಬಿದರಕುಂದಿ ಶಾಲೆಗಳ ಶಿಕ್ಷಕರು

ವಿದ್ಯಾರ್ಥಿಗಳೊಂದಿಗೆ ಪ್ರವಾಸವಮಾಡಿಬಂದರು. ನಾಗೇಂದ್ರಗಡ, ಯರಮುಖ ಶಾಲೆಗಳಲ್ಲಿ ಶಾರದಾಪೂಜೆಯೂ ದೇವಲಾಪುರದಲ್ಲಿ ನಾಡಹಬ್ಬವೂ ಸೊರಟೂರು ಹುಲೇಕಲ್ಲುಗಳಲ್ಲಿ ಗಜಾನನೋತ್ಸವವೂ ವಿಜೃಂಭಣೆಯಿಂದ ಆದವು. ಅಂಕಲಗಿಯಲ್ಲಿ ಶ್ರೀ. ಪಾಟೀಲ ಮಾಸ್ತರರಿಗೆ ಬೀಳ್ಕೊಡುವ ಸಮಾರಂಭವಾಯಿತು. ಬೆಳವಡಿಯಲ್ಲಿ ಪ್ರಾ. ಶಾ. ಪ್ರ. ಪ. ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಮುಚ್ಚುಗೆಯನ್ನು ಕೊಡಲಾಯಿತು. ಬನಹಟ್ಟಿ (ನವಿಲಗುಂದ) ಶಾಲೆಯ ಮಾಸ್ತರರಾದ ಶ್ರೀ. ಅಂಗಡಿಯವರಿಗೆ ವರ್ಗವಾದಾಗ ಊರವರು ಪ್ರೇಮದಿಂದ ಬಂಗಾರದ ಉಂಗುರವನ್ನು ಅರ್ಪಿಸಿದರು. ಹಿರಿಯಬಾಗೇವಾಡಿಯಲ್ಲಿ ಶ್ರೀ. ಶಿ. ಪ್ರೋ. ಪಾಟೀಲ ಮಾಸ್ತರರಿಗೆ ವರ್ಷಪ್ರಾಯಿಜ ದೊರೆತುದಕ್ಕಾಗಿ ಸತ್ಕಾರವಾಯಿತು. ಕೋಟೆಉಮಚಗಿಯಲ್ಲಿ ಪ್ರೌಢ ವಿದ್ಯಾರ್ಥಿಗಳ ಅಭ್ಯಾಸಕೂಟವು ಆರಂಭವಾಗಿದೆ. ಆಘನಾಶಿನಿ ಶಾಲೆಯಲ್ಲಿ ಗೀತಾ ಜಯಂತಿಯೂ ಕಾವ್ಯಗಾಯನಗಳೂ ಆದವು. ಕಡವಾಡದಲ್ಲಿ ಮೆ. ಗುಂಜೀಕರರಿಗೆ ಗದಗಿಗೆ ವರ್ಗವಾದುದಕ್ಕಾಗಿ ಬೀಳ್ಕೊಡಲಾಯಿತು. ಮೆ॥ ಪಿ ಬಿ. ದೇಸಾಯಿ ಅವರಿಗೆ ವರ್ಗವಾದುದರಿಂದ ಕುಡಚಿ ಬೈಲಹೊಂಗಲಗಳಲ್ಲಿ ಸತ್ಕಾರಸಮಾರಂಭಗಳಾದವು.

ಸ್ವೀಕಾರ ಮತ್ತು ವಿಮರ್ಶೆ

ಕಾಂಗ್ರೆಸ್ಸಿನ ಇತಿಹಾಸ : ಲೇಖಕರು : ಶ್ರೀ. **ಗುರುನಾಥ ಜೋಶಿ**, ಹಿಂದುಸ್ಥಾನಿ ಅಧ್ಯಾಪಕರು, ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ, ಧಾರವಾಡ, ಪುಸ್ತಕ ಸಿಕ್ಕುವ ಸ್ಥಳ: ಸಾಧನ ಮುದ್ರಣಾಲಯ, ಧಾರವಾಡ. ಕ್ರೌನ್ ೪ಪ ಪುಟಗಳು. ಬೆಲೆ ೦—೧೫—೦.

ಶ್ರೀ. ಗುರುನಾಥ ಜೋಶಿ ಅವರು ಈಗಾಗಲೆ ತಮ್ಮ ಕನ್ನಡ ಸಾಹಿತ್ಯ ಸೇವೆಯಿಂದ ಸುಪರಿಚಿತರಾಗಿದ್ದಾರೆ. ಹಿಂದುಸ್ತಾನಿಯ ಅಧ್ಯಾಪಕರಾಗಿದ್ದಾಗ್ಯೂ ಇತಿಹಾಸದ ಅಭ್ಯಾಸಿಗಳಾಗಿದ್ದಾರೆ.

ಟ್ರೇನಿಂಗ ಕಾಲೇಜುಗಳಲ್ಲಿ ಶಿಕ್ಷಣ ಹೊಂದುತ್ತಿದ್ದ ಶಿಕ್ಷಕ-ಶಿಕ್ಷಕಿಯರಿಗೆ ಕನ್ನಡದಲ್ಲಿ ಇಂಥ ಪುಸ್ತಕ ಅವಶ್ಯಕವಿತ್ತು. ಶ್ರೀ. ಜೋಶಿ ಅವರು ಅದನ್ನು ಒದಗಿಸಿದ್ದಕ್ಕಾಗಿ ಅಭಿನಂದನೀಯರು. ಈ ಪುಸ್ತಕವು ಟ್ರೇನಿಂಗ್ ಸಂಸ್ಥೆಗಳ ಅಭ್ಯಾಸ ಪತ್ರಿಕೆಯ ಮೇರೆಗೆ ಬರೆಯಲ್ಪಟ್ಟಿದೆ. ಆವಶ್ಯಕವಿದ್ದ-ನಮ್ಮ ರಾಷ್ಟ್ರವನ್ನು ಕಟ್ಟಲು ಹೆಣಗಿದ-ಮಹಾಪುರುಷರ ಜೀವನ ಚರಿತ್ರೆಗಳೂ ಈ ಹೊತ್ತಿಗೆಯಲ್ಲಿ ಅಡಕವಾಗಿರುವದರಿಂದ ಪುಸ್ತಕವು ಅತ್ಯುಪಯುಕ್ತವಾಗಿದೆ. ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೂ ಈ ಪುಸ್ತಕವು ಉಪಯುಕ್ತವಾದುದಾಗಿದೆಯಲ್ಲದೆ ಎಲ್ಲ ಪ್ರಾಥಮಿಕ ಶಿಕ್ಷಕರೂ ಸಂಗ್ರಹಿಸತಕ್ಕುದಾಗಿದೆ. ಇದರಲ್ಲಿ ಬಳಸಿದ ಭಾಷೆ ಸರಳವಾಗಿದ್ದು ಇತಿಹಾಸದಂಥ ನೀರಸ ವಿಷಯವು ಸರಸವಾಗಿದೆ. ಟ್ರೇನಿಂಗ್ ಸಂಸ್ಥೆಗಳ ಅಭ್ಯಾಸ ಪತ್ರಿಕೆಯ ಮೇರೆಗೆ ಬೇಕಾಗುವ ಪುಸ್ತಕಗಳನ್ನು ಶ್ರೇಯುತರು ಬರೆಯುವರೆಂದು ಆಶಿಸಲಾಗಿದೆ.

—ಸಂಪಾದಕರು

ಪರಿವಿಡಿ.

ಸಂಪಾದಕೀಯ ೧
ವಾದ ವಿವಾದ ಮಂಡಳದ ಸಂಕ್ಷಿಪ್ತ ವರದಿ ೩
ಮೂಲ ಶಿಕ್ಷಣ ತರಬೇತಿ ವರ್ಗಗಗಳು....ಶ್ರೀ. ಜೋಗು. ೫
ಟ್ರೇನಿಂಗ್ ಕಾಲೇಜ್ ಸರ್ಟಿಫಿಕೆಟ . . . . . .
ಪರೀಕ್ಷೆಯ ಕಾರ್ಯಕ್ರಮ ೧೯೪೬ . . . . . ೭
ಪ್ರಶ್ನೋತ್ತರ ಪದ್ಧತಿ. . . . . ಶ್ರೀ. ಎಸ್. ಜಿ. ಭೈಚನಾಳ. . . . ೮
ಕತೆಯನ್ನು ಹೇಳುವ ಕಲೆ . . . ಶ್ರೀ. ಎಸ್. ಜಿ. ಭೈಚವಾಳ. . . . ೧೨
ನರಕದಲ್ಲಿ ಸ್ವರ್ಗ (ಕವಿತೆ) . . . ಶ್ರೀ. ದ. ರಾ. ಬೇಂದ್ರೆ. ೧೫
ಶೈಕ್ಷಣಿಕ ಪ್ರಯೋಗಗಳು . . . ಶ್ರೀ. ಕೆ. ಜಿ. ಸಯಾದ್ರಿನ. . . . ೧೫
ಗಂಡು ಮಕ್ಕಳ ಮಾಲ್ಕಿಪರೀಕ್ಷೆಯ ಕಾರ್ಯಕ್ರಮ ೨೦
ಕನ್ನಾಡು ಮತ್ತು ಕನ್ನುಡಿ . . . ಶ್ರೀ. ಶಂ. ಬಾ. ಜೋಶಿ. ೨೧
ಪತ್ರಗಳ ಮುಖ್ಯಾಂಶಗಳು ೨೩
ಸ್ವೀಕಾರ ಮತ್ತು ವಿಮರ್ಶೆ ೨೪

ವಾಚನಪಾಠಮಾಲೆ ಮತ್ತು ಕವಿತಾಪಾಠಮಾಲೆ

ಪಂಡಿತ ಪೂಜಾರರೂ ಶ್ರೀ ಕುರುಡಿಯವರೂ ಕೂಡಿ ರಚಿಸಿ ಪ್ರಕಟಿಸಿದ ಕನ್ನಡ ಶು ಮತ್ತು ಹೆಣ್ಣು ಮಕ್ಕಳ ಪ್ರಾ. ಶಾ. ಪ್ರ ಪರೀಕ್ಷೆಯ ಉಮೇದವಾರರಿಗೂ ಏಳನೆಯ ಮತ್ತೆಯ ವಿದ್ಯಾರ್ಥಿಗಳಿಗೂ ಅತ್ಯಂತ ಉಪಯುಕ್ತವಾಗಿದ್ದು ಬಹುದಿನಗಳಿಂದಲೂ ಸಾಠ ಪುಸ್ತಕದಂತೆ ಉಪಯೋಗಿಸಲ್ಪಡುತ್ತ ಬಂದಿರುವ ಈ ಪುಸ್ತಕದ ಹೊಸ ಮುದ್ರಣದ ಪ್ರತಿ-ಗಳು ಮಾರಲಿಕ್ಕೆ ಸಿದ್ಧವಾಗಿವೆ. ಪ್ರಕಾಶಕರಿಂದಲೂ ಧಾರವಾಡದೊಳಗಿನ ಪುಸ್ತಕ ವ್ಯಾಪಾರಿಗಳಿಂದಲೂ ಪ್ರತಿಗಳನ್ನು ತರಿಸಿಕೊಳ್ಳಬಹುದು.

ಬೆಲೆ: ೧–೮–೦. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮೀಶನ್ ಕೊಡಲಾಗುವದು.

ಶ್ರೀ. ಎಚ್. ಬಿ. ಉಮಡಿ, ಎಮ್. ಎ. ಧಾರವಾಡ ಇವರು ರಚಿಸಿದ

ಹಿಂದ ಪದ್ಧತಿಯ ಜಮಾಖರ್ಚು

ಭಾಗ ೧ ಬೆಲೆ ೪ ಆ.

ಭಾಗ ೨ ಬೆಲೆ ೧೨ ಆ.

ಲೇಖಕರಲ್ಲಿಯೂ ಕರ್ನಾಟಕದ ಎಲ್ಲ ಬುಕ್‌ಡಿಪೋಗಳಲ್ಲಿಯೂ ದೊರೆಯುವವು.

ಯುಗಾದಿಯಿಂದ ಯುಗಾದಿಗೆ ೪ ಉತ್ತಮ ಕತೆ ಕಾದಂಬರಿಗಳು

ವಾರ್ಷಿಕ ಚಂದಾ (ಪೋಷ್ಟ್ ರಜಿಸ್ಟ್ರರ ಪೆಟ್ಟಿ ಸೇರಿ) ೪—೦—೦

೨ನೇ ವರ್ಷದ ಪುಸ್ತಕಗಳು :

೧ ಹತ್ತಿಖಾತಾಯಿ (ಕಾರಂತರ ಕಾದಂಬರಿ)
೨ ಭೂಮಯ್ಯನ ಮತ್ತು ಮುಂದಿರ (ನಲ್ಲಬಾಳ ಮತ್ತು ಶರ್ಮ)
೩ ಗಂಡು-ಹೆಣ್ಣಿನ ಸಮಸ್ಯೆ (ಕಾದಂಬರಿ ಭಾಗ ೨)
೪.ಹಬಿರುಗಾಳಿ (ಪ್ರೊ. ನಾ. ಸಿ. ಫಡಕೆಯವರ ಕಾದಂಬರಿ) ೨ ಭಾಗಗಳು ಸೇರಿ
೫ ಸೋಡಶಿ (ಶ್ರೀವತ್ಸ ಶರ್ಮರ ಕಾದಂಬರಿ)
೬ ರಮಾನಾಥ (ದಿ. ಪ್ರೇಮಚಂದರ ಶ್ರೇಷ್ಠ ಕಾದಂಬರಿ)
೭ ನೇತಾಜಿ (ಸುಭಾಸರ ಜೀವನ ಸಾಹಸ)

೧ನೇ ವರ್ಷದ ಪುಸ್ತಕಗಳು :

೧ ಘಾಟೀ ಸುಬ್ಬಮ್ಮನ ಮತ್ತು ಇತರ ಕತೆಗಳು (ಬೇವುಡು
೨ ದಾಜಲಕ್ಷ್ಮಿ (ಶರರ್ತ್ ನಿಳ್ಳತೆಗಳು)
೩ ಅನ್ನಪೂರ್ಣಾ ಮಂದಿರ (ಜರುಪಮಾದೇವಿ ಕಾದಂಬರಿ)
೪ ಸೈಕಾಂತನ ಮೃತ್ಯು ಪತ್ರ (ಶರರ್ತ್ ಕಾದಂಬರಿ)
೫-೬ ಸಾವಿನ ಉಡಿಯಲ್ಲಿ (ಎನ್ಕೆ ಕಾದಂಬರಿ, ೧೮ ಭಾಗ)
೭ ಚಕಮಕಿ (ಶ್ರೀ ಲ. ಚಿ. ಟೇಂಡ್ರೆ ಕಥೆಗಳು)
೮ ಗಂಡು-ಹೆಣ್ಣಿನ ಸಮಸ್ಯೆ (ಕುಪ್ಪಳ್ಳಿ ಕಾದಂಬರಿ ಭಾಗ ೧)

ಹೊಸ ವರ್ಷದ ಚಂದಾದಾರರಾಗುವವರಿಗೆ ಮೇಲಿನ ಎಲ್ಲ ಪುಸ್ತಕಗಳನ್ನು ಇಪ್ಪತ್ತು ಸೂ ಕೊಡುತ್ತೇವೆ. ಅಂದರೆ ಒಟ್ಟಿಗೆ ೨೪ —೦—೦ ಮನಿಯಾರ್ಡರ್ ಮಾಡಬೇಕು. ನಿಕ್ಷಾರಿಗೆ : ಬೆಲೆ ಮತ್ತು ಅಂಚೆ ಪೆಟ್ಟಿ ಕೂಡಿ ವ್ಹಿ. ಪಿ. ಮಾಡಲಾದೀತು. ಎಪ್ರೀಲ್ ೧೯೪೬ಕ್ಕೆ ಮೂರನೇ ಕಂಭವಾಗಿದೆ.

ಸಮಾಜ ಪುಸ್ತಕಾಲಯ, ಧಾರವಾಡ

ಹೊಸ ಪುಸ್ತಕಗಳಿಗೆ ತ್ವರೆ ಮಾಡಿರಿ! ಲಾಭಪಡೆಯಿರಿ!

ಹೊಸಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೨
(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮುನಿಯಾರ್ಡರ್, ಬಡ್ಡಿ ಅಳತೆ ಜಮಾಖರ್ಚಿನ ಇತರ ಪಹಿಗಳು ಯಾವಾ ಗಳ ಸಮೂನೆಗಳು, ಪ್ರಶ್ನೆಗಳು. ಪ್ರಶ್ನೆಕಾಗದ ಗಳು ಅರುವಪಲ್ಲನ, ಒಕ್ಕಲತನ ಪಿಲುಮಿನ ಶಾಲೆಯು ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾ ಖರ್ಚು ಅಂದರೆ ಹೋದ ಲೆಬರ ಟೀಟು, ಸೀರಲಿ ಮುಸ್ಸನ ರೋಲ್, ಕಳ್ಳಿವೇತನ ಬೀಟು, ಮುಂತಾ ದವುಗಳ ಪತ್ರಿಕೆಗಳು. ಕಛೂಲಾಯಿತು. ಬಾಡಿ ಗೆಯು ಪತ್ರಗಳ ಸಮೂನೆಗಳು ಇದರಪಿಂದ ಇದು ಒನೆಯ ಇಯತ್ತೆಯವರಿಗೂ ಅಗ್ರಿಕಲ್ಚರಲ್ ಬಾಯಿಸ್ ಕ್ಲಾಸಿನವರಿಗೂ ಉಪಯೋಗ್ಯವಿದೆ. ಸ್ವಲ್ಪ ಪ್ರತಿಗಳಿದ್ದವರಿಂದ ಸಮೂನೆಗಾಗಿ ಹಿಂದ ಸ್ನೇಹದೂವಿಲ್ಲದೂ ತರಿಸಿಕೊಳ್ಳಿರಿ. ಬೆಲೆ: ೪ ಅಣೆ

ಹೊಸ ಪದ್ಧತಿಯ
(೧) ಹಿಂದೀ ಜಮಾಖರ್ಚು ಭಾಗ
(ಮನೆಯ ಜಮಾಖರ್ಚು)

ಪರಕಾರದವರು ಈ ಪುಸ್ತಕವನ್ನು ಮೇಲಿ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಾ ಮಾಡಿದ್ದಾರೆ. ಇದು ೫-೬ನೆಯ ಇಯತ್ತೆ ರಿಗೂ ಹೆಣ್ಣು ಮಕ್ಕಳ ಮುಂಜೀವ ದಿ ಉಪಯುಕ್ತವಿದೆ

ಬೆಲೆ : ೪

೨. ಆರಂಭದ ಜಮಾಖರ್ಚು: ಒನೆಯ ೧ ಯನರಿಗೆ ಉಪಯೋಗವಿದೆ. ಬೆಲೆ : ೩
೩. ಅಂಗಸಾಧನ ಶಿಕ್ಷಕ : ಬೆಲೆ:೪
೪. ಗಣಿತಸಾರ ಸಂಗ್ರಹ : ಇದು ಈಗಿ ಪ್ರೈಮರಿ ಪದ್ಧತಿಯಂತಿರುವವರಿಂದ ಸ್ಕಾ ಮತ್ತು ಮುಲ್ಕೀಪರೀಕ್ಷೆಯವರಿಗೆ ಉಪ ವಿದೆ. ಬೆಲೆ: ೪

ವಿಳಾಸ :— ರಾ. ಸಿ. ಪಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

Printed by R. G. Hukeri at the Vasant Printing Works Dharwar a
Published by S. G. Baichwal Esq M. A. Principal Training Colleg
For-Men Dharwar at his Office 7403—45 1975.

ಕನ್ನಡ



(ಇವರಲ್ಲಿ ಕನ್ನಡ ಕಾಲಾಪತ್ರಕ್ಕೂ ಶಿಕ್ಷಿಕೆಯೂ ಸಮಾವೇಶವಾಗಿದೆ.)

ಸಂಪಾದಕರು:

ಶ್ರೀನಿವಾಸ ಗುರುವಚಾರ್ಯ ಬೈಚಪಾಳ್, ಎಂ. ಎ.

ಎಪ್ರಿಲ್, ಮೇ, ಜೂನ್ ೧೯೪೬

ವಿಷಯ ಸೂಚಿ

೧.	ಸಂಪಾದಕೀಯ	೧
೨.	ಹಿಗ್ಗು (ಕವನ) ಶ್ರೀ. ವಿ. ಕೃ. ಗೋಕಾಕ	೪
೩.	ಕವಿ: ವಿಮರ್ಶಕನಿಗೆ (ಕವನ)	೫
೪.	ಕನ್ನಡ ವರ್ಧಪ್ರಾಯಿಜ ಪರೀಕ್ಷೆಗಳ	೫
೫.	ಚೀತುಪ್ರೇರಣೆ ಶ್ರೀ. ಎಸ್. ಜಿ. ಬೈಚವ್ಹಾಳ	೭
೬.	ವಿಧಾನಸಭ ತರ್ಕಬದ್ಧ ಹಾಗೂ ಶಾಸ್ತ್ರೋಕ್ತ ರೀತಿಗಳು	೧೪
೭.	ಚಾಲನ ತಂತುಗಳ ನಿಯಂತ್ರಣವನ್ನು ತಿಳಿಸುವದು	೨೦
೮.	ಬಾಲಕರ ವಿಕಾಸ ಹಾಗೂ ಅವರ ಶಿಕ್ಷಣ ಶ್ರೀ. ಗುರುನಾಥ ಜೋಶಿ	೨೨

ಸ್ವೀಕಾರ ಮತ್ತು ಅಭಿಪ್ರಾಯ

ಸಂಗೀತಾಚಾರ್ಯ (ಪ್ರಥಮ ಭಾಗ) ಲೇಖಕರು ಶ್ರೀ. ಎಸ್. ಎನ್. ದಾವ್ಹ, ಹರಿದಾಸ. ಮಾರಾಟದ ಪೂರ್ಣ ಅಧಿಕಾರಿಗಳು: ರಾಮಾಶ್ರಯ ಬುಕ್ ಡಿಪೊ, ಧಾರವಾಡ ಕ್ರೌನ್ ಅಷ್ಟಪತ್ರದ ೧೨೮ ಪುಟಗಳು ಬೆಲೆ ೧-೪-೦.

ಸಂಗೀತವು ಒಂದು ಶ್ರೇಷ್ಠವಾದ ಕಲೆ. ಇದರ ಅಭ್ಯಾಸ ಗುರುಮುಖಾಂತರವೇ ಆಗತಕ್ಕದ್ದು, ಪುಸ್ತಕದಿಂದಲ್ಲ. ಆದರೂ ಪುಸ್ತಕವು ಗುರುಸಾನ್ನಿಧ್ಯದಲ್ಲಿ ಮಾಡತಕ್ಕ ಅಭ್ಯಾಸಕ್ಕೆ ಸಹಾಯಕಾರಿಯಾಗಬಲ್ಲದು.

ಈ ಪುಸ್ತಕದಲ್ಲಿ ಆಯ್ದುಕೊಂಡ ಹಾಡುಗಳು ಕನ್ನಡ ಹಾಡುಗಳಾಗಿದ್ದರೂ ಧಾಟಿ ಮಾತ್ರ ಹಿಂದುಸ್ತಾನಿ ಸಂಗೀತ ಶೈಲಿಯದು. ತಾಳ ಸಹ ಹಿಂದುಸ್ತಾನಿ ಧಾಟಿಗಳಿಗೆ ಸರಿ ಹೋಗತಕ್ಕುದೇ ಆಗಿದೆ. ಒಂದೆರಡು ಕರ್ನಾಟಕ ರಾಗಗಳು ಸಹ ಇವೆ. ಇದರಲ್ಲಿ ಕೊಟ್ಟ ರಾಗಗಳು ಮತ್ತು ತಾಳಗಳು ಹಾರ್ಮೋನಿಯಂ ಕಲಿಯುವವರಿಗೆ ಉಪಯುಕ್ತವಾಗಿವೆ, ಸ್ವಷ್ಟವಾಗಿವೆ.

ಕನ್ನಡ ನಾಡಿನಲ್ಲಿ ಕರ್ನಾಟಕದ ಸಂಗೀತಕ್ಕೆ ಹೆಚ್ಚು ಪ್ರಾಶಸ್ತ್ಯ ವಿರಬೇಕಾದುದು ಒಳ್ಳೆಯದು. ಹಿಂದುಸ್ತಾನಿ ಸಂಗೀತ ನಾವು ಬೇಡವೆನ್ನುವುದಿಲ್ಲ. ಆದರೆ ಕರ್ನಾಟಕ ಸಂಗೀತಕ್ಕೆ ಮೊದಲ ಸ್ಥಾನ ಮತ್ತು ಉತ್ತರಾದಿ ಅಥವಾ ಹಿಂದುಸ್ತಾನಿ ಸಂಗೀತಕ್ಕೆ ಎರಡನೆಯ ಸ್ಥಾನ ಇರಬೇಕು. ಈ ದೃಷ್ಟಿಯಿಂದ ಪುಸ್ತಕ ರಚಿತವಾಗಿದ್ದರೆ ಹೆಚ್ಚು ಉಪಯುಕ್ತವಾಗುತ್ತಿತ್ತು. ಹಿಂದುಸ್ತಾನೀ ಸಂಗೀತವನ್ನೇ ರಾಗದ ಪೆಟ್ಟಿಗೆಯ ಮೇಲೆ ಬಾರಿಸಬೇಕೆನ್ನುವವರಿಗೆ ಮತ್ತು ಸಂಗೀತದ ಸ್ವಲ್ಪ ಜ್ಞಾನವಿದ್ದವರಿಗೆ ಇದು ಒಳ್ಳೆಯ ಉಪಯುಕ್ತ ಪುಸ್ತಕವೆಂದು ಹೇಳಬಹುದು.

—ಸಂಪಾದಕರು

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ: ಲೇಖಕರು: ಶ್ರೀ. ಎಲ್. ಆರ್. ಆಳಗವಾಡಿ ಬಿ. ಎ. ಬಿ. ಕಾಮ್. ಪ್ರಕಾಶಕರು: ರಾಮಾಶ್ರಯ ಬುಕ್ ಡಿಪೊ, ಧಾರವಾಡ

೧ನೆಯ ಕುಸುಮ ೧೧೪ನೆಯ ಇಯತ್ತೆಗೆ ಕ್ರೌನ್ ೧೫೮ ಪುಟ, ಬೆಲೆ ೪॥ ಆಣೆ

೨ ,, ,, ೨ ,, ,, .. ,, ೨೬ ಪುಟ, ಬೆಲೆ ೫॥ ಆಣೆ

೩ ,, ,, ೩ ,, ,, .. ,, ೨೩೦ ಪುಟ, ಬೆಲೆ ೬॥ ಆಣೆ

ಸಚಿತ್ರ ಪೌರನೀತಿ ಮಾಲೆ: ಲೇಖಕರೂ ಪ್ರಕಾಶಕರೂ ಮೇಲಿನವರೇ.

೧ನೆಯ ಕುಸುಮ ೧೧೪ನೆಯ ಇಯತ್ತೆಗೆ ಕ್ರೌನ್ ೧೫೮ ೨೨ ಪುಟ, ಬೆಲೆ ೪ ಆಣೆ

೨ ,, ,, ೨ ,, ,, .. ,, ೨೫೦ ಪುಟ, ಬೆಲೆ ೫ ಆಣೆ

೩ ,, ,, ೩ ,, ,, ,, ,, ೨೬೦ ಪುಟ, ಬೆಲೆ ೬ ಆಣೆ

ಕ ನ್ನ ಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಶ್ರೀನಿವಾಸ ಗುರಾಚಾರ್ಯರು ಬೈಚವಾಳ ಎಂ. ಎ.

ಕೂಗುವೊಂದಾಗಿ । ಕರುಳೊಂದಾಗಿ । ಹೃದಯದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ ॥ ಭೋಗಬಿಟ್ಟೇಳಿರೈ ।
ಕನ್ನಡಮ್ಮನ ಕುವರರೇ ॥

— ಜಂಗ್ವೇದ.

ಪುಟ ೮೫ | ಏಪ್ರಿಲ್, ಮೇ, ಜೂನ್ ೧೯೪೬ | ವರ್ಷ ೧೪ ಸಂ. ೧, ೨, ೩

ಸಂಪಾದಕೀಯ

ಪ್ರಥಮಿಕ ಶಿಕ್ಷಕರ ಸಂಪು:

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಕಳೆದ ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಒಂದು ಷ್ಟ ಕ್ರಾಂತಿಯಾಯಿತು. ಮುಂಬಯಿ ಇಲಾಖೆಯ ನಾಲ್ಕಷ್ಟು ಸಾವಿರ ಪ್ರಾಥಮಿಕ ಶಿಕ್ಷ ಸಂಘವನ್ನು ಹೂಡಿದರು. ಈ ಸಂಘ ಕೆಲವರಿಗೆ ಅಕಾಲಿಕವೆಂದು ಎನಿಸಿತು. ಆದಾಗ್ಯೂ ಪಿನ ಉದ್ದೇಶ ಹೊಟ್ಟೆಯ ಪ್ರಶ್ನೆಯದಾಗಿದ್ದರಿಂದ ಪ್ರಾಥಮಿಕ ಶಿಕ್ಷಕರು ಘಾಯವೆ ವನ್ನು ಮುಂದುವರಿಸಿದರು. ಎಲ್ಲ ಶಾಲೆಗಳು ಬಂದಾದವು. ನ್ಯಾಯಸಹಾರಜ್ಞಾನವಿಲ್ಲದ ದು ಹೀಯಾಳಿಕೊಳ್ಳುತ್ತಿದ್ದ ಶಿಕ್ಷಕರು ಕ್ರಾಂತಿಯಪೂತರಾಪರು. ಅವರನ್ನು ಕ್ರಾಂತಿಯೆ ಗೆ ಮೂಡಿದ್ದು ಅವರ ಹಸಿವು. ಹಸಿವೇ ಕ್ರಾಂತಿಯ ಕೆಡಿ. ಶಿಕ್ಷಕರ ಸಂಪಿಗೆ ಜನತೆಯ ಬಲವೂ ಮಲ್ಲಮೆಲ್ಲಗೆ ಸಿಕ್ಕತೊಡಗಿ ಶಿಕ್ಷಕರನ್ನು ಶಾಂತಗೊಳಿಸಲು ಆಗಿದ್ದ ಸರಕಾರವ್ಯ ಕೈಲಾದ ಮಟ್ಟಿಗೆ ಯತ್ನಿಸಿತು. ಆದರೆ ಆಗಿನ ಸರಕಾರದ ಪ್ರಯತ್ನ ಸಮಾಧಾನಕರ ಲಿಲ್ಲ. ಶಿಕ್ಷಕರು ಅನೇಕ ವರ್ಷಗಳಿಂದ ತಮ್ಮ ಹಸಿವಿನ ಕೂಗನ್ನು ಸರಕಾರದ ಕಿವಿಗೆ ಟ್ಟಿಸುತ್ತ ಬಂದಿದ್ದರು. ಈಗ ಕರಳಿಗೆ ಕಾಟೆಯೂ ಸಿಗದಂಥ ಪ್ರಸಂಗವೂದಗಿದ್ದರಿಂದ ದು ಸರಕಾರದಿಂದ ತಮಗೆ ಸಮಾಧಾನಕಾರಕವಾಗುವಂಥ ಆಶ್ವಾಸನವನ್ನು ಕೊಟ್ಟರೆ ಯೆ ನಿಲ್ಲಿಸುವುದಾಗಿ ಹೇಳಿ ಸಂಪನ್ನು ಮುಂದೆ ಸಾಗಿಪರು.

ಪ್ರಾಥಮಿಕ ಶಿಕ್ಷಕರು ಸಂಪು ಹೂಡಿದ ಕಾಲ ಸಂಕ್ರಾಂತಿ ಕಾಲ. ಪ್ರಾಂತಿಕ ಚುನಾ ಗಳು ನಡೆದ ಕಾಲ. ಒಂದು ಸರಕಾರ ಹೋಗಿ ಇನ್ನೊಂದು ಸರಕಾರ ಬರುವ ಕಾಲ. ತೆಯ ಲಕ್ಷ್ಯ ಮುಂಬರುವ ಸರಕಾರದ ಕಡೆಗೆ ಹೆಚ್ಚಾಗಿ ಇತ್ತು. ತನ್ನ ಸರಕಾರವನ್ನು

ಸ್ಥಾಪಿಸಲು ಜನತೆಯು ಪ್ರಯತ್ನಿಸುತ್ತಿತ್ತು. ಅದಕ್ಕೆ ಅವರಲ್ಲಿ ಸಫಲತೆಯು ಸಿಕ್ಕಿತು. ಜನ
ಪಕ್ಷಪಾತಿಯಾದ ಕಾಂಗ್ರೆಸ್ಸು ಬಹು ಸಂಖ್ಯೆಯಲ್ಲಿ ಆರಿಸಿ ಬಂತು. ಜನತಾ ಸರಕಾರ ಆ
ಬಂತು. ಹಿಂದೆ ಮುಖ್ಯ ಮಂತ್ರಿಗಳೂ ವಿದ್ಯಾಮಂತ್ರಿಗಳೂ ಆದ ಶ್ರೀಮಾನ್ ಬಿ. ಜಿ. ಖ
ರೇ ಮುಖ್ಯ ಮಂತ್ರಿಗಳೂ ವಿದ್ಯಾಮಂತ್ರಿಗಳೂ ಆದರು. ಆದಾಗ್ಯೂ ಸಂಪು ಮುಂದರಿಯ
ಮುಖ್ಯ ಮಂತ್ರಿಗಳೂ ಇತರ ಕಾಂಗ್ರೆಸ್ ಮುಖಂಡರೂ ಪ್ರಾಥಮಿಕ ಶಿಕ್ಷಕರ ಪ್ರಶ್ನೆಯ
ಸಮಾಧಾನಕಾರಕವಾಗಿ ಬಿಡಿಸಲಾಗುವುದೆಂದು ಆಶ್ವಾಸನ ಕೊಟ್ಟರು. ಮುಖ್ಯ ಮಂತ್ರಿ
ಆಶ್ವಾಸನದ ಮೇಲೆ ವಿಶ್ವಾಸವಿಟ್ಟು ಪ್ರಾಥಮಿಕ ಶಿಕ್ಷಕರು ೨೪ ಏಪ್ರಿಲ್ ೧೯೬೯ ರಂದು
ಸಂಪು ಹಿಂತಿರುಗಿ ತೆಗೆದುಕೊಂಡರು. ಸುಮಾರು ೧೯೬೯ರಿಂದ ತಮ್ಮ ಹೊಟ್ಟೆಯ ಪ್ರಶ್ನೆಯ
ಸಮಾಧಾನಕಾರಕವಾಗಿ ಬಿಡಿಸಿಕೊಳ್ಳಲು ಯತ್ನಿಸುತ್ತ ಬಂದ ಪ್ರಾಥಮಿಕ ಶಿಕ್ಷಕರಿಗೆ
ಯಶಸ್ಸು ಸಿಕ್ಕಂತಾಗಿದೆ. ಅವರಿಗೆ ಸರಕಾರಿ ನೌಕರರಷ್ಟೇ ತುಟ್ಟಿಭತ್ತೆ ಕೊಡಬೇಕೆಂಬ
ಸಂಸಿನ ಅವಧಿಯನ್ನು ರಜೆಯ ಅವಧಿಯನ್ನಾಗಿ ಹಿಡಿಯಬೇಕೆಂದೂ ಸರಕಾರವು ಹೇಳಿ ಪ್ರಾ
ಶಿಕ್ಷಕರನ್ನು ಕಾರ್ಯೋನ್ಮುಖ ಮಾಡಿದೆ. ಶಿಕ್ಷಕರಿಗೆ ಸಮಾಧಾನವಾಗುವಂಥ ಸಂಬಳದ ಸ್ಕೇ
ನ್ನೂ ಗೊತ್ತುಮಾಡಿ ಅವರ ಸಹಾನುಭೂತಿಯನ್ನು ದೊರಕಿಸಿಕೊಳ್ಳುವದೆಂದೂ ಜನ
ಆದು ಪ್ರಿಯವಾಗುವುದೆಂದೂ ನಾವು ನಂಬಿದ್ದೇವೆ.

ಕಾಂಗ್ರೆಸ್ ಮಂತ್ರಿಮಂಡಳ:

ಮುಂಬಯಿ ಪ್ರಾಂತದಲ್ಲಿ ಜನತೆಯ ಕೈವಾರಿಯಾದ ಕಾಂಗ್ರೆಸ್ಸಿನ ಸರಕಾರ 'ಪ್ರಾ
ಯಿತು. ಮುಂಬಯಿ ಪ್ರಾಂತದ ೧೩ನೇ ಕಲಮಿನ ಸರಕಾರ ನಿಂತಿತು. ಶ್ರೀಮಾನ್ ಬಾ
ಸಾಹೇಬ ಖೇರರು ಮುಖ್ಯ ಮಂತ್ರಿಗಳಾದರು. ಇದು ಸರ್ವರಿಗೂ ಸಂತೋಷದ ಸಂ
ಯಾಗಿದೆ. ಶಿಕ್ಷಣ ಖಾತೆಯು ಅವರ ಕೈಯಲ್ಲೇ ಇದ್ದುದು ನಮಗೆ ಹೆಚ್ಚಾಗಿ ಸಂತೋಷವ
ಆಗಿದೆ. ಅವರಿಂದ ನಮ್ಮ ನಾಡಿನಲ್ಲಿ ಶಿಕ್ಷಣದ ಪ್ರಗತಿಯಾಗಿ ಅದು ಸರ್ವಾಂಗಸುಂ
ವಾಗಿ ಬೆಳೆದೀತೆಂದು ನಂಬಬಹುದಾಗಿದೆ. ಮಂತ್ರಿಮಂಡಳದಲ್ಲಿ ಕರ್ನಾಟಕದವರಿಗೂ ಪ್ರ
ನಿಧ್ಯ ದೊರಕಿರುವುದು ಸಂತೋಷದ ಸಂಗತಿಯಾಗಿದೆ. ಆದರೆ ಕರ್ನಾಟಕಕ್ಕೆ ಇ
ಒಂದು ಸ್ಥಳ ಮಂತ್ರಿಮಂಡಳದಲ್ಲಿ ಬೇಕಾಗಿತ್ತು ಎಂದು ನಮ್ಮ ಅಭಿಪ್ರಾಯವಾಗಿದೆ. ಆ
ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷ ಪದವಿಯನ್ನು ಪಡೆಯುವ ಭಾಗ್ಯ ಕನ್ನಡ ನಾ
ಮುಖಂಡರಾದ ಶ್ರೀ. ಅಂಗಡಿ ಅವರಿಗೆ ಸಿಕ್ಕುದು ನಮಗೆಲ್ಲರಿಗೂ ಸಂತೋಷದ ಮಾತಾ
ಈ ಮಂತ್ರಿಮಂಡಳವು ಪ್ರಾಂತದ ಸರ್ವತೋಮುಖವಾದ ಬೆಳವಣಿಗೆಯನ್ನು ಮಾಡಿ
ಜೆಯ ಪ್ರೀತಿಗೆ ಪಾತ್ರವಾಗಲೆಂದು ಹಾರೈಸುತ್ತೇವೆ.

ಕರ್ನಾಟಕ ಯೂನಿವರ್ಸಿಟಿ:

ಶ್ರೀಮಾನ್ ಬಿ. ಜಿ. ಖೇರರು ವಿದ್ಯಾಮಂತ್ರಿಗಳೂ ಮುಖ್ಯ ಮಂತ್ರಿಗಳೂ ಆದ ಬಳಿಕ
ನಿಡ್ಯಾಲಯಗಳ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಮಹಾರ
ವಿಶ್ವವಿದ್ಯಾಲಯ ನಿರ್ಮಾಣದ ಜನಕರು ತಾವೆಂದು ಹೇಳಿ ಗುಜರಾತ ಹಾಗೂ ಕರ್ನಾ
ವಿಶ್ವವಿದ್ಯಾಲಯ ನಿರ್ಮಾಣದ ಬಗ್ಗೆಯೂ ಯೋಚನೆ ಮಾಡುತ್ತಿರುವುದಾಗಿಯೂ ಹೇಳಿದ್ದ
ಅವರು ಕೇವಲ ಯೋಚನೆಯನ್ನೆ ಮಾಡದೆ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ
ಕ್ರಿಯವಾಗಿ ನೆರವಾಗಬೇಕೆಂದು ನಾವು ನಮ್ರವಾಗಿ ಸೂಚಿಸುತ್ತೇವೆ. ಕರ್ನಾಟಕಕ್ಕೆ
ವಿಶ್ವವಿದ್ಯಾಲಯವು ಅತ್ಯಂತ ಆವಶ್ಯಕವಾದುದೆಂದು ಕರ್ನಾಟಕ ಯೂನಿವರ್ಸಿಟಿ

ವರು ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಎಲ್ಲರೂ ನೆರವಾಗಿ ತಮ್ಮ ಇಚ್ಛೆಯನ್ನು ೈಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಲತನ ಕಾಲೇಜು:

ಕರ್ನಾಟಕದಲ್ಲಿ ಈಗ ಐದು ಆರ್ಟ್ಸ್ ಕಾಲೇಜುಗಳು ಇವೆ. ಒಂದು 'ಲಾ' ಕಾಲೇಜು , ಒಂದು ಬಿ. ಟಿ. ಕಾಲೇಜು ಇದೆ. ಮೆಡಿಕಲ್ ಕಾಲೇಜಿನ ಆವಶ್ಯಕತೆಯೂ ತನಗೆ ಎಷ್ಟಿ ಂಬುದನ್ನು ಕನ್ನಡ ಜನತೆಯು ಸರಕಾರಕ್ಕೆ ಆಗಾಗ್ಗೆ ತಿಳಿಸುತ್ತಲೇ ಬಂದಿದೆ. ಈಗ ಒಕ್ಕ್ಲ ತನದ ಕಾಲೇಜಿನ ಆವಶ್ಯಕತೆಯನ್ನೂ ತಿಳಿಸಿದೆ. ಮುಂಬಯಿ ಸರಕಾರಕ್ಕೆ ಕನ್ನಡ ನಾಡಿ ನ ಸಾಕಷ್ಟು ಕಂದಾಯದ ಉತ್ಪನ್ನವು ಹೋಗುತ್ತದೆ. ಅದಕ್ಕೆ ಪ್ರತಿಫಲವಾಗಿ ಕನ್ನಡ ಡಿಗೆ ಏನೂ ದೊರಕುವುದಿಲ್ಲ. ಮಹಾರಾಷ್ಟ್ರ ಗುಜರಾತಗಳು ಕನ್ನಡ ನಾಡಿನ ಹಣದ ಉಪ ೀಗವನ್ನು ಮಾಡಿಕೊಳ್ಳುತ್ತಿವೆ. ಇದನ್ನು ತಡೆದು ಕನ್ನಡ ನಾಡಿನವರಿಗೆ ತಕ್ಕ ಪ್ರತಿಫಲ ್ನು ಒದಗಿಸುವುದು ಸರಕಾರದ ಕರ್ತವ್ಯವಾಗಿದೆ. ಒಕ್ಕಲತನಕ್ಕೆ ಕನ್ನಡನಾಡು ಪ್ರಸಿದ್ಧ ಗಿದೆ. ಮತ್ತು ಧಾರವಾಡವು ಒಕ್ಕಲತನದ ಕಾಲೇಜಿಗೆ ಯೋಗ್ಯ ಸ್ಥಳವಾಗಿದೆ. ಆದುದ ನ ಒಕ್ಕಲತನದ ಕಾಲೇಜನ್ನು ಕರ್ನಾಟಕದಲ್ಲಿಯೆ ತೆರೆದು ತಮ್ಮ ನ್ಯಾಯಪ್ರೀತಿಯ ನ್ನು ತೋರಿಸಿಕೊಡಬೇಕೆಂದು ನಮ್ರವಾಗಿ ಸೂಚಿಸುತ್ತೇವೆ.

ನೌ ಯೂನಿವರ್ಸಿಟಿ:

ಲಖನೌ ಯೂನಿವರ್ಸಿಟಿ ಸಂಯುಕ್ತ ಪ್ರಾಂತದಲ್ಲಿ ಒಂದು ಮುಖ್ಯ ಯೂನಿವರ್ಸಿಟಿ. ಚ ಯುನಿವರ್ಸಿಟಿಗಳಂತೆಯೆ ಅದರಲ್ಲೂ ಇಂಗ್ಲಿಷಿನ ಮುಖಾಂತರವೇ ಉಚ್ಚ ಶಿಕ್ಷಣವು ವರೆಗೆ ಕೊಡಲ್ಪಡುತ್ತಿತ್ತು. ಆದರೆ ಇದೇ ವರ್ಷ ಅದು ಮಾತೃಭಾಷೆ-ಹಿಂದಿ-ಹಿಂದು ನಿ-ಉರ್ದುವಿನ ಮುಖಾಂತರವಾಗಿ ಉಚ್ಚ ಶಿಕ್ಷಣವನ್ನು ಕೊಡಬೇಕೆಂದು ನಿರ್ಧರಿಸಿದೆ ತ್ತು ಇತರ ವಿಶ್ವವಿದ್ಯಾಲಯಗಳಿಗೆ ದಾರಿತೋರಿದೆ. ಅತ್ಯಂತ ಪರಕೀಯವಾದ ಇಂಗ್ಲೀ ಮುಖಾಂತರದಿಂದ ಉಚ್ಚ ಶಿಕ್ಷಣವು ಕೊಡಲ್ಪಡುತ್ತಿದ್ದುದರಿಂದ ನಮ್ಮ ದೇಶದ ಜ್ಞಾನದ ೃವು ಎಷ್ಟು ಏರಬೇಕಾಗಿತ್ತೊ ಅಷ್ಟು ಏರಲಿಲ್ಲ. ಇದರ ಅನುಭವ ಎಲ್ಲರಿಗೂ ಇದೆ. ್ಲೆಂಡು, ಅಮೇರಿಕಾ, ರಶಿಯಾ, ಜರ್ಮನಿ, ಫ್ರಾನ್ಸು, ಜಪಾನ ಈ ದೇಶಗಳಲ್ಲಿ ಮಾತೃ ಷೆಯ ಮುಖಾಂತರವೇ ಶಿಕ್ಷಣವು ಕೊಡಲ್ಪಡುತ್ತಿದ್ದುದರಿಂದ ಅವು ಮುಂದೆ ಬಂದಿವೆ. ್ಮ ದೇಶದಲ್ಲೂ ಮಾತೃಭಾಷೆಯ ಮುಖಾಂತರವೇ ಶಿಕ್ಷಣ ಕೊಟ್ಟರೆ ವಿದ್ಯೆಯ ಅಭಿವೃದ್ಧಿ ಗುವುದು ಮತ್ತು ಇಂಗ್ಲೀಷಿನ ಮೇಲೆ ಪ್ರಭುತ್ವ ಸಂಪಾದಿಸಲು ವ್ಯರ್ಥವಾಗಿ ಹರಣವಾಗ ದ್ದ ವೇಳೆಯ ಉಳಿತಾಯವಾಗುವುದು ಹಾಗೂ ಅದನ್ನೇ ಜ್ಞಾನಾರ್ಜನೆಯಲ್ಲಿ ತೊಡಗಿಸಲು ಕೂಲವಾಗುವುದು. ಸಾಹಿತ್ಯವೂ ಇದರಿಂದ ಬೆಳೆದು ದೇಶಭಾಷೆಗಳು ಹೆಚ್ಚು ಸುಧಾ ನಾಡಿನ ಸಂಸ್ಕೃತಿ ಬೆಳೆಯುವುದು. ಲಖನೌ ಯುನಿವರ್ಸಿಟಿಯು ಮಾತೃಭಾಷೆಯನ್ನು ್ಚ ಶಿಕ್ಷಣದ ಮಾಧ್ಯಮಿಕವನ್ನಾಗಿ ಮಾಡಿದುದಕ್ಕಾಗಿ ನಾವು ಯುನಿವರ್ಸಿಟಿಯವರನ್ನು ಸಂದಿಸುತ್ತೇವೆ.

ರ್ಜವರ್ಗ.

ನಮ್ಮ ಸಂಸ್ಥೆಯಲ್ಲಿ ಮೊದಲನೆಯ ಅಸಿಸ್ಟಂಟರಾಗಿ ಕೆಲಸಮಾಡುತ್ತಿದ್ದ ಮತ್ತು ಆಡ ಯ ಕಾರ್ಯದಲ್ಲಿ ಸಾಕಷ್ಟು ಅನುಭವ ಪಡೆದ ಶ್ರೀ. ಎ. ಜೆ. ರಾಯಣ್ಣನವರ್ ಅವರು ಪುರ ಜಿಲ್ಲೆಯ ಡಿ. ಇ. ಆಯ್. ಸ್ಥಳಕ್ಕೆ ನೇಮಿಸಲ್ಪಟ್ಟಿರುವರು.

ಸ್ಥಾಪಿಸಲು ಜನತೆಯು ಪ್ರಯತ್ನಿಸುತ್ತಿತ್ತು. ಅದಕ್ಕೆ ಅದರಲ್ಲಿ ಸಫಲತೆಯು ಸಿಕ್ಕಿತು. ಪ
ಪಕ್ಷಪಾತಿಯಾದ ಕಾಂಗ್ರೆಸ್ಸು ಬಹು ಸಂಖ್ಯೆಯಲ್ಲಿ ಆರಿಸಿ ಬಂತು. ಜನತಾ ಸರಕಾರ ಕ
ಬಂತು. ಒಂದೆ ಮುಖ್ಯ ಮಂತ್ರಿಗಳೂ ವಿದ್ಯಾಮಂತ್ರಿಗಳೂ ಆದ ಶ್ರೀಮಾನ್ ಬಿ. ಜಿ. ಖ
ರೇ ಮುಖ್ಯ ಮಂತ್ರಿಗಳೂ ವಿದ್ಯಾಮಂತ್ರಿಗಳೂ ಆದರು. ಆದಾಗ್ಯೂ ಸಂಪು ಮುಂದರಿಯ
ಮುಖ್ಯ ಮಂತ್ರಿಗಳೂ ಇತರ ಕಾಂಗ್ರೆಸ್ ಮುಖಂಡರೂ ಪ್ರಾಥಮಿಕ ಶಿಕ್ಷಕರ ಪ್ರಶ್ನೆಯ
ಸಮಾಧಾನಕಾರಕವಾಗಿ ಬಿಡಿಸಲಾಗುವುದೆಂದು ಆಶ್ವಾಸನ ಕೊಟ್ಟರು. ಮುಖ್ಯ ಮಂ
ಆಶ್ವಾಸನದ ಮೇಲೆ ವಿಶ್ವಾಸವಿಟ್ಟು ಪ್ರಾಥಮಿಕ ಶಿಕ್ಷಕರು ೨೪ ಏಪ್ರಿಲ್ ೧೯೪೬ನೆಯ
ಸಂಪು ಹಿಂತಿರುಗಿ ತೆಗೆದುಕೊಂಡರು. ಸುಮಾರು ೧೯೧೯ರಿಂದ ತಮ್ಮ ಹೊಟ್ಟೆಯ ಪ್ರಶ್ನೆಯ
ಸಮಾಧಾನಕಾರಕವಾಗಿ ಬಿಡಿಸಿಕೊಳ್ಳಲು ಯತ್ನಿಸುತ್ತ ಬಂದ ಪ್ರಾಥಮಿಕ ಶಿಕ್ಷಕರಿಗೆ
ಯಶಸ್ಸು ಸಿಕ್ಕಂತಾಗಿದೆ. ಅವರಿಗೆ ಸರಕಾರಿ ನೌಕರರಷ್ಟೇ ತುಟ್ಟಿಭತ್ತೆ ಕೊಡಬೇಕೆಂ
ಸಂಪಿನ ಅವಧಿಯನ್ನು ರಜೆಯ ಅವಧಿಯನ್ನಾಗಿ ಹಿಡಿಯಬೇಕೆಂದೂ ಸರಕಾರವು ಹೇಳಿ
ಶಿಕ್ಷಕರನ್ನು ಕಾರ್ಯೋನ್ಮುಖ ಮಾಡಿದೆ. ಶಿಕ್ಷಕರಿಗೆ ಸಮಾಧಾನವಾಗುವಂಥ ಸಂಬಳದ
ನ್ನೂ ಗೊತ್ತುಮಾಡಿ ಅವರ ಸಹಾನುಭೂತಿಯನ್ನು ದೊರಕಿಸಿಕೊಳ್ಳುವದೆಂದೂ
ಅದು ಪ್ರಿಯವಾಗುವುದೆಂದೂ ನಾವು ನಂಬಿದ್ದೇವೆ.

ಕಾಂಗ್ರೆಸ್ ಮಂತ್ರಿಮಂಡಳ:

ಮುಂಬಯಿ ಪ್ರಾಂತದಲ್ಲಿ ಜನತೆಯ ಕೈವಾರಿಯಾದ ಕಾಂಗ್ರೆಸ್ಸಿನ ಸರಕಾರ ಪ್ರ
ಪಾಯಿತು. ಮುಂಬಯಿ ಪ್ರಾಂತದಲ್ಲಿ ಕಳೆದ ಕಲಮಿನ ಸರಕಾರ ನಿಂತಿತು. ಶ್ರೀಮಾನ್
ಸಾಹೇಬ ಖೇರರು ಮುಖ್ಯ ಮಂತ್ರಿಗಳಾದರು. ಇದು ಸರ್ವರಿಗೂ ಸಂತೋಷದ
ಯಾಗಿದೆ. ಶಿಕ್ಷಣ ಖಾತೆಯು ಅವರ ಕೈಯಲ್ಲೇ ಇದ್ದುದು ನಮಗೆ ಹೆಚ್ಚಾಗಿ ಸಂತೋಷ
ವಾಗಿದೆ. ಅವರಿಂದ ನಮ್ಮ ನಾಡಿನಲ್ಲಿ ಶಿಕ್ಷಣದ ಪ್ರಗತಿಯಾಗಿ ಅದು ಸರ್ವಾಂಗಸು
ಂದರವಾಗಿ ಬೆಳೆದೀತೆಂದು ನಂಬಬಹುದಾಗಿದೆ. ಮಂತ್ರಿಮಂಡಳದಲ್ಲಿ ಕರ್ನಾಟಕದವರಿಗೂ
ನಿಧ್ಯ ದೊರಕಿರುವುದು ಸಂತೋಷದ ಸಂಗತಿಯಾಗಿದೆ. ಆದರೆ ಕರ್ನಾಟಕಕ್ಕೆ
ಒಂದು ಸ್ಥಳ ಮಂತ್ರಿಮಂಡಳದಲ್ಲಿ ಬೇಕಾಗಿತ್ತು ಎಂದು ನಮ್ಮ ಅಭಿಪ್ರಾಯವಾಗಿದೆ.
ಮುಂಬಯಿ ಶಾಸನ ಸಭೆಯ ಉಪಾಧ್ಯಕ್ಷ ಪದವಿಯನ್ನು ಪಡೆಯುವ ಭಾಗ್ಯ ಕನ್ನಡ
ಮುಖಂಡರಾದ ಶ್ರೀ. ಅಂಗಡಿ ಅವರಿಗೆ ಸಿಕ್ಕುದು ನಮಗೆಲ್ಲರಿಗೂ ಸಂತೋಷದ ಮಾತ
ಈ ಮಂತ್ರಿಮಂಡಳವು ಪ್ರಾಂತದ ಸರ್ವತೋಮುಖವಾದ ಬೆಳವಣಿಗೆಯನ್ನು ಮಾತೆ
ಯ ಪ್ರೀತಿಗೆ ಪಾತ್ರವಾಗಲೆಂದು ಹಾರೈಸುತ್ತೇವೆ.

ಕರ್ನಾಟಕ ಯೂನಿವರ್ಸಿಟಿ:

ಶ್ರೀಮಾನ್ ಬಿ. ಜಿ. ಖೇರರು ವಿದ್ಯಾಮಂತ್ರಿಗಳೂ ಮುಖ್ಯ ಮಂತ್ರಿಗಳೂ ಆದ ಬಳಿ
ವಿದ್ಯಾಲಯಗಳ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಮಹಾ
ವಿಶ್ವವಿದ್ಯಾಲಯ ನಿರ್ಮಾಣದ ಜನಕರು ತಾವೆಂದು ಹೇಳಿ ಗುಜರಾತ ಹಾಗೂ ಕರ್ನ
ವಿಶ್ವವಿದ್ಯಾಲಯ ನಿರ್ಮಾಣದ ಬಗ್ಗೆಯೂ ಯೋಚನೆ ಮಾಡುತ್ತಿರುವುದಾಗಿಯೂ ಹೇಳಿ
ಅವರು ಕೇವಲ ಯೋಜನೆಯನ್ನೆ ಮಾಡದೆ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾ
ರೆಕ್ರಿಯವಾಗಿ ನೆರವಾಗಬೇಕೆಂದು ನಾವು ನಮ್ರವಾಗಿ ಸೂಚಿಸುತ್ತೇವೆ. ಕರ್ನಾಟಕಕ್ಕೆ
ವಿಶ್ವವಿದ್ಯಾಲಯವು ಅತ್ಯಂತ ಆವಶ್ಯಕವಾದುದೆಂದು ಕರ್ನಾಟಕ ಯೂನಿವರ್ಸಿಟಿ

ರು ಕಾರ್ಯೋನ್ಮುಖರಾಗಿದ್ದಾರೆ. ಆವರಿಗೆ ಎಲ್ಲರೂ ನೆರವಾಗಿ ತಮ್ಮ ಇಚ್ಛೆಯನ್ನು ಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ತನ ಕಾಲೇಜು:

ಕರ್ನಾಟಕದಲ್ಲಿ ಈಗ ಐದು ಆರ್ಟ್ಸ್ ಕಾಲೇಜುಗಳು ಇವೆ. ಒಂದು 'ಲಾ' ಕಾಲೇಜು ಒಂದು ಬಿ. ಟಿ. ಕಾಲೇಜು ಇದೆ. ಮೆಡಿಕಲ್ ಕಾಲೇಜಿನ ಆವಶ್ಯಕತೆಯೂ ತನಗೆ ಎಷ್ಟಿ ಂಬುದನ್ನು ಕನ್ನಡ ಜನತೆಯು ಸರಕಾರಕ್ಕೆ ಆಗಾಗ್ಗೆ ತಿಳಿಸುತ್ತಲೇ ಬಂದಿದೆ. ಈಗ ಒಕ್ಕಲ ನದ ಕಾಲೇಜಿನ ಆವಶ್ಯಕತೆಯನ್ನೂ ತಿಳಿಸಿದೆ. ಮುಂಬಯಿ ಸರಕಾರಕ್ಕೆ ಕನ್ನಡ ನಾಡಿ ಸಾಕಷ್ಟು ಕಂದಾಯದ ಉತ್ಪನ್ನವು ಹೋಗುತ್ತದೆ. ಅದಕ್ಕೆ ಪ್ರತಿಫಲವಾಗಿ ಕನ್ನಡ ಗೆ ಏನೂ ದೊರಕುವುದಿಲ್ಲ. ಮಹಾರಾಷ್ಟ್ರ ಗುಜರಾತಗಳು ಕನ್ನಡ ನಾಡಿನ ಹಣದ ಉಪ ಗವನ್ನು ಮಾಡಿಕೊಳ್ಳುತ್ತಿವೆ. ಇದನ್ನು ತಡೆದು ಕನ್ನಡ ನಾಡಿನವರಿಗೆ ತಕ್ಕ ಪ್ರತಿಫಲ ಒದಗಿಸುವುದು ಸರಕಾರದ ಕರ್ತವ್ಯವಾಗಿದೆ. ಒಕ್ಕಲತನಕ್ಕೆ ಕನ್ನಡನಾಡು ಪ್ರಸಿದ್ಧ ನಿ, ಮತ್ತು ಧಾರವಾಡವು ಒಕ್ಕಲತನದ ಕಾಲೇಜಿಗೆ ಯೋಗ್ಯ ಸ್ಥಳವಾಗಿದೆ. ಆದುದ ಒಕ್ಕಲತನದ ಕಾಲೇಜನ್ನು ಕರ್ನಾಟಕದಲ್ಲಿಯೆ ತೆರೆದು ತಮ್ಮ ನ್ಯಾಯಪ್ರೀತಿಯ ತೋರಿಸಿಕೊಡಬೇಕೆಂದು ನಮ್ರವಾಗಿ ಸೂಚಿಸುತ್ತೇವೆ.

ಾ ಯೂನಿವರ್ಸಿಟಿ:

ಲಖನೌ ಯೂನಿವರ್ಸಿಟಿ ಸಂಯುಕ್ತ ಪ್ರಾಂತದಲ್ಲಿ ಒಂದು ಮುಖ್ಯ ಯೂನಿವರ್ಸಿಟಿ. ಯುನಿವರ್ಸಿಟಿಗಳಂತೆಯೆ ಅದರಲ್ಲೂ ಇಂಗ್ಲಿಷಿನ ಮುಖಾಂತರವೇ ಉಚ್ಚ ಶಿಕ್ಷಣವು ರೆಗೆ ಕೊಡಲ್ಪಡುತ್ತಿತ್ತು. ಆದರೆ ಇದೇ ವರ್ಷ ಅದು ಮಾತೃಭಾಷೆ-ಹಿಂದಿ-ಹಿಂದು ಉರ್ದುವಿನ ಮುಖಾಂತರವಾಗಿ ಉಚ್ಚ ಶಿಕ್ಷಣವನ್ನು ಕೊಡಬೇಕೆಂದು ನಿರ್ಧರಿಸಿದೆ ಇತರ ವಿಶ್ವವಿದ್ಯಾಲಯಗಳಿಗೆ ದಾರಿತೋರಿದೆ. ಅತ್ಯಂತ ಪರಕೀಯವಾದ ಇಂಗ್ಲೀ ಷುಖಾಂತರದಿಂದ ಉಚ್ಚ ಶಿಕ್ಷಣವು ಕೊಡಲ್ಪಡುತ್ತಿದ್ದುದರಿಂದ ನಮ್ಮ ದೇಶದ ಜ್ಞಾನದ ಪ್ರ ಎಷ್ಟು ಏರಬೇಕಾಗಿತ್ತೊ ಅಷ್ಟು ಏರಲಿಲ್ಲ. ಇದರ ಅನುಭವ ಎಲ್ಲರಿಗೂ ಇದೆ. ಂಡು, ಅಮೇರಿಕಾ, ರಶಿಯಾ, ಜರ್ಮನಿ, ಫ್ರಾನ್ಸು, ಜಪಾನ ಈ ದೇಶಗಳಲ್ಲಿ ಮಾತೃ ಯು ಮುಖಾಂತರವೇ ಶಿಕ್ಷಣವು ಕೊಡಲ್ಪಡುತ್ತಿದ್ದುದರಿಂದ ಅವು ಮುಂದೆ ಬಂದಿವೆ. ದೇಶದಲ್ಲೂ ಮಾತೃಭಾಷೆಯ ಮುಖಾಂತರವೇ ಶಿಕ್ಷಣ ಕೊಟ್ಟರೆ ವಿದ್ಯೆಯ ಅಭಿವೃದ್ಧಿ ವುದು ಮತ್ತು ಇಂಗ್ಲೀಷಿನ ಮೇಲೆ ಪ್ರಭುತ್ವ ಸಂಪಾದಿಸಲು ವ್ಯರ್ಥವಾಗಿ ಹರಣವಾಗ ತೇಳೆಯ ಉಳಿತಾಯವಾಗುವುದು ಹಾಗೂ ಅದನ್ನೇ ಜ್ಞಾನಾರ್ಜನೆಯಲ್ಲಿ ತೊಡಗಿಸಲುಬ ಾಲವಾಗುವುದು. ಸಾಹಿತ್ಯವೂ ಇದರಿಂದ ಬೆಳೆದು ದೇಶಭಾಷೆಗಳು ಹೆಚ್ಚು ಸುಧಾ ಾಡಿನ ಸಂಸ್ಕೃತಿ ಬೆಳೆಯುವುದು. ಲಖನೌ ಯುನಿವರ್ಸಿಟಿಯು ಮಾತೃಭಾಷೆಯನ್ನು ಶಿಕ್ಷಣದ ಮಾಧ್ಯಮಿಕವನ್ನಾಗಿ ಮಾಡಿದುದಕ್ಕಾಗಿ ನಾವು ಯುನಿವರ್ಸಿಟಿಯವರನ್ನು ಂದಿಸುತ್ತೇವೆ.

ವರ್ಗ.

ನಮ್ಮ ಸಂಸ್ಥೆಯಲ್ಲಿ ಮೊದಲನೆಯ ಅಸಿಸ್ಟಂಟರಾಗಿ ಕೆಲಸಮಾಡುತ್ತಿದ್ದ ಮತ್ತು ಆಡ ಕಾರ್ಯದಲ್ಲಿ ಸಾಕಷ್ಟು ಅನುಭವ ಪಡೆದ ಶ್ರೀ. ಎ. ಜೆ. ರಾಯಣ್ಣನವರ್ ಅವರು ಾರ ಜಿಲ್ಲೆಯ ಡಿ. ಇ. ಆಯ್. ಸ್ಥಳಕ್ಕೆ ನೇಮಿಸಲ್ಪಟ್ಟಿರುವರು.

ನಮ್ಮ ಪತ್ರಿಕೆಯ ಬರೆಹಗಾರರೂ ಬೇಸಿಕ್ ಸುಪರವಾಯಿಜರರೂ ಆಗಿದ್ದ ಮು
ಇನಸ್ಪೆಕ್ಶನ್ ಕ್ಷೇತ್ರದಲ್ಲಿ ಮನೆವಾರೆ ದುಡಿದ ಶ್ರೀ. ಕೆ. ಬಿ. ತೇರಗಾಂವಕರ ಅವರು ಕ
ವಾರ ಜಿಲ್ಲೆಯ ಡಿ. ಇ. ಆಯ್. ಸ್ಥಳಕ್ಕೆ ನೇಮಿಸಲ್ಪಟ್ಟಿರುವರು.

ಕಾರವಾರ ಜಿಲ್ಲೆಯಲ್ಲಿ ಡಿ. ಇ. ಆಯ್. ಆಗಿದ್ದ ಶ್ರೀ. ಎನ್. ಬಿ. ನಾಡಿಗೇರ್ ಅ
ಬೆಳಗಾಂವಿ ಎ. ಓ. ಆವರಾಗಿ ನೇಮಿಸಲ್ಪಟ್ಟಿರುವರು. ಇವರಿಗೂ ಇನಸ್ಪೆಕ್ಶನ್ ಕಾಯ
ಕ್ಷೇತ್ರದ ಮತ್ತು ಆಡಳಿತೆಯ ಆಳವಾದ ಅನುಭವವಿದೆ.

ಈ ಮೂವರೂ ಅಧಿಕಾರಿಗಳನ್ನು ನಾವು ಅಭಿನಂದಿಸುತ್ತೇವೆ ಮತ್ತು ಇವರು ನಾ
ಶಿಕ್ಷಣದ ಮಟ್ಟವನ್ನು ಏರಿಸುವ ಕಾರ್ಯವನ್ನು ಮಾಡುತ್ತ ಸರ್ವಜನಾದರಣೀಯರಾಗಲೆಂ
ಹಾರೈಸುತ್ತೇವೆ.

ಅಭಿನಂದನೆ.

ಹೋದ ವರುಷ ನನುಗೆ ನೆರವಾದ ಲೇಖಕರನ್ನೂ ಜಾಹೀರಾತುದಾರರನ್ನೂ ನಾ
ಅಭಿನಂದಿಸುತ್ತೇವೆ. ಹೀಗೆಯೆ ಇನ್ನು ಮುಂದೆಯೂ ನೆರವಾಗುವರೆಂಬ ಆಶಿಸುತ್ತೇವೆ.

ನಮ್ಮ ಆಸೆ:

'ಪ್ರಾಥಮಿಕ ಶಿಕ್ಷಣ'ವು ಮಾಸಪತ್ರಿಕೆಯಾಗುತ್ತಿರುವುದು ಪಾಠಕರಿಗೆ ತಿಳಿದಿದೆ. ಇದನ
ಇನ್ನೂ ಸರ್ವಾಂಗಸುಂದರವಾಗುವಂತೆ ಮಾಡಬೇಕೆಂಬೂ ಪ್ರಾಥಮಿಕ ಶಿಕ್ಷಕರಲ್ಲಿ ಹು
ಗಿದ್ದ ಲೇಖನ ಶಕ್ತಿಯನ್ನು ಪ್ರೋತ್ಸಾಹಿಸಬೇಕೆಂದೂ ಆಶಿಸಿದ್ದೇವೆ. ಶಿಕ್ಷಣಜ್ಞರಿಂ
ಕರ್ನಾಟಕದ ಸಾಹಿತಿಗಳ ಶಿಕ್ಷಣ ಹಾಗೂ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನೂ ಕ
ಗಳನ್ನೂ ಕೊಡಬಯಸುತ್ತೇವೆ.

ಹಿಗ್ಗು

ಸಾವು ನೋವಿನಾ ಸಾಗರದಲ್ಲೂ
ನಾನೆಯು ಸಾಗಿಹುದು.
ಶೂನ್ಯದ ತವರಿಹ ನೀಲಿಮೆಯಲ್ಲೂ
ತಾರೆಯು ತೂಗಿಹುದು.
ತೂಗಿಹುದಷ್ಟೇ ಅಲ್ಲ ! ತಾರೆಯು
ತಾ ಚಕಮಕಿಸುವದು.
ಯಾರೂ ನೀರೆರೆಯದ ಬನದಲ್ಲೂ
ಹೂ ಘಮಘಮಿಸುವದು.

ಕ್ಷಣ ಭಂಗುರವಾದೀ ಚಿಲುವಿಳೆಯು
ಅಮರತೆಯನು ಬೀರಿ
ಮೆರೆಯುವಜ್ಜೆ ಈ ಭೂತಳದಲ್ಲಿ
ಸಾವನೋವ ಮೀರಿ!

ಒಂದೊಂದೂ ನವನಾಗರಿಕತೆಯೂ
ದೇವಕಂಡ ಕನಸು
ಗತಿಸಿದ ಸ್ವರ್ಣ ಸುಕೃತಿ-ಸಂಸ್ಕೃತಿ
ಮರೆಯಾಗದ ನೆನಸು

ಏನು ವಿಚಿತ್ರವೊ ದೇವರ ಸೃಷ್ಟಿ !
ಸಂತಸಮಕ್ಕುವದು
ಶೋಕಾಗ್ನಿಯ ಜಿಂಸೊಡಲೊಳಗಿಂ
ಉಕ್ಕುತ ಮಿಕ್ಕುವದು
ಈ ಆನಂದದ ಆಂದದ ಚೆಂದದ
ಹಿರಿಯುಗಮಾಗಮವು
ತಿಳಿಯಲಿ ! ಹೊಳೆಯಲಿ ! ಜೀವಕೆ
ಬೆಳೆ
ಅಪರ ಸಮಾಗಮವು !

— ವಿನಾಯಕ

ಕವಿ: ವಿಮರ್ಶಕನಿಗೆ

ಮುಗಿಲಿನಂಚಿಗೇ
ಬೀರಿಕಂಚಿಗೇ
ತೀರ ಹೊಚ್ಚ ಹೊಸ ಹೊಂಚಿಗೇ
ನೆಟ್ಟನಿಟ್ಟು ಗುರಿ
ಚಿಣಿಯ ಹೊಡೆದೆ, ಸರಿ !
ಕಣ್ಣು ತೆರೆಯುವದಕೆ ಮುಂಚಿಗೇ !
ಅಮೃತಕಿಂತ
ಆನಂದವೆಂಥ
ಅಮರತೆಯ ಪಂಥವಿಹುದು !
ಚಿಮ್ಮಿದಂಥ ಚಿಣಿ
ಹಿಗ್ಗಿನರಗಿಣಿ!
ಚಿಮ್ಮಿದವನಿಗರಿದು !

—ವಿನಾಯಕ

ಕನ್ನಡ 'ವರ್ಧಪ್ರಾಯಿಚ' ಪರೀಕ್ಷೆ ೧೯೪೭

★

೧. **ಪರೀಕ್ಷೆಯ ವಿಷಯಗಳು:**—(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯ-ಪದ್ಯ ಭಾಗಗಳ ಅರ್ಥವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸಗನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು. (ಬ) ವರ್ಧಸಾಹೇಬರು ರಚಿಸಿರುವ **ಪ್ರಾಕ್ಕಾವ್ಯಮಾಲೆ** ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥವಿವರಣೆ, ಟೀಕೆಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ**:—ಈ ಮೊದಲು ಇದ್ದ ೬೦ ರೂ. ಗಳ ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. ಮೊದಲನೆಯ ಬಹುಮಾನ ೫೦ ರೂ. ಎರಡನೆಯ ಬಹುಮಾನ ೩೦ ರೂ. ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ಕ್ಕೆ ೬೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು. ಒಂದು ವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಾಮಾಧಾನಕರವಾಗಿ ನಾಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿ ಮಾಡತಕ್ಕ ಅವಧಿ:-** ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೬ನೆಯ ಇಸವಿಯ ಅಗಸ್ಟ ತಿಂಗಳ ೧೫ನೆಯ ತಾರೀಖಿನೊಳಗಾಗಿ ಮೆ|| ಎಜ್ಯೂಕೆಶನಲ್ ಇನಸ್ಪೆಕ್ಟರ ಸಾ|| ದಕ್ಷಿಣಭಾಗ ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:-** ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೬ನೆಯ ಇಸವಿಯ ಅಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು ವೇಳೆ ಮೊದಲಾದ ವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. **ಪ್ರಶ್ನೆ ಕಾಗದಗಳು:-** ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು:- ಪ್ರಾಕ್ಟಿಕ್ಯಮಾಲೆ ೭೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು:- ಹಳಗನ್ನಡ ನಿಬಂಧ ೫೦; ಕನ್ನಡ ಬಾವುಟದಲ್ಲಿಯ ಕವಿತಾ ಭಾಗ ೩೦; ಹಳಗನ್ನಡ ಅಪರಿಚಿತ ಗದ್ಯಭಾಗಗಳು ೨೦.

ಮೂರನೆಯದು:- ಹೊಸಗನ್ನಡ ನಿಬಂಧ ೭೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ ೨೫.

* **ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:**—(೧) ರಾಷ್ಟ್ರಕೂಟ ರಾಜನ ತಾಸನ. ಪುಟ ೫ (೨) ಕನ್ನಡ ನಾಡಿನ ಬೆಲುವು. ಪುಟ ೧೭—೨೦ ಪೂರ್ಣ (೩) ಬಸವಣ್ಣನವರ ಗುಣ. ಪುಟ ೪೫ (೪) ಮಹಾದೇವಿಯಕ್ಕ ಪುಟ ೪೬—೪೯ ಪೂರ್ಣ (೫) ಕನಕದಾಸರು ಪುಟ ೫೯—೬೧ ಪೂರ್ಣ (೬) ಅರುಣೋದಯ ಪುಟ ೯೭ (೭) ಕರ್ಣಾಲಪ ವೈಭವ ಪುಟ ೧೦ (೮) ಕೊಡಗು ಪುಟ ೧೦೨ (೯) ತೆಂಕಣಗಾಳಿಯೂಟ ಪುಟ ೧೦೬ (೧೧) ಕುವಾರವ್ಯಾಸ ಪುಟ ೧೨೧ (೧೨) ಬೆಲೂರಿನ ಶಿಲಾಬಾಲ್ಹಿಕೆಯರು ಪುಟ ೧೩೬.

ಈ ಕವಿತಾಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೨೫ ಗುಣಗಳ ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವ್ಹರ್ನಮೆಂಟ ಟ್ರೇನಿಂಗ ಕಾಲೇಜ

ಫಾರ್ ಮೆನ್ ಧಾರವಾಡ, ೧—೪—೧೯೪೬

S. G. Baichwal

ಪ್ರಿನ್ಸಿಪಾಲರು.

೩. **ಅರ್ಜಿ ಮಾಡತಕ್ಕ ಅವಧಿ:-** ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೬ನೆಯ ಇಸವಿಯ ಆಗಷ್ಟ ತಿಂಗಳ ೧೫ನೆಯ ತಾರೀಖಿನೊಳಗಾಗಿ ಮೆ|| ಎಜ್ಯೂಕೆಶನಲ್ ಇನಸ್ಪೆಕ್ಟರ ಸಾ|| ದಕ್ಷಿಣಭಾಗ ಧಾರವಾಡ ಇವರಿಗೆ ಮುಟ್ಟುವಂತೆ ಅಪೇಕ್ಷಾ ಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ, ದಿವಸ ಹಾಗು ವೇಳೆ:-** ಧಾರವಾಡ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೬ನೆಯ ಇಸವಿಯ ಆಗಷ್ಟ ತಿಂಗಳಲ್ಲಿ ನಡೆಯುವದು. ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. **ಪ್ರಶ್ನೆ ಕಾಗದಗಳು:-** ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳು ಉಂಟು.

ಮೊದಲನೆಯದು:- ಪ್ರಾಕ್ಟ್ಯಾವ್ಯಮಾಲೆ ೭೦; ವ್ಯಾಕರಣ ಮತ್ತು ಛಂದಸ್ಸು ೩೦.

ಎರಡನೆಯದು:- ಹಳಗನ್ನಡ ನಿಬಂಧ ೫೦; ಕನ್ನಡ ಬಾವುಟದಲ್ಲಿಯ ಕವಿತಾ ಭಾಗ ೩೦; ಹಳಗನ್ನಡ ಅಪರಿಚಿತ ಗದ್ಯಭಾಗಗಳು ೨೦.

ಮೂರನೆಯದು:- ಹೊಸಗನ್ನಡ ನಿಬಂಧ ೬೫; ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ ೩೫.

* **ಕನ್ನಡ ಬಾವುಟದಲ್ಲಿಯ ಕವಿತಾ ವಿವರಣೆ:**—(೧) ರಾಷ್ಟ್ರಕೂಟ ರಾಜನ ತಾಸನ. ಪುಟ ೫ (೨) ಕನ್ನಡ ನಾಡಿನ ಬೆಲುವು. ಪುಟ ೧೭—೨೦ ಪೂರ್ಣ (೩) ಬಸವಣ್ಣನವರ ಗುಣ. ಪುಟ ೪೫ (೪) ಮಹಾದೇವಿಯಕ್ಕ ಪುಟ ೪೬—೪೯ ಪೂರ್ಣ (೫) ಕನಕದಾಸರು ಪುಟ ೫೯—೬೧ ಪೂರ್ಣ (೬) ಅರುಣೋದಯ ಪುಟ ೯೭ (೭) ಕರ್ಣಾಲವ ವೈಭವ ಪುಟ ೧೦ (೮) ಕೊಡಗು ಪುಟ ೧೦೨ (೯) ತೆಂಕಣಗಾಳಿಯೂಟ ಪುಟ ೧೦೬ (೧೧) ಕುವಾರವ್ಯಾಸ ಪುಟ ೧೨೧ (೧೨) ಬೆಲೂರಿನ ಶಿಲಾಬಾಲ್ತಿಕೆಯರು ಪುಟ ೧೩೬.

ಈ ಕವಿತಾಭಾಗವನ್ನು ಸಂಪೂರ್ಣ ಅಭ್ಯಾಸ ಮಾಡಿರಬೇಕು; ಮೂರನೆಯ ಕಾಗದದ ವಿಷಯದಲ್ಲಿ ೨೫ ಗುಣಗಳ ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ, ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

ಗವರ್ನಮೆಂಟ ಟ್ರೇನಿಂಗ ಕಾಲೇಜ

ಫಾರ್ ಮೆನ್ ಧಾರವಾಡ, ೧—೪—೧೯೪೬

S. G. Baichwal

ಪ್ರಿನ್ಸಿಪಾಲರು.

ಹೇತು-ಪ್ರೇರಣೆ

(Motivation)

ಶ್ರೀ. ಎಸ್. ಜ. ಬೈಜವಾಳ, ಎಂ. ಎ.

ಶಿಕ್ಷಣ ಕಾರ್ಯದಲ್ಲಿ ಅಭಿರುಚಿಗೆ ಅಗ್ರಪೂಜೆಯನ್ನು ಎಲ್ಲರೂ ಕಟ್ಟಿದ್ದಾರೆ. ಶಿಕ್ಷಣ ಫರಿಣಾಮಕಾರಿಯಾಗಬೇಕಾದರೆ ಅಭಿರುಚಿ ಅವಶ್ಯ ಎಂಬುದನ್ನು ಯಾರೂ ಅಲ್ಲಗಳೆಯುವು ಲ್ಲ. ಶಿಕ್ಷಕನು ಈ ಬಲಯುತ ಶಕ್ತಿಯನ್ನು ಹೇಗೆ ಉಪಯೋಗಿಸಬೇಕೆಂಬುದನ್ನೂ ಅದರ ಪ್ರಭಾವವನ್ನು ಹೇಗೆ ಅರಿತುಕೊಳ್ಳಬೇಕೆಂಬುದನ್ನೂ ಕೂಲಂಕಷವಾಗಿ ಚರ್ಚಿಸುವುದು ಅವಶ್ಯ.

ಅಭಿರುಚಿಯನ್ನು ಜಾಗ್ರತಗೊಳಿಸುವುದಕ್ಕಿಂತ ವಿದ್ಯಾರ್ಥಿಗಳಲ್ಲಿ ಸ್ವಾಭಾವಿಕವಾಗಿ ಹುದುಗಿರುವ ಅಭಿರುಚಿಯನ್ನು ಹೇಗೆ ನಾಶಗೊಳಿಸದೆ ಇರಬೇಕೆಂಬುದೇ ಶಿಕ್ಷಕನ ಮುಖ್ಯ ಸಮಸ್ಯೆ. ಚಿಕ್ಕಮಕ್ಕಳು ಶಾಲೆಗೆ ಬರಲು ಇಟ್ಟುಕೊಂಡ ಉದ್ದೇಶಗಳನ್ನು ಸ್ಥಿರಗೊಳಿಸಿ ಅವುಗಳಿಗೆ ತಕ್ಕ ಮಾರ್ಗವನ್ನು ತೋರಿಸಿ ಬಲಪಡಿಸುವ ಜಾಣ್ಮೆಯನ್ನು ಶಿಕ್ಷಕನು ಪಡೆಯ ಬೇಕಾಗಿದೆ. ಓದು, ಬರೆಹ, ಗಣಿತ, ಜನತೆ, ಸ್ಥಳಗಳ ಪರಿಚಯ, ನಿಸರ್ಗದ ಗುಟ್ಟಿನ ಜ್ಞಾನ, ಗಾಯನ, ಕಾವ್ಯ ಮುಂತಾದವು ಆಟ, ಚಿಣ್ಣಿ ಕೋಲು, ಚಂಡಾಟ, ಕಣ್ಮುಚ್ಚಾಲಿಕೆ ಯಾಟ ಮುಂತಾದವುಗಳಷ್ಟೇ ವಿದ್ಯಾರ್ಥಿಗಳಿಗೆ ಮನೋರಂಜಕವಾಗಿರುವವು. ಚಿಕ್ಕ ಮಕ್ಕಳು ಶಾಲೆಗೆ ಬರುವಾಗ, ವಿಷಯ ಪ್ರವೇಶವನ್ನು ಮಾಡುವಾಗ ಎಷ್ಟು ಉತ್ಸಾಹವನ್ನು ತೋರಿಸುವರು ಮತ್ತು ಹುಟ್ಟು-ಶಿಕ್ಷಕರು ಅದನ್ನು ಕುಗ್ಗಿಸದೆ ಇಡಿ ವರ್ಷ ಅಭ್ಯಾಸವನ್ನು ಆನಂದದಾಯಕವಾಗುವಂತೆ ಸಾಗಿಸುವರೆಂಬುದು ಸರ್ವರಿಗೂ ತಿಳಿದ ಮಾತು. ಅವರ ವ್ಯಕ್ತಿತ್ವವನ್ನು ಅನುಕರಿಸಲಿಕ್ಕಾಗದಿದ್ದರೂ ಅವರ ಶಿಕ್ಷಣಕ್ರಮದ ತತ್ತ್ವಗಳನ್ನು ಸೋಸಿ ತೆಗೆದು, ಅವುಗಳಂತೆ ನಡೆಯಲು ಯತ್ನಿಸಬಹುದು. ಇಂಥ ಶಿಕ್ಷಕರು ಪ್ರತ್ಯಕ್ಷ ವಸ್ತು ವಾಚಕ, ಸತ್ತ್ವಯುಕ್ತ ಕಲಿಸುವ ಕ್ರಮಗಳನ್ನುಪಯೋಗಿಸುವರೆಂಬುದು ಮತ್ತು ಅಭಿರುಚಿ ಹುಟ್ಟಿದಾಗ್ಯೂ ಅದನ್ನು ಕಂಡುಹಿಡಿಯಲಾಗದಿದ್ದ ಇತರ ಶಿಕ್ಷಕರು ಕೇವಲ ಅಪ್ರತ್ಯಕ್ಷ, ಶಬ್ದ ಪ್ರಾಧಾನ್ಯ ಔಪಚಾರಿಕ ಕ್ರಮಗಳನ್ನು ಉಪಯೋಗಿಸುವರೆಂಬುದು ಸ್ಪಷ್ಟವಾಗಿ ಕಾಣಿಸು ವದು. ಭೂಗೋಲ, ಗಾಯನ, ಕಾವ್ಯ ಮುಂತಾದ ವಿಷಯಗಳಲ್ಲಿ ವಿದ್ಯಾರ್ಥಿಗಳ ಅಭಿ ರುಚಿಯು ಕ್ಷೀಣವಾಗುತ್ತ ಸಾಗಿದರೆ ಕಲಿಸುವ ಕ್ರಮಗಳೇ ಆ ಅಭಿರುಚಿಯನ್ನು ನಾಶಗೊಳಿ ಸುತ್ತವೆಂಬ ಅನುಮಾನವು ಹೊಗದುವುದು. ಇಲ್ಲಿ ಇದರ ಹೊರತು ಬೇರೆ ತರ್ಕಕ್ಕೆ ಎಡೆಯಿಲ್ಲ.

ಹೇತುವೆಂದರೇನು ?

ಹಿರಿಯರಂತೆ ಕಿರಿಯರೂ ತಮ್ಮ ಜೀವನವನ್ನು ಗೌರವಯುತವಾಗಿ ರಸಮಯವಾಗಿ ಮಾಡುವಂಥ ಅನುಭವಗಳನ್ನು ಹುಡುಕುತ್ತಿರುತ್ತಾರೆ. ತಮ್ಮ ಜೀವನವನ್ನು ಹೆಚ್ಚು ಹೆಚ್ಚು ಉಪಯುಕ್ತವುಳ್ಳದ್ದನ್ನಾಗಿ ಮಾಡಲು ಹಂಬಲಿಸುತ್ತಾರೆ. ಒಂದು ಬಂಡಿಯನ್ನು ಮಾಡು ವುದು, ಅಣ್ಣಿದಲ್ಲಿ ಗುಡಿಸಲು ಕಟ್ಟುವುದು, ಆಟದಲ್ಲಿ ಪ್ರಾವಿಣ್ಯವನ್ನು ಪಡೆಯುವದು ಮುಂತಾದವು ಜೀವನದ ಹಲವನ್ನು ಹೆಚ್ಚಿಸುವ ಯೋಜನೆಗಳೆಂದು ತಿಳಿಯುವರು. ಅರ್ಥ

ವುಳ್ಳ, ಬೆಲೆಯುಳ್ಳ ವ್ಯವಸಾಯಗಳನ್ನು ಮಾಡುವುದೇ ಅವರ ಎಲ್ಲ ಪ್ರಯತ್ನಗಳ ಗುರಿ. ಈ ಪ್ರಯತ್ನಗಳಲ್ಲಿ ಹುದುಗಿದ ಅಭಿರುಚಿ-ಹಂಬಲವೇ ಅವರ ವ್ಯಕ್ತಿತ್ವದೊಳಗಿನ ಲೋಪದೋಷಗಳನ್ನು ದೂರ ಮಾಡುವ ಸಂಭವನೀಯ ಸಾಧನ. ಈ ಮೋಹಕವಾದ ಸಾಧನವು ವ್ಯಕ್ತಿಯನ್ನು ತನ್ನ ಗುರಿಯನ್ನು ಸಾಧಿಸಲು ಕಾರ್ಯಪ್ರವೃತ್ತನನ್ನಾಗಿ ಮಾಡುವುದು. ವ್ಯಕ್ತಿಯನ್ನು ಕಾರ್ಯಪ್ರವೃತ್ತನನ್ನಾಗಿ ಮಾಡುವ ಈ ಅಭಿರುಚಿ, ಹಂಬಲವೇ ಹೇತುವೆನಿಸುವುದು. ಅಭಿರುಚಿಯು ಹೇತುವಿನಲ್ಲಿ ಇರುವ ಪ್ರಚೋದಕ ಶಕ್ತಿಯು. ವ್ಯಕ್ತಿಯನ್ನು ಕಾರ್ಯಪ್ರವೃತ್ತನನ್ನಾಗಿ ಮಾಡುವ ಶಕ್ತಿ ಅದರಲ್ಲಿಲ್ಲದಿದ್ದರೆ ಅದು ಹೇತುವೆನಿಸಿಕೊಳ್ಳಲಾರದು. ಹೇತುವಿನ ಮಟ್ಟಕ್ಕೆ ಹೋಗಲಾರದು.

ಮತ್ಸರ, ಸೇಡು, ಮಹತ್ವಾಕಾಂಕ್ಷೆ ಅಥವಾ ಕುತೂಹಲದಿಂದ ವ್ಯಕ್ತಿಯು ಪ್ರೇರಿತನಾಗಿರುವನೆಂದು ನಾವನ್ನುತ್ತೇವೆ. ಹೀಗನ್ನುವಾಗ ಆಯಾ ಪರಿಸ್ಥಿತಿಗೆ ಅವಶ್ಯವಿದ್ದ ಸನ್ನಿವೇಶವಿರುವುದೆಂದು ಗ್ರಹಿಸುತ್ತೇವೆ. ಪ್ರತಿಯೊಂದು ಪೂರ್ಣ ಹೇತುವಿನಲ್ಲಿ ವಸ್ತುನಿಷ್ಠ ಸನ್ನಿವೇಶ ಮತ್ತು ಪ್ರಚೋದಕ ಭಾವೋದ್ರೇಕ ಎರಡೂ ಇರುವುವೆಂದು ಕಂಡುಬರುತ್ತದೆ.

ಹೇತುಗಳ ಪ್ರಕಾರಗಳು:

ಸಂಸಾರ ಚಕ್ರದಲ್ಲಿ ಮನುಷ್ಯನನ್ನು ಪ್ರೇರಿಸುವ ಹೇತುಗಳು ಅನೇಕ ಬಗೆಯಾಗಿರುವವು. ಅವುಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು:—(೧) ವಿಶಿಷ್ಟ, (೨) ಸಾಮಾನ್ಯ ಅಥವಾ (೧) ಆಂತರಿಕ, (೨) ಬಾಹ್ಯ.

(೧) ವಿಶಿಷ್ಟ ಹೇತುವು ಯಾವುದಾದರೊಂದು ಉದ್ದೇಶ ಅಥವಾ ಧ್ಯೇಯದಿಂದ ಪ್ರೇರಿತವಾಗಿರುವುದು. ಆ ಧ್ಯೇಯ ಸಾಧನೆಯೆ ಆ ಹೇತುವನ್ನು ಪೂರೈಸುವುದು. ಧ್ಯೇಯವಿಲ್ಲದಿದ್ದರೆ ಹೇತುವೂ ಇಲ್ಲ. ನಕ್ಷತ್ರಗಳ ಅಭ್ಯಾಸದಲ್ಲಿ ಆಸ್ಥೆಯಿದ್ದ ವಿದ್ಯಾರ್ಥಿಯು ಜ್ಯೋತಿರ್ಗಣಿತ ಶಾಸ್ತ್ರವನ್ನು ಅಭ್ಯಸಿಸುವನು. ಅದರಿಂದ ಅವನ ಜ್ಞಾನತೃಷೆಯು ಹಿಂಗುವುದು. ವ್ಯಾಕರಣ ಅಭ್ಯಾಸದಿಂದ ಅದು ಹಿಂಗದು.

(೨) ಸಾಮಾನ್ಯ ಹೇತುವು ಅನೇಕ ವಿಷಯಗಳಿಗೂ ಸನ್ನಿವೇಶಗಳಿಗೂ ಸಂಬಂಧಪಟ್ಟುದು. ಶಿಕ್ಷಕನ ಮೆಚ್ಚುಗೆಯನ್ನು ಪಡೆಯಲು, ಅಥವಾ ಶಾಲೆಯು ಬಿಟ್ಟನಂತರ ದಂಡಕ್ಕೆ ಬಲಿಯಾಗಬಾರದೆಂಬ ಇಚ್ಛೆಯಿಂದ ಅಭ್ಯಾಸ ಮಾಡುವುದು ಮುಂತಾದ ವಿಷಯಕ್ಕೆ ಸಂಬಂಧಪಟ್ಟುದೆಂದು ಉದಾಹರಣೆಗಾಗಿ ಹೇಳಬಹುದು. ಇಲ್ಲಿ ವಿಷಯಾಭ್ಯಾಸವು ವಿಷಯಕ್ಕೆ ಸಂಬಂಧಿಸಿರದೆ ವಿಷಯದ ಹೊರಗಿನ ಹೇತುವನ್ನವಲಂಬಿಸಿರುತ್ತದೆ. ಆದುದರಿಂದ ಸಾಮಾನ್ಯ ಹೇತುಗಳು ಸಾಮಾನ್ಯ ಧ್ಯೇಯದ ಸಾಧನಗಳಾಗಬಲ್ಲವೇ ಹೊರತು ಧ್ಯೇಯಗಳೆಂದೂ ಆಗಲಾರವು.

ಈ ವಿಶಿಷ್ಟ ಹೇತುಗಳಲ್ಲಿ ಎರಡು ಭಾಗಗಳನ್ನು ಮಾಡಬಹುದು:— (೧) ದಾರ್ಶನಿಕ ಅಥವಾ ಕಾಲ್ಪನಿಕ ಅಥವಾ ಸೈದ್ಧಾಂತಿಕ. (೨) ವ್ಯಾವಹಾರಿಕ.

(೧) ಸೈದ್ಧಾಂತಿಕ ಹೇತುಗಳು:

ಉದಾರ ಸಂಸ್ಕೃತಿಯನ್ನು ಸಾಧಿಸುವ ಹೇತುಗಳು ಇವು. ನಾವು ವಾಸಿಸುವ ಜಗತ್ತನ್ನು ಚೆನ್ನಾಗಿ ತಿಳಿದುಕೊಂಡು ಅದರ ವಿಷಯಕ್ಕೆ ಉದಾರ ಶಿಕ್ಷಣದ ಯೋಗ್ಯ ಧೋರಣ

ವನ್ನು ತಾಳುವುದೇ ಇವುಗಳ ಮುಖ್ಯ ಉದ್ದೇಶ. ಇಂಥ ಶಿಕ್ಷಣದ ಸಹಾಯದಿಂದ ಜನರ ಸಾಮಾನ್ಯ ವ್ಯವಹಾರಗಳಲ್ಲಿ ಹೇಗೆ ಭಾಗ ವಹಿಸಬೇಕೆಂಬ ಜ್ಞಾನವಾಗುವುದು; ಆದರೆ ಶಾಲೆ ಕಾಲೇಜುಗಳಲ್ಲಿ ಅಭ್ಯಾಸಕ್ರಮವು ನಡೆದಾಗ ವಿಶಿಷ್ಟ ತರದ ಭಾಗವನ್ನು ವಹಿಸುವುದರ ಕಲ್ಪನೆಯು ಸಹ ತಿಳಿದಿರಬಾರದು.

(೨) **ವ್ಯಾವಹಾರಿಕ ಹೇತುಗಳು:**

ವ್ಯವಹಾರಗಳಲ್ಲಿಯ ಪ್ರಾವಿಣ್ಯಕ್ಕೆ ಸಂಬಂಧಪಟ್ಟವು ಇವು. ಉತ್ತಮ ಶಿಕ್ಷಕನಾಗ ಬಯಸುವವನು ಶಿಕ್ಷಣ ಶಾಸ್ತ್ರವನ್ನು ಆಳವಾಗಿ ಅಭ್ಯಸಿಸುವನು. ಟೈಪ್ ಹೊಡೆಯುವದನ್ನು ಯಾವನಾದರೊಬ್ಬ ಅಧಿಕಾರಿಯ ಆಪ್ತಕಾರ್ಯದರ್ಶಿಯಾಗುವವನು ಕಲಿಯುವನು. ಇಲ್ಲಿ ವಿಷಯವೇ ಮುಖ್ಯ ಧ್ಯೇಯವು, ಅದು ಸಾಧನೆಯಾಗಲಾರದು.

ಇವೆರಡೂ ತರದ ಹೇತುಗಳಿಗೆ ಶಿಕ್ಷಣದಲ್ಲಿ ಸ್ವತಂತ್ರ ಅಸ್ತಿತ್ವವಿದ್ದರೂ ಅವೆರಡರಲ್ಲಿ ವಿರೋಧ ದೋಷವಿಲ್ಲ. ಶಿಕ್ಷಣ ಶಾಸ್ತ್ರವನ್ನು ವ್ಯಾವಹಾರಿಕ ಉದ್ದೇಶದಿಂದ ಅಭ್ಯಸಿಸುವ ಹೇತುವು ಶಿಕ್ಷಣದ ಸಿದ್ಧಾಂತಗಳಲ್ಲಿ ಅಭಿರುಚಿಯನ್ನು ಹುಟ್ಟಿಸದೆ ಇರಲಾರದು. ಇವೆರಡೂ ಹೇತುಗಳು ಒಂದನ್ನೊಂದು ಸಹಕರಿಸಬೇಕು. ಔಷಧಗಳ ಉಪಯೋಗದಲ್ಲಿ ಆಸ್ಥೆಯುಳ್ಳ ವೈದ್ಯಕೀಯ ವಿದ್ಯಾರ್ಥಿಗಳು ಔಷಧಗಳ ಸಿದ್ಧಾಂತಗಳಲ್ಲಿ ನಿಷ್ಣಾತರಾಗಬಾರದೆಂಬುದಕ್ಕೆ ಬಲವಾದ ಕಾರಣಗಳಿಲ್ಲ.

ಸಾಮಾನ್ಯ ವಿಶಿಷ್ಟ ಹೇತುಗಳ ಸಂಬಂಧ:

ಸಾಮಾನ್ಯವಾಗಿ ವಿಶಿಷ್ಟ ಹೇತುಗಳ ಕಾರ್ಯವು ಚಟುವಟಿಕೆಯ ದಿಶೆಗಳನ್ನು ಸಿದ್ಧ ಗೊಳಿಸಿ ಮಾರ್ಗಕ್ಕೆ ಹಚ್ಚುವದಾಗಿರುವದು. ಸಾಮಾನ್ಯ ಹೇತುಗಳ ಧ್ಯೇಯವು ಇಂತಹ ಚಟುವಟಿಕೆಗಳನ್ನು ಸಮರ್ಥಿಸಿ ಅವುಗಳಿಗೆ ಬೇಕಾಗುವ ಸಾಮರ್ಥ್ಯವನ್ನು ಪೂರೈಸುವದಿರುವದು. ಅವೆರಡೂ ಹೇತುಗಳು ಪರಸ್ಪರ ಪೂರಕವಾಗಿವೆ. ಪರಭಾಷೆಯನ್ನು ಕಲಿಯುವ ಬಾಲಕರು ಪ್ರಾರಂಭದಲ್ಲಿ ಉತ್ಸುಕರಾಗಿರುವರು. ಪರಭಾಷೆಯನ್ನು ಓದುವ, ಮಾತಾಡುವ ಬರೆಯುವ ವಿಶಿಷ್ಟ ಹೇತುವು ಅವರನ್ನು ತೀರ ಮೋಹಗೊಳಿಸುವದು. ಒಂದು ತಿಂಗಳ ಅಥವಾ ಆರು ವಾರಗಳ ಅವಧಿಯಲ್ಲಿ ತಮಗೆ ಮಾತಾಡಲು ಬರುವದೆಂದು ಅವರು ಊಹಿಸುವರು. ಈ ವಿಚಾರದಿಂದ ಅವರು ಅಭಿರುಚಿಯ ಮೇಲ್ಮಟ್ಟದಿಂದ ಪ್ರಾರಂಭಿಸುವರು. ಆದರೆ ಅಷ್ಟರಲ್ಲಿಯೇ ತಾವು ಕೈಕೊಂಡ ಕಾರ್ಯವು ಎಷ್ಟು ಗಹನವಾದುದೆಂಬ ಕಲ್ಪನೆಯು ಅವರಿಗೆ ಹೊಳೆಯಹತ್ತುವದು. ಗುರಿಯು ಭವಿಷ್ಯಕಾಲದಲ್ಲಿ ತೀರ ಮುಂದೆ ಸರಿದು ಹೇತುವು ಪ್ರದೀಪನ ಶಕ್ತಿಯ ಬಹ್ವಂಶವನ್ನು ಕಳೆದುಕೊಂಡಿರುವದು. ಇಂಥ ಪರಿಸ್ಥಿತಿಯಲ್ಲಿ (ಸಂಧಿ ಕಾಲದಲ್ಲಿ) ಸಾಮಾನ್ಯ ಹೇತುಗಳು ತಮ್ಮ ಪ್ರಭಾವವನ್ನು ಬೀರುವವು. ಯಾವ ಬಾಲಕನೂ ನಿರಾಶೆಯಿಂದ ಕೈಕೊಂಡ ಕೆಲಸವನ್ನು ತ್ಯಜಿಸಲು ಬಯಸುವದಿಲ್ಲ; ಶಿಕ್ಷಕರಾಗಲಿ ತಾಯಿ ತಂದೆಂದಿರಾಗಲಿ ತನ್ನಲ್ಲಿ ಅವಿಶ್ವಾಸವನ್ನು ತೋರಿಸಬೇಕೆಂದು ಅವನು ಇಚ್ಛಿಸುವದಿಲ್ಲ. ಇಂಥ ಅಥವಾ ಇದರಂತಹ ವಿಚಾರಗಳು ಬಾಹ್ಯ ಸಹಾಯವಿಲ್ಲದೆ ಕಾರ್ಯರೂಪಿಯಾಗ ಬಹುದು. ಸ್ವಯಂಸ್ಫೂರ್ತಿಯಿಂದ ಅವು ತಲೆದೋರದಿದ್ದರೆ ಶಿಕ್ಷಕನಾಗಲಿ ತಂದೆತಾಯಂದಿರಾಗಲಿ ಅವುಗಳನ್ನು ಹುಟ್ಟಿಸಬೇಕು. ಇಂಥ ಸಾಮಾನ್ಯ ಹೇತುಗಳು ವಿಶಿಷ್ಟ ಹೇತುಗಳನ್ನು ಬಲಪಡಿಸಿ ಭಾಷಾಭ್ಯಾಸದಿಂದಲೇ ದೊರೆಯುವ ನಿಜವಾದ ಲಾಭದ ವಿಚಾರದಿಂದ ಪ್ರೇರಿತ

ವಾದ ಹೇತುವಿಗೆ ಎಳೆಮಟ್ಟು ಬಾಧಕವಾಗದೆ ಕಷ್ಟಸಾಧ್ಯವಾದ ಅಭ್ಯಾಸದ ಕರ್ತವ್ಯವನ್ನು ಸ್ಥಾಯೀಗೊಳಿಸಲು ಸಹಾಯವಾಗುವವು.

ಸಾಮಾನ್ಯ ಹೇತುಗಳೂ ಸಾಮಾಜಿಕ ಪ್ರವೃತ್ತಿಗಳೂ:

ಮುಖ್ಯವಾಗಿ ಸಾಮಾಜಿಕ ಅಂತಃಸಂಬಂಧಗಳಿಂದಲೇ ಸಾಮಾನ್ಯ ಹೇತುಗಳು ಉದ್ಭವಿಸುವವು. ನಮ್ಮ ಪರರ ಸಂಬಂಧವು ನಿಕಟವಾದುದರಿಂದ ನಾವು ಮಾಡತಕ್ಕ ಕಾರ್ಯಗಳು ಅವರಿಗೂ ನಮಗೂ ಮಹತ್ವವುಳ್ಳವುಗಳಾಗುತ್ತವೆ. ಆದ್ದರಿಂದ ನಾವು ಮಾಡುವ ಕಾರ್ಯದಲ್ಲಿಯೂ ಕಾರ್ಯದ ರೀತಿಯಲ್ಲಿಯೂ ಅವರ ಆಸ್ಥೆಯು ಹುಟ್ಟಿ ಆ ಆಸ್ಥೆಯು ನಮ್ಮ ಪ್ರತ್ಯಾಶೆಗಳನ್ನು ರೂಪಗೊಳಿಸಿ ನಮ್ಮಲ್ಲಿ ಹೇತುಗಳನ್ನು ಹುಟ್ಟಿಸುತ್ತದೆ. ಅವರ ದೃಷ್ಟಿಯಲ್ಲಿ ನಾವು ಶ್ರೇಷ್ಠರೆಂದೆನಿಸಿಕೊಂಡು ಅವರ ಆದರ ಮನ್ನಣೆಗಳಿಗೆ ಪಾತ್ರರಾಗಬೇಕೆಂದು ಇಚ್ಛಿಸುವೆವು. ಇದು ಮುಖ್ಯವಾಗಿ ಸುಖದಾಯಕವಾಗಿರಬಹುದು ಅಥವಾ ಇಲ್ಲ. ಎರಡನೆಯವರ ಭಾವನೆಗಳನ್ನು ಲಕ್ಷಿಸದಿದ್ದವನು ಸುಖವನ್ನೀಯುವ ಸಂಗಾತಿಗನಾಗಲಾರನು. ಸಾಮಾಜಿಕ ಜೀವನದಲ್ಲಿ ಅವನಿಗೆ ತಪ್ಪದೆ ತಿಕ್ಕಾಟದ ಪ್ರಸಂಗಗಳು ಖಂಡಿತ. ಮೇಲ್ತರದ ಮಟ್ಟಗಳಲ್ಲಿ ಮತ್ತು ಸಭ್ಯತನವು ಕರ್ತವ್ಯ ಮತ್ತು ಭೂಷಣವೆಂದು ಗಣಿಸಲ್ಪಟ್ಟರೆ ಸಾಮಾನ್ಯ ಸ್ವರೂಪದಲ್ಲಿ ಸಹ, ಸಾಮಾನ್ಯ ಹೇತುಗಳು ನಮ್ಮ ನೈತಿಕ ಹಾಗೂ ಸಾಮಾಜಿಕ ಧೋರಣೆಗಳ ಕೂಡ ಸಂಯೋಗವನ್ನು ಹೊಂದುತ್ತವೆ. ಕರ್ತವ್ಯದ ಅರಿವು, ಪರರ ಮಾರ್ಗವನ್ನು ಸುಗಮವನ್ನಾಗಿ ಮಾಡಲು ಬಯಸುವ ಉತ್ತಮ ಇಚ್ಛೆ, ಮಾನ್ಯ ನಂಬಿಗಸ್ಥನಲ್ಲಿಯ ಪರರ ವಿಶ್ವಾಸ ನಂಬಿಗೆಗಳು ಸಾಮಾನ್ಯ ಸ್ವರೂಪದ ಹೊಣೆಗಳಾಗಿರುವವು. ಆದುದರಿಂದಲೇ ಸಾಮಾನ್ಯ ಹೇತುಗಳ ವಿಕಾಸವು ನೈತಿಕ ಶಿಕ್ಷಣದ ನಮ್ಮ ಅತ್ಯುತ್ತಮ ಕಲ್ಪನೆಗಳಿಗೆ ಬೆರೆತು ಹೋಗುವದು.

ಸಾಮಾನ್ಯ ಹೇತುಗಳ ದುರುಪಯೋಗ:—

ಪ್ರಾರಂಭದ ಹೇತುಪ್ರದೀಪನ ಕಾರ್ಯದಲ್ಲಿ ವಿಶಿಷ್ಟ ಹೇತುಗಳನ್ನು ಬದಗೊತ್ತಿದರೆ–ಸಾಮಾನ್ಯ ಹೇತುಗಳ ದುರುಪಯೋಗವಾದಂತಾಗುವದು. ವಿದ್ಯಾರ್ಥಿಗಳು ಕೇವಲ ಗುಣಗಳಿಗಾಗಿ, ಪ್ರಶಸ್ತಿ ಮಾನ್ಯತೆಯನ್ನು ಪಡೆಯುವದರ ಸಲುವಾಗಿ ಹೆಣಗಾಡುತ್ತಿದ್ದರೆ ಅಥವಾ ಶಿಕ್ಷಕನು ಗುಣಗಳನ್ನು ಕಡಿಮೆ ಮಾಡುವೆನೆಂಬ ಬೆದರಿಕೆಯನ್ನು ವಿದ್ಯಾರ್ಥಿಗಳ ಪ್ರಚೋದನೆಯಂತೆ ಉಪಯೋಗಿಸಿದರೆ ಸಾಮಾನ್ಯ ಹೇತುಗಳ ಅವಹೇಲನವಾಗುವದು. ಸಾಮಾಜಿಕ ಕ್ಷೇತ್ರದಲ್ಲಿ ಜೊಗ್ಗಿ ಸಲಾಮು ಮಾಡುವದು, ಬೂಟುಗಳನ್ನು ನೆಕ್ಕುವದು ಮುಂತಾದ ವಂಚನೆಯ (ಲಾಂಗೂಲ ಚಾಲನದ) ರೂಪಗಳು ಈ ತರದ ಉದಾಹರಣೆಗಳಾಗಿವೆ. ಜ್ಞಾನ ಸಂಪತ್ತಿದ್ದಲ್ಲಿಗೆ ಮಾತ್ರ ನಮ್ಮ ಹೃದಯಗಳು ಧಾವಿಸುತ್ತಿರಬೇಕು. ಕೃತ್ರಿಮ ಉತ್ತೇಜನಗಳಿಗೆ, ಕ್ರಮವಿರುದ್ಧ ರೂಢಿಗಳಿಗೆ ಎಂದೂ ಬಲಿಬೀಳಬಾರದು.

ವಿಶಿಷ್ಟ ಹೇತುಗಳಲ್ಲಿ ಉದ್ದೇಶ ಮತ್ತು ಚಟುವಟಿಕೆಯ ಸ್ಥಾನ:–

ವಿಶಿಷ್ಟ ಹೇತುಗಳಲ್ಲಿ ಸಾಧಿಸಬಹುದಾದ ಗುರಿಯೂ ಗುರಿಯನ್ನು ಸಾಧಿಸಲು ಬೇಕಾಗುವ ಚಟುವಟಿಕೆಯಿಂದ ಹೆಚ್ಚು ಕಡಿಮೆ ಪ್ರಮಾಣದ ಅಂತರದಲ್ಲಿಯೂ ಮತ್ತು ವಿವಿಧ ಸಂಬಂಧಗಳಲ್ಲಿಯೂ ಕಂಡು ಬರುವದು. ಚಿಕ್ಕ ಬಾಲಕರ ಆಟದಲ್ಲಿ ಉದ್ದೇಶ ಮತ್ತು ಚಟುವಟಿಕೆಗಳು

ಕೂಡಿಯೇ ಕಂಡು ಬರುವವು. ಮಗುವು ಚಮಚೆಯಿಂದ ಅಗಲ ಬಾಯಿಂದ ಬಟ್ಟಲವನ್ನು ಹೊಡೆಯಹತ್ತಿದಾಗ ಆದ ಸಪ್ಪಳದಿಂದ ಆನಂದವನ್ನು ಪಡೆದರೆ ಸಪ್ಪಳ ಮಾಡಬೇಕೆಂಬ ಮುಖ್ಯ ಉದ್ದೇವು ಪ್ರತಿಯೊಂದು ಹೊಡೆತದಿಂದ ಅಂದರೆ ಅವಶ್ಯವಿದ್ದ ಚಟುವಟಿಕೆಯಿಂದ ಸಾಧ್ಯವಾಗುವದು. ಪ್ರೌಢ ಮನುಷ್ಯನು ತನ್ನ ಕೈಬೆರಳುಗಳನ್ನು ತಿರುವಿದರೆ, ಅಥವಾ ಒಂದು ಹಾಡನ್ನು ಗುಯಿಗುಟ್ಟಿದರೆ, ಅಥವಾ ಯಾವುದಾದರೊಂದು ವಸ್ತುವಿನ ಕಡೆಗೆ ಗುರಿಯಿಟ್ಟು ಹೊಡೆದರೆ, ಮೇಲಿನಂತೆ ಸನ್ನಿವೇಶವು ಉದ್ಭವಿಸುವದು. ಪ್ರಾಣಿಗಳ ಚಿನ್ನಾಟವಾದರೂ ಮುಖ್ಯವಾಗಿ ಇದೇ ಸ್ವರೂಪದ್ದಾಗಿದೆ.

ಅಭಿರುಚಿಯನ್ನು 'ಅ' ಅಕ್ಷರದಿಂದ ಚಟುವಟಿಕೆಯನ್ನು 'ಚ' ಅಕ್ಷರದಿಂದ ಉದ್ದೇಶವನ್ನು 'ಉ' ಅಕ್ಷರದಿಂದ ಸಂಕ್ಷೇಪಿಸಿದರೆ ಮೇಲಿನ ಸಂಬಂಧವನ್ನು ಆಕೃತಿರೂಪದಿಂದ ಕೆಳಗಿನಂತೆ ತೋರಿಸಬಹುದು.

ಅ

ಮಗುವಿನ ಆಟ =

ಚ _____ ಉ

ಉದ್ದೇಶವೂ ಚಟುವಟಿಕೆಯೂ ಹತ್ತಿರವೇ ಇಡಲ್ಪಟ್ಟಿವೆ. ಅಭಿರುಚಿಯು ಎರಡಕ್ಕೂ ಸಾಮಾನ್ಯವಿದ್ದುದರಿಂದ ಅವೆರಡರ ಮಧ್ಯದಲ್ಲಿ ಇರಿಸಿದೆ. ಅಭಿರುಚಿಯ ಪ್ರವಾಹವು ಎರಡೂ ದಿಕ್ಕಿಗೆ ಅವ್ಯಾಹತವಾಗಿ ಹರಿಯುತ್ತದೆ.

ಆಟಪಾಟಗಳಲ್ಲಿ ಉದ್ದೇಶವು ಚಟುವಟಿಕೆಯಿ ಕೂಡ ಸಾಧ್ಯವಾಗುವದಿಲ್ಲ. ಚಿಕ್ಕ ಮಗುವು ತನ್ನ ಗೊಂಬೆಗಾಗಿ ಚಹ ಸಮಾರಂಭವನ್ನು ಏರ್ಪಡಿಸಿದಾಗ, ಬಾಲಕನು ತುಂಡುಗಳಿಂದ ದುರ್ಗವನ್ನು ಕಟ್ಟುವಾಗ, ಪ್ರೌಢರು ಟೆನಿಸು ಆಟವನ್ನು ಆಡುವಾಗ, ಉದ್ದೇಶವನ್ನು ಸಾಧಿಸುವದಕ್ಕಿಂತ ಪೂರ್ವದಲ್ಲಿ ಕಾರ್ಯಶ್ರೇಣಿಗಳನ್ನು ಮಾಡುವದು ಅವಶ್ಯ. ನಾವು ಚಟುವಟಿಕೆಯ ಆನಂದವನ್ನು ಸವಿಯುತ್ತೇವೆ. ಆದರೆ ಆ ಚಟುವಟಿಕೆಯ ಫಲವನ್ನು ಸಹ ಅದಕ್ಕಿಂತ ಕಡಿಮೆಯಲ್ಲದ ಆನಂದದಿಂದ ಅನುಭವಿಸುತ್ತೇವೆ. ಮೇಲಿನಂತೆ ಆಕೃತಿಯಿದ್ದರೂ ಚಟುವಟಿಕೆ ಮತ್ತು ಉದ್ದೇಶಗಳ ನಡುವಿನ ಅಂತರವನ್ನು ಹೆಚ್ಚಿಸಬೇಕಾಗುವದು.

ಅ

ಆಟಪಾಟಗಳು =

ಚ _____ ಉ

ಆಟುಗಳಲ್ಲಿಯಂತೆ ಕಲಾಕೃತಿಯಲ್ಲಿ ಚಟುವಟಿಕೆ, ಉದ್ದೇಶ ಮತ್ತು ಅಭಿರುಚಿಗಳು ಮಾನಸಶಾಸ್ತ್ರ ರೀತಿಯಿಂದ ಸಂಬಂದ್ಧವಾಗಿರುವವು. ಚಿತ್ರವನ್ನು ಚಿತ್ರಿಸಿ ಬಣ್ಣವನ್ನು ಕೊಡುವ ಕಲಾವಿದನು, ಕಾವ್ಯವನ್ನು ಬರೆಯುವವನು, ಇಂಪಾದ ಪದವನ್ನು ರಚಿಸುವವನು ಆಟದಲ್ಲಿ ತೊಡಗಿದವನಷ್ಟೇ ಮನರಂಜಕ ಸನ್ನಿವೇಶದಲ್ಲಿರುವನು. ಅದರೆ ಕೌಶಲ್ಯಯುತ ಕಾರ್ಯದಲ್ಲಿ ಕಲಾವಿದನಿಗೆ ಮಾತ್ರ ಪ್ರವೇಶವಿರದೆ ತನ್ನ ಕಾರ್ಯವನ್ನು ಆನಂದದ ಭರದಲ್ಲಿ ಸಾಗಿಸುವ ಚಟುವಟಿಕೆಯಲ್ಲಿಯೂ ಫಲಿತಾಂಶದಲ್ಲಿಯೂ ಸಮವಾದ ಆಸ್ಥೆಯುಳ್ಳ ಮತ್ತು

ಮೊದಲಿನಿಂದ ಕಡೆಯ ವರೆಗೆ ಕಲಾತ್ಮಕ ಧೋರಣವನ್ನಿಟ್ಟುಕೊಂಡ ಪ್ರತಿಯೊಬ್ಬ ಸಾಧಕನ ಕಲಾಭಿಜ್ಞನೆನಿಸಿಕೊಳ್ಳುವನು. ಹೊಲದಲ್ಲಿ ದುಡಿಯುವ ಕೂಲಿಕಾರನೂ, ಗಿರಣಿಯಲ್ಲಿ ಕೆಲಸ ಮಾಡುವ ಕೂಲಿಕಾರನೂ, ಅಂಗಡಿಯಲ್ಲಿ ವಸ್ತ್ರಗಳನ್ನು ಮಾರುವವನೂ, ಆಸ್ಪತ್ರೆಯಲ್ಲಿಯ ಶಸ್ತ್ರಕ್ರಿಯಜ್ಞನೂ, ನರ್ಸರಿಯ ಕೋಣೆಯಲ್ಲಿಯ ಶಿಕ್ಷಕನೂ ಕಲಾಭಿಜ್ಞರ ಮಾಲಿಕೆಯಲ್ಲಿ ಸೇರಬಹುದು. ಯಾವ ತರದ ಪ್ರಯತ್ನದ ಸ್ವರೂಪವೂ ಈ ಉಚ್ಚ ತರಗತಿಗೆ ಏರದೆ ಉಳಿಯಲಾರದು.

ಕಲಾಕೃತಿಯಲ್ಲಿ ಆಟಪಾಟಗಳಲ್ಲಿಲ್ಲದ ಆರ್ಥಿಕ ಲಾಭ—ಆದಾಯವೆಂಬ ಹೊಸ ಸ್ವರೂಪವು ಸಮಾವೇಶವಾಗುವದು. ಆರ್ಥಿಕ ಆದಾಯವನ್ನು 'ಆ' ಎಂಬ ಅಕ್ಷರದಿಂದ ಸೂಚಿಸಿದರೆ ಅದನ್ನು ಉದ್ದೇಶದ ಮುಂದೆ ಇಡಬೇಕಾಗುವದು. ಯಾಕೆಂದರೆ ಲಾಭದ ವಿಚಾರವು ಮುಖ್ಯ ಹೇತುವಿಗೆ ಆಧೀನವಾದುದು.

ಆ

ಕಲಾಕೃತಿ=

———————————————— ಉ ಆ

ಕೆಲಸ ಆಥವಾ ವಿಶೇಷಣಗಳಿಂದ ರಹಿತವಾದ ಕಾರ್ಯವು ಮೇಲಿನ ಕಲಾಕೃತಿಗಳಿಂದ ಭಿನ್ನವಾಗಿದೆ. ಇಲ್ಲಿ ಅಭಿರುಚಿಯು ಚಟುವಟಿಕೆಯನ್ನು ತೀರ ಹಿಂದುಳಿಸಿ ಉದ್ದೇಶದ ಹತ್ತರ ಸುಳಿಯುತ್ತದೆ. ಮುಖ್ಯವಾಗಿ ಅಭಿರುಚಿಯು ಉದ್ದೇಶದತ್ತ ಧಾವಿಸುವದು. ಚಟುವಟಿಕೆಯಲ್ಲಿಯೇ ಆಸ್ಥೆ ಅಥವಾ ಅಭಿರುಚಿ ಉಳಿಯುವ ಸಂಭವನಿಲ್ಲ. ಆದಾಗ್ಯೂ ಅಭಿರುಚಿಯಿಲ್ಲದೆ ಚಟುವಟಿಕೆಯು ಸಾಗುವದಿಲ್ಲ. ಯಾಕೆಂದರೆ ಕಟ್ಟಕಡೆಗೆ ಅಭಿರುಚಿಯು ಅದರಲ್ಲಿ ಹರಿಯುತ್ತದೆ. ಒಕ್ಕಲಿಗನ ಮತ್ತು ಅಂಗಡಿಕಾರನ ಕೆಲಸವು ಈತರದ್ದಿರುವದು. ಆದರೆ ಈ ಮಾದರಿಯ ಕೆಲಸವು ಬೇಕಾದ ಕ್ಷೇತ್ರದಲ್ಲಿ ಕಾಣುಹುದು.

ಆ

ಕೆಲಸ =

ಚ———————— ———— ಉ ಆ

ಆದಾಯವು ಉದ್ದೇಶಕ್ಕೆ ಆಧೀನವಾಗಿದೆ. ಆದರೆ ಚಟುವಟಿಕೆಯಿಂದ ಅಭಿರುಚಿಯ ಕಡೆಗೆ ಪ್ರವಾಹವಿಲ್ಲ,

ಆರ್ಥಿಕ ಚಟುವಟಿಕೆಗಳಲ್ಲಿಯ ಕಾರ್ಯಕ್ಕಿಂತ ಕಡಿಮೆ ತರಗತಿಯ ಸ್ಥಾನವು 'ಕೂಲಿ'ಗೆ ದೊರೆಯುವದು. ಕೂಲಿಕಾರನ ಬೆಲೆಯು ಅವನಿಗೆ ಕೊಹತಕ್ಕ ಕೂಲಿಯ ಮೇಲೆ ಅವಲಂಬಿಸುವದೆಂಬ ನಾಣ್ನುಡಿಯದೆ. ಮತ್ತು ಸಾಮಾನ್ಯವಾಗಿ ಅವನಿಗೆ ಅದಕಿಂತ ಹೆಚ್ಚಿಗೆ ಕೂಲಿಯ, ಎಂದೂಸಿಕ್ಕು ವದಿಲ್ಲ. ಅವನು ಹುಟ್ಟಿಸುವ ವಸ್ತುವು ಅವನದಲ್ಲ. ಅದನ್ನು ಅವನು ಮಾರಲಾರ ಮತ್ತು ತನ್ನ ಮನೆಗೆ ಅದನ್ನು ಒಯ್ಯಲಾರ. ಉದ್ದೇಶದ ಉತ್ತೇಜಕ (motivating power) ಶಕ್ತಿಯು ತೀರ ಕಡಿಮೆಯಾಗುವದು. ಯಾಕಂದರೆ ಅವನ ಮನಸ್ಸಿನಲ್ಲಿ ಕೂಲಿಯ ವಿಚಾರವೇ ತುಂಬಿತುಳುಕುವದು.

ಅ

ಕೂಲಿ =

ಚ _____ ಅ ಉ

ಆದಾಯವು ಉದ್ದೇಶಕ್ಕಿಂತ ಹೆಚ್ಚು ಪ್ರಾಧಾನ್ಯವನ್ನು ಪಡೆದಿದೆ. ಅಭಿರುಚಿಯು ವಟಿಕೆಯ ಕಡೆಗೆ ತೀರ ಮಂದವಾಗಿ ಸಾಗುವದು. ಈ ತರದ ಪರಿಸ್ಥಿತಿಯಿಂದ ಕಾರರು ತಮ್ಮ ಕಾರ್ಯದಲ್ಲಿ ಸಾಕಷ್ಟು ಜಾಣ್ಮೆಯನ್ನಾಗಲಿ ಉತ್ಸಾಹವನ್ನಾಗಲಿ ರಿಸುವುದು ಸ್ವಾಭಾವಿಕ. ಅವರಿಂದ ಉತ್ತಮ ಫಲಗಳನ್ನು ಅಪೇಕ್ಷಿಸಬೇಕಾ ಲಾಭದಲ್ಲಿ ಕೆಲವಂಶವು ಅವರಿಗೆ ಸಿಗುವ ವ್ಯವಸ್ಥೆಯಿರಬೇಕೆಂದು ಆಧುನಿಕರ ಇದರಿಂದ ಕೂಲಿಕಾರರ ಧೋರಣವುಟ್ಟವು ಹೆಚ್ಚಿನ ತರಗತಿಯ ಕಾರ್ಯರಂಗಕ್ಕೆ ವದು.

ಕೂಲಿಯ ಕೆಳಗೆ ಉತ್ಸಾಹವಿಲ್ಲದ ಅಭಿರುಚಿಯಿಲ್ಲದ ತಾಂತ್ರಿಕ ಕೆಲಸವು ಬರುವದು. ದ ನಿರುತ್ಸಾಹಿ ಕೆಲಸವು ಶಾಲೆ, ಮನೆ, ಊಳಿಗತನ ಹೋರಿ ವ್ಯಾಪಾರೋದ್ಯೋಗ ಲಾದ ಎಲ್ಲ ಕಡೆಯಲ್ಲಿಯೂ ಕಂಡುಬರುವದು. ಮನೆಯ ಮಾಲಕಳು ಸ್ವಚ್ಛ ಮತ್ತು ವಸ್ಥಿತ ರೀತಿಯಿಂದ ಇಟ್ಟ ಪಾತ್ರೆಗಳನ್ನು ಆರೋಗ್ಯ ದೃಷ್ಟಿಯಿಂದ ಮತ್ತು ಕಲಾತ್ಮಕ ಯಿಂದ ಅವಶ್ಯಕತೆ ಮತ್ತು ಮಹತ್ವವನ್ನು ಚೆನ್ನಾಗಿ ಅರಿತವಳಾದರೂ ಅವುಗಳನ್ನು ಲು ಮೂರುಬಾರಿ ತಿಕ್ಕಿ ತೊಳೆದು ಒರಿಸಿ ವ್ಯವಸ್ಥಿತ ರೀತಿಯಿಂದ ಇಡುವ ಕೆಲಸವು ಅವ ೀರ ಅಸಹ್ಯವಾದುದಾಗಿರುವದು. ಶಿಕ್ಷಕರ ವರ್ಗದಲ್ಲಿಯ ಚಟುವಟಿಕೆಯು ಕಲಾತ್ಮಕ ಳಿಯ ಮೇಲಿದ್ದಾಗ್ಯೂ ದಿನಾಲು ಬರೆದ ನಿಬಂಧಗಳನ್ನು, ಟಿಪ್ಪಣಿ ಪುಸ್ತಕಗಳನ್ನು, ನ ಮತ್ತು ಇತರ ಪರೀಕ್ಷೆಗಳ ಉತ್ತರ ಕಾಗದಗಳನ್ನು ತಿದ್ದುವ ಕಾರ್ಯವು ಬೇಸರ ವಂಥದೂ ವೈವಿಧ್ಯರಹಿತವಾದುದೂ ಆಗಿರುವದು.

ಇದರ ಉಪಾಯವು ಆರ್ಥಿಕ ಪುನರ್ವ್ಯವಸ್ಥೆಯಿಂದ ಸಾಧ್ಯವಿಲ್ಲ. ಕಾರ್ಯವಾಹಕನು ಕಾರ್ಯವನ್ನು ಜರುಗಿಸುವಾಗಲೇ ಮುಕ್ತಿಯ ಮಾರ್ಗವನ್ನು ಕಂಡುಹಿಡಿಯಬೇಕು. ಕಾರ್ಯದಲ್ಲಿಯ ಮೇಲ್ತರದ ಅರ್ಥವನ್ನಾಗಲಿ ಹಿತವನ್ನಾಗಲಿ ಅವನು ಇನ್ನೂ ಕಂಡು ರಲಿಕ್ಕಿಲ್ಲ: ವಿಚಾರಿಸಲಿ. ಅವನಿಗೆ ಗೊತ್ತಿಲ್ಲದ ಅನೇಕ ತಂತ್ರಗಳು ಇನ್ನೂ ಇರಬಹುದು, ೋಗಗಳನ್ನು ಮಾಡಲಿ. ಸಂಗಡಿಗರು ಈ ಕಾರ್ಯದಲ್ಲಿ ನೆರವಾಗಬಹುದು. ಅದರಿ ೋಧವನ್ನಾದರೂ ಮಾಡಬಹುದು.

ಅ

ಕ್ರಿಕ ಬೇಸರಗೊಳಿಸುವ ಕೆಲಸ =

ಚ _____ ಉ ಅ

ಉದ್ದೇಶವು ಆದಾಯದ ವಿಚಾರವನ್ನು ಹಿಂದೂಡುವದು. ಅಭಿರುಚಿಯು ಚಟು ಕೆಯ ಕಡೆಗೆ ಸಾಗುವ ಕ್ರಿಯೆಯು ತುಂಬಾ ನಿಂತು ಹೋಗುವದು. ಉದ್ದೇಶವಿಷ್ಟೇ ಚಟುವಟಿಕೆಯನ್ನು ಪ್ರಚೋದಿಸಬೇಕು. ಆದ್ದರಿಂದಲೇ ಚಟುವಟಿಕೆಯಲ್ಲಿ ಹುರುಳಿಲ್ಲ.

ಕನಿಷ್ಟ ತರಗತಿಯ ಕಾರ್ಯಸ್ವರೂಪಕ್ಕೆ ತಲುಪಿದೆವೆಂದು ಊಹಿಸಬಹುದು. ಆ
ಇನ್ನೊಂದು ಸ್ಥಿತಿಯು ಉಳಿದಿದೆ. 'ಗುಲಾಮಗಿರಿ'. ಒಬ್ಬನು ಉದ್ದೇಶದಲ್ಲಿಯಾಗಲಿ ಚ
ವಟಿಕೆಯಲ್ಲಾಗಲಿ ಆಸ್ಥೆಯನ್ನು ತೋರಲಿಕ್ಕಿಲ್ಲ. ಆನಾಗ್ಯೂ ಅವನು ಆ ಚಟುವಟಿಕೆಯನ್ನು
ಮಾಡಿಯೇ ತೀರಬೇಕೆಂಬ ಸ್ಥಿತಿಯಿರಬಹುದು. ಶಾಲೆಯಲ್ಲಿಯ ಒಬ್ಬ ವಿದ್ಯಾರ್ಥಿಗೆ
ಶಿಕ್ಷಕನು ಹೇಳುವ ವಿಷಯದಲ್ಲಿ ಏನೂ ಅಭಿರುಚಿಯನ್ನು ತೋರಲಿಕ್ಕಿಲ್ಲ. ಆನಂದವನ್ನು
ಭವಿಸುವದಂತೂ ತೀರ ಅಸಂಭವವಿರಬಹುದು- ಇಂಥ ಪರಿಸ್ಥಿತಿಯಲ್ಲಿ ಅವನಿಗೂ ಗು
ಮನಿಗೂ ಯಾವ ಅಂತರವಿದೆ? ಗುಲಾಮನು ತನ್ನ ಕಾರ್ಯದ ಲಾಭವನ್ನಾಗಲಿ ಆನ
ವನ್ನಾಗಲಿ ಪಡೆಯುವ ಸಂಭವವಿರವೆ ತನ್ನ ಚಟುವಟಿಕೆಯಿಂದ ಯಾವ ಪ್ರಕಾರದ ಸ
ಧಾನವೂ ಅವನಿಗೆ ದೊರೆಯುವದಿಲ್ಲ.

ಗುಲಾಮಗಿರಿ = > ಚ_____ಉ

ಇಲ್ಲಿ ಅಭಿರುಚಿಗೆ ಸ್ಥಾನವೇ ಇಲ್ಲ. ಚಟುವಟಿಕೆ ಮತ್ತು ಉದ್ದೇಶಗಳ ನಡ
ಬಾಣದ ಚಿಹ್ನೆಗಳಿಲ್ಲ. ಚಟುವಟಿಕೆಯ ಎಡಭಾಗದಲ್ಲಿ ಒಂದು ಚಿಹ್ನೆವಿದೆ. ಅದು ಚ
ಮೇಲೆ ಬೀಳುವ ಒದಿಕೆಯಿಂದು ಸೂಚಿಸಬಹುದು. ಕಾರ್ಯಪ್ರವೃತ್ತಿಗೆ ಬಾಹ್ಯಸಾಧನಗ
ಅವಶ್ಯ.

ಮೇಲಿನ ವಿವೇಚನೆಯು ಕೇವಲ ತಾತ್ವಿಕ ಸ್ವರೂಪದ್ದಿರುವದಿಲ್ಲ; ಶಾಲೆಯ ವರ್ಗ
ಕೋಣೆಯಲ್ಲಿ ದಿನಾಲು ಶಿಕ್ಷಕರು ವಿದ್ಯಾರ್ಥಿಗಳು ಎದುರಿಸುವ ಸನ್ನಿವೇಶಗಳನ್ನು ಸ್ಪಷ್ಟ
ಕರಿಸುವದು. ಅದನ್ನು ವಿದ್ಯಾರ್ಥಿಗಳ ಮುಂದಿಟ್ಟರೆ ಕಾರ್ಯದತ್ತ ತಮ್ಮ ಧೋರಣೆ ಅಥ
ಪ್ರವೃತ್ತಿಯು ಯಾವ ತರಹದ್ದಿರುವದೆಂದು ತಿಳಿದುಕೊಳ್ಳಲು ಸಹಾಯವಾಗುವದು; ಕಲಾತ್ಮ
ಕೃತಿಯಲ್ಲಿ ಆದರ್ಶ ಧೋರಣೆಯು. ವ್ಯಕ್ತವಾಗುವದು ಮತ್ತು ಇಂಥ ಉಚ್ಚ ತರಗತಿಯ
ಮುಟ್ಟಲು ಯಾವ ನಿಯಮ ನಿರ್ಬಂಧಗಳೂ ಇರುವದಿಲ್ಲ. ಇಂಥವರೇ ಆ ಯೋಗ್ಯತೆ
ಅರ್ಹರೆಂಬ ಸಮಾಜ ನಿರ್ಬಂಧಗಳಾದ ಗುಪ್ತ-ಮತ-ಪದ್ಧತಿ ಅಥವಾ ಬೇಡಿದ್ದವರನ್ನ
ಕರೆಗುಂಡುಗಳಿಂದ ಬಹಿಷ್ಕರಿಸುವ ಯೋಜನೆಗಳಿರುವದಿಲ್ಲ. ಬೇಕಾದವನು ಸಾಹಸ ಮಾ
ಬಹುದು. ತಾನು ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿಯು ಆನಂದವನ್ನು ಪಡೆಯದಿದ್ದ
ಜೀವನದ ಸಂಜೀವನಿಯನ್ನು ಅವನು ಅನುಭವಿಸಲಾರ. ಇಂಥ ಆನಂದವನ್ನು ಅವ
ಅನುಭವಿಸದಿದ್ದರೆ ಮೊದಲು ತನ್ನನ್ನು ಕಾರಣವಾಗಿ ತಾನೇ ಪರಿಕಿಸಿಕೊಳ್ಳಬೇಕ
ಭಾಗಶ: ಶಿಕ್ಷಕನ ದೋಷದಿಂದಲೂ ಹೀಗಾಗುವ ಸಂಭವವಿರಬಹುದು. ವಿದ್ಯಾರ್ಥಿಗ
ತಮ್ಮ ಆಯುಷ್ಯದ ಅತ್ಯುತ್ತಮ ವೇಳೆಯನ್ನು ಶಿಕ್ಷಕರ ಸಹವಾಸದಲ್ಲಿ ಕಳೆಯುತ್ತಿರುವದರಿ
ಈ ವೇಳೆಯು ಅರ್ಥಗರ್ಭಿತವೂ ಮಹತ್ವಪೂರ್ಣವೂ ಸುಖಾವಹವೂ ಆಗುವಂತೆ ಹೊಣೆಯನ್ನ
ಚರಿಸುವದು ಬಹುತರವಾಗಿ ಶಿಕ್ಷಕರ ಮೇಲೆಯೇ ಇದೆ. ಶಾಲೆಯ ಸಮಗ್ರ ಕಾರ್ಯ
ಹೊಸಹೊಸದನ್ನು ಸೃಷ್ಟಿಸಿದೆವೆಂಬ ಜಿಜ್ಞಾಸ ಸ್ಫೂರ್ತಿಯಲ್ಲಿ ನಾಗದಿದ್ದರೆ, ಶಿಕ್ಷಕನೇ ಲೋ
ದೋಷಗಳನ್ನು ಹುಡುಕಿ ತೆಗೆಯಬೇಕು.

ಆಟಪಾಟಗಳು ಕಿಂಡರಗಾರ್ಟನ ಮತ್ತು ಪ್ರಾಥಮಿಕ ವರ್ಗಗಳಲ್ಲಿ ಸಮಾವೇಶ
ವಾಗಿವೆ. ಕೂಲಿಯುಂಡಿರುವ ಕಾರ್ಖಾನ್ಯಿ ಶಾಲೆಯಲ್ಲಿ ಅವಕಾಶವೇ ಇರಕೂಡದು; ಆ
ತಾಯಿತಂದೆಂದಿರು ಮಕ್ಕಳು ಪ್ರದರ್ಶಿಸುವ ಗುಣಾಗಳಿಗೆ ಹಣದ ರೂಪದಲ್ಲಿ ಉತ್ತೇಜನವನ್ನ
ಕೂಡ ಕೊಡುತ್ತಿದರೆ ಅಥವಾ ಶಿಕ್ಷಕರು ಇನಾಮು ಮುಂತಾದ ಕೃತ್ರಿಮ ಉತ್ತೇಜ

ನ್ನು ಇಟ್ಟರೆ ಅಡಕ್ಕೆ ಪ್ರವೇಶವು ದೊರೆಯಬಹುದು. ಕಾರ್ಯದಲ್ಲಿ ನಿರತರಾಗಿರುವದು ತ್ಯ ಸ್ಥಿತಿ. ನಾವು ಮೇಲಿಂದಮೇಲೆ ಅದರಲ್ಲಿ ತೊಡಗಿದರೂ ದೂಷಣೆಗೆ ಆಸ್ಪದವಿಲ್ಲ. ಡಿಯಿಂದ ಬಾಧೆಯಾಗಿದ್ದರೆ, ಅಥವಾ ಒಬ್ಬನಿಗೆ ಸಾಕಷ್ಟು ವಿಶ್ರಾಂತಿ ದೊರೆಯದೆ ಇದ್ದರೆ ವಾ ಉಳಿದ ಅನೇಕ ಕಾರಣಗಳ ಮೂಲಕವಾಗಿ ಕಲಾಪ್ರೇಮಿಯ ಉತ್ಸಾಹಕ್ಕೆ ಎರ ಗಬಹುದು. ಆದರೆ ಕಾರ್ಯವು ಅವ್ಯಾಹತವಾಗಿ ಸಾಗಬೇಕು. ಕೈಕೊಳ್ಳಬಹುದಾದ ಯೊಂದು ಚಟುವಟಿಕೆಯಲ್ಲಿ ತಾಂತ್ರಿಕ ಕಾರ್ಯವನ್ನು ಕೈಕೊಳ್ಳಬೇಕಾಗಬಹುದು, ರಿ ಎಷ್ಟು ಪ್ರಮಾಣದಲ್ಲಿ ಅದನ್ನು ಬರಗೊಡಬೇಕೆಂಬುದು ವೈಯಕ್ತಿಕ ಪ್ರಶ್ನೆಯಾಗಿದೆ. ನಿಗೆ ತಾಂತ್ರಿಕವಾದ ಕಾರ್ಯವು ಬೇರೊಬ್ಬನಿಗೆ ತುಂಬಾ ಅರ್ಥ ಅಥವಾ ಆಸ್ಥೆಯುಳ್ಳ ರ್ಯವಾಗಿ ಪರಿಣಮಿಸಬಹುದು. ತನ್ನ ಕಾರ್ಯವನ್ನು ರುಜಿಸಲು ಬೇಕಾಗುವ ತಿಳುವಳಿಕೆ ಬೇಕೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಕಾರ್ಯದ ಎಲ್ಲ ಅವಶ್ಯ ಸ್ವರೂಪಗಳು ರ್ಗಭರ್ಭಿತವಾಗಿರುವವು ಮತ್ತು ಅವುಗಳಲ್ಲಿ ಹಲವು ಕಲಾತ್ಮಕ ಗುಣಗಳಿಂದ ಕೂಡಿವೆ.

ಸಾಮಾನ್ಯ ಹೇತುಗಳು:

ಶಿಕ್ಷಣ ಕಾರ್ಯದಲ್ಲಿ ಸಾಮಾನ್ಯ ಹೇತುಗಳ ಸ್ಥಾನವು ಯಾವುದು? ಗುಲಾಮಗಿರಿಯ ೀರಣವನ್ನು ಸಹ ಶಾಲೆಯಲ್ಲಿ ಇರಗೊಡಬಹುದೋ? ಕೇವಲ ಬಲುಮೆಯಿಂದ ಒಬ್ಬ ವಿದ್ಯಾರ್ಥಿಯನ್ನು ಒಂದು ವಿಷಯವನ್ನು ಅಭ್ಯಾಸಿಸಲು ಹಚ್ಚಬಹುದೋ? ಪಠ್ಯಕ್ರಮದಲ್ಲಿ ವಿಷಯಕ್ಕೆ ಯೋಗ್ಯ ರೀತಿಯಿಂದ ಸ್ಥಾನವು ದೊರೆತಿದ್ದರೆ ಮತ್ತು ವಿದ್ಯಾರ್ಥಿಯಲ್ಲಿ ಅಸಾಧಾ ದೋಷಗಳಿಲ್ಲದೆ ಇದ್ದರೆ ನಿರ್ಭಯದಿಂದ ಹಚ್ಚಬಹುದು. ವಿದ್ಯಾರ್ಥಿಯಲ್ಲಿ ಸಾಮಾನ್ಯ ೀಗ್ಯತೆಯಿಲ್ಲದಿದ್ದರೆ, ಅವನಿಗೆ ತಕ್ಕುದಾದ ಶೈಕ್ಷಣಿಕ ಆಹಾರವನ್ನು ಪೂರೈಸಬೇಕು. ನ್ಯ ವಿದ್ಯಾರ್ಥಿಯಾಗಿದ್ದರೆ ಅವನಲ್ಲಿ ಹುದುಗಿಕೊಂಡಿದ್ದ ಶಕ್ತಿಗಳು ಕೂಡಲೆ ಜಾಗ್ರತ ಗುವವು. ವಿಷಯವನ್ನು ಕಲಿಸಲು ಯತ್ನಿಸುವ ಮೊದಲು ಆ ವಿಷಯದ ಬಗ್ಗೆ ಜಿಗು ಹುಟ್ಟುವದು ನಿರುಧಾರವಾದುದು. ಯಾವುದಾದರೊಂದು. ವಿಕಲ್ಪನೆಯೇ (ತಪ್ಪು ವಳಿಕೆ) ಅದಕ್ಕೆ ಕಾರಣವಾಗಿರಬಹುದು. ಒಮ್ಮೆ ವಿಷಯ ಪ್ರವೇಶವಾದ ಕೂಡಲೆ ವಿದ್ಯಾ ಯು ಅದರ ಹಿತವನ್ನು ಕಂಡು ಹಿಡಿದು, ಅಭಿರುಚಿಯನ್ನು ತೋರಿಸಿ ಉಚ್ಚತರದ ಪ್ರದೇಶದ ಮಟ್ಟಕ್ಕೆ ಏರಬೇಕು. ಹಾಗಾಗದಿದ್ದರೆ, ಎಲ್ಲಿಯೋ ದೋಷವಿರಬಹುದೆಂದು ಅದರ ಕಾರಣವನ್ನು ಹುಡುಕಲು ಹವಣಿಸಬೇಕು. ವಿದ್ಯಾರ್ಥಿಯನ್ನು ಬಹುಕಾಲ ಗುಲಾಮಸ್ಥಿತಿಯಲ್ಲಿ ವದು ಅವನಿಗೆ ಹಿತವಲ್ಲದೆ ಅಹಿತವನ್ನೇ ಉಂಟುಮಾಡುವದು. ವಿರೋಧಭಾವದಿಂದ ಸಿದ ಜ್ಞಾನವು ನಿಷ್ಫಲವಾಗುವದು. ಮತ್ತು ಗುಲಾಮಗಿರಿಯ ಘೋರಣವು ವಿದ್ಯಾ ಯ ವ್ಯಕ್ತಿತ್ವಕ್ಕೆ ಆಘಾತವನ್ನುಂಟು ಮಾಡಿ ಅದನ್ನು ಶಿಥಿಲೀಕರಿಸಬಹುದು.

ಪ್ರಾಥಮಿಕ ತರಗತಿಗಳಲ್ಲಿ ಹೇತುಪ್ರೇರಣೆ:— ಸಾಮಾನ್ಯಹೇತುಗಳು

ಪ್ರಾಥಮಿಕ ತರಗತಿಗಳಲ್ಲಿ ಮಾತ್ರ ವಿಶಿಷ್ಟ ಹೇತುಗಳು ಮೇಲಿನ ತರಗತಿಗಳಲ್ಲಿ ಚಟು ವಟಿಕೆಗಳನ್ನು ಉತ್ತೇಜಿಸುವವೆಂದು ಸಾಮಾನ್ಯ ಅನುಮಾನವನ್ನು ಹೊರಡಿಸಬಹುದು. ಗಳ ಬಾಹ್ಯ ವ್ಯಾಪಾರವನ್ನು ಅನುಲಕ್ಷಿಸಿದರೆ ಈ ಮಾತು ಸರಿದೋರಬಹುದು. ಪ್ರಾಥ ಕ ವಿದ್ಯಾರ್ಥಿಗಳ ಪ್ರಪಂಚವು ಪ್ರಾಮುಖ್ಯವಾಗಿ ವೈಯಕ್ತಿಕ ಸಂಬಂಧಗಳಿಂದ ಪ್ರೇರಿತ ಗಿರುವದು. ತಮ್ಮ ಹಿರಿಯರಲ್ಲಿ ಅಚಲವಾದ ನಂಬಿಗೆಯಿದ್ದು ಅವರನ್ನು ಸಂತೋಷಗೊ-

ಳಿಸಲೂ ಮತ್ತು ಅವರ ಸಲುವಾಗಿ ದುಡಿಯಲೂ ಸಿದ್ಧವಿರುವರು. ಸಾಮುದಾಯಕ ಸ
ನೆಗಳು ಅವರ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡುತ್ತಿವೆ. ಎರಡನೆಯ
ಮಾಡಿದಂತೆ ಮಾಡಲು ಅವರು ಉತ್ಸುಕರಾಗಿರುವರು. ಓದುಬರೆಹ ಲೆಖ್ಖಗಳು ಉಪಯು
ಯುಳ್ಳವುಗಳೆಂದು ತಿಳಿದು ಹಿರಿಯರ ಜಾಣ್ಮೆಯಲ್ಲಿ ಶ್ರದ್ಧೆಯನ್ನು ತೋರಿ ಅವರು ಸಿದ್ಧ
ಸಿದ ಪಠ್ಯಕ್ರಮವು ಇಷ್ಟವಾದುದೆಂದೂ ಯೋಗ್ಯವಾದುದೆಂದೂ ನಂಬುವರು. ಶಿಕ್ಷ
ಗುರಿಗಳ ಹಾಗೂ ಶೈಕ್ಷಣಿಕ ಫಲಿತಾಂಶಗಳ ಬಗ್ಗೆ ನಿಚಾರಿಸಿ ಶೋಧಿಸಲು ಇನ್ನೂ ಸಾಕ
ಅವಧಿಯಿರುವದು.

ಹೇತು ಪ್ರೇರಣೆಗಳ ಬಗ್ಗೆ ಇರುವ ತಪ್ಪು ತಿಳುವಳಿಕೆಗಳು:—

ಹೇತು ಪ್ರೇರಣೆಯ ಕ್ಷೇತ್ರವೆಲ್ಲಿ ಅನೇಕ ತಪ್ಪು ಅಥವಾ ಸಂಶಯಗ್ರಸ್ತ ಸಿದ್ಧಾಂತಗಳ
ಅವುಗಳ ಬಗ್ಗೆ ಶಿಕ್ಷಕರು ಜಾಗರೂಕರಾಗಿರತಕ್ಕದ್ದು.

(೧) ''ವಿದ್ಯಾರ್ಥಿಗಳ ಸ್ವಯಂ ಪ್ರೇರಿತ ಸ್ಫೂರ್ತಿಗಳೇ ಅವರ ಪಠ್ಯ ವಿಷಯಗಳ
ನಿರ್ಣಯಿಸಬೇಕು.'' ಸ್ಪೆನ್ಸರರ "ಅಭಿಪ್ರಾಯದಂತೆ ಮಗುವಿನ ಬೌದ್ಧಿಕ ಮೂಲ ಪ್ರವೃತ್ತಿಗ
ನಮ್ಮ ವಿಚಾರಸರಣಿಗಿಂತ ನಂಬಲರ್ಹವಾದವುಗಳು." ಚಟುವಟಿಕೆಯ ಶಾಲೆಯ ಪುರಸ್ಕ
ರಾದ 'ರಗ್‌ನಶ್ಯೂಮಂಕರ' ಇವರು '' ಪಠ್ಯಕ್ರಮವನ್ನು ಮೊದಲೇ ಸಿದ್ಧಗೊಳಿಸದೆ ಆಗಿ
ಗಲೇ ಸಮಯಕ್ಕನುಸರಿಸಿ ಮಗುಗಳ ಸ್ವಯಂ ಪ್ರೇರಿತ ಅಭಿರುಚಿಗಳ ಆಧಾರದ ಮೇಲೆ
ರಚಿಸಲ್ಪಡಬೇಕೆಂದು '' ಪ್ರತಿಪಾದಿಸುವರು.

ಆದರೆ ಮಗುಗಳ ಅಭಿರುಚಿಗಳನ್ನು ಉಪಯೋಗಿಸಬೇಕೆನ್ನುವದು ಅವುಗಳನ್ನೇ
ಲಂಬಿಸಬೇಕೆನ್ನುವ ವಿಧಾನದಿಂದ ತೀರ ಭಿನ್ನವಾಗಿದೆ. ಮಗುಗಳ ಅಭಿರುಚಿಗಳನ್ನು
ಣದ ಮೂಲಾಧಾರಗಳನ್ನು ಮಾಡಿಕೊಂಡು ವರ್ಗದ ಎದುರಿನ ಸಮಸ್ಯೆಗಳನ್ನು ಬಿಡಿಸುವ
ಜೀವಕಳೆಯನ್ನು ತುಂಬುವದೂ ಸಾಧ್ಯವಿದ್ದಾಗ್ಯೂ ಅವರ ಚಂಚಲವಾದ ಸ್ವೇಚ್ಛೆಗನುಸಾರ
ಪಠ್ಯಕ್ರಮವನ್ನು ರಚಿಸಬೇಕೆಂದು ಯಾವ ಶಿಶುವಿನ ಮಾನಸಶಾಸ್ತ್ರದಲ್ಲೂ ಉಲ್ಲೇಖಿಸಿಲ್ಲ.
ಕ್ರಮವೆಂದರೆ ಬಾಲಕರಿಗೆ ಇನ್ನೂ ಕಲ್ಪನೆಯಿಲ್ಲದ ಸುಧಾರಣೆಗೆ ಅವಶ್ಯವಿರುವ ಎಲ್ಲ ಲ
ಕಲೆಗಳ, ಕ್ರಮಗಳ, ಜ್ಞಾನಾಂಶಗಳ, ಆದರ್ಶಧ್ಯೇಯಗಳ, ಕಿರಿಯ ಪ್ರಪ
ವಿದ್ದಂತೆ. ಅದನ್ನು ರಚಿಸುವದು ಪ್ರೌಢರ ಸಾಮೂಹಿಕ ಜಾಣ್ಮೆಗೆ ಆಹ್ವಾನವಿದ್ದಂತೆ
ಸರಿ. ಮಗುವಿಗೆ ಬೇಕಾಗುವ ವಿಷಯಗಳನ್ನು ಒಮ್ಮೆ ನಿರ್ಧರಿಸಿದ ಮೇಲೆ ಮಗುವಿನ ಸ್ವಭಾ
ಮತ್ತು ಶೈಕ್ಷಣಿಕ ಪರಿಸ್ಥಿತಿಯು ಪಠ್ಯ ವಿಷಯಗಳ ಜೋಡಣೆ, (ಹೊಂದಿಕೆ) ವಿಷಯಾ
ಸಂಘಾನ, ಕಲಿಸುವ ಕ್ರಮಗಳು- ಮುಂತಾದವುಗಳನ್ನು ನಿಶ್ಚಯಿಸುವದು, ಪ್ರಾಥಮಿಕ ಶ
ಗಳಲ್ಲಿ ಇತಿಹಾಸವನ್ನು ಕಲಿಸಬೇಕೋ ಇಲ್ಲವೊ ಎಂಬುದನ್ನು ಹಿರಿಯರೇ ನಿರ್ಣಯಿಸಬೇ
ಕಲಿಸಬೇಕೆಂದು ನಿರ್ಣಯವಾದ ಮೇಲೆ ವಿದ್ಯಾರ್ಥಿಗಳ ಸ್ವಭಾವ, ವಿಕಾಸಗಳನ್ನು ಅನುಲಕ್ಷಿ
ಆ ವಿಷಯದ ಯಾವ ಭಾಗದಲ್ಲಿ ಎಷ್ಟನ್ನು ಯಾವ ಇಯತ್ತೆಯಲ್ಲಿ ಕಲಿಸಬೇಕು ಎಂಬುದ
ಗೊತ್ತುಪಡಿಸಬೇಕು.

(೧) "ಅಭಿರುಚಿಯ ತತ್ವ"ದ ಅಪಾರ್ಥದಿಂದ ಬೇರೊಂದು ತಪ್ಪು ತಿಳುವಳಿಕೆಯುಂಟಾ
ಗಿದೆ. ಈ ತತ್ವದ ಅರ್ಥ ''ಹೇಗಾದರೂ ಮಾಡಿ, ಎಂಥ ಪ್ರಸಂಗ ಬಂದರೂ, ವಿಷಯವನ್ನ
ಮಕ್ಕಳಿಗೆ ರುಚಿಸುವಂತೆ ಮಾಡಬೇಕೆಂದು ಅಂದರೆ ಸಕ್ಕರೆಯನ್ನು ತೊಡೆಯಬೇಕೆಂದು
ಮಾಡಿಕೊಳ್ಳುವರು. ಈ ತತ್ವದ ಇತಿಹಾಸವೇ ಬೇರೆಯಾಗಿದೆ.

ಡೆಯ ಭಾಗದಲ್ಲಿ ಪ್ರಚಲಿತವಿದ್ದ ಔಪಚಾರಿಕ (ತಾಂತ್ರಿಕ) ಸಿದ್ಧಾಂತ ತತ್ವಕ್ಕೆ ರೋಧವಾಗಿ ಅಭಿರುಚಿಯ ತತ್ವವನ್ನು ಮುಂದೆ ಮಾಡಿದರು. ನಿಜವಾಗಿ ಆ ತತ್ತ್ವಕ್ಕೆ ಷಯಗಳ ಅರ್ಥಕಾರಿತ್ವ'ವೆಂಬ ಹೆಸರನ್ನು ಇಡಬೇಕಾಗಿತ್ತು. ಕಲಿಯತಕ್ಕ ವಿಷಯವು ಭಿರುಚಿಯನ್ನು ತೋರಿಸಲು ಅರ್ಹವಾಗಿರಬೇಕು. ಆದರೆ ಅದು ಹುಡುಗರ ಚಿತ್ರವನ್ನು ಕರ್ಷಿಸುವದೋ ಇಲ್ಲವೋ ಎಂಬುದು ಬೇರೆ ಕೆಲವು ಕಾರಣಗಳನ್ನು ಅವಲಂಬಿಸಿರುವದು. ಕ್ರಮದಲ್ಲಿ ಆ ವಿಷಯವು ತಪ್ಪಿ ಪ್ರವೇಶವನ್ನು ಸಾಧಿಸಿರಬಹುದು ಅಥವಾ ಶಿಕ್ಷಕನು ರಸವಾದ ಜೀವವಿಲ್ಲದ ಔಪಚಾರಿಕ ರೀತಿಯಿಂದ ಅಭಿರುಚಿಯ ಕೊಲೆಯನ್ನು ಮಾಡುತ್ತಿ ಬಹುದು. ಮಗುಗಳನ್ನು ಆಸಕ್ತರನ್ನಾಗಿ ಮಾಡಲು ಬಾಹ್ಯ ಸಾಧನಗಳಿಗೆ ಸ್ಥಾನವಿದೆಯೆಂದು ಅಭಿರುಚಿಯ ತತ್ತ್ವದಲ್ಲಿ ಧ್ವನಿತವಾಗಿಲ್ಲ.

ಬಾಲಕರನ್ನು ರಂಜಿಸಲು ಬಾಹ್ಯ ಸಾಧನಗಳನ್ನು ಧಾರಾಳವಾಗಿ ಉಪಯೋಗಿಸಹತ್ತಿದರೆ ಸಕ್ಕರೆಯಿಂದ ತೊಡೆಯುವದೆಂಬ'' ಕಲ್ಪನೆಯು ಮುಂದೆ ನಿಲ್ಲುವದು. ಔಷಧೋಪಚಾರ ಲ್ಲಿಯ ಅರ್ಥವೇ ಇಲ್ಲಿ ವ್ಯಕ್ತವಾಗುವದು. ಕಹಿಯಾದ ಗುಳಿಗೆಯನ್ನು ಸೇವಿಸಲು ಅನು ಲವಾಗುವಂತೆ ಹೇಗೆ ಸಕ್ಕರೆಯಲ್ಲಿ ಹೊರಳಿಸುವರೋ ಹಾಗೆಯೇ ಅಸಹ್ಯ ಅಥವಾ ಬೇಡಾದ ಕ್ಷಣ ವಿಷಯವನ್ನು ಮನರಂಜನ ಕ್ರಮದಲ್ಲಿ ರೂಪಾಂತರಿಸಿ ಮಕ್ಕಳಿಗೆ ತೀವ್ರ ಗ್ರಾಹ್ಯವಾಗು ಂತೆ ಮಾಡುವರು. ಬುಗ್ಗೆಯ ಅಥವಾ ಪುಟಿಯುವ ಸೆಲೆಗಳ ಕಲ್ಪನೆಯನ್ನು ಬಾಲಕರ ನಸ್ಸು ಹಿಡಿಯುವಂತೆ ಮಾಡಬೇಕೆಂಬ ಶಿಕ್ಷಕನು ವರ್ಗದಲ್ಲಿ ಜೀಕಳೆಯನ್ನು ತಂದು ಅವರ ನಸ್ಸನ್ನು ನಿಃಸಂಶಯವಾಗಿ ರಮಿಸಬಹುದು. ಯಾಕಂದರೆ ಮರುದಿವಸ ವಿದ್ಯಾರ್ಥಿಗಳು ಂಥ ನೀರಿನ ಚಲ್ಲಾಟವನ್ನೇ ಬಯಸಿದರು. ಆದರೆ ಬುಗ್ಗೆಯ ತತ್ವದ ಬಗ್ಗೆ ಮಾತ್ರ ಯಾದ ಕಲ್ಪನೆಯನ್ನು ಮಾಡಿಕೊಡಲಿಲ್ಲ. ಬುಗ್ಗೆಯ ತತ್ವಕ್ಕೂ ಜೀಕಳೆಯ ತತ್ವಕ್ಕೂ ಾವ ಸಮಾನ ಧರ್ಮವೂ ಇರಲಿಲ್ಲ. ಕೆಲವು ಶಿಕ್ಷಕರು ಬಾಹ್ಯ ಸಾಧನೆಯನ್ನು ಉಪ ೋಗಿಸದೆ ದಾರದಿಂದ ಕುಣಿಸುವ ಶಿಕ್ಷಣ ಸೂತ್ರದ ಗೊಂಬೆಗಳಾಗಿ ಅದೇ ಪರಿಣಾಮವನ್ನು ಂಡಿಸುವರು.

'ಸಕ್ಕರೆ ತೊಡೆಯಿಸುವದನ್ನು' ಶೈಕ್ಷಣಿಕ ತತ್ತ್ವವೆಂದು ಯಾರೂ ಗ್ರಹಿಸುವದಿಲ್ಲ. ಆದರೆ ಲವು ಶಿಕ್ಷಕರು ಆ ಬಲೆಯಲ್ಲಿ ಸಹಸಾ ಬೀಳುವರು. ಪ್ರಸಂಗಾನುಸಾರವಾಗಿ ವರ್ಗದ ಕ್ಷ್ಯವನ್ನು ಪ್ರಥಮತಃ ಸೆಳೆಯುವಾಗ ಬಾಹ್ಯ ಸಾಧನವನ್ನಾಗಲಿ ಅಸಾಧಾರಣ ಮುಖಮುದ್ರೆ ನ್ನಾಗಲಿ ಶಿಕ್ಷಕನು ಉಪಯೋಗಿಸುವದು ಅಕ್ಷಮ್ಯವೆನಿಸಲಾರದು. ಆದರೆ ಕೂಡಲೆ ಅವರ ಕ್ಷ್ಯವನ್ನು ಕೈಕೊಂಡ ಸಮಸ್ಯೆಯ ತಿರುಳಿನ ಕಡೆಗೆ ಬದಲಿಸಿ ವಿಷಯವನ್ನು ಸಾಗಿಸಬೇಕು.

ಕಲಿಯುವಹಣ ಸ್ವಾರಸ್ಯವುಳ್ಳದುದನ್ನು ಕಲಿಯುವೆನೆಂಬ ಮನವರಿಕೆಯಾಗದ ಹೊರ್ತು ಲಿಯುವದರಲ್ಲಿ ಅಭಿರುಚಿಯು ಹುಟ್ಟಲಾರದು. ಅಭಿರುಚಿಯೆಂದರೆ ಉಳಿದ ಮಹತ್ವವುಳ್ಳ ತಿಗಳಲ್ಲಿ ಕಂಡು ಬಂದಂತೆ ಅರ್ಥವುಳ್ಳ ವಿಷಯವನ್ನು ಕಲಿಯುತ್ತಿರುವೆನೆಂಬ ಮನಃ ತಿ ವಿದ್ಯಾರ್ಥಿಗಳು ಕೈಕೊಳ್ಳುವ ಚಟುವಟಿಕೆಯ ಮಹತ್ವವನ್ನು ತಿಳಿಸಿ ಕೊಡುವದೇ ಅವ ಲ್ಲಿ ಅಭಿರುಚಿಯನ್ನು ಹುಟ್ಟಿಸುವ ರಾಜಮಾರ್ಗವೆಂದು ಸ್ಪಷ್ಟವಾಗುವದು. ಮಹತ್ವವು ಮ್ಮೆ ತಿಳಿಯಿತೆಂದರೆ ಅವರ ಜಾಗ್ರತ ಲಕ್ಷ್ಯವು ವಶದಲ್ಲಿ ಬಂದು ಹೇಳಿದ ಕಾರ್ಯವನ್ನು ಮಾಡಲು ಅವರು ಸಿದ್ಧರಾಗುವರು.

ಪ್ರಯತ್ನ ಮತ್ತು ಪ್ರಯತ್ನದ ತತ್ವ:—

ವಾಡಿಕೆಯಾಗಿ ಉಪಯೋಗಿಸುತ್ತಿರುವ ಆಭಿರುಚಿ ಮತ್ತು ಪ್ರಯತ್ನಗಳಲ್ಲಿ ಯ ವಿರೋಧವೂ ಇಲ್ಲ. ಈ ಅರ್ಥದಲ್ಲಿ ಪ್ರಯತ್ನವು ಅಭಿರುಚಿಯ ಸರಪಳಿಲ್ಲಿಯ ಒಂದು ಕೊ ಯಾಗಿರುವದು. ಧ್ಯೇಯದಲ್ಲಿ ಅಭಿರುಚಿಯು ಹೆಚ್ಚಾಗುತ್ತ ಹೋದಂತೆ ಧ್ಯೇಯಸಾ ಗಾಗಿ ಹೆಚ್ಚು ಹೆಚ್ಚು ಪ್ರಯತ್ನವು ಮಾಡಲ್ಪಡುವದು. ಆತಂಕಗಳಿಂದ ಸಂತಪ್ತರಾಗಿ ನ ಹೃದಯದ ಬಯಕೆಯನ್ನು ಈಡೇರಿಸಲು ಭಗೀರಥ ಪ್ರಯತ್ನ ಮಾಡಲು ಹಿಂಜರಿಯುವ ಆಸಕ್ತ ಮತ್ತು ಆಚ್ಛೆಗೊಳಗಾಗದ ವಿದ್ಯಾರ್ಥಿಯು ಪ್ರಯತ್ನಕ್ಕೆ ಎಂದೂ ಅನುಮಾನಿಸ ದಿಲ್ಲ. ಪ್ರಯತ್ನ, ಕಠೋರ ಪ್ರಯತ್ನವು ಸಹ, ಸುಖಾವಹವಾಗಿರುವದು. ಅದರಲ್ಲಿ ನಮ್ಮ ಆನಂದಾತಿಶಯ; ಆದರೆ ಆ ಪ್ರಯತ್ನವು ಸಹೇತುಕ ಮಾತ್ರ ಇರಲಕ್ಕದ್ದು. ಮ ಆ ಪ್ರಯತ್ನದ ಫಲವಾಗಿ ಯಾವುದಾದರೊಂದು ಮಹತ್ವದ ಫಲವು ಸಿಗಬೇಕು.

ಪ್ರಯತ್ನದ ಬಗ್ಗೆ ಇದಕ್ಕೆ ತೀರ ವಿರುದ್ಧವಾದ ವಿಚಾರವೊಂದಿದೆ. ಉದ್ದೇಶ ಸಾಧನೆ ವಿಚಾರವಿಲ್ಲದೆ ಕೇವಲ ಪ್ರಯತ್ನ ಮಾಡಬೇಕೆಂಬ ಬುದ್ಧಿಯಿಂದ—ನಿರಪೇಕ್ಷ ಬುದ್ಧಿಯಿ ಪ್ರಯತ್ನವನ್ನು ಮಾಡತಕ್ಕದ್ದು. ಈ ವಿಚಾರವನ್ನು ವಿಲಿಯಂ ಜೇಮ್ಸರೆಂಬವರು ಪ್ರತಿಪಾ ಸುತ್ತಾರೆ.

ಪ್ರಯತ್ನಕ್ಕಾಗಿ ಪ್ರಯತ್ನ—ನಿರಪೇಕ್ಷ ಪ್ರಯತ್ನ ಮತ್ತು ಫಲಾಪೇಕ್ಷೆಯಿದ್ದ ಪ್ರಯ ಇವೆರಡೂ ವಾದಗಳು ಬೀಜ ವೃಕ್ಷ ನ್ಯಾಯದಂತೆ, ದ್ವೈತ-ಅದ್ವೈತದ ಪ್ರಶ್ನೆಯಂತೆ, ಗಾಗಿ ಕಲೆ. ಉಪಯುಕ್ತ ಹಾಗೂ ಉದ್ದಿಶ್ಯ ಪೂರ್ಣಕಲೆ ಎಂಬಂತೆ ನಡೆದೇ ಇವೆ. ಇವೆರಡ ವಾದಗಳನ್ನು ಯಾರೂ ಅಲ್ಲಗಳೆದಿಲ್ಲ ಮತ್ತು ಸರಿಯಾಗಿ ಸಿದ್ಧಪಡಿಸಿಲ್ಲ. ಇವು ಒಂದನ್ನೊಂ ವಿರೋಧಿಸುತ್ತವೆಂಬುದು ಸ್ಪಷ್ಟವಾಗಿದೆ. ಪ್ರಯತ್ನದ ಸಲುವಾಗಿಯೇ ಪ್ರಯತ್ನವನ್ನು ಮಾ ಸಬೇಕೆಂಬ ತತ್ತ್ವವು ಪೂರ್ವದ ಶಾಲೆಗಳಲ್ಲಿ ಕಂಡು ಬಂದಾಗ್ಯೂ ಆಧುನಿಕ ಶಾಲೆಗಳಲ್ಲಿ ತತ್ತ್ವವು ವಾಯುವಾಗಿದೆ. ಉದ್ದೇಶ ರಹಿತ ಜಟುವಟಿಕೆಗಳಲ್ಲಿ ತೊಡಗಲು ವಿದ್ಯಾರ್ಥಿಗಳ ಬಯಸುವುದಿಲ್ಲ. ಈಗಿನ ಶಿಕ್ಷಕರೂ ಅಂಥ ಗೋಜಿಗೆ ಹೋಗುವುದಿಲ್ಲ. ಕ್ರಿಯಾಶಕ್ತಿಯನ್ನ ಹೇಗೆ ಮಿತಿಯಿಂದ ಉಪಯೋಗಿಸಿ ಅತ್ಯುತ್ತಮ ಫಲಗಳನ್ನು ಪಡೆಯಬೇಕೆಂಬುದೇ ಎಲ್ಲ ಆದರ್ಶ, ಹಂಬಲ, ಜುಕ್ಕಾಣಿಯಾಗಿದೆ. *

---

* ವಿಲಿಯಂ ಕಾರ್ಲ ರುಣಿಜರ ಅವರ ಬೋಧನೆಯ ಆಧಾರದಿಂದ

ವಿಧಾನದ ತರ್ಕಬದ್ಧ ಹಾಗು ಮಾನಸಶಾಸ್ತ್ರೋಕ್ತ ರೀತಿಗಳು

ಅವ್ಯವಸ್ಥಿತ ವಿಚಾರ—ತರ್ಕಬದ್ಧ ವಿಚಾರ

ವಿದ್ಯಾರ್ಥಿಗಳ ಸಹಕಾರ

ಕೊಟ್ಟ ವಿಷಯದ ಬಗೆಗೆ ವಿದ್ಯಾರ್ಥಿಗಳಲ್ಲಿದ್ದ ಅವ್ಯವಸ್ಥಿತ ವಿಚಾರ ಹರಕುಮುರುಕು ಕಲ್ಪನೆಯಿಂದ ತರ್ಕಬದ್ಧ ಕಲ್ಪನೆಗೆ ಅವರ ಸಹಕಾರವನ್ನು ಪಡೆಯುತ್ತ ಸಾಗುವುದೇ ಯಶಸ್ವಿ ಲಕ್ಷಣದ ಗುಟ್ಟು. ಕೇವಲ ವಿಷಯಕ್ಕೇ ಪ್ರಾಧಾನ್ಯವನ್ನು ಕೊಟ್ಟು, ಪ್ರಾರಂಭದಿಂದಲೂ ತರ್ಕಬದ್ಧ ಸ್ವರೂಪವನ್ನೇ ಮುಂದಿಟ್ಟುಕೊಂಡು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ವಿಷಯವನ್ನು ಹೇರಹೋದರೆ ಅದು ತರ್ಕಬದ್ಧ ಪದತ್ಥಿಯ ವಿಪರ್ಯಾಸಮಾಡಿದಂತಾಗುವದು. ಅದರಂತೆಯೇ ಬಾಲಕರು ವಿಷಯವನ್ನು ಎಷ್ಟೇ ಮನದಟ್ಟಾಗುವಂತೆ ಗ್ರಹಿಸಿದರೂ ನಾವು ವಿಷಯವನ್ನು ಅಸ್ತವ್ಯಸ್ತ ರೂಪದಲ್ಲಿಯೇ ಉಳಿಯಗೊಟ್ಟರೆ, ಅದರಿಂದ ಮಾನಸ ಶಾಸ್ತ್ರೋಕ್ತ ರೀತಿಯೆ ನಿರರ್ಥಕವಾದಂತಾಗುವದು.

ತರ್ಕಬದ್ಧ ರೀತಿ:—ಸ್ಪಷ್ಟ ಜ್ಞಾನವುಂಟಾಗಬೇಕಾದರೆ, ನಾವು ಕಲಿಸುವಾಗ, ಕಲಿಯುವಾಗ ತರ್ಕಬದ್ಧ ರೀತಿಯನ್ನು ಅಂಗೀಕರಿಸಲೇಬೇಕು. ಉದಾಹರಣಾರ್ಥವಾಗಿ, ವಿದ್ಯಾರ್ಥಿಗಳ ಸಹಕಾರದಿಂದ ಕೆಲವು ಐತಿಹಾಸಿಕ ಘಟನೆಗಳ ಕಾರಣಗಳನ್ನು ಅಸ್ತವ್ಯಸ್ತವಾಗಿ ಕಲೆಹಾಕಿದ ಮೇಲೆ ಅವುಗಳನ್ನು ಅಚ್ಚುಕಟ್ಟಾಗಿ ತರ್ಕಬದ್ಧ ರೀತಿಯಿಂದ ಹೊಂದಿಸಬೇಕು.

ಮಾನಸಶಾಸ್ತ್ರೋಕ್ತ ರೀತಿ:— ಎಷ್ಟೋ ಸಲ ಶಿಕ್ಷಣ ತಜ್ಞರು "ವಿಷಯವನ್ನು ಕಲಿಸಬೇಡಿರಿ; ಆದರೆ ಬಾಲಬಾಲಿಕೆಯರು ಕಲಿಯುವಂತೆ ಮಾಡಿರಿ" ಎಂದು ಸಾರಿ ಹೇಳಿದ್ದಾರೆ. ಇದರ ಅರ್ಥವೇನು? ಇದರಿಂದ ಯಾವ ವಿಷಯವನ್ನು ವಿದ್ಯಾರ್ಥಿಗಳಿಗೆ ಕಲಿಸದೆ ಕಲಿಸಿರಿ ಎಂಬ ಅರ್ಥವು ಎಂದೂ ಹೊರಡಲಾರದು. ಆದರೆ ಕಲಿಸುವಾಗ ಶಿಕ್ಷಕನು ವಿಷಯ ವಿಸ್ತರಣದ ಬಲೆಯಲ್ಲಿ ಮಾತ್ರ ಸಿಲುಕದೆ ಕಲಿಯುವವರ ಮಾನಸಿಕ ವಿಕಾಸದ ಕಡೆಗೆ ಹೆಚ್ಚು ಲಕ್ಷ ಕೊಡಬೇಕೆಂದು ಅರ್ಥಮಾಡಿಕೊಳ್ಳಬೇಕು. ಶಿಕ್ಷಕನಿಗೆ ವಿಷಯದಲ್ಲಿ ಇದ್ದಷ್ಟು ಆಸ್ಥೆಯು ವಿದ್ಯಾರ್ಥಿಗಳ ಬಗ್ಗೆಯೂ ಇರದಿದ್ದರೆ, ಕಲಿಯುವ ಕಾರ್ಯವು ಜೀವಾಳವಾಗಿ ನಡೆದಿಲ್ಲವೆಂದು ತಿಳಿಯಬೇಕು. ವಿದ್ಯಾರ್ಥಿಗಳಲ್ಲಿ ಸಂಪೂರ್ಣ ಸಹಕಾರ, ಆಸ್ಥೆ, ಗ್ರಹಣ-ತಿಳಿವಳಿಕೆ ಇವು ಉಂಟಾಗುವಂತೆ, ಶಿಕ್ಷಕನು ಬೇರೆ ಬೇರೆ ಕ್ರಮಗಳನ್ನನುಸರಿಸುತ್ತ ವಿಷಯವನ್ನು ಕಲಿಸಬೇಕು. ಕಲಿಸುವ ವಿಷಯದ ಪೀಠಿಕೆಯು ಶಿಕ್ಷಕನ ಜ್ಞಾನದ ಮಟ್ಟದಿಂದ ಮೊದಲಾಗದೆ ವಿದ್ಯಾರ್ಥಿಗಳ ಮಟ್ಟದಿಂದ ಪ್ರಾರಂಭವಾಗಬೇಕು. ವಿದ್ಯಾರ್ಥಿಗಳ ಜ್ಞಾನದ ಮಟ್ಟನ್ನು ತಿಳಿದುಕೊಂಡ ಮೇಲೆಯೇ ಶಿಕ್ಷಣವು ಮುಂದುವರಿಯಬೇಕು. ಪ್ರಾಣಿಶಾಸ್ತ್ರದ ಪಾಠವನ್ನು ಪ್ರಾರಂಭಿಸುವಾಗ ಶಿಕ್ಷಕನು ಪ್ರಾಣಿಗಳ ಮತ್ತು ಸಸ್ಯಗಳ ಬಗ್ಗೆ ಆ ವಿದ್ಯಾರ್ಥಿಗಳಿಗೆ ಏನು ಗೊತ್ತಿದೆ? ಅವುಗಳ ಕೂಡ ಅವರ ಸಂಬಂಧವೆಷ್ಟು? ಅವರ ಸದ್ಯದ ಅಭಿರುಚಿಗಳಾವುವು? ಮುಂತಾದ ಚರ್ಚೆಯನ್ನು ಸ್ವಲ್ಪಾವಧಿಯನಕಿಗೆ ಸಾಗಿಸಬೇಕು. ಇದರಿಂದ ಬಾಲಕರ ಸಹಕಾರ ಮತ್ತು ಹೊಸಜ್ಞಾನದ

ಬಗ್ಗೆ ಅವರಲ್ಲಿ ಆಭಿರುಚಿ ಮುಂತಾದುವು ಉಂಟಾಗುವವು. ವಿಷಯವನ್ನು ಪ್ರಾರಂಭಿಸ
ತಕ್ಕ ಸಮಯವನ್ನು ಪ್ರಸಂಗವನ್ನು ಹುಡುಕಿ ಕಲಿಸಲು ಯತ್ನಿಸಬೇಕು. ಸುಗ್ಗಿಯು ಸ
ಮೇಲೆ ಸುಗ್ಗಿಯ ಬಗ್ಗೆ, ಅಥವಾ ಮಳೆಗಾಲವು ಮುಗಿದು ಹೋದ ಮೇಲೆ ಮಳೆಗಾಲ
ವರ್ಣನೆ ಮಾಡಲು ಯತ್ನಿಸುವ ತಪ್ಪನ್ನು ಶಿಕ್ಷಕನು ಎಂದೂ ಮಾಡಬಾರದು. ವಿದ್ಯಾರ್ಥಿ
ಗಳ ಸಾಮಾನ್ಯವಾದ ಆಭಿರುಚಿ, ಅನುಕೂಲ ಘಟನೆ, ಶಿಕ್ಷಕನ ಚಾಣಾಕ್ಷತನ ಇವುಗ
ಶ್ರೀವೇಣೀಸಂಗಮದಿಂದ ಯೋಗ್ಯ ಪಾಠದ ಪ್ರಸ್ತಾವನೆಯು ಹದಗೊಳ್ಳುವುದು.

ಪೃಥ್ವಿಯ ಮುಖ್ಯ ಭಾಗಗಳು, ಖಂಡಗಳು, ದೇಶಗಳು, ಪ್ರಾಂತಗಳು ಮುಂತಾ
ರೀತಿಯಿಂದ ಭೂಗೋಲ ಜ್ಞಾನವನ್ನು ಕೊಡಬಯಸಿದರೆ, ತರ್ಕಬದ್ಧ ಪದ್ಧತಿಯನ್ನು ಅ
ಲಂಬಿಸಿದಂತಾಗುವದು. ಅದೇ ವಿಷಯವನ್ನು ಬಾಲಕರಿಗಿರುವ ತಮ್ಮ ಹಳ್ಳಿಯ ಜ್ಞಾ
ದಿಂದ ಜಿಲ್ಲೆ, ಪ್ರಾಂತ, ಇಲಾಖೆ, ದೇಶ, ಖಂಡಗಳ ಜ್ಞಾನ ಈ ರೀತಿ ಸಾಗಿದರೆ ಮಾನ
ಶಾಸ್ತ್ರೋಕ್ತ ಪದ್ಧತಿಯಾಗುವುದು. ಇವೆರಡೂ ಕಲಿಸುವ ಪದ್ಧತಿಯ ಬೇರೆ ಸ್ವರೂಪಗಳ
ಹೊರತು ಸ್ವತಂತ್ರವಾದ ಬೇರೆ ಮಾರ್ಗಗಳಲ್ಲ ಅಥವಾ ಕ್ರಮಗಳಲ್ಲ. ವಿದ್ಯಾರ್ಥಿಗಳ ಮಾನಸಿ
ಸ್ಥಿತಿಯನ್ನು ಅನುಸರಿಸಿ ಆಯಾ ಕ್ರಮಗಳನ್ನು ಉಪಯೋಗಿಸಬೇಕು. ಚಿಕ್ಕ ಮಕ್ಕಳಿಗೆ ಕ
ಸುವಾಗ ಮಾನಸಶಾಸ್ತ್ರೋಕ್ತ ರೀತಿಯು ಹಿತಕರವಾದರೆ, ಪ್ರೌಢವಿದ್ಯಾರ್ಥಿಗಳಿಗೆ ತರ್ಕಬದ್ಧ
ರೀತಿಯು ಹೃದಯಂಗಮವಾಗುವುದು. ಹೀಗಿದ್ದರೂ ಒಂದು ರೀತಿಯು ಮತ್ತೊಂದು
ರೀತಿಗಿಂತ ಶ್ರೇಷ್ಠವೆಂದು ಗಣಿಸಲಾಗದು.

ವಿಷಯವನ್ನು ವಿದ್ಯಾರ್ಥಿಗಳ ಸ್ವಾಭಾವಿಕ ಸಹಕಾರದಿಂದ ಹೊರಡಿಸಿ ಅದ
ಸುಸಂಬದ್ಧವಾಗಿ ಸರಿಪಡಿಸುವುದೇ ಶಿಕ್ಷಣದ ಪ್ರತ್ಯಕ್ಷ ಪದ್ಧತಿಯ ತಿರುಳಾಗಿದೆ.

ಚಾಲನ ತಂತುಗಳ ನಿಯಂತ್ರಣವನ್ನು ಕಲಿಸುವುದು

(Teaching Motor Control)

ಜಾಣ್ಮೆಯನ್ನು ತೋರಿಸುವ ಕಾರ್ಯಗಳನ್ನು ಕಲಿಸಿ, ಅವುಗಳನ್ನು ಬಾಲಕರಲ್ಲಿ ಸ್ಥಿ
ಗೊಳಿಸಲು ಪ್ರತ್ಯಕ್ಷ ಪದ್ಧತಿಯೇ ಯಶಸ್ವಿಯಾಗುವುದು. ಉತ್ತಮ ಬರೆಹ, ಟಾಯಿಪ
ಹೊಡೆಯುವುದು, ಲಘುಲಿಪಿ ಬರೆಹ, ಗಾಯನ, ತಂತುವಾದನ, ಆಟ, ವ್ಯಾಯಾಮ, ಶಿಲ್ಪ
ಚಿತ್ರಕಲೆ, ಕೈಕೆಲಸ, ಪರಭಾಷೆಯ ಉಪಯೋಗ, ಮುಂತಾದ ವಿಷಯಗಳನ್ನು ವಿದ್ಯಾರ್ಥಿ
ಗಳಿಗೆ ವಶಮಾಡಿಕೊಡಲು, ಆಯಾ ಕಾರ್ಯಗಳನ್ನು ಅವರು ಸಹಜವಾಗಿ ಹೇಗೆ ಮಾಡಬೆ
ಕೆಂಬುದನ್ನೇ ಕಲಿಸಬೇಕು. ಸಹಾಯಕ್ಕಾಗಿ ಇಟ್ಟುಕೊಂಡ ತಾತ್ಪರ್ತಿಕ ಆಧಾರಗಳನ್ನು
ಅಥವಾ ಯೋಜನೆಗಳನ್ನು ಶಕ್ಯವಿದ್ದಷ್ಟು ತೀವ್ರವೇ ಬಿಟ್ಟುಕೊಡುವುದು ಒಳಿತು. ಯಾಕೆ
ದರೆ ಕರ್ಮಕೌಶಲವು ಸಹಜವಾದ ಮೇಲೆ ಅವುಗಳ ಆವಶ್ಯಕತೆಯಿರುವುದಿಲ್ಲ; ಮತ್ತು ಅವ
ಗಳನ್ನು ಅವ್ಯಾಹತವಾಗಿ ನಂಬುತ್ತ ನಡೆದರೆ, ಲಾಭವಾಗುವುದರ ಬದಲು ಅಪಾಯ, ಆತಂ
ಗಳೇ ಉಂಟಾಗುವುವು. ಬೀಳುತ್ತ, ಏಳುತ್ತ, ಮತ್ತೆ ಹೇಗಾದರೂ ನಡೆಯಲು ಯತ್ನಿಸು
ಬಾಲಕನು, ನಡೆಯಲಿಕ್ಕೆ ಸಹಾಯಕವಾಗುವ ಕೈಗಾಡಿ ಹಿಡಿದು ನಡೆಯಲು ಕಲಿತ ಬಾಲಕ

ಂತ ತೀವ್ರವಾಗಿ ಒಳ್ಳೇ ಸೌಕರ್ಯದಿಂದ ಓಡಾಡಹತ್ತುವನು. ಟಾಯಿಪ್ ಹೊಡೆಯುವ
ನ್ನು ದೃಷ್ಟಿಪದ್ಧತಿಯಿಂದ ಕಲಿತವನಿಗಿಂತಲೂ, ಸ್ಪರ್ಶಪದ್ಧತಿಯಿಂದ ಕಲಿತವನು ಸುಮಾರು
ಮೂರು ಪಟ್ಟು ತೀವ್ರ ಟಾಯಿಪ್ ಹೊಡೆಯುವನು. ಟೆನಿಸ್ ಆಟದ ನಿಯಮಗಳ ಪುಸ್ತಕ
ಳನ್ನು ಕೈಯಲ್ಲಿ ಹಿಡಿದು, ಹೆಜ್ಜೆ ಹೆಜ್ಜೆಗೆ ಹೇಗೆ ಆಡಬೇಕೆಂಬ ಸೂಚನೆಗಳನ್ನನುಲಕ್ಷಿಸಿ
ಡುವವನಿಗಿಂತ ಪ್ರತ್ಯಕ್ಷವಾಗಿ ಆಡಿ ಆಡಿ ಕಲಿಯಲು ಹವಣಿಸುವ ಹುಡುಗನು ಆ ಆಟವನ್ನು
ಚ್ಚು ಸುಗಮವಾಗಿ ಆಡಬಲ್ಲನು. ಅದರಂತೆಯೇ ಭಾಷಾಂತರ—ವ್ಯಾಕರಣ ಪದ್ಧತಿಯಿಂದ
ರಭಾಷೆಯನ್ನು ಕಲಿಯುವ ಪ್ರೌಢನಿಗಿಂತ ಪ್ರತ್ಯಕ್ಷ ರೀತಿಯಿಂದ, ತಪ್ಪುತ್ತ ತಡೆಯುತ್ತ ಆ
ಭಾಷೆಯನ್ನು ಪಯೋಗಿಸುವ ಬಾಲಕನು ತೀವ್ರ ಮತ್ತು ಹೆಚ್ಚು ಸುಗಮವಾಗಿ ಮಾತಾಡುತ್ತಾ
ಂಬುದು ಅನುಭವಸಿದ್ಧವಾದ ಮಾತು.

ಕಾರ್ಯಕೌಶಲವನ್ನು ಕಲಿಸುವ ಉತ್ತಮ ಮಾರ್ಗವು ಶಾಬ್ದಿಕ ಸೂಚನೆಗಳನ್ನು
ಡುವುದರಲ್ಲಿರದೆ, ಶಿಕ್ಷಕನು ತನ್ನ ಮಾದರಿಯ ಕೃತಿಗಳನ್ನು ವಿದ್ಯಾರ್ಥಿಗಳಿಗೆ ತೋರಿಸಿ
ವರನ್ನು ಅನುಕರಣ ಮಾಡಲಿಕ್ಕೆ ಹಚ್ಚುವುದರಲ್ಲಿದೆ. ಕಾರ್ಯಕೌಶಲದಲ್ಲಿ ಅಚ್ಚುಕಟ್ಟಾದ
ತಿ ಮತ್ತು ಸ್ವಾಭಾವಿಕ ಚಲನವಲನಗಳು- ಇವು ಮಹತ್ತ್ವದ ವಿಷಯಗಳು. ಆದರೆ ಕಲಿ
ುವವರ ವೈಯಕ್ತಿಕ ಅಭ್ಯಂತರಗಳನ್ನು ಲಕ್ಷಿಸದೆ ಇರಕೂಡದು. ಮಾದರಿಯ ಕೃತಿಯನ್ನು
ೀರಿಸುವಾಗ, ಅದು ಪೂರ್ಣವೇ ಇರಲಿ, ಭಾಗವೇ ಇರಲಿ,- ಅದರ ಕಡೆಗೆ ಕಲಿಯುವವರ
ಕ್ಷ್ಯವನ್ನು ಸೆಳೆಯಲೇ ಬೇಕು. ಕಾರ್ಯಸಿದ್ಧಿಯನ್ನು ಪಡೆಯುವಾಗ ಉದ್ಭವಿಸುವ ಎಡರು
ಳನ್ನು ದೂರೀಕರಿಸಲು ವಿದ್ಯಾರ್ಥಿಗಳಿಗೆ ಪೂರಕ ಸೂಚನೆಗಳು ಅವಶ್ಯ. ತನ್ನ ಕಾರ್ಯ-
ಸಹಸದಲ್ಲಿ ಯಶಸ್ಸನ್ನು ಪಡೆಯಬೇಕಾದರೆ, ವಿದ್ಯಾರ್ಥಿಯು ತಪ್ಪುತಡೆಗಳನ್ನು ಲೆಕ್ಕಿಸದೆ
ರ್ಯದಿಂದ ಸಾಕಷ್ಟು ರೂಢಿಯನ್ನು ಮಾಡಿಕೊಳ್ಳಬೇಕು. ಪೂರ್ಣಸಿದ್ಧಿಗೆ ತಡೆಯನ್ನೊ
ವ ಪ್ರಾರಂಭದ ಅನವಶ್ಯಕ ಚಲನವಲನಗಳನ್ನು ಜಾಗರೂಕತೆಯಿಂದ ಕಂಡುಹಿಡಿದು
ಪ್ತ ತೀರ ಕಡಿಮೆಯಾಗುವಂತೆ ಯತ್ನಿಸಬೇಕು. ಬರೆಹವನ್ನು ಹೊಸದಾಗಿ ಕಲಿಯುವ
ಬಾಲಕನು ನಾಲಿಗೆಯನ್ನು ಅತ್ತಿತ್ತ ಹೊರಳಾಡಿಸುವುದು, ಮೋರೆ ಕಿವುಚುವುದು, ಮುಂತಾದ
ಬೇಕಬೇಡಾದ ಚಲನವಲನಗಳನ್ನು ಮಾಡುವುದು; ಇವುಗಳನ್ನು ಆದಷ್ಟು ತೀವ್ರವಾಗಿ
ನಿಸಬೇಕು.

ಕಾರ್ಯಕೌಶಲವನ್ನು ಸ್ಥಿರಗೊಳಿಸಿ ಸಹಜಸಿದ್ಧಿಯನ್ನು ಪಡೆಯುವುದು:-

ಜೀವಿಯು ಜೀವನದಲ್ಲಿ ಸನ್ನಿವೇಶಕ್ಕೆ ತಕ್ಕ ಮಾರ್ಪಾಟುಗಳನ್ನು ಮಾಡಿಕೊಂಡು
ಸಾಜಹಿತಕ್ಕೆ ಅನುಕೂಲವಾಗಿ ನಡೆಯುವ ರೀತಿಗಳನ್ನು ಅವನಲ್ಲಿ ಸ್ಥಿರಗೊಳಿಸಿ ಅವುಗಳನ್ನು
ಢಿಗಳನ್ನಾಗಿ ಮಾಡುವುದೇ ಶಿಕ್ಷಣದ ಗುರಿಗಳಲ್ಲೊಂದಾಗಿದೆ. ರೂಢಿಗಳನ್ನು ಮೂರು
ಕಾರವಾಗಿ ವಿಂಗಡಿಸಬಹುದು— ಬೌದ್ಧಿಕ, ಮಾನಸಿಕ, ಮತ್ತು ಚಾಲನಿಕ. ಈ ತರದ
ಢಿಗಳನ್ನು ಸಹಜಸಿದ್ಧಿಗೆ ಒಯ್ಯಬೇಕಾದರೆ, ಆಯಾ ಕಾರ್ಯಗಳನ್ನು ಪುನಃ ಪುನಃ
ಡುವುದೇ ಮಿಗಿಲಾದ ಸಾಧನ. ಈ ಸಾಧನದಿಂದ ಒಂದು ಕುಶಲಕಲೆಯನ್ನು ದೃಢಪಡಿಸುವ
ದಲು, ಅದನ್ನು ನಿತ್ಯಜೀವನದ ಸನ್ನಿವೇಶಗಳಲ್ಲಿ ಉಪಯೋಗಿಸಿ ಅದರ ಪರಿಚಯವನ್ನು
ನ್ನಾಗಿ ಮಾಡಿಕೊಟ್ಟಿರಬೇಕು. ಹೀಗೆ ಮಾಡಿದರೆ ಮಾತ್ರ, ಉತ್ತಮ ರೂಢಿಗಳ ಪರಂ
, ಸರಿಯಾದ ಶಾರೀರಿಕ ಠೀವಿ, ಕೃತಿಕೌಶಲ- ಇವು ಸಾಧ್ಯವಾಗುವವು. ತಾಂತ್ರಿಕ
(Technical) ಜಾಣ್ಮೆಯನ್ನು ಸಾಧಿಸುವುದಿದ್ದರೆ, ಈ ಮುಂಜಾಗ್ರತೆಯು ಅಷ್ಟು
ಶ್ಯಕವಲ್ಲ. ಅಲ್ಲಿ ಆಸಕ್ತಿಯೇ ಮುಖ್ಯವಾದ ಅಂಗವು. ಅದನ್ನು ಉಂಟುಮಾಡುವುದು

ಕೂಡ ಅಷ್ಟು ಕಠಿಣವಲ್ಲ. ನಿಶ್ಚಿತ ಧ್ಯೇಯ ಮತ್ತು ಕೊಟ್ಟ ವೇಳೆಯಲ್ಲಿ ಕಾರ್ಯವನ್ನು ಜೆನ್ನಾ
ಮುಗಿಸಬೇಕೆಂಬ ನಿರ್ಬಂಧ—ಇವೆರಡು ಅಸಕ್ತಿಯನ್ನು ಬಲಪಡಿಸುತ್ತವೆ. ಅತ್ಯುತ್ತಮ
ಣಾಮವನ್ನು ದೊರಕಿಸಬೇಕಾದರೆ, ರೂಢಿಯ ಅವಧಿಗಳು ಜಿಕ್ಕವಾಗಿಯೂ ನಿಯಮಿತವಾ
ನಡುವಿನ ಬಿಡುವುಗಳುಳ್ಳವೂ ಇರಬೇಕು. ಪಾಠ ಮಾಡಲು ಅಂಶ ಅಥವಾ ಭಾಗ ಪದ್ಧ
ಗಿಂತ ಅಖಂಡ ಅಥವಾ ಸಮಗ್ರ ಪದ್ಧತಿಯೇ ಹೆಚ್ಚು ಫಲಕಾರಿಯಾದುದು. ರೂಢಿಯ
ಕ್ರಮಶುದ್ಧತೆಯೂ ಮುಖ್ಯಕ್ರಮಗಳಲ್ಲಿ ಪರಿಪೂರ್ಣತೆಯೂ ಕೊನೆಯ ಸಹಜಸಿದ್ಧಿಗೆ ಸಾಧ
ಗಳಾಗಿವೆ. ಕೀಳ್ತರದ ರೂಢಿಗಳನ್ನು ಮೇಲ್ತರದ ರೂಢಿಗಳಿಂದ ಹೊಡೆದೋಡಿಸುವ ಕಾರ್ಯ
ಹುಟ್ಟುಗುಣವನ್ನು ತಿದ್ದುವಷ್ಟೇ ಕಠಿಣವಾಗಿದೆ.

ಜ್ಞಾನ, ಅಭಿರುಚಿ ಮತ್ತು ಸಾಮಾಜಿಕ ಪ್ರವೃತ್ತಿ ಇವುಗಳನ್ನು ಅನುಕೂಲ ಸನ್ನಿವೇ
ಗಳ ಸಹಾಯದಿಂದಲೇ ದೊರಕಿಸುವುದು ಸಾಧ್ಯ. ವಿದ್ಯಾರ್ಥಿಗಳಿಗೆ ಸಾಮಾನ್ಯಜ್ಞಾನ, ವಿಶಿ
ಜ್ಞಾನಗಳನ್ನು ಕೊಡುವುದಲ್ಲದೆ, ಅವರ ಮನಸ್ಸಿನಲ್ಲಿ ಸಾಮಾಜಿಕ ಪ್ರವೃತ್ತಿ, ಧಾರ್ಮಿ
ಧೋರಣೆ ಕಲಾತ್ಮಕ ಅಭಿರುಚಿಗಳನ್ನು ಹೇಗೆ ಬಿಂಬಿಸಿ ಮೂಡಿಸಬೇಕೆಂಬುದು ಶಿಕ್ಷಕ
ಮುಖ್ಯ ಹೊಣೆಗಳಲ್ಲಿ ಒಂದಾಗಿದೆ. ಮೇಲೆ ವಿವರಿಸಿದ ಗುಣಗಳನ್ನು ಪಡೆದು, ವಿದ್ಯಾರ್ಥಿಯ
ತಾನು ದೊರಕಿಸಿದ ಜ್ಞಾನವನ್ನು ಜೀವನದಲ್ಲಿ ಸರಿಯಾಗಿ ಉಪಯೋಗಿಸಿಕೊಳ್ಳಬೇಕಾದ
ಶಿಕ್ಷಕನು ತನ್ನ ವ್ಯಕ್ತಿತ್ವ, ಅನುಭವ, ಜಾಣ್ಮೆಗಳನ್ನು ಜಾಗರೂಕತೆಯಿಂದ ಉಪಯೋಗಿ
ಬೇಕು. ರೂಢಿಯು ಎಷ್ಟಾದರೂ ತಾಂತ್ರಿಕವಾದುದು. ಆದರೆ ಜೀವನದಲ್ಲಿ ಅತ್ಯುತ್ತಮ
ರಸ, ಭಾವಗಳನ್ನು ಅನುಭವಿಸುವಂತೆ ಮಾಡಿ ವಿದ್ಯಾರ್ಥಿಗಳನ್ನು ಸಂಸ್ಕೃತಿಯ ಮೇಲಿ
ಮಟ್ಟಗಳಿಗೆ ಒಯ್ಯುವಂತೆ ಮಾಡುವುದು ಶಿಕ್ಷಕನ ಸ್ತುತ್ಯಕಾರ್ಯವೆನಿಸುವದೆಂಬುದರ
ಸಂದೇಹವಿಲ್ಲ.

—ಎಸ್. ಜಿ. ಬೈಚವಾಳ

ಬಾಲಕರ ವಿಕಾಸ ಹಾಗೂ ಅವರ ಶಿಕ್ಷಣ

ಶ್ರೀ. ಗುರುನಾಥ ಜೋಶಿ. ಧಾರವಾಡ

ಶಿಕ್ಷಿತ ತಂದೆ ತಾಯಿಂದಿರು ತಮ್ಮ ಮಕ್ಕಳ ಶಿಕ್ಷಣವು ಯಾವ ಪದ್ಧತಿಯಿಂದ ಸಾಗಬೆ
ಕೆಂಬುದರ ಬಗ್ಗೆ ಬಹಳ ವಿಚಾರ ಮಾಡುತ್ತಿರುತ್ತಾರೆ. ಬಾಲಕರ ಬಾಲ್ಯದ ಅಭಿರುಚಿಯನ್ನು
ನೋಡಿ, ಅದಕ್ಕನುಗುಣವಾಗಿ ಅವರ ಭಾವಿ ವಿಕಾಸದ ಮತ್ತು ಶಿಕ್ಷಣದ ತಳಹದಿಯನ್ನು
ಹಾಕುವದು ಎಷ್ಟರ ಮಟ್ಟಿಗೆ ಒಳ್ಳೆಯದೆಂಬುದನ್ನು ನಿಶ್ಚಿತವಾಗಿ ಈಗಲೇ ಹೇಳಲು ಬರು
ದಿಲ್ಲ. ಏಕೆಂದರೆ ಅವರ ವಯಸ್ಸು ಬದಲಾದಂತೆ ಅಭಿರುಚಿಯಲ್ಲಿ ಪರಿವರ್ತನೆಯಾಗುತ್ತಿ
ತ್ತದೆ. ಕೆಲವು ಬಾಲಕರ ಅಭಿರುಚಿ ಆರಂಭದಿಂದ ಒಂದು ಕಡೆಗೆ ಇರುತ್ತದೆ, ಆದಕ್ಕೆ ತಕ್
ವಾತಾವರಣ, ಸಾಧನ ಸಾಮಗ್ರಿಗಳು ದೊರೆತೊಡನೆ ಅವರು ಈ ದಿಶೆಯಲ್ಲಿಯೇ ಹೊಗೆ
ವಿಶೇಷ ಯೋಗ್ಯತೆಯನ್ನು ಪಡೆದು ಪ್ರವೀಣರಾಗುತ್ತಾರೆಂಬುದರಲ್ಲಿಯೂ ಸಂದೇಹವಿಲ್ಲ. ಕ
ಸಂಗತಿಯು ಗಣಿತ, ಗಾಯನ, ಕವಿತೆ ಮುಂತಾದ ವಿಷಯಗಳಲ್ಲಿ ವಿಶೇಷವಾಗಿ ನೋಡಲ
ಸಿಗುತ್ತದೆ. ಇದು ಬಾಲಕನಲ್ಲಿ ಉದಯವಾಗುತ್ತಿರುವ ಪ್ರತಿಯೊಂದು ಪ್ರವೃತ್ತಿಯ ವಿಷಯಪ್ಪ
ಸತ್ಯವಾಗಿ ಪರಿಣಮಿಸುವುದಿಲ್ಲ. ಆದ್ದರಿಂದ ತಂದೆತಾಯಂದಿರು ಬಾಲಕನ ಪ್ರವೃತ್ತಿಯನ್ನು
ಕುರಿತು ಜೆನ್ನಾಗಿ ವಿಚಾರ ಮಾಡದೆ ಜನ್ಮ ಪ್ರವೃತ್ತವೆಂದು ಬಗೆದು ಅದರ ವಿಕಾಸಕ್ಕೆ ಧನ
ಸಮಯ ಮತ್ತು ಶಕ್ತಿಯ ಅಪವ್ಯಯವನ್ನು ಮಾಡದಿರುವದು ಒಳ್ಳೆಯದು.

ಬಾಲಕರ ಪ್ರವೃತ್ತಿಗಳು ಪ್ರಕಟವಾಗಿ ಅವು ಸ್ಥಾಯಿಯಾಗುವ ಲಕ್ಷಣಗಳು ತೋರಿ
ಂದನಂತರ ಅವುಗಳ ವಿಕಾಸಕ್ಕಾಗಿ ಸಾಧನಗಳನ್ನು ದೊರಕಿಸಿಕೊಡುವದು ಅತ್ಯಂತ ಆವ
ಕವಾದುದು. ತಂದೆತಾಯಂದಿರು ಬಹುತರವಾಗಿ ಇತ್ತ ಲಕ್ಷಗೊಡದಿರುವದೇ ಕಂಡು
ರುತ್ತದೆ ಅಥವಾ ಅನೇಕ ಪ್ರವೃತ್ತಿಗಳನ್ನು ತಮ್ಮ ಅಭಿರುಚಿ ಇಲ್ಲದ್ದರಿಂದ ಹತ್ತಿಕ್ಕಿಬಿಡು
ರೆ. ಅವರು ಬಾಲಕನ ಅಭಿರುಚಿಯನ್ನು ಕಂಡು ಹಿಡಿದು, ತಮ್ಮ ನಿರೀಕ್ಷಣೆಯಲ್ಲಿ ಅದು
ಸಿತವಾಗುವಂತೆ ಮಾಡಬೇಕು. ಬಾಲಕನ ಅಭಿರುಚಿ ಇಂಥ ಒಂದು ವಿಷಯದ ಕಡೆಗೆ
ಸಿ ಎಂಬುದು ಸ್ಪಷ್ಟವಾಗಿ ತಿಳಿದ ಬಳಿಕ ಅದಕ್ಕೆ ಬೇಕಾಗುವ ಸಾಧನಗಳನ್ನು ಒದಗಿಸಿ
ಡಬೇಕು.

ಬಾಲಕರ ಯಥೇಷ್ಟ ವಿಕಾಸಕ್ಕಾಗಿ ಸಾಧನಗಳು ಸಿಕ್ಕಬೇಕಾದುದು ಪರಮ ಆವಶ್ಯಕ.
ಾಧನಗಳು ಸಿಕ್ಕದಿದ್ದರೆ ಜನ್ಮಜಾತ ಅಭಿರುಚಿ ಅಂಕುರಿಸಿ ಬೆಳೆಯುವುದಿಲ್ಲ. ಒಂದು ಹೊಸ
ಕ್ಕಿನ ಕಡೆಗೆ ಅವರ ಅಭಿರುಚಿಯು ಹರಿಯ ತೊಡಗಿದಾಗ ಶಿಕ್ಷಕರೂ ಹಿತಚಿಂತಕರೂ ಅತ್ತ
ಕ್ಷಗೊಡುವದಿಲ್ಲ. ಇನ್ನು ಕೆಲವರು ಬಾಲಕರು ಶಾಲೆಯಲ್ಲಿ ತಮ್ಮ ಜೊತೆಗಾರರಿಗಿಂತ ಹಿಂದೆ
ೀಳುತ್ತಾರೆ; ಆದರೆ ಅವರು ದೊಡ್ಡವರಾದ ಬಳಿಕ ವಿಶೇಷ ಯೋಗ್ಯತಾವಂತರಾಗುತ್ತಾರೆ.
ರ್ವಿನ್ನನ ವಿದ್ಯಾರ್ಥಿ ಜೀವನವೂ ಇದೇ ಪ್ರಕಾರವಾಗಿತ್ತು. ಅವನು ಶಾಲೆಯಲ್ಲಿ ಯಾವಾ
ಲೂ ಎಲ್ಲ ವಿದ್ಯಾರ್ಥಿಗಳಿಗಿಂತ ಹಿಂದಿರುತ್ತಿದ್ದ; ಆದರೆ ಅವನಿಗೆ ಸ್ಕೂಲಿನ ಹೊರಗೆ ತಿರುಗಾ
ವುದು, ಪಾತರಗಿತ್ತಿ ಹಿಡಿಯುವದು, ಕ್ರಿಮಿ ಕೀಟಗಳನ್ನು ಸಂಗ್ರಹಿಸುವುದು ಮತ್ತು
ಕೃತಿನಿರೀಕ್ಷಣೆ ಮಾಡುವುದು ಮುಂತಾದ ಕೆಲಸಗಳಲ್ಲಿ ಹೆಚ್ಚು ಆನಂದವುಂಟಾಗುತ್ತಿತ್ತು
ನ್ನು. ಈ ಅಭಿರುಚಿಯ ಕಾರಣದಿಂದಾಗಿ ಅವನು ತನ್ನ ಕಾಲದಲ್ಲಿ ಒಬ್ಬ ಶ್ರೇಷ್ಠ ವಿಜ್ಞಾನಿಯಾದ.

ಸಾಧನ ಮತ್ತು ಯೋಗ್ಯತೆಯ ಹೊರತಾಗಿ ಯಾವುದಾದರೊಂದು ವಿಷಯದಲ್ಲಿ
ಧ್ವಂಸನಾಗಬೇಕಾಧರೆ ಒಂದು ಮಾರ್ಗವನ್ನು ಹುಡುಕಿಕೊಂಡು ಅದರಲ್ಲಿ ದತ್ತಚಿತ್ತ
ಾಗಿರಬೇಕಾದುದೂ ಆವಶ್ಯಕ. ಯಾರು ಕೇವಲ ಧನ ಅಥವಾ ಪ್ರಶಂಸೆಗಾಗಿ ಒಂದು
ರ್ಯದಲ್ಲಿ ಆಜೀವನ ತೊಡಗಿರುತ್ತಾರೋ ಅವರು ಹೆಚ್ಚು ಯಶಸ್ಸನ್ನು ಪಡೆಯಲಾರರು.
ನ್ನ ಪ್ರತಿಪಕ್ಷಿಯನ್ನು ಸೋಲಿಸಿ ಪ್ರಸಿದ್ಧಿಯನ್ನು ಪಡೆಯುವ ಭಾವನೆಯುಳ್ಳ ಯಾವ ಸೇನಾ
ಯೂ ದೊಡ್ಡ ಸೇನಾನಿಯಾಗಿಲ್ಲ ಮತ್ತು ಧನ ಅಥವಾ ಪ್ರಸಿದ್ಧಿಯನ್ನು ಪಡೆಯುವ ಹವ್ಯಾ
ನಿಂದ ಗಾಯನ ಅಥವಾ ಚಿತ್ರಕಲೆಯ ಕಡೆಗೆ ಹೋದವರು ಸಹ ಹೆಚ್ಚು ಸಫಲರಾಗಿಲ್ಲ
ಂಬುದು ಕಂಡುಬರುತ್ತದೆ. ಮನುಷ್ಯನು ತಾನು ಕೈಕೊಂಡ ಕೆಲಸದಲ್ಲಿ ಸಂಪೂರ್ಣ ಶಕ್ತಿ
ನ್ನು ಮನಃಪೂರ್ವಕವಾಗಿ ತೊಡಗಿಸಿದರೆ ಮಾತ್ರ ಯಶಸ್ಸನ್ನು ಪಡೆಯಬಲ್ಲ. ಯಾವ
ಾಲಕರಲ್ಲಿ ಇಂಥ ತಲ್ಲೀನತೆಯು ಕಂಡುಬರುತ್ತದೊ ಅವರು ಭವಿಷ್ಯದಲ್ಲಿ ಯಶಸ್ಸನ್ನು
ಡೆಯುತ್ತಾರೆ.

ಎಲ್ಲಿ ಒಂದು ವಿಶೇಷ ವಿಷಯದ ಕಡೆಗೆ ತಲ್ಲೀನತೆಯು ಕಂಡು ಬರುತ್ತದೊ ಅಲ್ಲಿ ಜನ್ಮ
ಾತ ಯೋಗ್ಯತೆಯ ಅಷ್ಟು ಆವಶ್ಯಕತೆಯೂ ಇಲ್ಲವೆಂಬುದು ಕಂಡುಬಂದಿದೆ. ಅಷ್ಟು
ೋಗ್ಯತೆಯು ಆವಶ್ಯಕವಿರುವುದಿಲ್ಲ. ಯೋಗ್ಯತೆಯು ಸಾವಕಾಶವಾಗಿ ತನ್ನಷ್ಟಕ್ಕೆ ತಾನೇ
ರುತ್ತದೆ. ರಾಕ್‌ಫೆಲರನ ವಿಷಯವಾಗಿ ಹೀಗೆ ಹೇಳುತ್ತಾರೆ:—ಅವನು ಚಿಕ್ಕವನಿದ್ದಾಗ
ವನ ತಂದೆತಾಯಂದಿರು ಬಡವರಿದ್ದಾಗ್ಯೂ ಅವನಿಗೆ ಪ್ರತಿವಾರ ಹತ್ತು ಸೆಂಟುಗಳನ್ನು
ಾಡುತ್ತಿದ್ದರಂತೆ. ಒಮ್ಮೆ ಒಬ್ಬ ಒಕ್ಕಲಿಗ ಅವನ ಮನೆಗೆ ಬಂದ ನೂತ್ತು ಅವರು ೫೦
ಾಲರುಗಳನ್ನು ನೂರಕ್ಕೆ ೭ರಂತೆ ಬಡ್ಡಿ ದರದ ಮೇಲೆ ಸಾಲ ಕೇಳಿದ. ಬಾಲಕ ರಾಕ್‌ಫೆಲರ

ನಿಂತು ನಿಂತು ಈ ಮಾತುಗಳನ್ನು ಕೇಳುತ್ತಿದ್ದ. ಅವನು ತನ್ನ ತಂದೆಯನ್ನು 'ಬಿ
ಯೆಂದರೇನು?' ಎಂದು ಕೇಳಿದ. ಸಂತೋಷಜನಕ ಉತ್ತರವನ್ನು ಅವನು ಕೇಳಿದ ಬಳಿ
೫೦ ಡಾಲರುಗಳನ್ನು ತಾನು ಕೊಡಬಲ್ಲೆನೆಂದು ಹೇಳಿದನಂತೆ. ಬಾಲಕನ ಮಾತನ್ನು ಕೇ
ತಂದೆಗೆ ಆಶ್ಚರ್ಯವಾಯಿತು. ತಂದೆ ಕೇಳಿದ 'ಇಷ್ಟು ಡಾಲರುಗಳು ನಿನಗೆಲ್ಲಿ ಸಿಕ್ಕವು?'
ಬಾಲಕ 'ನಾನು ಸ್ವಲ್ಪ ಸ್ವಲ್ಪಾಗಿ ಕೂಡಿ ಹಾಕಿದ್ದೇನೆ.' ಎಂದು ಹೇಳಿದನಂತೆ. ಇಂಥ
ಬಾಲಕರ ವಿಷಯವಾಗಿ ದೊಡ್ಡವರಾದ ಬಳಿಕ ಅವರು ಶ್ರೀಮಂತರಾಗುತ್ತಾರೆಂದು
ಸಹಜವಾಗಿ ಹೇಳಬಹುದಾಗಿದೆ.

ಕೆಲವು ಬಾಲಕರು ಅನ್ಯಬಾಲಕರಲ್ಲಿ ಸೇರದೆ ಬೇರೆ ಇರುತ್ತಾರೆ. ಅವರಿಗೆ ಒಂಟಿಗತ್ತ
ಹೆಚ್ಚು ಸೇರುತ್ತದೆ. ಇಂಥವರು ಮತ್ತು ಬಾಲ್ಯದಲ್ಲಿ ಜೆನ್ನಾಗಿ ಜೋಪಾನವಾಗದ ಬಾಲಕರು
ಜೀವನದಲ್ಲಿ ಹೆಚ್ಚು ಯಶಸ್ಸನ್ನು ಪಡೆದುದು ಕಂಡುಬರುತ್ತದೆ. ಇದಕ್ಕೆ ಕಾರಣ ಅವ
ನಿಕಾಂತ ಪ್ರವೃತ್ತಿಯಲ್ಲ, ಆದರೆ ನಿಕಾಂತ ಜೀವನದಲ್ಲಿ ಅವರಿಗೆ ತಮ್ಮ ರುಚಿಯ ವಿಷಯ
ಗಳನ್ನು ವಿಕಸಿತಗೊಳಿಸಿಕೊಳ್ಳಲು ಕ್ಷೇತ್ರವು ದೊರಕುತ್ತದೆ. ಸಭ್ಯತೆಯ ಈ ಯುಗದ
ಒಂದೇ ತರದ ಶಿಕ್ಷಣ ಸಿಕ್ಕುವುದರಿಂದ, ಆಟಗಳ ಏರ್ಪಾಡು ಇರುವುದರಿಂದ ಬಾಲಕ
ನೈಸರ್ಗಿಕ ಅಭಿರುಚಿಗೆ ಆವಶ್ಯಕವಾದ ಪ್ರೋತ್ಸಾಹನ ಸಿಕ್ಕುವುದಿಲ್ಲ. ಶ್ರೀಮಂತರ ಮ
ಯಲ್ಲಿ ಪಾಲನೆ-ಪೋಷಣೆ ಪಡೆದ ಬಾಲಕರ ಯೋಗ್ಯತಾ-ಸಂಪಾದನ ಪ್ರವೃತ್ತಿಯು ಹತ್ತಿ
ಲ್ಪಡುತ್ತದೆ. ಅವರಲ್ಲಿ ಚರಿತ್ರ-ನಿರ್ಮಾಣದ ನೈಶಿಷ್ಟ್ಯವು ಕಂಡುಬರುವದಿಲ್ಲ ಮತ್ತು
ದೃಷ್ಟಿಕೋನದಿಂದ ಅವರ ಚಾರಿತ್ರ್ಯವೂ ವಿಕಸಿತವಾಗುವುದಿಲ್ಲ.

ಬಾಲಕರ ವಿಶೇಷ-ವಿಶಿಷ್ಟ ಪ್ರವೃತ್ತಿಗಳ ವಿಕಸನ ಮಾಡುವುದೇ ಶಿಕ್ಷಣದ ಉದ್ದೇ
ವಾಗಿರಬೇಕು; ಎಲ್ಲರನ್ನು ಪಶುಗಳಂತೆ, ಒಂದೇ ಅಚ್ಚಿನಲ್ಲಿ ಹೊಯ್ಯುವ ಅಚ್ಚಿನಂತೆ ಉದ್ದೇ
ವಿರಬಾರದು. ಈ ಪ್ರಕಾರದ ಸ್ವಾತಂತ್ರ್ಯವನ್ನು ಪಡೆದ ಬಾಲಕರು ಸಮಾಜಕ್ಕೆ ಕಷ್ಟ ಕೊಡ
ವವರಾಗಬಹುದೆಂಬುದರಲ್ಲಿ ಸಂದೇಹವಿಲ್ಲ; ಆದರೆ ಅಸಾಧಾರಣ ಯೋಗ್ಯತೆಯನ್ನು ಪಡೆ
ಒಬ್ಬನಾದರೂ ಬಾಲಕನು ಸಮಾಜಕ್ಕೆ ದೊರೆತರೆ ಅವನಿಂದ ಅನೇಕ ಬಾಲಕರಿಂದಾ
ಅನಿಷ್ಟವು ತೊಲಗಿ ಹೋಗುವದು. ಯಾವ ಸಮಾಜವು ಯೋಗ್ಯ ಹಾಗೂ ದೊಡ್ಡ ವ್ಯ
ಗಳನ್ನು ಸಿದ್ಧಮಾಡಬಯಸುವುದೊ ಅದು ಬಾಲಕರಿಗೆ ಕನಿಷ್ಟ ಪಕ್ಷಕ್ಕೆ ವಿಚಾರಮಾಡು
ಹಾಗೂ ಅನುಭವ ಪಡೆಯುವ ಪ್ರವೃತ್ತಿಯನ್ನು ವಿಕಸಿತ ಮಾಡಿಕೊಳ್ಳಲು ಬೇಕಾಗುವಷ
ಸ್ವಾತಂತ್ರ್ಯವನ್ನಾದರೂ ಕೊಡಬೇಕು. ಎಷ್ಟೋ ಬಾಲಕರಲ್ಲಿ ಈ ಸ್ವತಂತ್ರ ಅಭಿರುಚಿಯ
ಬಾಲ್ಯದಲ್ಲಿಯೆ ಕಾಣಿಸತೊಡಗುತ್ತದೆ. ಸಮವಯಸ್ಕ ಬಾಲಕರಂತೆ ವಿಚಾರ ಮಾಡುವು
ಮತ್ತು ಅನುಭವ ಪಡೆಯುವದು ಅವರನ್ನು ಸಾಮಾನ್ಯ ಪುರುಷರ ಪಂಕ್ತಿಯಲ್ಲಿ ಇಡುವುದ
ಆದ್ದರಿಂದ ಕೇವಲ ಸಾಧಾರಣವಾಗಿದ್ದ ಮತ್ತು ದೋಷರಹಿತವಾದ ಸಾಮಾನ್ಯ ಯೋಗ್ಯತೆಯ
ವ್ಯಕ್ತಿಯನ್ನು ಹುಟ್ಟಿಸುವುದು ಶಿಕ್ಷಣದ ಉದ್ದೇಶವಾಗಿರಬಾರದು.

—ವಿಶಾಲ ಭಾರತದಿಂದ

ಹತ್ತು ವರ್ಷಗಳ ಅನುಭವದಿಂದ ಬರೆದ

ಜಿ. ಶ್ರೀ. ಕುಲಕರ್ಣಿಯವರ ಶಾಲೋಪಯೋಗಿ ಪುಸ್ತಕಗಳು

ಮುಲ್ಕೀಪರೀಕ್ಷೆಗಾಗಿ

೧	ಗಣಿತ ಸಂಗ್ರಹ	೦ ೧೫ ೦
೨	ಇತಿಹಾಸ ಪ್ರಶ್ನೋತ್ತರ ಮಾಲೆ	೦ ೯ ೦
೩	ಭೂಗೋಲ ಪ್ರಶ್ನೋತ್ತರ ಮಾಲೆ	೦ ೯ ೦
೪	ಭೂಮಿತಿ ಪ್ರಶ್ನೋತ್ತರ ಮಾಲೆ	೦ ೮ ೦
೫	ಜನಮಾಖರು ,,	೦ ೧೧ ೦
೬	ಶಾಸ್ತ್ರೀಯ ವಿಷಯ ,,	೦ ೨ ೦
೭	ಆರೋಗ್ಯ ವಿಜ್ಞಾನ ,,	೦ ೯ ೦
೮	ವಾಕ್ಯರಚನೆ ಹಾಗೂ ನಿಬಂಧ ಬರೆಹ	೦ ೮ ೦
೯	ಈಗಿನ ರಾಜ್ಯವ್ಯವಸ್ಥೆ	೦ ೪ ೦
೧೦	ಗಂಡು ಮತ್ತು ಹುಡುಗರ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦ ೯ ೦
೧೧	ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦ ೧೪ ೦
೧೨	ವಾಚನಮಾಲೆ	೦ ೪ ೦
೧೩	ಪದ್ಯಮಾಲೆ	೦ ೪ ೦
೧೪	ಪ್ರಶ್ನೋತ್ತರ ಭಾಷಾಭ್ಯಾಸ ಭಾಗ (೧)	೦ ೧೦ ೦
೧೫	,, (ವ್ಯಾಕರಣ) (ಭಾಗ ೨)	೦ ೧೦ ೦
೧೬	ಶಾಸ್ತ್ರೀಯ ವಿಷಯಸಾರ	೦ ೧೦ ೦
೧೭	ಭೂಮಿತಿ	೦ ೬ ೦
೧೮	ಹೈಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು	೦ ೧೫ ೦
೧೯	ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೆಗಳು	೦ ೮ ೦
೨೦	ಭಾರತಸ್ಥರ ರಾಜ್ಯ ಸಾಧನೆ	೦ ೫ ೦
೨೧	ಮುಲ್ಕೀಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ	೧ ೦ ೦
೨೨	ಇತಿಹಾಸ ಸಾರ	೦ ೪ ೦
೨೩	ಮಾದರಿಯ ನಿಬಂಧಗಳು	೦ ೬ ೦

ಕೆಳಗಿನ ವರ್ಗಗಳಿಗಾಗಿ

೧	೧ನೇ ಇಯತ್ತೆಯ ಸಾಮಾನ್ಯ ವಿಜ್ಞಾನ	೦ ೩ ೦
೨	೨ನೇ ,, ,,	೦ ೩ ೦
೩	೩ನೇ ,, ,,	೦ ೪ ೦
೪	೪ನೇ ,, ,,	೦ ೫ ೦
೫	೫ನೇ ,, ,,	೦ ೬ ೦
೬	೨ನೇ ಇಯತ್ತೆಯ ಭೂಗೋಲ (ಪ್ರಪಂಚ ಪರಿಚಯ) ಭಾಗ ೧	೦ ೬ ೦
೭	೩ನೇ ,, ,, ಭಾಗ ೨	೦ ೬ ೦
೮	೪ನೇ ,, ,, ಭಾಗ ೩	೦ ೬ ೦
೯	೫ನೇ ,, ,, ಭಾಗ ೪	೦ ೬ ೦
೧೦	೧ನೇ ತರಗತಿಯ ಕಥೆ	೦ ೧ ೬
೧೧	೨ನೇ ,,	೦ ೧ ೬
೧೨	೩ನೇ ,,	೦ ೨ ೦
೧೩	೪ನೇ ,,	೦ ೩ ೦
೧೪	ಶಬ್ದಮಹಾತ್ಮೆ	೦ ೧೦ ೦
೧೫	ಪೌರಾಣಿಕ ಕಥೆಗಳು (೨-೩ ವರ್ಗಗಳ ಇತಿಹಾಸ)	೦ ೩ ೦
೧೬	೩ನೇ ವರ್ಗದ ನಿಬಂಧ ಮತ್ತು ವ್ಯಾಕರಣ	೦ ೪ ೦
೧೭	ಮಕ್ಕಳ ಕಥೆಗಳು, ಭಾಗ ೧	೦ ೪ ೦
೧೮	,, ಭಾಗ ೨	೦ ೪ ೦
೧೯	ಪೌರನೀತಿ ೧ನೇ ಇಯತ್ತೆಗಾಗಿ	೦ ೩ ೦
೨೦	,, ೨ನೇ ,,	೦ ೩ ೦
೨೧	,, ೩ನೇ ,,	೦ ೪ ೦
೨೨	,, ೪ನೇ ,,	೦ ೪ ೦

ಕೈಯಲ್ಲಿರುವ ಕೈತಿಗಳು

೧ ಪೌರನೀತಿ ೫ನೇ ವರ್ಗಕ್ಕಾಗಿ. ೨ ಪೌರನೀತಿ ೬ನೇ ವರ್ಗಕ್ಕಾಗಿ. ೩ ಪೌರನೀತಿ ೭ನೇ ವರ್ಗಕ್ಕಾಗಿ. ೪ ಕುಮಾರ ಕಿಟ್ಟಿಣ್ಣ. (ಹೊಸ ಆವೃತ್ತಿ). ೫ ಮಹಾತ್ಮರ ಪರಿಚಯ,,. ೬ ರಾಮ ಕೃಷ್ಣ ನೀತಿಯ ಕಥೆಗಳು,, ೭ ಪುರುಂದರದಾಸರ ಪರಿಚಯ ,, ೮ ಶಾರೀರಿಕ ಶಿಕ್ಷಣ (ಡ್ರಿಲ್ ಪುಸ್ತಕ)

೧ ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೨ ಹೈಸ್ಕೂಲ ಸ್ಕಾಲರಶಿಪ್ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೩ ಪ್ರಪಂಚಪರಿಚಯ ಭಾಗ ೫ ೬ನೇ ವರ್ಗಕ್ಕಾಗಿ. ೪ ಪ್ರಪಂಚಪರಿಚಯ ಭಾಗ ೬-೭ನೇ ವರ್ಗಕ್ಕಾಗಿ ೫ ಹಿಂದವ ಹಿಂದಿನ-ಇಂದಿನ ಉದ್ಧಾರಕರು.

ಶಿಕ್ಷಕರೂ, ಬಾಲಕರೂ ಎಂದಿನಂತೆ ಜಿ. ಶ್ರೀ. ಯವರ ಪುಸ್ತಕಗಳನ್ನೇ ಉಪಯೋಗಿಸಿ ಅವರಾಶ್ರಮದ ಪ್ರಾಭವ ಪಡೆಯಬೇಕಾಗಿ ವಿನಂತಿ ಇದೆ.

ಪುಸ್ತಕ ಸಿಗುವ ಸ್ಥಳ

ಕೆ. ಎಸ್. ಕುಲಕರ್ಣಿ ಬುಕ್‌ಸೆಲರ್ಸ್ ಪಬ್ಲಿಶರ್ಸ್

ಸ್ಟೇಶನ್ ರೋಡ್, ಹುಬ್ಬಳ್ಳಿ

ಮನೆಮನೆಯಲ್ಲಿಯೂ ಇರಬೇಕಾದ ಸ್ಫೂರ್ತಿದಾಯಕ ಗ್ರಂಥಗಳು!

೧. ಸುಭಾಸ—ಸೀವೋಲ್ಲಂಘನ

ಬೆಲೆ ೧—೮—೦ (ಅಂಚೆವೆಚ್ಚ ಸೇರಿ ೧—೧೨—೦)

ವಿವಿಧಯುಕ್ತಿ-ಸಾಹಸ-ವೇಷಗಳಿಂದ ಸರಕಾರಿ ಗೂಢಚಾರರ ಕಣ್ಣಿಗೆ ಅಂಜನಹಚ್ಚಿ ಸುಭಾಸರು ಪರದೇಶಗಳನ್ನು ಸಂಚರಿಸಿದ ರೋಮಾಂಚಕಾರಿ ಇತಿಹಾಸವನ್ನು ಶ್ರೀ ಉತ್ತಮಚಂದರು ಸರಸವಾದ ಶೈಲಿಯಲ್ಲಿ ಪತ್ತೇದಾರಿ ಕಾದಂಬರಿಯಂತೆ ಬರೆದಿದ್ದಾರೆ.

೨. ಆಜಾದ ಹಿಂದ

ಬೆಲೆ ೧—೦—೦ (ಅಂಚೆವೆಚ್ಚಸೇರಿ ೧—೪—೦)

ನೇತಾಜಿ ಸುಭಾಸರು ಕಟ್ಟಿದ ಆಜಾದಹಿಂದ ಫೌಜಿನ ಹೋರಾಟದ ಸಮಗ್ರ ಇತಿಹಾಸ ಕ್ಯಾ. ಲಕ್ಷ್ಮಿ, ಶಹಾಜಹಾನ, ಸೈಗಲ, ಧಿಲನ, ಭೋಸಲೆ, ರಾಸಬಿಹಾರಿ ಮೊದಲಾದ ಸೇನಾನಿಗಳ ಕಥೆ ಇದರಲ್ಲಿವೆ.

೩. ನೇತಾಜಿ

ಬೆಲೆ ೧—೮—೦ (ಅಂಚೇವೆಚ್ಚಸೇರಿ ೧—೧೨—೦)

ನೇತಾಜಿ ಸುಭಾಸರ ಜೀವನ-ವಿಚಾರ-ಕಾರ್ಯಗಳ ಸಂಪೂರ್ಣ ದರ್ಶನ. ಅಲ್ಲಲ್ಲಿ ಮಾಡಿದ ಆಕಾಶವಾಣಿಯ ಭಾಷಣಗಳು. ಇತ್ಯಾದಿ.....

ಈ ಮೂರು ಪುಸ್ತಕಗಳನ್ನೂ ಬಯಸುವವರು ೪—೬—೦ ಮನಿಯಾರ್ಡರ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಹೊಸ ಪುಸ್ತಕಗಳಿಗೆ ತ್ವರೆ ಮಾಡಿರಿ! ಲಾಭಪಡೆಯಿರಿ!

ಹೊಸಪದ್ಧತಿಯ ಹಿಂದೀ ಜಮಾಖರ್ಚು ಭಾಗ ೨

(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮುನಿಯಾರ್ಡರ, ಬಡ್ಡಿ ಆಕರನೆ ಜಮಾಖರ್ಚಿನ ಇತರ ವಹಿಗಳು ಯಾದಿ, ಗಳ ನಮೂನೆಗಳು, ಪ್ರಶ್ನೆಗಳು. ಪ್ರಶ್ನೆಕಾಗದ ಗಳು ಇರುವದಲ್ಲದೆ, ಒಕ್ಕಲತನದ ಒಲುಪಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾ ಖರ್ಚು ಆಂದರೆ ಡೇಲಿ ಲೇಬರ ಶೀಟು, ಪೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟು, ಮುಂತಾ ದವುಗಳ ಪತ್ರಿಕೆಗಳೂ ಕಬೂಲಾಯತ್ತಿ, ಬಾವಿ ಗೆಯ ಪತ್ರಗಳ ನಮೂನೆಗಳು ಇರುವದರಿಂದ ಇದು ಒನೆಯ ಇಯತ್ತೆಯವರಿಗೂ ಅಗ್ರಿಕಲ್ಚರಲ್ ಬಾಯಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಹೆಚ್ಚಿಗಳಿರುವದರಿಂದ ನಮೂನೆಗಾಗಿ ಒಂದ ನ್ನಾದರೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೪ ಆಣೆ

ಹೊಸ ಪದ್ಧತಿಯ (೧) ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೪ ಆಣೆ.

೨. ಆರಂಭದ ಜಮಾಖರ್ಚು: ೬ನೆಯ ಇಯತ್ತೆಯವರಿಗೆ ಉಪಯೋಗವದೆ. ಬೆಲೆ: ೩ ಆಣೆ.

೩. ಅಂಗಸಾಧನ ಶಿಕ್ಷಕ: ಬೆಲೆ: ೪ ಆಣೆ

೪. ಗಣಿತಪಾಠ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ್ ಮತ್ತು ಮುಲ್ಕೀಪರೀಕ್ಷೆಯವರಿಗೆ ಉಪಯುಕ್ತವಿದೆ. ಬೆಲೆ: ೪ ಆಣೆ

ವಿಳಾಸ:— **ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.**

Printed by F. Y. Mindgudli at Ravindra Press Dharwar and Published by S. G. Baichwal Esq, M. A. Principal Tarining College For-Men Dharwar at his Office 7403--46--1375

ಕನ್ನಡ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಸಂಪಾದಕರು:

ಶ್ರೀನಿವಾಸ ರಾಮಚಂದ್ರ ಜೋಶಿ, ಬಿ. ಎ., ಬಿ. ಟಿ.

ಜುಲೈ, ಆಗಸ್ಟ, ಸಪ್ಟಂಬರ ೧೯೪೬

ಪರಿವಿಡಿ

೧.	ಸೇವೆ	ಸ್ವಾಮಿ ವಿವೇಕಾನಂದ	೧
೨	ಸಂಪಾದಕೀಯ		೩
೩.	ಉದ್ಗಾಮಿ ಪದ್ಧತಿ	ಶ್ರೀ. ಎಸ್. ಜಿ. ಬೈಜವಾಳ	೬
೪.	ಶೈಕ್ಷಣಿಕ ಸುಧಾರಣೆಗಳು	ಶ್ರೀ. ಗುರುನಾಥ ಜೋಶಿ	೧೨
೫.	ಟ್ರೇನಿಂಗ ಕಾಲೇಜದ ಪತ್ಯೇತರ ಚಟುವಟಿಗೆಗಳು		೧೬
೬.	ನಮ್ಮ ಹೊಸ ಇನ್‌ಸ್ಪೆಕ್ಟರು		೧೭
೭.	ವರ್ಗಾವರ್ಗಿ ಸುದ್ದಿಗಳು		೧೯
೮.	"ನೀವು ಯಾರು" ಎಂದು ಕೇಳುವಿರಾ ?	ಶ್ರೀ. ಎಚ್. ಜಿ. ಕಟ್ಟಿ	೨೦
೯.	ಶೈಕ್ಷಣಿಕ ಸುದ್ದಿಗಳು		೨೧
೧೦.	ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಚಟುವಟಿಕೆಗಳು	E. S. Elijah, L. S. T. C. W. Dharwar	೨೩

ಸ್ವೀಕಾರ ಮತ್ತು ವಿಮರ್ಶೆ

ಹಿಂದುಸ್ತಾನೀ ಪಹಲೀ ಕಿತಾಬ್—ಕನ್ನಡ ಶಬ್ದಾರ್ಥ, ಹಿಂದುಸ್ತಾನೀ ದೂಸರೀ ಕಿತಾಬ್—ಕನ್ನಡ ಶಬ್ದಾರ್ಥ, ಹಿಂದುಸ್ತಾನೀ ತೀಸರೀ ಕಿತಾಬ್—ಕನ್ನಡ ಶಬ್ದಾರ್ಥ.

ಲೇಖಕರು:—ಶ್ರೀ. ಗುರುನಾಥ ಜೋಶಿ ಮತ್ತು ಶ್ರೀ. ಜೆ. ಡಿ. ಮೈಸಾಳಿ, ಬೆಲೆ ಅನುಕ್ರಮವಾಗಿ ೦–೨–೬, ೦–೪–೦, ೦–೪–೦. ಭಾರತೀಯ ಸಾಹಿತ್ಯ ಮಂದಿರ, ಲೈನಬಝಾರ, ಧಾರವಾಡ.

ಈ ಮೂರು ಪುಸ್ತಕಗಳು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಹಿಂದುಸ್ತಾನಿ ಕಲಿಯುವವರಿಗೆ ಉಪಯುಕ್ತವಾಗಿವೆಯಲ್ಲದೆ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿವೆ. ಇಂಥ ಕನ್ನಡ ಶಬ್ದಾರ್ಥವುಳ್ಳ ಪುಸ್ತಕಗಳು ಬೇಕಾಗಿದ್ದವು. ಲೇಖಕರು ಪೂರೈಸಿದ್ದಾರೆ. ಇವು ಹಿಂದುಸ್ತಾನಿ ಕಲಿಯತಕ್ಕವರಿಗೆ ಅತ್ಯಂತ ಉಪಯುಕ್ತವಾಗಿವೆ.

—ಸಂಪಾದಕರು.

ಕ ನ್ನ ಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಶ್ರೀನಿವಾಸ ರಾಮಚಂದ್ರ ಜೋಶಿ ಬಿ. ಎ., ಬಿ. ಟಿ.

ಕೊಗುವೊಂದಾಗಿ । ಕರುಳೊಂದಾಗಿ । ಹೃದಯವದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ವಿದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ ॥ ಭೋಗಬಿಟ್ಟೀಳಿರೈ ।
ಕನ್ನಡಮ್ಮನ ಕುವರರೇ ॥

— ಋಗ್ವೇದ.

ಸಂಪುಟ ೮೫	ಜುಲೈ, ಅಗಸ್ಟ, ಸಪ್ಟಂಬರ ೧೯೪೬	ವರ್ಷ ೧೯ ಸಂ. ೪, ೫, ೬,

ಸೇವೆ

ಪ್ರತಿಯೊಬ್ಬ ಗಂಡುಸು, ಹೆಂಗುಸು ಹಾಗೂ ಮಗುವನ್ನು ದೇವರಂತೆ ಕಾಣಿರಯ್ಯಾ. ನೀವು ಯಾವನಿಗೂ ಸಹಾಯ ನೀಡಲಾರಿರಯ್ಯಾ, ಸೇವೆ ಸಲ್ಲಿಸಬಲ್ಲಿರಯ್ಯಾ. ದೇವನ ಮಕ್ಕಳ ಸೇವೆ ಮಾಡಿದರೆ ದೇವನ ಸೇವೆ ಮಾಡಿದಂತಯ್ಯಾ, ಬಡವರ ದುಃಖಿಗಳ ಸೇವೆ ಮಾಡಿದರೆ ಮುಕ್ತಿ ಕಾಣಿರಯ್ಯಾ.

ಮಾನವನ ದೇಹದಲಿರುವ ಮಾನವಾತ್ಮನೇ ದೇವ. ಅವನೇ ಪೂಜಿಸಬೇಕಾದ ದೇವನಯ್ಯಾ. ಎಲ್ಲ ಪ್ರಾಣಿಗಳು ಮಂದಿರಗಳೆಂಬುದೂ ನಿಜವಯ್ಯಾ, ಅದರೆ ಮಾನವ ಶ್ರೇಷ್ಠ ಮಂದಿರಗಳ ತಾಜಮಹಲಯ್ಯಾ. ಅವನನ್ನು ಪೂಜಿಸದಿರೆ ಯಾವ ಮಂದಿರವೂ ಉಪಯುಕ್ತವಾಗಯ್ಯಾ.

ದಿನದಿನಕೆ ಪಾತಾಳಕಿಳಿಯುತಿರುವ ನಾಲ್ವತ್ತು ಕೋಟಿ ಜನರ ದುಃಖಹರಣ ಗೈವುದಕೆ ನಿಮ್ಮ ಜೀವಗಳನು ಮೀಸಲಾಗಿರಿಸಲು ಆಣೆ ಮಾಡಿರಯ್ಯಾ.

ಬಡವರಿಗಾಗಿ ತನ್ನ ನೆತ್ತರ ಸುಡಿಸುವವನೇ ಮಹಾತ್ಮ, ಅನ್ಯನು ದುರಾತ್ಮನೆಂದು ನಾನೆಂಬೆನಯ್ಯಾ.

ಬಡವರ ಹಣದಿಂದ ಶಿಕ್ಷಣ ಹೊಂದಿ ಅವರ ಕಡೆಗೆ ಇನಿತೂ ಗಮನ ಕೊಡದೆ ಅವರನ್ನು ಹಸಿವೆಯಿಂದ ಬಳಲಿಸುವಂತಹಗೆ, ಅವರನ್ನು ಅಜ್ಞಾನದಲಿರಿಸುವವಗೆ ನಾನು ಕೃತಘ್ನನೆಂದು ಬಗೆವೆನಯ್ಯಾ ರಾಮಕೃಷ್ಣ ಪರಮಹಂಸಾ.

(ಜೋಗು)

— ವಿವೇಕಾನಂದ.

ಸಂಪಾದಕೀಯ

ಪ್ರಾಥಮಿಕ ಶಿಕ್ಷಕರ ಸಂಬಳ:

ಪ್ರಾಥಮಿಕ ಶಿಕ್ಷಕರು ತಮ್ಮ ಸಂಬಳವು ಹೆಚ್ಚಾಗಬೇಕೆಂದು ಸಂಪು ಹೂಡಿದ್ದರು. ಜನತಾ ಸರಕಾರವು ಅವರ ಪ್ರಶ್ನೆಯನ್ನು ಸಹಾನುಭೂತಿಯಿಂದ ವಿಚಾರ ಮಾಡಿ ಅವರ ಸಂಬಳವನ್ನು ೨ವರ್ಷ ಟ್ರೇನಿಂಗ ಪಡೆದವರಿಗೆ ೩೦-೧-೫೦-೨-೨೦-೨೧-೨೫ಕ್ಕೆ ಏರಿಸಿತು. ಪ್ರಾಥಮಿಕ ಶಿಕ್ಷಣದ ಬಗ್ಗೆ ಇರುವ ತನ್ನ ಆಸ್ಥೆಯನ್ನು ತೋರಿಸಿದ್ದಕ್ಕಾಗಿ ಪ್ರಾಥಮಿಕ ಶಾಲೆಯ ಶಿಕ್ಷಕರೆಲ್ಲರೂ ಸರಕಾರಕ್ಕೆ ಋಣಿಯಾಗಿದ್ದಾರೆ. ಈಗ ಏರಿಸಿದ ಸಂಬಳವು ಸದ್ಯದ ಸ್ಥಿತಿಯಲ್ಲಿ ಶಿಕ್ಷಕರಿಗೆ ಸಾಕಾಗುವುದಿಲ್ಲವೆಂಬುದು ನಿರ್ವಿವಾದವಾಗಿದ್ದರೂ ಅಧಿಕಾರವನ್ನು ವಹಿಸಿದೊಡನೆ ಸದ್ಯಕ್ಕೆ ತನಗೆ ಸಾಧ್ಯವಿದ್ದಷ್ಟು ಹಿತವನ್ನು ಮಾಡಲು ಸರಕಾರವು ಹೆಣಗಿದೆಯೆನ್ನಬಹುದು. ಸರಕಾರದ ಮುಂದೆ ಇನ್ನೂ ಮಹತ್ವದ ಪ್ರಶ್ನೆಗಳು ಅವಶ್ಯವಾಗಿ ಬಿಡಿಸಲೇಬೇಕಾದುವು ಇರುವುದರಿಂದ, ಇನ್ನೂ ಅನೇಕ ಯೋಜನೆಗಳು ಅದರ ಮುಂದೆ ಇರುವುದರಿಂದ ಇನ್ನೂ ಸಂಬಳವನ್ನು ಈಗಲೇ ಹೆಚ್ಚಿಸಲು ಕೇಳುವುದು, ಸಂಪು ಹೂಡುವುದು ವಿಹಿತವಾದುದಲ್ಲವೆಂದು ನಾವು ಹೇಳಬಹುದಾಗಿದೆ. ಸದ್ಯದಲ್ಲಿ ಸಂಬಳವನ್ನು ಏರಿಸುವುದು ಸಾಧ್ಯವಿಲ್ಲದಿದ್ದರೆ ಸರಕಾರದವರು ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಪುಕ್ಕಟೆ ವಸತಿ, ಅವರ ಮಕ್ಕಳಿಗೆ ಪುಕ್ಕಟೆ ಶಿಕ್ಷಣ ಸಿಗುವಂತೆ ವ್ಯವಸ್ಥೆ ಮಾಡಬಹುದಾಗಿದೆ. ಈ ವಿಷಯವನ್ನು ಜನತಾಪ್ರಿಯ ಸರಕಾರವು ಸಹಾನುಭೂತಿಯಿಂದ ವಿಚಾರಿಸುವುದೆಂದು ಆಶಿಸುತ್ತೇವೆ.

ಒತ್ತಾಯದ ಶಿಕ್ಷಕತನ:

ಉಚ್ಚ ಶಿಕ್ಷಣ ಅಥವಾ ಒಕ್ಕಲತನ, ವ್ಯಾಪಾರ, ಉದ್ಯೋಗಗಳಲ್ಲಿ ತಕಬೇತಿ ಹೊಂದ ಲರ್ಹರಾದವರನ್ನು ಬಿಟ್ಟು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರು ೨ವರ್ಷ ಶಿಕ್ಷಕನ ಕೆಲಸ ಮಾಡಬೇಕು, ವಿಶ್ವವಿದ್ಯಾಲಯದ ಪದವೀಧರರು ಮಾಧ್ಯಮಿಕ ಶಾಲೆಗಳಲ್ಲಿ ಕೆಲಸ ಮಾಡಬೇಕು ಎಂದು ಒತ್ತಾಯದ ಶಿಕ್ಷಕತನದ ಮಸೂದೆಯೊಂದನ್ನು ಮುಂಬಯಿ ಶಾಸನ ಸಭೆಯಲ್ಲಿ ೧೬—೭—೧೯೪೬ನೆಯ ದಿನ ಶ್ರೀಮತಿ ಲೀಲಾವತಿ ಮುನಸಿಯವರು ಮಂಡಿಸಿದರು. ಮಹಾತ್ಮಾಗಾಂಧಿಯವರೂ ಈ ಗೊತ್ತುವಳಿಗೆ ಅನುಮೋದನೆ ಕೊಟ್ಟು ಆಶೀರ್ವದಿಸಿದರು. ಆದರೆ ೨೨—೭—೧೯೪೬ನೆಯ ದಿನ ಈ ಗೊತ್ತುವಳಿಯು ಚರ್ಚೆಗೆ ಬಂದಾಗ ಶ್ರೀಮಾನ್ ಖೇರರು ಒತ್ತಾಯದಿಂದ ದುಡಿಯಹಚ್ಚುವುದು ಒಳಿತಲ್ಲವೆಂದೂ ಒತ್ತಾಯದ ಶಿಕ್ಷಣ ಕ್ರಮವು ಕೈಕೊಳ್ಳಲ್ಪಟ್ಟಾಗ ಶಿಕ್ಷಕರ ಸಂಬಳವನ್ನು ಹೆಚ್ಚಿಸಿದರೆ ಶಿಕ್ಷಕರ ಕೊರತೆ ಬೀಳಲಿಕ್ಕಿಲ್ಲವೆಂದೂ ಹೇಳಿದ್ದರಿಂದ ಶ್ರೀಮತಿ ಮುನಶಿಯವರು ತಮ್ಮ ಮಸೂದೆಯನ್ನು ಹಿಂದೆ ತೆಗೆದುಕೊಂಡರು.

ಶ್ರೀಮಾನ್ ಖೇರರು ಹೇಳಿದ ಸಂಗತಿ ಸತ್ಯವಾದುದಾಗಿದೆ. ಸಂಬಳ ಹೆಚ್ಚಿಸಿದರೆ ಶಿಕ್ಷಕರ ಕೊರತೆ ಎಂದಿಗೂ ಬೀಳದು. ಈಗ ಸಂಬಳ ಕಡಿಮೆ ಇದ್ದುದರಿಂದ ಎಷ್ಟೋ ಜನ ಶಿಕ್ಷಕರು ತಮ್ಮ ಕೆಲಸ ಬಿಟ್ಟು ಬೇರೆ ಬೇರೆ ಕೆಲಸಗಳಿಗೆ ಹೋಗಿದ್ದಾರೆ. ಸಂಬಳ ಹೆಚ್ಚಿಸಿದ್ದಾದರೆ ಅವರು ಪುನಃ ಶಿಕ್ಷಕತನದ ಕಾರ್ಯಕ್ಕೆ ಬರುವುದರಲ್ಲಿ ಸಂದೇಹವಿನಿತಿಲ್ಲ. ಶ್ರೀ ಖೇರರಿಗೆ ಆಡಿದಂತೆ ಮಾಡಿ ತೋರಿಸುವ ಶಕ್ತಿಯನ್ನೂ ವಾತಾವರಣವನ್ನೂ ದೇವರು ಒದಗಿಸಿ ಕೊಡಲೆಂದೂ ಆಯುರಾರೋಗ್ಯವನ್ನು ಕೊಡಲೆಂದೂ ಹಾರೈಸುತ್ತೇವೆ.

ಮೂಲ ಶಿಕ್ಷಣ:

೧೯೩೭ರಲ್ಲಿ ಕಾಂಗ್ರೆಸು ಸರಕಾರದ ಸೂತ್ರಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡನಂತರ ಸದ್ಯದ ಶಿಕ್ಷಣ ಕ್ರಮದಲ್ಲಿ ಒಂದು ಹೊಸ ಪದ್ಧತಿಯನ್ನು ಪ್ರಾರಂಭಿಸಿತು. ಅದಕ್ಕೆ ವೃತ್ತಿ ಮೂಲ ಶಿಕ್ಷಣ ಯೋಜನೆ, ಅಥವಾ ವರ್ಧಾ ಶಿಕ್ಷಣ ಯೋಜನೆ ಎಂದು ಹೆಸರು ಬಂತು. ಕಾಂಗ್ರೆಸು ಅಧಿಕಾರ ವಹಿಸಿದ ಪ್ರಾಂತಗಳಲ್ಲೆಲ್ಲ ಈ ಯೋಜನೆಯಂತೆ ಕೆಲವು ಸಂಸ್ಥೆಗಳನ್ನು ಸ್ಥಾಪಿಸಿತು. ಕಳೆದ ಮಹಾ ಯುದ್ಧದಲ್ಲಿ ಅದು ಅಧಿಕಾರವನ್ನು ಬಿಟ್ಟು ಬಿಟ್ಟಾಗ ಈ ಶಿಕ್ಷಣ ಯೋಜನೆಯು ಹಾಗೂ ಹೀಗೂ ಜೀವ ಹಿಡಿದುಕೊಂಡು ಇಲ್ಲಿಯ ವರೆಗೆ ಬಂತು. ಈ ಯೋಜನೆ ಭಾರತಕ್ಕೆ ಯೋಗ್ಯವಾದುದೆಂದು ಅನೇಕ ವಿದೇಶೀ ಶಿಕ್ಷಣಜ್ಞರಿಗೂ ಎನಿಸಿದ್ದರಿಂದ ಈ ಯೋಜನೆಯ ತಳಹದಿಯ ಮೇಲೆ ಒಂದು ದೊಡ್ಡ ಶೈಕ್ಷಣಿಕ ಯೋಜನೆಯು ಸಿದ್ಧವಾಯಿತು. ಅದಕ್ಕೆ ಸಾರ್ಜಂಟ್ ಯೋಜನೆಯೆನ್ನುವರು. ಸಾರ್ಜಂಟ್ ಯೋಜನೆಗೆ ಅನುಸಾರವಾಗಿ ಕೆಲಸ ಪ್ರಾರಂಭಿಸಿದರೆ ದೇಶವು ಸಾಕ್ಷರವಾಗಲಿಕ್ಕೆ (೪೦ ವರ್ಷ) ಬಹಳ ದಿನ ಬೇಕು. ಆದುದರಿಂದ ಪ್ರಾಂತೀಯ ಸರಕಾರಗಳು ಈಗ ಒತ್ತಾಯದ ಪ್ರಾಥಮಿಕ ಶಿಕ್ಷಣ ಮತ್ತು ಮೂಲ ಶಿಕ್ಷಣದ ಬಗ್ಗೆ ವಿಚಾರ ಮಾಡತೊಡಗಿವೆ. ಮುಂಬಯಿ ಶಾಸನ ಸಭೆಯಲ್ಲಿಯೂ ೨೩—೭—೧೯೪೬ನೆಯ ದಿನ ಮೂಲ ಶಿಕ್ಷಣದ ಬಗ್ಗೆ ಚರ್ಚೆಯಾಯಿತು. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿಯೂ ಕೈಗಾರಿಕೆಯನ್ನು ಜಾರಿಗೆ ತರಬೇಕು ಎಂಬ ಬಗ್ಗೆಯೂ ಚರ್ಚೆಯಾಯಿತು.

ಈಗಿನ ಶಿಕ್ಷಣವು ಕೇವಲ ಬೌದ್ಧಿಕವಾಗಿದೆ. ಅನ್ಯರನ್ನು ಅವಲಂಬಿಸಿಕೊಂಡಿರುವ ಮನೋವೃತ್ತಿಯನ್ನು ಸಿದ್ಧ ಮಾಡುತ್ತದೆ. ಒಂದು ಕೈಗಾರಿಕೆಯು ಇದಕ್ಕೆ ಸೇರಿದರೆ ಸ್ವಾವಲಂಬನ ವೃತ್ತಿಯು ಬೆಳೆಯುತ್ತದೆ. ಸರಕಾರದವರು ಬೌದ್ಧಿಕ ಶಿಕ್ಷಣದ ಜೊತೆಗೆ ಕೈಗಾರಿಕೆಯನ್ನು ಸೇರಿಸಿ, ಕೈಗಾರಿಕೆಯ ಮುಖಾಂತರ ಬೌದ್ಧಿಕ ಶಿಕ್ಷಣದ ಯೋಜನೆಯನ್ನು ಸಾರ್ವತ್ರಿಕವಾಗಿ ಆದಷ್ಟು ಬೇಗ ಪ್ರಾರಂಭಿಸಿದಷ್ಟು ಚೆನ್ನು, ದೇಶಕ್ಕೆ ಹಿತಕರ.

ಪುಣೆ ಶೈಕ್ಷಣಿಕ ಪರಿಷತ್ತು:

ತಾ|| ೩೧—೭—೧೯೪೬ರಲ್ಲಿ ಶ್ರೀಮಾನ್ ಬಾಳಾಸಾಹೇಬ ಖೇರರು ಅಖಿಲ ಭಾರತೀಯ ಶೈಕ್ಷಣಿಕ ಪರಿಷತ್ತನ್ನು ಕರೆದಿದ್ದರು. ಶಿಕ್ಷಣಜ್ಞರು ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಅದರಲ್ಲಿ ಮುಖ್ಯವಾದ ಒಂದು ಗೊತ್ತುವಳಿಯಾಯಿತು:— ೭–೮ ವರ್ಷಗಳ ಮೂಲ ಶಿಕ್ಷಣ ಕ್ರಮದಲ್ಲಿ ಇಂಗ್ಲೀಷು ಭಾಷೆಗೆ ಸ್ಥಾನವಿರತಕ್ಕದ್ದಲ್ಲ.

ಈ ಗೊತ್ತುವಳಿಯಾದುದು ಸರ್ವಥಾ ಯೋಗ್ಯವಾಗಿದೆ. ಏಕೆಂದರೆ ನಮ್ಮ ಬಾಲಕರ ಜೀವನವು ಇಂಗ್ಲಿಷು ಭಾಷೆಯನ್ನು ಕಲಿಯುವುದರಲ್ಲಿ ಹಾಳಾಗುತ್ತಿದೆ. ಕಾಲವು ವ್ಯರ್ಥ ಹರಣವಾಗುತ್ತದೆ. ಕೇವಲ ಈ ಭಾಷೆಯನ್ನು ಕಲಿಯಲು ಹರಣವಾಗುವ ಸಮಯವನ್ನು ಮಾತೃ ಭಾಷೆಯ ಮುಖಾಂತರ ಜ್ಞಾನ ಮಾಡಿಕೊಡಲು ಉಪಯೋಗಿಸಿದರೆ ಬಾಲಕನ ಜ್ಞಾನದ ಮಟ್ಟವು ಹೆಚ್ಚುವುದು. ಮೇಲಾಗಿ ಈ ಭಾಷೆಯು ಅನೇಕರಿಗೆ ಅವರ ಭಾವೀಜೀವನದಲ್ಲಿ ಅಷ್ಟು ಉಪಯೋಗವಾಗುವುದಿಲ್ಲ. ಈ ಗೊತ್ತುವಳಿಯು ಆದಷ್ಟು ಬೇಗ ಕಾರ್ಯರೂಪಕ್ಕೆ ಬರುವುದೆಂದು ಹಾರೈಸುತ್ತೇವೆ.

ಅಖಿಲ ಕರ್ನಾಟಕ ಏಕೀಕರಣದ ಪರಿಷತ್ತು:

ದಾವಣಗೆರೆಯಲ್ಲಿ ತಾ. ೫—೬—೧೯೪೬ನೆಯ ದಿನ ಮಾನ್ಯ ಶ್ರೀ ಎಂ. ಪಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಪರಿಷತ್ತಿಗೆ ಶ್ರೀ ಕೋಟೆ ರಾಮಕೃಷ್ಣ ಕಾರಂತರು ಉದ್ಘಾಟಿಸಿದ್ದರು. ಶ್ರೀ ಉರಿಕೊಂಡಿ ಚೆನ್ನಬಸಪ್ಪನವರು ಸ್ವಾಗತಾಧ್ಯಕ್ಷರಾಗಿದ್ದರು.

ಈ ಪರಿಷತ್ತು ಅತ್ಯಂತ ಸ್ವಾರಸ್ಯಕರವಾಗಿತ್ತೆಂದು ಸರ್ವರೂ ಒಪ್ಪಿಕೊಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಕರ್ನಾಟಕವು ಸ್ವತಂತ್ರ ರಾಜ್ಯವಾಗಲು ಅರ್ಹವಿದೆಯೆಂಬುದನ್ನು ಮಾನ್ಯ ಶ್ರೀ ಎಂ. ಪಿ. ಪಾಟೀಲರು ತಮ್ಮ ಕಾಸ್ಟಿಯ ಭಾಷಣದಲ್ಲಿ ಸುಂದರವಾಗಿ ಕೂಲಂಕಷವಾಗಿ ಚರ್ಚಿಸಿದ್ದಾರೆ. ಕರ್ನಾಟಕವು ಸ್ವತಂತ್ರವಾಗಬೇಕೆಂಬ ಬಗ್ಗೆ ಈಗ ಭಿನ್ನಾಭಿಪ್ರಾಯವಿಲ್ಲ. ಕರ್ನಾಟಕವು ಸ್ವತಂತ್ರವಾದಮೇಲೆ ನಮ್ಮ ಜನರು ವ್ಯಾಪಕದೃಷ್ಟಿಯಿಂದ ಉಳಿದು ನಮ್ಮ ನಾಡಿನ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಗತಿಯನ್ನು ಮಾಡಿಕೊಳ್ಳಲು ಅನುಕೂಲವಾಗುವುದು. ಪ್ರಾಥಮಿಕ ಶಾಲೆಯಾ ವಿಷಯ ಇ ಕನ್ನಡನಾಡನ್ನು ಒಂದುಗೂಡಿಸಿ ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಲು ನಡೆಯುತ್ತಿರುವ ಪ್ರಯತ್ನಕ್ಕೆ ಕಾಯಿದೆಶೀರ ಮಾರ್ಗಗಳಿಂದ ಸಾಧ್ಯವಿದ್ದಷ್ಟು ಸಹಾಯವಾಗಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ.

ಧಾರವಾಡದಲ್ಲಿ ಒಕ್ಕಲಿಕೆಯ ಕಾಲೇಜು

ಒಕ್ಕಲಿಕೆಯ ಕಾಲೇಜು ಬಹ್ಮ ಕಾಣಬೇ ಬೇಕೆಂದು ಅನೇಕ ಊರುಗಳ ಜನರು ಪ್ರಯತ್ನಿಸಿಕೊಡಗಿದ್ದಾರೆ. ಅವೆಲ್ಲ ವಿಚಾರಿಸಿ ಒಕ್ಕಲಿಕೆಯ ಕಾಲೇಜಿಗೆ ಯೋಗ್ಯವಾದ ಸ್ಥಳವಾಗಿದೆ. ಭೂಮಿ, ಹೆಸ್ಕೆ, ನೀರು ಇವು ಕ್ಷೇತ್ರಾಕಾರಣಾದಿಗಳನ್ನು ಒದಗಿಸಿ ಕೊಡುತ್ತವೆ. ಕರ್ನಾಟಕದ ಕೇಂದ್ರ ಸ್ಥಳವಾಗಿರುವ ಧಾರವಾಡ ಮೈಸೂರು ಸರಕಾರದವರು ಧಾರವಾಡದಲ್ಲಿಯೆ ಮೂಲ ಶಿಕ್ಷಣದ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಮೂಲ ಶಿಕ್ಷಣ ಕ್ರಮದಲ್ಲಿ ಒಕ್ಕಲಿಕೆಯೂ ಹೋದ ವರುಷದಿಂದ ಸೇರಿಸಲ್ಪಟ್ಟಿದೆ. ಇದ್ದರಿಂದ ಒಕ್ಕಲಿಕೆಯ ಕಾಲೇಜೂ ಸ್ಥಾಪಿಸಲ್ಪಟ್ಟರೆ ಈ ಶಿಕ್ಷಣ ಕೇಂದ್ರಕ್ಕೆ ಹೆಚ್ಚು ಸಹಾಯವಾಗುವ ಮೂಲಕವಿದೆ. ಮತ್ತು ಶಿಕ್ಷಣ ಕೇಂದ್ರಕ್ಕೆ ತನ್ನ ಕಾರ್ಯವನ್ನು ಯಶಸ್ವಿಯಾಗಿ ಮಾಡಿ ಕೆಲಸಮಾಡಿಕೊಡುವುದು ಸುಸಂಧಿಯು ದೊರಕುವುದು. ಈ ದೃಷ್ಟಿಯಿಂದ ನೋಡಿದರೂ ಧಾರವಾಡದಲ್ಲಿ ಒಕ್ಕಲಿಕೆಯ ಕಾಲೇಜು ಹೆಚ್ಚು ಶೋಭಿಸುವುದೆಂದು ಹೇಳಬಹುದು. ಒಕ್ಕಲಿಕೆಯ ವಿದ್ಯಾರ್ಥಿಮಿತ್ರರು ತಿಂಗಳ ಜಾಥಾಕ್ಕೆಯ ದಿನ ಧಾರವಾಡದಲ್ಲಿ ಒಕ್ಕಲಿಕೆಯ ಕಾಲೇಜಿಗೆ ಸ್ಥಳ ಪರಿಶೀಲನೆಯನ್ನು ಮಾಡಿ ಹೋಗಿರುವರು. ಇದು ಕೇವಲ ಕೋರಿಕೆಯು ಪರೀಕ್ಷೆಮಾಡಿದಲಾಗಿದೆಂದು ನಾವು ತಿಳಿಸಿಕೊಳ್ಳುತ್ತೇವೆ.

ಹಳ್ಳಿಗರ ಕನ್ನಡ ಬಾನುಲಿ

ತಾ. ೧—೯—೧೯೪೬ರಿಂದ ಅಲ್ಲಿ ಕರ್ನಾಟಕದ ಶಿಕ್ಷಣಾಧಿಕಾರಿಗಳು ಮುಂಬಯಿ ಬಾನುಲಿ ಕೇಂದ್ರದಲ್ಲಿ ಹಳ್ಳಿಗರಿಗಾಗಿ ಕನ್ನಡದಲ್ಲಿ ಕಾರ್ಯಕ್ರಮಗಳನ್ನು ಪ್ರಸಾರಮಾಡಲು ೨೦ ನಿಮಿಷ ಸಮಯವನ್ನು ಕೊಟ್ಟರು. ಇದು ಅನಂತಪುರದ ಸಬ್ಬ ಶ್ರೀಯುತರು ಬಿ. ಜಿ. ಜೇರಿಂದ ಇದರ

ಉದ್ಘಾಟನೆಯು ಕನ್ನಡದಲ್ಲಿಯೆ ಆದುದು ಇನ್ನೂ ಸಂತೋಷದ ಸಂಗತಿಯು. ಆದರೆ ಕನ್ನಡದಲ್ಲಿಯೂ ಎಲ್ಲ ಸುದ್ದಿಗಳನ್ನು ಸಾರುವದಕ್ಕೂ ಅವಕಾಶವನ್ನು ಭಾರತ ರೆಡಿಯೋ ಕೇಂದ್ರದವರು ಒದಗಿಸಿ ಕೊಡಬೇಕು ಮತ್ತು ಕನ್ನಡಕ್ಕಾಗುತ್ತಿರುವ ಅನ್ಯಾಯವನ್ನು ದೂರಮಾಡಿ ಕನ್ನಡಿಗರ ಒಲುಮೆಗೆ ಇದೇ ರೀತಿಯಾಗಿ ಪಾತ್ರರಾಗಬೇಕೆಂದು ಬಿನ್ನವಿಸುತ್ತೇವೆ. ಕನ್ನಡದಲ್ಲಿಯೇ ಸುದ್ದಿಗಳೂ ಸಾರಲ್ಪಟ್ಟರೆ ಪ್ರಾಥಮಿಕ ಶಿಕ್ಷಕರಿಗೂ ಜಗತ್ತಿನ ಜ್ಞಾನಲಾಭವಾಗುವುದು.

ಮೂಲಶಿಕ್ಷಣ ತರಬೇತಿ-ವರ್ಗಗಳು:

ಮುಂಬಯಿ ಸರಕಾರದವರು ಮೂಲ ಶಿಕ್ಷಣ ಪದ್ಧತಿಗೆ ವಿಶೇಷ ಲಕ್ಷ್ಯವನ್ನು ಕೊಡತೊಡಗಿದ್ದಾರೆ. ೧೬—೯—೪೬ರಿಂದ ಐದೈದು ವಾರಗಳ ವರೆಗೆ ತರಬೇತಿ ವರ್ಗಗಳು ಪುಣೆಯು ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಪ್ರಾರಂಭಿಸಲ್ಪಟ್ಟಿವೆ. ಈ ವರ್ಗಗಳಿಗೆ ನಮ್ಮ ಭಾಗದಿಂದ ಟ್ರೇನಿಂಗ ಕಾಲೇಜಗಳ ಅಧ್ಯಾಪಕರನ್ನೂ ಏ. ಡಿ. ಆಯ್. ಅವರನ್ನೂ ಆರಿಸಲಾಗಿದೆ. ಈ ವರ್ಗಗಳಿಗೆ ನಮ್ಮ ಭಾಗದಿಂದ ಏಳೇಳು ಜನರು ಹೋಗುವರು. ಈ ಐದೈದು ವಾರಗಳ (ಎಂಟು ಸತ್ರಗಳ) ವರೆಗೆ ಮೂಲಶಿಕ್ಷಣ ಕ್ರಮದಂತೆ ಶಿಕ್ಷಣವನ್ನು ಕೊಡಲಾಗುವುದು. ಈ ಯೋಜನೆಯು ಬೇಗನೆ ಸಾರ್ವತ್ರಿಕವಾಗಿ ಮೂಲಶಿಕ್ಷಣ ಕ್ರಮವು ನಮ್ಮ ಪ್ರಾಂತದಲ್ಲಿ ಪ್ರಾರಂಭವಾಗಲಿದೆಯೆಂಬುದನ್ನು ಸೂಚಿಸುತ್ತದೆ. ಆದುದರಿಂದ ಪ್ರಾಥಮಿಕ ಶಿಕ್ಷಕರೆಲ್ಲರೂ ಈಗಿನಿಂದಲೇ ಮೂಲ ಶಿಕ್ಷಣ ಪದ್ಧತಿಗೆ ಒಗ್ಗುವಂತೆ ತಮ್ಮ ಮನೋವೃತ್ತಿಯನ್ನು ಬದಲು ಮಾಡಿಕೊಳ್ಳಬೇಕೆಂದು ಸೂಚಿಸುತ್ತೇವೆ ಮತ್ತು ಸರಕಾರದವರ ಈ ಯೋಜನೆಯನ್ನು ಸ್ವಾಗತಿಸುತ್ತೇವೆ.

ಲೋಕ ಶಾಲೆ:

ವಿಜಾಪೂರದಲ್ಲಿ ಲೋಕಶಾಲೆಯೊಂದನ್ನು ಸರಕಾರದವರು ತೆರೆಯಲಿದ್ದಾರೆ. ಈಗಾಗಲೇ ಕಾರ್ಯವು ಆರಂಭವಾಗಿದೆ. ಮುಂಬಯಿ ಪ್ರಾಂತದಲ್ಲಿ ಅನೇಕ ಕಡೆಗಳಲ್ಲಿ ಲೋಕ ಶಾಲೆಗಳು ಪ್ರಾರಂಭವಾಗಲಿವೆ. ಈ ಶಾಲೆಗಳಲ್ಲಿ ಪ್ರಾಥಮಿಕ ಶಾಳಾ ಪ್ರಮಾಣ ಪತ್ರಪರೀಕ್ಷೆಯ ನಂತರ ಮೂರು ವರ್ಷದ ಶಿಕ್ಷಣ ಕ್ರಮ ಮತ್ತು ಒಂದು ವರ್ಷ ಟ್ರೇನಿಂಗಿನ ಶಿಕ್ಷಣ ಕ್ರಮದ ಏರ್ಪಾಡಾಗಿದೆ. ಈ ಅವಧಿಯಲ್ಲಿ ಈ ಶಾಲೆಯ ವಿದ್ಯಾರ್ಥಿಗಳಿಗೆ ಇಂಗ್ಲೀಷು ಹೊರತು ಪಡಿಸಿ ಮ್ಯಾಟ್ರಿಕದಷ್ಟು ವಿದ್ಯಾಭ್ಯಾಸವಾಗುವುದು. ಈ ಶಾಲೆಗಳ ಅಭ್ಯಾಸ ಕ್ರಮದಿಂದ ನಮ್ಮ ನಾಡಿನ ವಿದ್ಯಾರ್ಥಿಗಳ ಜ್ಞಾನದ ಮಟ್ಟವು ಏರುವುದೆಂದು ಗ್ರಹಿಸಲಾಗಿದೆ. ಈ ಶಾಲೆಗಳು ನಮ್ಮ ಅಜ್ಞಾನದ ಅಂಧಕಾರವನ್ನು ಎಷ್ಟರ ಮಟ್ಟಿಗೆ ಹೊಡೆದೋಡಿಸಬಲ್ಲವೆಂಬುದರ ಸಂಪೂರ್ಣ ಅರಿವು ನಾಲ್ಕು ವರ್ಷದ ನಂತರವೇ ಆಗುವುದು. ಈ ಪ್ರಯೋಗವು ಯಶಸ್ವಿಗಾಲೆಂದು ಹಾರೈಸುತ್ತೇವೆ.

ಗಾಂವಠಿ ಶಾಲೆಗಳು:

ಮುಂಬಯಿ ಸರಕಾರದವರು ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕೆಂದು ನಿರ್ಧರಿಸಿದ್ದಾರೆ. ಅದಕ್ಕಾಗಿ ಗಾಂವಠಿ ಶಾಲೆಗಳಿಗೆ ಇನ್ನೂ ಪ್ರೋತ್ಸಾಹವು ಹೆಚ್ಚಿಗೆ ಸಿಗಬಹುದೆಂದು ಆಶಿಸಲಾಗಿದೆ. ಗಾಂವಠಿ ಶಾಲೆಗಳಲ್ಲಿಯ ಹಿಂದುಳಿದ ವಿದ್ಯಾರ್ಥಿಗಳ ಮತ್ತು ಹೆಣ್ಣುಮಕ್ಕಳ ಮತ್ತು ಇತರರ ಸರಾಸರಿ ಹಾಜರಿಯ ಮೇಲಿಂದ ಶಿಕ್ಷಕರಿಗೆ ಗ್ರ್ಯಾಂಟು ಮೊದಲಾ

ಗಿಂತ ಈಗ ಹೆಚ್ಚಿಸಲ್ಪಟ್ಟಿದೆಯೆಂದು ತಿಳಿದು ಬಂದಿದೆ. ಜನರೂ ಸಮಾಜಸೇವಕರೂ ಸರಕಾರದ ಈ ಶಿಕ್ಷಣ ಯೋಜನೆಗೆ ಬೆಂಬಲ ಕೊಟ್ಟು ಸರಕಾರದ ಯೋಜನೆಯ ಲಾಭ ಪಡೆದು ನಿರಕ್ಷರತೆಯನ್ನು ಹೋಗಲಾಡಿಸಿಕೊಳ್ಳಲು ಮುಂದಾಗುವರೆಂದು ಆಶಿಸಲಾಗಿದೆ.

ಪ್ರೌಢ ಶಿಕ್ಷಣ:

ಸರಕಾರದ ಲಕ್ಷ್ಯವು ಸ್ತ್ರೀ ಶಿಕ್ಷಣದ ಕಡೆಗೂ ಹೆಚ್ಚಾಗಿ ಹೋಗಿದೆ. ಹಳ್ಳಿಯ ಬೋರೇಗೌಡನು ಓದು ಬರಹ ಬಾರದ್ದರಿಂದ ಅನೇಕ ಕಷ್ಟನಷ್ಟಗಳಿಗೆ ಈಡಾಗಿದ್ದಾನೆ. ಅದರಲ್ಲೂ ಹೆಚ್ಚಾಗಿ ಜಮೀನುದಾರರ ಹಾಗೂ ಸಾಹುಕಾರರ ವಾಶಕ್ಕೆ ಸಿಕ್ಕು ತೊಳಲಾಡುತ್ತಿದ್ದಾನೆ. ಅವನಿಗೆ ಓದು ಬರಹ ಬಂದಿದ್ದರೆ ಅವನಿಗೆ ಸಾಹುಕಾರರ ಮತ್ತು ಜಮೀನುದಾರರ ಮೋಸಗಾರಿಕೆಯು ತಿಳಿದು ಬರುತ್ತಿತ್ತು ಮತ್ತು ಇಂದಿನಷ್ಟು ಅವನು ಮುಸ್ಥಿತಿಗೆ ಈಡಾಗುತ್ತಿದ್ದಿಲ್ಲ. ಅವನನ್ನು ಈ ಜನರಿಂದ ಮುಕ್ತ ಮಾಡುವ ಯೋಜನೆಗಳಲ್ಲಿ ಸ್ತ್ರೀಶಿಕ್ಷಣವೂ ಒಂದಾಗಿದೆ. ಈ ಕಾರ್ಯಕ್ಕೆ ಪ್ರಾಥಮಿಕ ಶಿಕ್ಷಕರು ಹೆಚ್ಚು ನೆರವಾಗಿ ನೈತರ ಉದ್ಧಾರ ಕಾರ್ಯ ಮಾಡಬೇಕೆಂದು ಸೂಚಿಸಬಿರಲಾರೆವು.

ಪ್ರಾಥಮಿಕ ಶಿಕ್ಷಣದ ಪ್ರಸಾರ:

ಮುಂಬಯಿ ಪ್ರಧಾನ ಮಂತ್ರಿಗಳೂ ಶಿಕ್ಷಣ ಮಂತ್ರಿಗಳೂ ಆದ ಶ್ರೀ ಬಿ. ಜಿ. ಖೇರರು ತಾರೀಖು ೧೬—೯—೪೬ರಂದು ಪ್ರಾಥಮಿಕ ಶಿಕ್ಷಣದ ಪ್ರಸಾರವೇ ಸರಕಾರದ ಪ್ರಥಮ ಕರ್ತವ್ಯವೆಂದೂ ಎಂಜಿನಿಯರಿಂಗ್ ಕಾಲೇಜುಗಳಿಗಾಗಲಿ ವೈದ್ಯಕೀಯ-ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುವುದು ದೇಶದ ದೃಷ್ಟಿಯಿಂದ ಅವಶ್ಯವಾದದ್ದೆಂದೂ ಮುಂಬೈ ಮೇಲ್ಮನೆಯಲ್ಲಿ ಮಾತನಾಡಿದುದು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ ಆನಂದವನ್ನುಂಟುಮಾಡಿದೆ. ಇದಕ್ಕೂ ಆನಂದದ ಸಂಗತಿಯೇನೆಂದರೆ ಮುಂಬೈ ಸರಕಾರವು ಪ್ರಾಥಮಿಕ ಶಿಕ್ಷಕರಿಗೆ—೪೦ರೂ. ಗಿಂತ ಕೆಳಗಿನವರಿಗೆ೫ರೂ., ಮೇಲಿನವರಿಗೆ೦ರೂ.—ತಾತ್ಕಾಲಿಕ ಪರಿಹಾರ ಕೊಡ ಮಾಡಿದ್ದು. ತಿರಸ್ಕರಿಸಲ್ಪಟ್ಟ, ಕಡೆಗಣಿಸಲ್ಪಟ್ಟ ಪ್ರಾಥಮಿಕ ಶಿಕ್ಷಣ ಹಾಗೂ ಶಿಕ್ಷಕರ ಕಡೆಗೆ ಸರಕಾರದ ದೃಷ್ಟಿಯನ್ನು ಹೊರಳಿಸಿ, ಅವರ ಕಲ್ಯಾಣ ಮಾಡುತ್ತಿರುವ ಮಂತ್ರಿಗಳಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು. ಸರಕಾರದ ಇಂದಿನ ದೃಷ್ಟಿ ಕಾಲ್ಪನಿ ವಿಶಾಲವಾಗಲೆಂದೂ ಪ್ರಾಥಮಿಕ ಶಿಕ್ಷಣವು ಇತೋಪ್ಯಧಿಕವಾಗಿ ಪ್ರಸಾರವಾಗಿ ಸಮೃದ್ಧಿ ನಾಡು ಮುಂದೆ ಬರಲೆಂದೂ ಹಾರೈಸುತ್ತೇವೆ. ಶಿಕ್ಷಕರಾದರೂ ಶ್ರೀ. ಖೇರರ ಕೊಡುಗೈಯ ಭಾವನೆಯನ್ನನುಲಕ್ಷಿಸಿ ತಮ್ಮ ಕಾರ್ಯದಲ್ಲಿ ನಿರತರಾಗಬೇಕೆಂದು ನಮ್ಮ ಸೂಚನೆ.

ಉದ್ಗಾಮಿ ಪದ್ಧತಿ

(Inductive Method)

(ವಿಗಮನ ಪದ್ಧತಿ)

ಶ್ರೀ. ಎಸ್. ಜಿ. ಭೈಚವಾಳ, ಎಂ. ಎ.

ಜಗತ್ತಿನ ವಿಷಯಕ್ಕೆ ಜ್ಞಾನ ಮಾಡಿಕೊಳ್ಳಲು ನಮ್ಮ ಎರಡು ಬಗೆಯ ಅನುಭವಗಳು ಸಹಕಾರಿಯಾಗುವುವು— (೧) ವಿಶಿಷ್ಟ ವಸ್ತುಗಳ ಅಥವಾ ಸಂಗತಿಗಳ ಜ್ಞಾನ; (೨) ಸಾಮಾನ್ಯ ಸಂಬಂಧಗಳ ಅಥವಾ ತತ್ತ್ವಗಳ ಮತ್ತು ನಿಯಮಗಳ ಪರಿಚಯ.

ಸಾಮಾನ್ಯವಾಗಿ ತರ್ಕಬದ್ಧರೀತಿಯಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವುದಾದರೆ ವಿಶಿಷ್ಟ ವಸ್ತುಗಳ ಜ್ಞಾನವನ್ನೇ ಮೊದಲು ಮಾಡಿಕೊಳ್ಳಲು ತೊಡಬೇಕಾಗುವುದೆಂದು ತೋಚಬಹುದು. ಆದರೆ ಈ ವಿಶಿಷ್ಟ ವಸ್ತುಗಳ ಜ್ಞಾನವನ್ನು ಮಾಡಿಕೊಳ್ಳಲು ಸಾಮಾನ್ಯ ಸಂಬಂಧದ ಜ್ಞಾನವು ಮುಖ್ಯವಾಗುವುದು. ಐತಿಹಾಸಿಕ ದೃಷ್ಟಿಯಿಂದ ನೋಡಿದರೆ ಸಾಮಾನ್ಯ ಸಂಬಂಧಗಳನ್ನು ಅರಿತುಕೊಳ್ಳುವುದೇ ಮನುಷ್ಯನ ಗುರಿಯಾಗಿದ್ದಿತು. ಈ ಸಂಬಂಧದ ಅರಿವು ಆಗುವಾಗ ಮನಸಿನಲ್ಲಿ ಅದು ಯಾವ ಕ್ರಮದಿಂದ ನಡೆಯುವುದೊ ಅದರ ವಿಚಾರವೇ ಉದ್ಗಾಮಿ ಪದ್ಧತಿಯ ತಿರುಳು.

ಇಂಥ ಸಾಮಾನ್ಯ ತತ್ತ್ವಗಳನ್ನು ಬುದ್ಧಿಪೂರ್ವಕವಾಗಿಯೂ ಬಹಿರಂಗ ರೀತಿಯಿಂದಲೂ ಯಾರೂ ತಮ್ಮ ಜೀವನದಲ್ಲಿ ತಿಳಿದುಕೊಳ್ಳಲು ಯತ್ನಿಸುವುದಿಲ್ಲ. ಎರಡನೆಯವರಿಂದ, ಓದಿದ ವಿಷಯಗಳಿಂದ, ಅನುಭವಗಳಿಂದ ತಿಳಿದುಕೊಂಡು ಅವುಗಳನ್ನು ಯಾವಾಗಲೂ ವ್ಯವಹಾರದಲ್ಲಿ ಉಪಯೋಗಿಸುವರು. ಅವು ಸಾಮಾನ್ಯ ತತ್ತ್ವಗಳ ಸ್ವರೂಪದವೇ ಇರುವುವು. ಆಹಾರ, ಸಹವಾಸ. ಮತ್ತು ಮನರಂಜನೆ ಇವುಗಳ ಸಲುವಾಗಿ ಆಳುವ ಮಗುವು ಬುದ್ಧಿಪೂರ್ವಕವಾಗಿಯೆ ಹಾಗೆ ಮಾಡಿ ವ್ಯವಹಾರದ ನಿಯಮಗಳನ್ನು ತಿಳಿದುಕೊಂಡಿರುವುದು; ಬೆಕ್ಕು, ನಾಯಿ, ಕುದುರೆ, ಆಕಳುಗಳನ್ನು ವಿಂಗಡಿಸಲು ಕಲಿಯುವಾಗ, ಬೆಂಕಿಯು ಸುಡುವುದೆಂದೂ, ಗುಂಗಾಡುಗಳು ಕಡಿಯುವುವೆಂದೂ ಕೀಲಿಕೈಗಳು ಕೀಲಿಗಳನ್ನು ತೆರೆಯು ಬಾಗಿಲುಗಳನ್ನು ತೆರೆಯುವುವೆಂದೂ ಕುರ್ಚಿಯನ್ನು ಮೇಜಿನ ಮೇಲೆ ಹತ್ತಲು ಉಪಯೋಗಿಸಬಹುದೆಂದೂ ಕಲಿಯುವಾಗ ಸಾಮಾನ್ಯ ನಿಯಮಗಳ ಜ್ಞಾನವಾಗುತ್ತ ಹೋಗುವುದು. ಸಂಬಂಧಗಳನ್ನು ಕಂಡು ಹಿಡಿದು ಅವುಗಳನ್ನು ವ್ಯವಹಾರಿಕ ಸೌಕರ್ಯವಾಗುವಂತೆ ಉಪಯೋಗಿಸುವುದು ವಸ್ತುಗಳ ಜ್ಞಾನ ಮತ್ತು ಉಪಯೋಗವನ್ನು ಮಾಡಿ ಕೇಳುವಷ್ಟೇ ಸ್ವಾಭಾವಿಕವಾಗಿರುವುದು. ಮಾನಸಶಾಸ್ತ್ರದ ಸಾಹಚರ್ಯ (Association) ದ ತತ್ತ್ವದ ಸಹಾಯದಿಂದಲೇ ಸಾಮಾನ್ಯ ನಿಯಮಗಳ ಜ್ಞಾನವಾಗುವುದು. ಒಬ್ಬನಿಗೆ ನೋಡಲಿಕ್ಕೆ ಕಲಿಸುವುದು ಅಥವಾ ಆಲಿಸಲಿಕ್ಕೆ ಕಲಿಸುವುದು ಹೇಗೆ ಅವಶ್ಯವಿಲ್ಲವೊ ಹಾಗೆಯೆ ಅವನಿಗೆ ಸಾಮಾನ್ಯ ಸಂಬಂಧವನ್ನೂ ಕಂಡುಹಿಡಿಯಲು ಕಲಿಸುವುದೂ ಅವಶ್ಯವಿಲ್ಲ. ಇದೇ ರೀತಿಯಾಗಿ ಜಾಣತನದಿಂದಲೂ ಜಾಗರೂಕತೆಯಿಂದಲೂ ಕಲಿಸುವುದು ಹೇಗೆ ಸಾಧ್ಯ

ವಿದೆಯೊ ಹಾಗೆಯೆ ಸಾಮಾನ್ಯ ಸಂಬಂಧಗಳನ್ನಾದರೂ ಕಲಿಯುವುದು ಸಾಧ್ಯವಿರುವುದು. ಆದರೆ ಎಲ್ಲ ಸಾಮಾನ್ಯ ನಿಯಮದ ತತ್ತ್ವಗಳು ಅಷ್ಟು ಸುಲಭವಾಗಿರುವುದಿಲ್ಲ. ಗುರುತ್ವಾಕರ್ಷಣ, ಪ್ರಾಣಿಗಳಲ್ಲಿರುವ ವಸ್ತುಗಳ ಸಾವಧಾನವಾಗಿ ಬಂದ ಮತ್ತು ಅನುವಂಶಿಕ ಲಕ್ಷಣಗಳ ಪ್ರಾದುರ್ಭಾವದ ತತ್ತ್ವಗಳು—ಮುಂತಾದುವುಗಳು ಪ್ರತಿಭಾಶಾಲಿಗಳಿಂದಲೇ ಪರಿಶೋಧಿತವಾದುವು. ವಿದ್ಯಾರ್ಥಿಗಳಿಗೆ ಇಂಥವುಗಳ ಜ್ಞಾನವನ್ನು ಶಿಕ್ಷಕನು ಜಾಗರೂಕತೆಯಿಂದ ಮಾಡಿಕೊಡುವುದು ಅತ್ಯಾವಶ್ಯಕ.

ಈ ಪದ್ಧತಿಯು ಶಾಸ್ತ್ರ ದೃಷ್ಟಿಯಿಂದ ಶ್ರೇಷ್ಠವಾದುದೂ ಸ್ವಾಭಾವಿಕವಾದುದೂ ವಿದ್ಯಾರ್ಥಿಗಳ ಕುತೂಹಲವನ್ನು ಕೊನೆಯ ವರೆಗೆ ಕಾಯ್ದುಕೊಂಡು ಹೋಗುವಂತಹುದೂ ಇರುವುದರಿಂದ ಬಾಲಕರೂ ಹಿರಿಯರೂ ಜ್ಞಾನಾರ್ಜನೆಗೆ ಈ ಪದ್ಧತಿಯನ್ನೇ ಉಪಯೋಗಿಸುವವರಾಗಿರುವುದರಿಂದ ಶಿಕ್ಷಕನೂ ಇದೇ ಪದ್ಧತಿಯನ್ನು ತನ್ನ ಕಾರ್ಯದಲ್ಲಿ ಹೆಚ್ಚಾಗಿ ಉಪಯೋಗಿಸತೊಡಗಬಯಸುವುದು ಸ್ವಾಭಾವಿಕವಾಗಿದೆ. ಆದರೆ ಈ ಪದ್ಧತಿಯನ್ನು ಉಪಯೋಗಿಸುವಾಗ ಶಿಕ್ಷಕನು ಬಹಳ ಜಾಗರೂಕನಾಗಿರಬೇಕಾಗುವುದು. ಅವನು ಇದನ್ನು ಅನುಸರಿಸುವಾಗ ಬಾಲಕರಿಗೆ ಗೊತ್ತಿದ್ದ ವಿಷಯವನ್ನಾಗಲಿ ತಾನು ಕಲಿಸಬೇಕೆಂದಿರುವ ವಿಷಯವನ್ನಾಗಲಿ ಕಲಿಸುವಾಗ ಸಂಬಂಧಿಸಿ ಹೋಲಿಸಿ ಹೇಳಬೇಕಾಗುವುದು. ಆಗ ಪ್ರಮಾದವಾದರೆ ವಿದ್ಯಾರ್ಥಿಗಳ ಜ್ಞಾನವೇ ತಪ್ಪಿನ ಭಾಂಡಾರವಾಗಬಹುದು. ಆದುದರಿಂದ **ಅವನು ಸಂಬಂಧದ ವಿಷಯವನ್ನೂ ಅಂತರದ ವಿಷಯವನ್ನೂ** ಸ್ಪಷ್ಟವಾಗಿ ತಿಳಿಸಿ ಕೊಡಬೇಕು. ಸಾಮಾನ್ಯ ನಿಯಮಗಳು ದೋಷರಹಿತವಾಗಿರುವಂತೆ ಅವನು ಎಚ್ಚರಪಡಬೇಕು. ತಾತ್ಕಾಲಿಕ ಸಂಬಂಧ, ಹೋಲಿಕೆಗಳಾಗಲಿ ಅಂತರವಾಗಲಿ ತಪ್ಪು ನಿಯಮಗಳ ಕಡೆಗೆ ಬಾಲಕರನ್ನು ಬಯ್ಯುವಂತಿರಬಾರದು. ಉದಾಹರಣೆಗಾಗಿ:—ದೇಶೀ ಮಾವಿನ ಜ್ಞಾನವಿದ್ದ ಒಬ್ಬ ಬಾಲಕನಿಗೆ ಒಂದು ಹಸಿರು ತೊಗಟೆಯ ಕಲಮೀ ಮಾವನ್ನು ತೋರಿಸಿದರೆ ಅವನು ಆ ಮಾವನ್ನು ನೋಡಿ ಇದು ದೊಡ್ಡ ದೇಶೀ ಮಾವು ಎಂದು ಹೇಳುವನು. ಆದರೆ ಅವನ ಕೈಯಲ್ಲಿ ಅದನ್ನು ಕೊಟ್ಟ ಬಳಿಕ ಚೆನ್ನಾಗಿ ನೋಡಿ ಇದು ದೇಶೀ ಮಾವಿನಂತೆ ಬಿರುಸಾಗಿಲ್ಲವೆಂದು ಹೇಳುವನು. ಆ ಮೇಲೆ ಅದನ್ನು ಚಾಕುವಿನಿಂದ ಕೊಯ್ದು ತೋರಿಸಿದರೆ ಅದರೊಳಗಿನ ಹಳದಿ ವರ್ಣದ ತಿರುಳನ್ನು ನೋಡಿ ಹಣ್ಣಾದ ದೇಶೀ ಮಾವಿನಂತೆ ಅದರ ರಸವು ತಿಳುವಾಗಿಲ್ಲವೆಂಬುದನ್ನು ತಿಳಿಯುವನು. ರುಚಿಯನ್ನು ನೋಡಿ ಸಿಹಿಯಾಗಿರುವುದೆಂದು ಹೇಳುವನು. ಬಳಿಕ ಅದನ್ನು ಕೊಯ್ದು ತಿನ್ನುವನು, ಚೀಪುವುದು ಅವಶ್ಯವಿಲ್ಲವೆಂದೂ ಹೇಳುವನು. ಪ್ರಶ್ನೆಗಳನ್ನು ಕೇಳಿ ಹೇಳಿಕೊಟ್ಟನಂತರ ಅದು ಕಲಮೀ ಮಾವು ಇರುವುದೆಂಬುದು ಗೊತ್ತಾಗುವುದು.

ಇಲ್ಲಿ ಬಾಲಕನ ಜ್ಞಾನವು ಹೇಗೆ ಬೆಳೆಯುತ್ತಾ ಹೋಯಿತೆಂಬುದನ್ನು ನೋಡುವುದೇ ಮುಖ್ಯವಾದುದು, ವಿಹಿತವಾದುದು. ಮೊದಲು ಮಾವನ್ನು ನೋಡುತ್ತಲೆ ಅವನಿಗೆ ಸ್ಥೂಲವಾದ, ದೂಷಿತವಾದ ಜ್ಞಾನವು ಈ ಮಾವಿನ ಬಗೆಗೆ ಆಗಿದ್ದಿತು. ಸೂಕ್ಷ್ಮವಾಗಿ ನಿರೀಕ್ಷಿಸಿದನಂತರ ಅವನು ತನ್ನ ಮೊದಲ ಸಂಪಾದಿತ ಜ್ಞಾನದಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕಾಯಿತು; ಆ ಮೇಲೆ ಸ್ವಲ್ಪ ಜ್ಞಾನವು ಬೇರೆಯವರಿಂದ ದೊರೆಯಿತು. ಇಷ್ಟಾದರೂ ಅವನಿಗೆ ದೊರೆತ ಪರಿಶೋಧಿತ ತತ್ತ್ವವು ಸಮರ್ಪಕವಾಗಿರುವುದಿಲ್ಲ. ಇನ್ನೂ ಹೆಚ್ಚು ಸೂಕ್ಷ್ಮವಾಗಿ ಪರಿಕಿಸಿದ ಬಳಿಕ ಅವನಿಗೆ ಎಲ್ಲ ಕಲಮೀ ಮಾವುಗಳು ಹಸಿರು ತೊಗಟೆಯವೇ ಇರುವುದಿಲ್ಲ, ಎಲ್ಲ ದೇಶೀ ಮಾವುಗಳೂ ಹಣ್ಣಾದ ಮೇಲೆ ಹಳದಿ ವರ್ಣದವೇ ಆಗಲಿ ಕೆಲಕೆಲವು ಪಕ್ವವಾ

ದರೂ ಹಸುರಾಗಿಯೆ ಇರುವುವೆಂಬುದು ತಿಳಿಯುವುದು. ಇದೇ ರೀತಿಯಿಂದ ಮನುಷ್ಯನು ಜೀವಿಸಿರುವ ವರೆಗೂ ತನ್ನ ಜ್ಞಾನವನ್ನು ಪರಿಮಾರ್ಜಿತ ಮಾಡುತ್ತ ಪರಿಶುದ್ಧಗೊಳಿಸುತ್ತ ಸಾಗುವನು, ಅವನ ಜ್ಞಾನವು ಸೂಕ್ಷ್ಮವೂ ವಿಸ್ತೃತವೂ ಆಳವೂ ಆಗುತ್ತ ಹೋಗುವುದು.

ಈ ಪದ್ಧತಿಯನ್ನು ಅನುಸರಿಸಿಯೆ ಶಾಸ್ತ್ರಜ್ಞರು ಅನೇಕ ಶಾಸ್ತ್ರೀಯ ಶೋಧಗಳನ್ನು ಮಾಡಿರುವರು. ಈ ಪದ್ಧತಿಯ ಕ್ರಮಗಳನ್ನು ಸ್ಪಷ್ಟೀಕರಿಸಲು ಮೊಟ್ಟಮೊದಲು ಇಂಗ್ಲಂಡಿನ ಫ್ರಾನ್ಸಿಸ್ ಬೇಕನ್ನನು ಯತ್ನಿಸಿದನು. ಮುಂದೆ ಜಾನ್ ಸ್ಟುಅರ್ಟ್ ಮಿಲ್ ಮತ್ತು ಉಳಿದವರು ಈ ಪದ್ಧತಿಯನ್ನು ಪುಷ್ಟೀಕರಿಸಿದರು. ಇದನ್ನೇ ನೂರಾರು ವರ್ಷಗಳ ವರೆಗೆ ಪುರಸ್ಕರಿಸಿದವರು ಬಹಳ. ಇಂದ್ರಿಯ ಸಾಕ್ಷಾತ್ಕಾರವಾದಿಗಳು ಬೇಕನ್ನರ ವಿಚಾರಗಳನ್ನು ಸಮರ್ಥಿಸಿ ರೂಸೋ, ಪೆಸ್ತಾಲಜಿ ಮತ್ತು ಹರ್ಬಾರ್ಟ್ ಇವರ ಮುಖಾಂತರವಾಗಿ ಪ್ರಚಾರಗೊಳಿಸಿದರು. ಈ ಸಾಕ್ಷಾತ್ಕಾರವಾದಿಗಳು ಬಾಲಕನು ಹೊಸ ಜ್ಞಾನವನ್ನು ಪಡೆಯುವುದು ಶಾಸ್ತ್ರಜ್ಞರು ಹೊಸ ಶೋಧಗಳನ್ನು ಕಂಡು ಹಿಡಿಯುವುದನ್ನು ಹೋಲುತ್ತದೆ ಎಂದು ತಿಳಿದು ಶಿಕ್ಷಣ ಕ್ಷೇತ್ರದಲ್ಲಿಯೂ ಉದ್ಗಾಮಿ ಪದ್ಧತಿಯನ್ನೇ ವಿಶೇಷವಾಗಿ ಉಪಯೋಗಿಸಿ ಒಡೆದು ಕಾಣುವ ಪ್ರಗತಿಯನ್ನು ಕೋರಿಸಿದರು. ಹರ್ಬಾರ್ಟನು (೧೭೭೬–೧೮೪೧) ಉದ್ಗಾಮಿ ಪದ್ಧತಿಯಲ್ಲಿ ಅಡಕವಾದ ತರ್ಕಬದ್ಧ ಸ್ವರೂಪವನ್ನು ಕಂಡು ಹಿಡಿದನು. ಆದರೆ ಆಯಾ ಸ್ವರೂಪಗಳನ್ನು ಗಹನವಾಗಿ ವರ್ಣಿಸಿದನೇ ವಿನಾ ವಿಚಾರ ಪ್ರಬೋಧಕ ಸಮಸ್ಯೆಯ ಮಹತ್ತ್ವವನ್ನೂ ಅದನ್ನು ಮುಂದರಿಸುವ ವಿಚಾರದ ಕಡೆಗೆ ಗಮನವನ್ನು ಕೊಡಲಿಲ್ಲ. ಆದರೂ ಅವನ ಶಿಕ್ಷಣದ ರೀತಿಯು. ಉಳಿದ ಶಿಕ್ಷಣ ತಜ್ಞರಿಗೆ ಉತ್ತೇಜನವನ್ನು ಕೊಟ್ಟಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಅವನು ಈ ಪದ್ಧತಿಯನ್ನು ಅನುಸರಿಸಿ ಶಿಕ್ಷಣದಲ್ಲಿ ಮಾಡಿದ ಕ್ರಮಗಳು 'ಹರ್ಬಾರ್ಟನ ಶೈಕ್ಷಣಿಕ ಐದು ಮೆಟ್ಟುಗಳು' ಎಂಬ ಪ್ರಶಸ್ತಿಯನ್ನು ಪಡೆದುವು. ಇತ್ತೀಚಿಗೆ ಈ ಮೆಟ್ಟುಗಳಲ್ಲಿ ವಿಶ್ವಾಸವು ಕಡಿಮೆಯಾಗತೊಡಗಿದೆ. ಹೀಗಾಗಲು ಕೆಳಗಿನ ಕಾರಣಗಳನ್ನು ಕೊಡಬಹುದು.

(೧) ಶಿಕ್ಷಣಕ್ಕಾದರೂ ಉಳಿದ ಕ್ರಮಗಳಂತೆ ಪರಿಪಾಠದ ಅವಧಿಗಳಿರುವುವು. ಒಂದೇ ಪರಿಪಾಠವು ಬಹುಕಾಲದ ವರೆಗೆ ಜನರ ಮನಸ್ಸಿನ ಮೇಲೆ ತನ್ನ ವರ್ಚಸ್ಸನ್ನು ಬೀರಲಾರದು. ಏಕೆಂದರೆ ಜನರ ಮನಸ್ಸು ಆಗಾಗ್ಗೆ ಹೊಸದನ್ನು ಬಯಸುತ್ತಿರುವುದು. ಆಧುನಿಕ ಪ್ರಾಗತಿಕ ಪದ್ಧತಿಗಳೆಲ್ಲವೂ ಸ್ವಾತಂತ್ರ್ಯವನ್ನೂ ಪದ್ಧತಿ ರಹಿತತ್ವವನ್ನೂ ಸಮರ್ಥಿಸುವುದರಿಂದ ಅವು ಹರ್ಬಾರ್ಟನ ಮೆಟ್ಟುಗಳಿಗೆ ಅನುಸರಿಸಿ ಹೋಗುವುದಿಲ್ಲ. ತರ್ಕಬದ್ಧ ಕ್ರಮಗಳು ಶೈಕ್ಷಣಿಕ ರೀತಿಗಳನ್ನು ಎಷ್ಟು ಪ್ರಮಾಣದಲ್ಲಿ ಕಟ್ಟುಗಳಿಂದ ಬಿಗಿದು ಪಡಿಯಚ್ಚಿನ ಸ್ವರೂಪವನ್ನು ಕೊಡುವುವೊ ಅಷ್ಟು ಪ್ರಮಾಣದಲ್ಲಿ ಅಪಾಯಕಾರಿಯಾಗಿರುವುವು.

(೨) ಈ ಮೆಟ್ಟುಗಳಲ್ಲಿ ಕೆಲವು ದೋಷಗಳೂ ಅಂಟಿಕೊಂಡಿವೆ. ಕೃತ್ರಿಮತೆ, ವಿಧಾನ ಪ್ರಾಧಾನ್ಯ, ವೇಳೆಯ ವ್ಯಯ ಮುಂತಾದುವುಗಳೇ ಆ ದೋಷಗಳು ಎಂದು ಈ ಮೆಟ್ಟುಗಳನ್ನು ಆದರದಿಂದ ಉಪಯೋಗಿಸುವ ಅನೇಕ ಶಿಕ್ಷಕರೇ ಹೇಳುವರು.

ಈ ಐದು ಮೆಟ್ಟುಗಳ ಪರಿಚಯವನ್ನು ಮಾಡಿಕೊಂಡು ಬಳಿಕ ಅವುಗಳಲ್ಲಿರುವ ದೋಷಗಳನ್ನು ಹೇಗೆ ಪರಿಹರಿಸಬಹುದು ಮತ್ತು ಅವುಗಳನ್ನು ಹೇಗೆ ಸುಧಾರಿಸಬಹುದು ಎಂಬುದನ್ನು ವಿಚಾರಿಸುವ.

ಹರ್ಬರ್ಟನ ಐದು ಮೆಟ್ಟಿಲುಗಳನ್ನು ಕೆಳಗಿನಂತೆ ವಿವರಿಸಬಹುದು.

(೧) ಪ್ರಸ್ತಾವನೆ (ಪೂರ್ವ ಸಿದ್ಧತೆ) ಮತ್ತು ಉದ್ದೇಶ ಕಥನ

(೨) ವಿಷಯ ನಿರೂಪಣೆ

(೩) ತುಲನೆ ಮತ್ತು ಸಾಮಾನ್ಯ ಸ್ವರೂಪ ಪರಿಚಯ

(೪) ಸಾಮಾನ್ಯ ನಿಯಮ ಅಥವಾ ತತ್ತ್ವನಿರೂಪಣೆ. ತತ್ತ್ವಗ್ರಹಣ ಮತ್ತು ನಿರೂಪಣೆ

(೫) ತತ್ತ್ವ ಪರೀಕ್ಷೆ (ಅಭ್ಯಸನಗಳ ಸಹಾಯದಿಂದ)

ಈ ಮೆಟ್ಟಿಲುಗಳ ಉದ್ದೇಶವನ್ನು ಕುರಿತು ಸ್ವಲ್ಪ ವಿಚಾರಿಸುವ. ಪ್ರಸ್ತಾವನೆಯಲ್ಲಿ ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಜೀವಂತಗೊಳಿಸಿ ಹೊಸ ಜ್ಞಾನವನ್ನು ಸ್ವೀಕರಿಸುವಂತೆ ಅವರ ಮನಸ್ಸನ್ನು ಸಿದ್ಧಗೊಳಿಸುವುದು ಇರುತ್ತದೆ. ಪೂರ್ವಜ್ಞಾನದಿಂದ ಉಂಟಾದ ಅನುಭವಗಳ ತತ್ತ್ವದ ಪೂರ್ಣ ಲಾಭವನ್ನು ಪಡೆಯುವುದೇ ಈ ಮೆಟ್ಟಿಲ ಉದ್ದೇಶ.

ಕೈಕೊಂಡಿರುವ ವಿಷಯವನ್ನು ಕುರಿತು ವಿದ್ಯಾರ್ಥಿಗಳಲ್ಲಿ ಅಭಿರುಚಿಯನ್ನು ಜಾಗ್ರತಗೊಳಿಸಿ ಅವರ ಮನಸ್ಸನ್ನು ವಿಷಯದ ಮೇಲೆ ಕೇಂದ್ರೀಕರಿಸುವಂತೆ ಮಾಡುವುದೇ ಉದ್ದೇಶ-ಕಥನದ ಉದ್ದೇಶ.

ಪಾಠದ ಹೊಸ ವಿಷಯವನ್ನು ಮನಸ್ಸಿಗೆ ಹಿಡಿಯುವಂತೆ ನಿರೂಪಿಸುವುದೇ ವಿಷಯ-ನಿರೂಪಣದ ಉದ್ದೇಶ.

ಪಾಠದ ವಿಷಯವನ್ನು ಪರಿಶೀಲಿಸಿ, ತುಲನೆಮಾಡಿ, ಸಾಮಾನ್ಯ ಸ್ವರೂಪವನ್ನು ತಾತ್ತ್ವಿಕ ರೀತಿಯಿಂದ ಕಂಡು ಹಿಡಿಯುವಂತೆ ಮಾಡುವುದು ತುಲನೆ ಮತ್ತು ಸಾಮಾನ್ಯ ಸ್ವರೂಪ ಪರಿಚಯದ ಮೆಟ್ಟಿಲ ಉದ್ದೇಶ.

ಮೂರನೆಯ ಮೆಟ್ಟಿಲಲ್ಲಿ ಕಲಿತ ಸಾಮಾನ್ಯ ಸ್ವರೂಪವನ್ನು 'ನಿಯಮ'ಬದ್ಧವಾಗುವಂತೆ ಮಾಡುವುದು, ತತ್ತ್ವವನ್ನು ಕಂಡು ಹಿಡಿಯುವುದು ಸಾಮಾನ್ಯ ನಿಯಮ ಮತ್ತು ತತ್ತ್ವ ನಿರೂಪಣೆಯ ಉದ್ದೇಶ.

ಕೊನೆಯ ಮೆಟ್ಟಿಲಲ್ಲಿ ವಿದ್ಯಾರ್ಥಿಗಳು ಕಂಡುಹಿಡಿದ ತತ್ತ್ವವನ್ನು ವಿಶಿಷ್ಟ ಉದಾಹರಣೆಗಳ ಸಹಾಯದಿಂದ ಪರೀಕ್ಷಿಸಿ ಮಾಡಬಹುದು ಸಮರ್ಥಿಸಿಕೊಳ್ಳುವುದು ಉದ್ದೇಶವಾಗಿರುವುದು.

ಈ ಮೆಟ್ಟಿಲುಗಳಲ್ಲಿ ಕೆಲವು ವಿಶೇಷಾಂಶಗಳನ್ನು ಇಲ್ಲಿ ಸರ್ಗದಲ್ಲಿ ಕಲಿಸುವ ಪದ್ಧತಿಯ ಮೇಲೆ ಉತ್ತಮ ಪರಿಣಾಮವನ್ನುಂಟು ಮಾಡಿ ಸಿದ್ಧವಾದ ತತ್ತ್ವಗಳು ಹೇಗೆ ಸಿದ್ಧವಾದುವು ಎಂಬುದನ್ನು ತಿಳಿಯದೆ ಅವುಗಳನ್ನು ವಿದ್ಯಾರ್ಥಿಗಳು ಪಾಠಮಾಡುವ ರೂಢಿಯನ್ನು ಈ ಮೆಟ್ಟಿಲುಗಳು ತಪ್ಪಿಸಿರುವುವು. ಅಲ್ಲದೆ, ವಿದ್ಯಾರ್ಥಿಗಳಲ್ಲಿ ಸಂಶೋಧನ ಮಾಡಲು ಹಚ್ಚಿರುವುವು. ಈ ಮೆಟ್ಟಿಲುಗಳು ಕಲಿಸತಕ್ಕ ಎಲ್ಲ ವಿಷಯಗಳಿಗೂ ಯಾವಾಗಲೂ ಸಂದಿಗ್ಧವಾಗಿರದಿದ್ದರೂ ಇವುಗಳಲ್ಲಿರುವ ದೋಷಗಳನ್ನು ತಿದ್ದಿಕೊಂಡು ಉಪಯೋಗಿಸಬೇಕಾಗುವ ಪ್ರಸಂಗದಲ್ಲಿ ಇವುಗಳನ್ನು

ಉಪಯೋಗಿಸುವುದೂ ಅನವಶ್ಯಕವಾದ ಪ್ರಸಂಗಗಳಲ್ಲಿ ಇವುಗಳನ್ನು ಬಿಡುವುದೂ ಸ್ತುತ್ಯವಾದ ಮಾರ್ಗವೆಂದು ಎನಿಸದೆ ಇರಲಾರದು.

ಈ ಮೆಟ್ಟುಗಳಲ್ಲಿ ತಿದ್ದುಪಡಿಯನ್ನು ಹೇಗೆ ಮಾಡಬಹುದು ಎಂಬುದನ್ನು ಇಲ್ಲಿ ಸ್ವಲ್ಪ ವಿವರಿಸುವುದು ಉಚಿತವಾದುದೆಂದು ಎನಿಸುವುದು. ಹರ್ಬರ್ಟನ ಈ ಮೆಟ್ಟುಗಳ ರೂಪರೇಷೆಯನ್ನು ಎರಡು ದೃಷ್ಟಿಗಳಿಂದ ವಿಚಾರ ಮಾಡಿದರೆ ಯಾವ ರೀತಿಯಿಂದ ಈ ಮೆಟ್ಟುಗಳಲ್ಲಿ ತಿದ್ದುಪಡಿಯನ್ನು ಮಾಡಬಹುದೆಂಬುದು ತಿಳಿಯುವುದು. ಒಂದು ದೃಷ್ಟಿಯಿಂದ ನೋಡಿದರೆ ಈ ಮೆಟ್ಟುಗಳ ರೂಪರೇಷೆಯು ಒಂದು ಸಂಪೂರ್ಣ ವಿಚಾರವನ್ನು ಸ್ಫುಟಿಕರಿಸಿದರೆ ಕಂಡು ಬರುವ ಸ್ವರೂಪಗಳನ್ನು ವಿವರಿಸುವುದೆಂಬುದು ಗೊತ್ತಾಗುವುದು. ಇನ್ನೊಂದು ದೃಷ್ಟಿಯಿಂದ ನೋಡಿದರೆ ಅದೇ ವಿಚಾರವನ್ನು ವರ್ಗಕ್ಕೆ ಕಲಿಸುವ ವೇಳೆಯಲ್ಲಿನ ರೀತಿಯಿಂದ ಪರಿಶೀಲಿಸಿದರೆ ಕೆಲಮಟ್ಟಿಗೆ ಸುಧಾರಣೆ ಮಾಡಲು ಅವಕಾಶವಿರುವುದೆಂದು ತಿಳಿಯುವುದು. ಈ ವಿಷಯವನ್ನು ಒಂದು ವಿಷಯವನ್ನು ತೆಗೆದುಕೊಂಡು ನಿರೀಕ್ಷಿಸಿದರೆ ಮೇಲಿನ ಮಾತು ಹೆಚ್ಚು ಸುಗಮವಾಗಿ ತಿಳಿಯುವುದು. ಈಗ ಓರ್ವ ಶಿಕ್ಷಕನು ಈ ಸಮಸ್ಯೆಯನ್ನು ಬಿಡಿಸಲು ಒಂದು ವರ್ಗಕ್ಕೆ ಹವೆಯೊಳಗಿನ ಆರ್ದ್ರತೆಯ ಘನೀಭವನದ ಕಾರಣಗಳನ್ನು ತಿಳಿಸಿ ಹೇಳುತ್ತಿರುವನು ಮತ್ತು ಅವನ ಪಾಠವನ್ನು ನಾವು ನಿರೀಕ್ಷಿಸುತ್ತಿರುವೆವು ಎಂದು ತಿಳಿಯೋಣ. ಈಗ ವಿದ್ಯಾರ್ಥಿಗಳಿಗೆ ಸಾಕಷ್ಟು ತಂಪು ತಗಲಿದಾಗ ಹವೆಯು ತನ್ನೊಳಗಿನ ಆರ್ದ್ರತೆಯನ್ನು ಬಿಟ್ಟುಕೊಡುವುದು ಗೊತ್ತಿಲ್ಲವೆಂದು ಗ್ರಹಿಕೆಯಿರುವುದು.

ಇಂಥ ವಿಷಯವನ್ನು ಒಂದೇ ಪಾಠದಲ್ಲಿ ಮುಗಿಸದೆ ಈ ವಿಷಯಕ್ಕೆ ಸಂಬಂಧವುಳ್ಳ ಕೆಲವು ಪಾಠಗಳ ಸಹಾಯದಿಂದ ಕಲಿಸುವುದು ಅವಶ್ಯವಿರುವುದೆಂದು ಕಂಡು ಹಿಡಿಯಬೇಕಾಗುವುದು. ನಮ್ಮ ಎದುರಿಗಿರುವ ವರ್ಗವು ನೀರು ವಾಯು ರೂಪವನ್ನು ಹೊಂದುವುದೆಂಬುದನ್ನು — ಬಾಷ್ಪೀಭವನದ ಪಾಠವನ್ನು ಅದೇ ಮುಗಿಸಿರುವುದೆಂದು ತಿಳಿದುಕೊಂಡು ಮುಂದೆ ಸಾಗಬೇಕು. ಪ್ರಯೋಗ ನಿರೀಕ್ಷಣೆ, ಸಾಮಾನ್ಯ ಅನುಭವಗಳ ಮುಖಾಂತರವಾಗಿ ಹವೆಯು ಆರ್ದ್ರತೆಯನ್ನು ಬೇರೆ ಬೇರೆ ಪರಿಸ್ಥಿತಿಯಲ್ಲಿ ಬೇರೆ ಬೇರೆ ಪರಿಮಾಣ ಮತ್ತು ವೇಗದಿಂದ ಹೀರಿಕೊಳ್ಳುತ್ತದೆಂದು ವಿದ್ಯಾರ್ಥಿಗಳು ಕಲಿತಿರುವರು ಎಂದು ತಿಳಿದುಕೊಂಡರೆ ಶಿಕ್ಷಕನ ಮುಖ್ಯ ಕರ್ತವ್ಯವು ಮುಂದಿರುವ ಸಮಸ್ಯೆಯ ಅರ್ಥಗರ್ಭಿತ ಕಲ್ಪನೆಯು ಆಗುವಂತೆ ವಿದ್ಯಾರ್ಥಿಗಳನ್ನು ಚೇತರಿಸುವುದಾಗಿರುವುದು. ಇದಕ್ಕೋಸ್ಕರವಾಗಿ ಬಾಷ್ಪೀಭವನದ ಬಗ್ಗೆ ಕೆಳಗಿನ ಪ್ರಶ್ನೆಗಳಿಂದ ವಿದ್ಯಾರ್ಥಿಗಳ ಜ್ಞಾನವನ್ನು ಜಾಗ್ರತಗೊಳಿಸಬೇಕಾಗುವುದು.

(೧) ಕೆಲವು ದಿನಗಳಿಂದ ನಾವು ಯಾವ ವಿಷಯವನ್ನು ಅಭ್ಯಾಸಿಸುತ್ತಿದ್ದೇವೆ? (ಬಾಷ್ಪೀಭವನ) (೨) ಬಾಷ್ಪಿಭವನವೆಂದರೇನು? (ಕ್ರಿಯೆಯ ಸಂಕ್ಷಿಪ್ತ ಪರಿಚಯ) (೩) ಹೀರಿಕೊಂಡ ಆರ್ದ್ರತೆಯನ್ನು ಹವೆಯು ಎಂದಾದರೂ ಬಿಡುವುದೋ? (ಹೌದು, ಮಳೆ, ಹಿಮ ಇತ್ಯಾದಿ) (೪) ಅದು ಯಾವಾಗಲೂ ಆರ್ದ್ರತೆಯನ್ನು ಬಿಡುವುದೋ? (ಇಲ್ಲ) (೫) ಕೆಲವು ವೇಳೆಯಲ್ಲಿ ಹವೆಯಲ್ಲಿನ ಆರ್ದ್ರತೆಯನ್ನು ಬಿಡಲು ಯಾವುದು ಕಾರಣೀಭೂತವಾಗುವುದು? ಈ ಪ್ರಶ್ನೆಗೆ ಉತ್ತರವು ದೊರೆಯುವದಿಲ್ಲವೆಂದು ಗ್ರಹಿಸಿದ ಬಳಿಕ ಮುಂದಿನ ವಿಷಯವು ವರ್ಗದ ಮುಂದಿರುವ ಸಮಸ್ಯೆಯಾಗುವುದು.

(ಮುಂದೆ ಸಾಗುವದು.)

ಶೈಕ್ಷಣಿಕ ಸುಧಾರಣೆಗಳು

ಲೇಖಕರು:—ಶ್ರೀ. ಗುರುನಾಥ ಜೋಶಿ, ಧಾರವಾಡ.

ಪ್ರಾಚೀನ ಕಾಲದಲ್ಲಿ ಭಾರತವು ಜಗದ್ಗುರುವೆನಿಸಿಕೊಂಡಿತ್ತು. ಪರದೇಶಗಳಿಂದ [illegible] ಜನರು ಭಾರತಕ್ಕೆ ಬಂದು ವಿದ್ಯಾರ್ಜನೆಯನ್ನು ಮಾಡಿಕೊಂಡು ಹೋಗುತ್ತಿದ್ದರು. ಆದರೆ ಈಗ? ಭಾರತೀಯರು ಉಚ್ಚ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹೋಗಬೇಕಾಗಿ ಬಂದಿದೆ. ಭಾರತೀಯರ ಶಿಕ್ಷಣ ಪದ್ಧತಿಯನ್ನು ಕಂಡುಕೊಂಡು ವಿದೇಶಗಳಿಗೆ ಹೋಗಿ ವಿದೇಶೀಯರು ತಮ್ಮ ಉನ್ನತಿಯನ್ನು ಮಾಡಿಕೊಂಡರು. ಭಾರತಕ್ಕೆ ಬಂದು ಭಾರತವನ್ನು ಗೆದ್ದು ಇಲ್ಲಿಯ ಶಿಕ್ಷಣ ಪದ್ಧತಿಯನ್ನು ನಾಶಮಾಡಿ ತಮ್ಮ ಮೇಲ್ಮೈಯನ್ನು ಕಾಯ್ದುಕೊಂಡರು. ಭಾರತೀಯರಲ್ಲಿ ಈಗ ಜಾಗೃತಿಯುಂಟಾಗಿದೆ. ಅವರ ಕಣ್ಣುಗಳು ತೆರೆದಿವೆ. ಅವರ ಹಿಂದಿನ ಉಜ್ವಲ ಪರಂಪರೆಯು ಅವರ ಕಣ್ಣು ತೆರೆಸಿದೆ ಅದರ ಫಲ ಸ್ವರೂಪವಾಗಿ ಭಾರತದಲ್ಲಿ ಶೈಕ್ಷಣಿಕ ಸುಧಾರಣೆಗಳು ಆಗತೊಡಗಿವೆ. ಈ ಸುಧಾರಣೆಗಳನ್ನು ಸಂಕ್ಷೇಪದಲ್ಲಿ ವಿವರಿಸುವುದೇ ಈ ಲೇಖನದ ಗುರಿ.

ಭಾರತದಲ್ಲಿ ಈಸ್ಟ ಇಂಡಿಯಾ ಕಂಪನಿಯು ಶಿಕ್ಷಣ ಪ್ರಚಾರದ ಕಡೆಗೆ ಸಾಕಷ್ಟು ಗಮನವನ್ನು ಕೊಡಲಿಲ್ಲ. ಏಕೆಂದರೆ ಮೊದಲನೆಯದಾಗಿ ಕಂಪನಿಯ ಮುಖ್ಯ ಉದ್ದೇಶ ಹಣ ಗಳಿಸುವುದಾಗಿತ್ತು. ಅದು ಪ್ರತಿಯೊಂದು ಕಾರ್ಯವನ್ನು ವ್ಯಾಪಾರಿ ದೃಷ್ಟಿಯಿಂದ ನೋಡುತ್ತಿತ್ತು; ಎರಡನೆಯದಾಗಿ ಭಾರತೀಯರು ಧರ್ಮಪ್ರೇಮಿಗಳು, ಶಿಕ್ಷಣ ಸುಧಾರಣೆಗೆ ಕೈ ಹಾಕಿದರೆ ಧರ್ಮದ ಮೇಲೆ ಕಂಪನಿಯು ಅಘಾತ ಮಾಡುತ್ತಿದೆಯೆಂದು ಬಗೆದು ಭಾರತೀಯರು ಬಂಡೆದ್ದಿಸಬಹುದು ಎಂದು ಯೋಚಿಸುತ್ತಿತ್ತು. ಕೊನೆಗೆ ಪಾರ್ಲಿಮೆಂಟಿನ ಒತ್ತಾಯದ ಮೇರೆಗೆ ಅದು ಶಿಕ್ಷಣದ ಕಡೆಗೆ ಗಮನವನ್ನು ಕೊಡಲೇಬೇಕಾಯಿತು. ಅದು ಭಾರತೀಯ ಪ್ರಾಚೀನ ಶಿಕ್ಷಣ ಪದ್ಧತಿಯನ್ನೆ ಪುರಸ್ಕರಿಸಿತು. ಗಿಲಗಾರ್ಲ್ಲಿ ಕಲಕತ್ತೆಯಲ್ಲಿ ಒಂದು ಫಾರಸಿ ಶಾಲೆ, ಆ ಮೇಲೆ ಹತ್ತು ವರುಷದ ನಂತರ ಕಾಶಿಯಲ್ಲಿ ಸಂಸ್ಕೃತ ವಿದ್ಯಾಲಯ ಸ್ಥಾಪಿಸಲ್ಪಟ್ಟವು. ಇಂಗ್ಲಿಷ ವಿದ್ಯೆಗೆ ಮಿಷಾಜೆ ಕ್ಯಾಯಗಳಲ್ಲಿ ಪೆಸ್ಸು ಕೊಡಲು ಅನುಕೂಲವಾಗಬೇಕು, ಹಿಂದೂ-ಮುಸಲ್ಮಾನರ ಧರ್ಮ ಶಾಸ್ತ್ರಗಳ ಜ್ಞಾನಮಾಡಿಕೊಳ್ಳಲು ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಇವೆರಡೂ ಶಿಕ್ಷಣ ಸಂಸ್ಥೆಗಳು ಸ್ಥಾಪಿತವಾದವು.

೧೮೧೩ರಲ್ಲಿ ಕಂಪನಿಯು ಸನದು ಬದಲಾಯಿಸುವ ಕಾಲದಲ್ಲಿ ಕಂಪನಿಯು ಒಂದು ಲಕ್ಷಕ್ಕಿಂತ ಕಡಿಮೆ ಇಲ್ಲದಷ್ಟು ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಉಪಯೋಗಿಸಬೇಕೆಂದು ಪಾರ್ಲಿಮೆಂಟು ನಿಶ್ಚಯಿಸಿತು. ೧೮೩೫ರಲ್ಲಿ ಒಂದು ಕಮಿಟಿಯು ಸ್ಥಾಪಿತವಾಯಿತು. ಅದು ದಿಲ್ಲಿ ಮತ್ತು ಆಗ್ರಾದಲ್ಲಿ ಕಾಲೇಜುಗಳನ್ನು ತೆರೆಯಿತು. ಅವಕ್ಕೆ ಇಂಗ್ಲಿಷ ವರ್ಗಗಳೂ ಜೋಡಿಸಲ್ಪಟ್ಟವು. ೧೮೫೪ರಲ್ಲಿ ಮದ್ರಾಸದಲ್ಲಿ ಒಂದು ಶಾಲೆ ಮತ್ತು ಕೆಲವು ಗ್ರಾಮಗಳಲ್ಲಿ ಪಾಠ ಶಾಲೆಗಳು ತೆರೆಯಲ್ಪಟ್ಟವು. ೧೮೫೭ರಷ್ಟೊತ್ತಿಗೆ ಶಿಕ್ಷಣದ ಬಗೆಗೆ ಇದ್ದ ಸರಕಾರದ ಉದಾಸೀನವೃತ್ತಿಯು ಹೋಯಿತು. ಸರಕಾರವು ಶಿಕ್ಷಣದ ಕಡೆಗೆ ಹೆಚ್ಚು ಹೆಚ್ಚು ಲಕ್ಷ್ಯ ಕೊಡ-

ತೊಡಗಿತು. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳು. ಒಂದನೆಯದಾಗಿ ಪಾದರಿಗಳು ಮತ್ತು ರಾಜಾರಾಮ ಮೋಹನರಾಯರು ಮಾಡಿದ ಶಿಕ್ಷಣದ ಕಾರ್ಯಕ್ಕೆ ಜನತೆಯು ವಿರೋಧಿಸಲಿಲ್ಲ; ಎರಡನೆಯದಾಗಿ ಕಂಪನಿಗೆ ತನ್ನ ಕಾರ್ಯಕ್ಕಾಗಿ ಅಗ್ಗ ಬೆಲೆಗೆ ಸಿಕ್ಕುವ ಕಾರಕೂನರನ್ನು ಸಿದ್ಧಪಡಿಸಿಕೊಳ್ಳಬೇಕಾಗಿತ್ತು. ಸರಕಾರದ ಕಾಯಿದೆ ಸಲಹೆಗಾರರಾಗಿದ್ದ ಮೆಕಾಲೆ ಸಾಹೇಬರ ಈ ನುಡಿಗಳು ಈ ಮಾತಿಗೆ ಸಾಕ್ಷಿಯಾಗಿವೆ—"ನಮ್ಮ ಮತ್ತು ನಮ್ಮ ಲಕ್ಷಾಂತರ ಪ್ರಜರ ನಡುವೆ ದ್ವಿಭಾಷಿಯಾಗಿ ಕೆಲಸ ಮಾಡುವಂಥ ಹಾಗೂ ಜಾತಿ ಮತ್ತು ಬಣ್ಣದಿಂದ ಭಾರತೀಯರಾಗಿದ್ದು ರುಚಿ, ವಿಚಾರ, ಭಾಷೆ ಮತ್ತು ಭಾವದಲ್ಲಿ ಇಂಗ್ಲೀಜಿಯವರಾಗಿರುವಂಥ ಒಂದು ಭಾರತೀಯ ವರ್ಗವನ್ನು ನಿರ್ಮಿಸಿಕೊಳ್ಳಲು ನಮ್ಮ ಎಲ್ಲ ಶಕ್ತಿಯನ್ನು ಪಯೋಗಿಸಿ ಪ್ರಯತ್ನಿಸಬೇಕು." ಮೆಕಾಲೆ ಸಾಹೇಬರ ಈ ಮಾತುಗಳ ಹಿನ್ನೆಲೆಯಲ್ಲಿ ಒಂದು ಪ್ರಬಲ ಐತಿಹಾಸಿಕ ತಥ್ಯವಿದೆ. ಇಂಗ್ಲಂಡು ಒಂದು ಕಾಲದಲ್ಲಿ ರೋಮನ್ ಸಾಮ್ರಾಜ್ಯದ ಕೆಳಗೆ ಎಂಟು ನೂರು ವರ್ಷಗಳ ವರೆಗೆ ಇತ್ತು. ರೋಮನ್ನರು ಇಂಗ್ಲಂಡನ್ನು ಎಂಟು ನೂರು ವರ್ಷಗಳ ವರೆಗೆ ತಮ್ಮ ದಾಸ್ಯದಲ್ಲಿಟ್ಟುಕೊಳ್ಳಲು ಇಂಗ್ಲೀಷರಿಗೆ ರೋಮನ್ ಲಿಪಿ, ರೋಮನ್ ಭಾಷೆ, ರೋಮನ್ ಸಂಸ್ಕೃತಿಯ ಬಗ್ಗೆ ವಿಶ್ವಾಸವನ್ನು ಹುಟ್ಟಿಸಿ ರೋಮನ್ ಪ್ರೀತಿಯನ್ನು ಅವರ ನಾಡಿನಾಡಿಯಲ್ಲಿ ಹರಿಯುವಂತೆ ಮಾಡಿದ್ದರು. ಅದೇ ಕಾಯಕವನ್ನು ಇಂಗ್ಲೀಷರು ಭಾರತದಲ್ಲಿ ಪ್ರಾರಂಭಿಸಿದರು. ಆದರೆ ಭಾರತೀಯರ ರಕ್ತ ಇಂಗ್ಲೀಷರಂತೆ ತೀರ ಬದಲಾಗಿ ಎಂಟು ನೂರು ವರ್ಷಗಳ ವರೆಗೆ ದಾಸ್ಯದಲ್ಲಿ ಉಳಿಯುವಂತಹದಲ್ಲವೆಂಬುದಕ್ಕೆ ಇಂದು ನಾವು ಕಾಣುತ್ತಿರುವ ಭಾರತೀಯ ಜಾಗೃತಿಯೆ ಕಾರಣ. ಇರಲಿ.

೧೮೫೭ರಲ್ಲಿ ಕಲಕತ್ತಾ, ಮುಂಬಯಿ, ಮದ್ರಾಸಗಳಲ್ಲಿ, ೧೮೮೭ರಲ್ಲಿ ಪಂಜಾಬದಲ್ಲಿ ೧೮೮೯ರಲ್ಲಿ ಅಲ್ಲಾಹಬಾದದಲ್ಲಿ ವಿಶ್ವವಿದ್ಯಾಲಯಗಳು ಸ್ಥಾಪಿತವಾದವು. ೧೯೧೬ರಲ್ಲಿ ಹಿಂದೂ ವಿಶ್ವವಿದ್ಯಾಲಯ, ೧೯೨೦ ರಲ್ಲಿ ಅಲಿಗಡ ವಿಶ್ವವಿದ್ಯಾಲಯ, ೧೯೧೮ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯ, ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾಲಯಗಳೂ ಸ್ಥಾಪಿತವಾದವು.

೧೯೧೦ರಲ್ಲಿ ಸರಕಾರವು ಒಂದು ವಿದ್ಯಾಖಾತೆಯನ್ನು ಪ್ರತ್ಯೇಕವಾಗಿ ಸ್ಥಾಪಿಸಿತು. ೧೯೧೩—೧೪ರಿಂದ ಪ್ರತಿವರ್ಷ ಸರಕಾರೀ ರಿಪೋರ್ಟುಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ ಶಿಕ್ಷಣದ ಪ್ರಗತಿಯು ವಿವರಿಸಲ್ಪಟ್ಟಿರುತ್ತದೆ. ೧೯೧೭ರಲ್ಲಿ ಕಲಕತ್ತಾ ವಿಶ್ವವಿದ್ಯಾಲಯದ ರಿಪೋರ್ಟು ಪ್ರಕಟವಾಯಿತು. ಅದರ ಆಧಾರದಿಂದ ಅನೇಕ ಸ್ಥಳಗಳಲ್ಲಿ ಇಂಟರ ಮಿಜಿಯಟ್ ಕಾಲೇಜುಗಳು ಸ್ಥಾಪಿತವಾದವು; ಬೋರ್ಡಿಂಗುಗಳು ಬೆಳೆಸಲ್ಪಟ್ಟವು; ಅಧ್ಯಾಪಕರನ್ನು ತರಬೇತಿ ಮಾಡುವುದರ ಕಡೆಗೆ, ಮುಸಲ್ಮಾನರ ಶಿಕ್ಷಣ ಪ್ರಚಾರದ ಕಡೆಗೆ ಗಮನ ಹೋಯಿತು. ಸರ್ ಸಯ್ಯದ ಅಹಮ್ಮದಖಾನರು ಮುಸಲ್ಮಾನರ ಶಿಕ್ಷಣದ ಕಡೆಗೆ ಹೆಚ್ಚು ಗಮನವನ್ನಿತ್ತರು.

ಲಾರ್ಡ ರಿಪನ್ನನ ಕಾಲದಲ್ಲಿ ಸ್ಥಾನಿಕ ಸ್ವರಾಜ್ಯದ ಕಾರ್ಯವು ವಿಶೇಷವಾಗಿ ಬೆಳೆಯಿತು. ಸರಕಾರವು ಪ್ರಾಥಮಿಕ ಶಿಕ್ಷಣದ ಕಾರ್ಯವನ್ನು ಮುನಿಶಿಪಾಲಿಟಿಗಳಿಗೂ ಜಿಲ್ಲಾ ಲೋಕಲ್ ಬೋರ್ಡುಗಳಿಗೂ ಒಪ್ಪಿಸಿತು. ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಆದಾಯವು ಕಡವೆ ಇದ್ದುದರಿಂದ ಶಿಕ್ಷಣದ ಪ್ರಗತಿಯು ಸರಿಯಾಗಿ ಆಗಲಿಲ್ಲ. ಸರಕಾರವು ಈ ಸಂಸ್ಥೆಗಳಿಗೆ ಗ್ರಾಂಟನ್ನೂ ಹೆಚ್ಚಾಗಿ ಕೊಡಲಿಲ್ಲ, ಆರ್ಥಿಕ ಸ್ಥಿತಿಯನ್ನು ಬೆಳೆಯಿಸಿಕೊಳ್ಳಲು ಅನುಕೂಲತೆಯನ್ನು ಒದವಿಸಿಕೊಡಲಿಲ್ಲ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಶಿಕ್ಷಣದಲ್ಲಿ ಪ್ರಗತಿಯನು

ತೋರಿಸಲಿಲ್ಲವೆಂದು ದೂರುವುದು ಒಳಿತಾದುದಲ್ಲ. ಅವು ತಮ್ಮ ಆದಾಯಕ್ಕೆ ತಕ್ಕ ರೀತಿಯಲ್ಲಿ ಸಾಧ್ಯವಿದ್ದಷ್ಟು ಪ್ರೌಗತಿಯನ್ನು ತೋರಿಸಿವೆಯೆಂದು ಹೇಳಬಹುದಾಗಿದೆ. ೧೯೧೧ರಲ್ಲಿಯೆ ಮಾನನೀಯ ಶ್ರೀ. ಗೋಖಲೆಯವರು ಪ್ರಾಥಮಿಕ ಶಿಕ್ಷಣವು ನಮ್ಮ ಮುಕ್ಕಳಿಗೆ ಪುಕ್ಕಟೆಯಾಗಿ ಸಿಗಬೇಕು ಮತ್ತು ಒತ್ತಾಯದ ಶಿಕ್ಷಣವು ಪ್ರಾರಂಭಿಸಲ್ಪಡಬೇಕು ಎಂದು ಒಂದು ಬಿಲ್ಲನ್ನು ಕಾಯಿದೆ ಮಂಡಳದಲ್ಲಿ ತಂದಿದ್ದರು. ಆದರೆ ಆರ್ಥಿಕ ತೊಂದರೆಯಿಂದ ಆ ಬಿಲ್ಲನ್ನು ಸರಕಾರವು ಮಾನ್ಯ ಮಾಡಲಿಲ್ಲ. ಈಗ ಮುಂಬಯಿ ಸರಕಾರವು ಇತ್ತ ಹೆಚ್ಚು ಲಕ್ಷ್ಯವನ್ನು ಪೂರೈಸಿದುದು ಅಭಿನಂದನೀಯವಾಗಿದೆ. ಶ್ರೀ. ಖೇರರು ಪ್ರಾಥಮಿಕ ಒತ್ತಾಯದ ಶಿಕ್ಷಣದ ಕಡೆಗೆ ಹೆಚ್ಚು ಗಮನ ಕೊಡುತ್ತಿರುವುದು ಸ್ತುತ್ಯವಾಗಿದೆ. ೧೯೧೮ರಿಂದ ಕಾಯಿದೆ ಮಂಡಳಗಳು ಪ್ರಾಥಮಿಕ-ಶಿಕ್ಷಣದ ಬಗ್ಗೆ ಆಗಾಗ್ಗೆ ಅನೇಕ ಕಾಯಿದೆಗಳನ್ನು ಮಾಡಿ ಪ್ರಾಥಮಿಕ ಶಿಕ್ಷಣ ಪ್ರಸಾರದ ಕಡೆಗೆ ಹೆಚ್ಚು ಲಕ್ಷ್ಯವನ್ನು ಪೂರೈಸತೊಡಗಿದ್ದರಿಂದ ಪ್ರಾಥಮಿಕ ಶಿಕ್ಷಣದ ಕ್ಷೇತ್ರವು ದಿನದಿನಕ್ಕೆ ಹೆಚ್ಚಾಗಿ ವಿಸ್ತೃತವಾಗತೊಡಗಿದೆ. ಇಷ್ಟಾದಾಗ್ಯೂ ೮೦ಕ್ಕೆ ೧೨ರಷ್ಟು ಜನ ಓದ ಬರೆಯ ಬಲ್ಲವರಾಗಿದ್ದಾರೆ. ಈ ನಿರಕ್ಷರತೆಯನ್ನು ಹೋಗಲಾಡಿಸುವುದಕ್ಕಾಗಿ ಭಾರತ ಸರಕಾರದ ಶಿಕ್ಷಣ ವಿಭಾಗದ ಕಮಿಶನರಾದ ಶ್ರೀ. ಸಾರ್ಜಂಟರು ಒಂದು ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಅದರಲ್ಲಿ ಅವರು ಎಂಟು ವರ್ಷದ ವರೆಗೆ ಪುಕ್ಕಟೆ ಅನಿವಾರ್ಯ ಶಿಕ್ಷಣವನ್ನು ಅನುಮೋದಿಸಿದ್ದಾರೆ. ಅದರಂತೆ ಇನ್ನೂ ಕಾರ್ಯ ಸಾಗಿಲ್ಲ. ಸಾರ್ಜಂಟ ಯೋಜನೆಯಂತೆ ಕಾರ್ಯವು ಪ್ರಾರಂಭವಾದರೂ ಭಾರತದ ಜನರ ನಿರಕ್ಷರತೆಯು ಹೋಗಲು ದೀರ್ಘ ಕಾಲಾವಧಿಯು ಬೇಕು. ಆದುದರಿಂದ ಅದಕ್ಕೂ ಹೆಚ್ಚು ತೀವ್ರವಾಗುವ ಒಂದು ಯೋಜನೆಯನ್ನು ಸರಕಾರವು ಕೈಕೊಳ್ಳುವುದು ಅವಶ್ಯಕವಾದುದೆಂದು ಎನಿಸುತ್ತದೆ.

ಸರಕಾರವೇ ಶಿಕ್ಷಣದ ಯೋಜನೆಯನ್ನು ಮಾಡಬೇಕು ಎನ್ನುತ್ತ ಕುಳಿತುಕೊಂಡರೆ ಕಾರ್ಯವಾಗುವುದಿಲ್ಲ, ನಿರಕ್ಷರತೆಯು ಹೋಗುವುದಿಲ್ಲ, ನಮ್ಮ ಜನರ ಜ್ಞಾನದ ಮಟ್ಟ ಬೆಳೆಯುವುದಿಲ್ಲ ಎಂಬ ಸತ್ಯ ಸಂಗತಿಯನ್ನು ಮನಗಂಡು ಭಾರತೀಯ ಶಿಕ್ಷಣ ಪ್ರೇಮಿಗಳು ಶಿಕ್ಷಣ ಸುಧಾರಣೆಯ ಕಾರ್ಯವನ್ನು ಕೈಕೊಂಡರು. ಅದರ ಪರಿಣಾಮ ಸ್ವರೂಪವಾಗಿ ಮೊಹಮಡನ್ ಕಾಲೇಜ, ಅಲೀಗಡ; ಫರ್ಗ್ಯೂಸನ್ ಕಾಲೇಜ್, ಪುಣೆ; ಡಿ. ಏ. ವಿ. ಕಾಲೇಜ್ ಲಾಹೋರ; ಸೆಂಟ್ರಲ್ ಹಿಂದೂ ಕಾಲೇಜ್, ಬನಾರಸ; ಲಿಂಗರಾಜ ಕಾಲೇಜ್, ಬೆಳಗಾಂವಿ, ಕೆ. ಇ. ಬೋರ್ಡ ಕಾಲೇಜ್, ಧಾರವಾಡ, ಬಸವೇಶ್ವರ ಕಾಲೇಜ್, ಬಾಗಿಲುಕೋಟೆ ಮುಂತಾದ ಅನೇಕ ಕಾಲೇಜುಗಳೂ ಅವಕ್ಕೆ ಸಂಬಂಧಪಟ್ಟ ಹೈಸ್ಕೂಲುಗಳೂ ಪ್ರಾಥಮಿಕ ಶಾಲೆಗಳೂ ಸಹ ಪ್ರಾರಂಭಿಸಲ್ಪಟ್ಟವು. ಇವೆಲ್ಲವೂ ಸರಕಾರಿ ಶಿಕ್ಷಣ ವಿಭಾಗಕ್ಕೆ ಸಂಬಂಧಪಟ್ಟವುಗಳಾಗಿ ಸರಕಾರದಿಂದ ನಿಶ್ಚಯಿಸಲ್ಪಟ್ಟ ಅಭ್ಯಾಸಕ್ರಮದಂತೆ ಶಿಕ್ಷಣವನ್ನು ಕೊಡುತ್ತವೆ. ಕೆಲವರು ಜನರು ಮತ್ತು ಸಂಸ್ಥೆಗಳು ತಮ್ಮ ತಮ್ಮ ಜಾತಿಯ, ಧರ್ಮದ ವಿದ್ಯಾರ್ಥಿಗಳಿಗೆ ಹಾಸ್ಟೆಲುಗಳನ್ನೂ ಬೋರ್ಡಿಂಗುಗಳನ್ನೂ ಸ್ಥಾಪಿಸಿದರು. ಸ್ತ್ರೀ ಶಿಕ್ಷಣದ ಬಗ್ಗೆಯೂ ಮುಖಂಡರು ಲಕ್ಷ್ಯಗೊಡತೊಡಗಿದರು. ಜಾಲಂಧರದಲ್ಲಿ ಕನ್ಯಾ ಮಹಾವಿದ್ಯಾಲಯವೂ, ಪುಣೆಯಲ್ಲಿ (ಹಿಂಗಣಾ) ಅನಾಥ ಬಾಲಿಕಾಶ್ರಮವೂ, ದೇಹರಾದೂನದಲ್ಲಿ ಕನ್ಯಾ ಗುರುಕುಲವೂ ಸ್ಥಾಪಿತವಾದವು. ಈ ಎಲ್ಲ ಶಿಕ್ಷಣ ಸುಧಾರಣೆಯ ಪ್ರಯತ್ನಗಳು ೧೯ನೆಯ ಶತಮಾನದ ಕೊನೆಯ ಭಾಗದಲ್ಲಾದವು.

೧೮೭೫ರಿಂದ ೧೯೦೦ರ ವರೆಗೆ ಸ್ಥಾಪಿತವಾದ ಶಿಕ್ಷಣ ಸಂಸ್ಥೆಗಳ ಸ್ಥಿತಿಗತಿಯನ್ನೂ ಒಲವನ್ನು ನೋಡಿದರೆ ರಾಷ್ಟ್ರೀಯ ಶಿಕ್ಷಣವು ಪ್ರಾರಂಭವಾಗಿತ್ತೆನ್ನಬಹುದು. ಕಾಂಗ್ರೆಸ್ಸೂ

ಸ್ಥಾಪಿತವಾಗಿ ಭಾರತೀಯರಲ್ಲಿ ಸ್ವರಾಜ್ಯದಾಸೆಯನ್ನು ಹುಟ್ಟಿಸತೊಡಗಿತ್ತು. ಅದರ ಪ್ರಭಾವವೂ ಶಿಕ್ಷಣದ ಕ್ಷೇತ್ರದ ಮೇಲೆ ಬೀಳತೊಡಗಿತು ವಂಗಭಂಗದ ಕಾಲದಲ್ಲಿ ಅದರ ಫಲವು ಕಂಡುಬಂತು. ಅನೇಕ ವಿದ್ಯಾರ್ಥಿಗಳು ಸರಕಾರಿ ಶಾಲೆಗಳನ್ನು ಬಿಟ್ಟರು. ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಇಂಬು ದೊರೆಯಿತು. ಅದರೂ ಭದ್ರವಿಲ್ಲದ ಶಾಲೆಗಳು ಮುಚ್ಚಿದವು, ಭದ್ರವಾಗಿದ್ದ ಶಿಕ್ಷಣ ಸಂಸ್ಥೆಗಳು ಬದುಕಿಕೊಂಡವು. ಹೀಗೆ ಬದುಕಿಕೊಂಡ ಶಿಕ್ಷಣ ಸಂಸ್ಥೆಗಳಲ್ಲಿ ಶಾಂತಿನಿಕೇತನ, ಕಾಂಗಡಿಯ ಗುರುಕುಲ, ವೃಂದಾವನದ ಗುರುಕುಲ, ಜ್ವಾಲಾಪುರದ ಮಹಾವಿದ್ಯಾಲಯ, ಬಂಗೀಯ ರಾಷ್ಟ್ರೀಯ ಶಿಕ್ಷಾ ಪರಿಷತ್, ತಳೇಗಾಂವದ ಸಮರ್ಥ ವಿದ್ಯಾಲಯ, ವೃಂದಾವನದ ಪ್ರೇಮ ಮಹಾ ವಿದ್ಯಾಲಯ, ಆಂಧ್ರ ಜಾತೀಯ ಕಳಾಶಾಲೆ, ಭಾವನಗರದ ದಕ್ಷಿಣಾಮೂರ್ತಿ ವಿದ್ಯಾಭವನ ಮುಂತಾದವು ಮುಖ್ಯವಾದವುಗಳು.

೧೯೨೦ರಲ್ಲಿ ಅಸಹಕಾರ ಆಂದೋಲವು ಪ್ರಾರಂಭವಾಯಿತು. ಕಾಂಗ್ರೆಸ್ಸು ಸರಕಾರಿ ಶಿಕ್ಷಣ ಸಂಸ್ಥೆಗಳನ್ನು ಬಹಿಷ್ಕರಿಸಲು ಆಜ್ಞಾಪಿಸಿತು. ಅನೇಕ ವಿದ್ಯಾರ್ಥಿಗಳು ಸರಕಾರಿ ಶಾಲೆ ಕಾಲೇಜುಗಳನ್ನು ಬಿಟ್ಟರು. ರಾಷ್ಟ್ರೀಯ ಶಾಲೆ ಕಾಲೇಜುಗಳು ಪ್ರಾರಂಭವಾದವು. ಅವುಗಳಲ್ಲಿ ಟಿಳಕ ಮಹಾರಾಷ್ಟ್ರ ವಿದ್ಯಾಪೀಠ (ಪುಣೆ) ಟಿಳಕ ಸ್ಕೂಲ್ ಆಫ್ ಪಾಲಿಟಿಕ್ಸ (ಲಾಹೋರ) ನ್ಯಾಶನಲ್ ಕಾಲೇಜ್ (ಲಾಹೋರ) ಜಾಮಿಯಾ ಮಿಲಿಯಾ ಇಸ್ಲಾಮಿಯಾ (ದಿಲ್ಲಿ), ಗುಜರಾತ ವಿದ್ಯಾಪೀಠ (ಅಮದಾಬಾದ), ಬಿಹಾರ ವಿದ್ಯಾಪೀಠ (ಪಾಟಣಾ), ಕಾಶೀ ವಿದ್ಯಾಪೀಠ (ಬನಾರಸ), ಮಹಿಲಾ ವಿದ್ಯಾಪೀಠ (ಅಲ್ಹಾಬಾದ), ಕರ್ನಾಟಕ ಮಹಾವಿದ್ಯಾಲಯ (ಧಾರವಾಡ), ಮೊದಲಾದವು ಮುಖ್ಯವಾದವು. ಕರ್ನಾಟಕ ಮಹಾವಿದ್ಯಾಲಯವು ಈಗ ನಿಂತುಹೋಗಿದೆ. ಉಳಿದವು ಇನ್ನೂ ನಡೆದಿವೆ. ಈ ವಿದ್ಯಾಲಯ, ವಿದ್ಯಾಪೀಠಗಳ ಡಿಗ್ರಿಗಳು ಸರಕಾರದಿಂದ ಮಾನ್ಯವಾಗಿವೆ. ಈ ಬಗೆಯ ರಾಷ್ಟ್ರೀಯ ಶಾಲೆ ಕಾಲೇಜುಗಳು ರಾಷ್ಟ್ರಕ್ಕೆ ಹೆಚ್ಚು ಅವಶ್ಯಕವಾಗಿವೆ.

೧೯೩೭ರಲ್ಲಿ ಪ್ರಜಾಸತ್ತಾತ್ಮಕ ಪ್ರಾಂತೀಯ ಸರಕಾರಗಳು ಅಸ್ತಿತ್ವದಲ್ಲಿ ಬಂದುವು. ಆ ಪ್ರಾಂತಗಳಲ್ಲಿ ಕಾಂಗ್ರೆಸು ಅಧಿಕಾರಸೂತ್ರವನ್ನು ಹಿಡಿದಿತ್ತು. ಪ್ರಾಂತೀಯ ಕಾಂಗ್ರೆಸ್ ಸರಕಾರಗಳು ಒಂದು ಶಿಕ್ಷಣ ತಜ್ಞರ ಸಮಿತಿಯನ್ನು ನಿರ್ಮಿಸಿ ಶಿಕ್ಷಣದಲ್ಲಿ ಬದಲಾವಣೆ ಮಾಡಲು ನಿಶ್ಚಯಿಸಿದವು. ಅದರ ಪರಿಣಾಮದ ಫಲವಾಗಿ ವೃತ್ತಿಮೂಲ ಶಿಕ್ಷಣಕ್ರಮವು ಅಥವಾ **ವರ್ಧಾ ರಾಷ್ಟ್ರೀಯ ಶಿಕ್ಷಣ ಯೋಜನೆಯು** ಅಸ್ತಿತ್ವದಲ್ಲಿ ಬಂದಿತು. ಈ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳು ಸ್ವಾವಲಂಬಿಯಾಗುವದಕ್ಕಾಗಿ ಒಂದು ಮೂಲ ಉದ್ಯೋಗವನ್ನೂ ಜೋಡಿಸಲಾಯಿತಲ್ಲದೆ ನಾಗರಿಕ-ಶಾಸ್ತ್ರವೂ ಸಮಾಜ-ಶಾಸ್ತ್ರವೂ ಸೇರಿಸಲ್ಪಟ್ಟವು. ಅನೇಕ ವೃತ್ತಿಮೂಲ ಶಿಕ್ಷಣ ಸಂಸ್ಥೆಗಳು ಹುಟ್ಟಿದವು. ಕಾರ್ಯವು ಭರದಿಂದ ಸಾಗಿತು. ೧೯೩೯ರಲ್ಲಿ ಕಾಂಗ್ರೆಸ ಮಂತ್ರಿಮಂಡಲವು ರಾಜೀನಾಮೆಯನ್ನು ಕೊಟ್ಟು ಹೊರಬಿದ್ದ ನಂತರ ಈ ಶಿಕ್ಷಣಕ್ರಮದ ಕಡೆಗೆ ಸರಕಾರವು ಅಷ್ಟು ಹೆಚ್ಚು ಲಕ್ಷವನ್ನು ಕೊಡಲಿಲ್ಲ. ೧೯೪೨ರಲ್ಲಂತೂ ತೀರ ಈ ಶಿಕ್ಷಣಕ್ರಮದ ಕಡೆಗೆ ದುರ್ಲಕ್ಷ್ಯವಾಯಿತು. ಈಗ ಪುನಃ ಕಾಂಗ್ರೆಸ್ಸು ಅಧಿಕಾರ ವಹಿಸಿದ್ದರಿಂದ ಇತ್ತ ಹೆಚ್ಚು ಲಕ್ಷ್ಯ ಕೊಡಲಾಗುತ್ತದೆ.

ಈ ಮೂಲ ಶಿಕ್ಷಣ ಪದ್ಧತಿಯಲ್ಲಿ ಅನೇಕ ಪ್ರಯೋಗಗಳು ಆದವು. ೧೯೪೪ರಲ್ಲಿ ಮಹಾತ್ಮಾಗಾಂಧಿಯವರು ಶಿಕ್ಷಣದ ಬಗ್ಗೆ ತಮ್ಮ ಅಭಿಪ್ರಾಯವನ್ನು ಪ್ರಕಟಗೊಳಿಸಿದರು—

೭ ವರ್ಷಕ್ಕಿಂತ ಮೊದಲು ಪೂರ್ಣ-ಮೂಲ ಶಿಕ್ಷಣವನ್ನು ಕೊಡಬೇಕು, ೭ ವರ್ಷದಿಂದ ೧೪ ವರ್ಷದ ವರೆಗೆ ಮೂಲ ಶಿಕ್ಷಣ ಮತ್ತು ಅನಂತರ ಉತ್ಪತ್ತಿ-ಮೂಲ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕು. ಇವರ ಹೊರತಾಗಿ ಪ್ರೌಢ ಶಿಕ್ಷಣ ಕಾರ್ಯಾನ್ವಿತ್ತಿ ಏರ್ಪಾಡಿಸಬೇಕು. ಈ ತರದ ಸಮಗ್ರ ಶಿಕ್ಷಣ ಯೋಜನೆಯೊಂದು ನಿರ್ಮಾಣವಾಗಬೇಕಾಗಿದೆ. ಈಗ ನಮ್ಮ ಶಿಕ್ಷಣ ತಜ್ಞರ ಮುಂದೆ ಅನೇಕ ಶಿಕ್ಷಣ ಸಮಸ್ಯೆಗಳು ಇವೆ—೭ ವರ್ಷಕ್ಕಿಂತ ಮೊದಲಿನ ಮಕ್ಕಳಿಗೆ ಎಂಥ ಶಿಕ್ಷಣ ಕೊಡಬೇಕು? ಹೇಗೆ ಕೊಡಬೇಕು? ೭ ರಿಂದ ೧೪ ವರ್ಷದ ವರೆಗೆ ಕೊಡಲ್ಪಡುತ್ತಿದ್ದ ಮೂಲ ಶಿಕ್ಷಣದ ಬಗ್ಗೆ ಅನೇಕ ಅನುಭವಗಳು ಬಂದಿವೆ. ಅವರ ಆಧಾರದ ಮೇಲೆ ಯಾವ ಯಾವ ಬದಲಾವಣೆಗಳನ್ನು ಮಾಡಬೇಕು? ಸಹಶಿಕ್ಷಣವು ಅನಿವಾರ್ಯವೋ ಹೇಗೆ? ಯಾವ ವಯಸ್ಸಿನಿಂದ ಯಾವ ವಯಸ್ಸಿನ ವರೆಗೆ ಸಹಶಿಕ್ಷಣವು ಹಿತಕರವಾದೀತು? ಶಾರೀರಿಕ ಹಾಗೂ ನೈತಿಕ ಶಿಕ್ಷಣದ ಬಗ್ಗೆ ಯಾವ ಯಾವ ಯೋಜನೆಗಳನ್ನು ಕೈಕೊಳ್ಳಬೇಕು? ಸ್ಕೌಟ ಶಿಕ್ಷಣವು ಎಂತು ಮೊದಲಾಗಬೇಕು. ಅದರ ಗುರಿ ಏನಿರಬೇಕು? ಸೈನಿಕ ಶಿಕ್ಷಣವು ಎಂತು ಪ್ರಾರಂಭವಾಗಬೇಕು, ಎಲ್ಲಿಯ ವರೆಗೆ ಅದನ್ನು ಕೊಡಬೇಕು? ಗಾಂಧೀಜಿಯವರು ಅಹಿಂಸೆಯ ಶಕ್ತಿಯ ಮಹತ್ವವನ್ನು ತೋರಿಸಿ ಕೊಟ್ಟ ಕಾಲದಲ್ಲಿ ಸೈನಿಕ ಶಿಕ್ಷಣದ ಏರ್ಪಾಡು ಮಾಡುವುದು ಅವಶ್ಯಕವೋ ಹೇಗೆ? ಇತ್ಯಾದಿ. ಈ ಸಮಸ್ಯೆಗಳು ದಿನದಿನಕ್ಕೆ ಮುಂದೆ ಬರತೊಡಗಿವೆ.

ಟ್ರೇನಿಂಗ್ ಕಾಲೇಜಿನ ಪತ್ಯೇತರ ಚಟುವಟಿಕೆಗಳು

ವಾಡಿಕೆಯಂತೆ ಈ ಸಲವಾದರೂ ಟ್ರೇನಿಂಗ ಕಾಲೇಜಿನ ವಾದವಿವಾದ ಮಂಡಳವೂ ಜುಲೈ ತಿಂಗಳಿಂದ ಕಾರ್ಯಪ್ರವೃತ್ತವಾಯಿತು. ಮಂಡಳದ ಕಾರ್ಯಕ್ರಮಗಳಲ್ಲಿ ಸಂಸ್ಥೆಯ ಎಲ್ಲ ಶಿಕ್ಷಕರೂ, ವಿದ್ಯಾರ್ಥಿಗಳೂ ಭಾಗವಹಿಸುವರು. ಸಂಸ್ಥೆಯ ಸಂಚಾಲಕರು (ಪ್ರಿನ್ಸಿಪಾಲರು) ಪ್ರೋತ್ಸಾಹನೆಯನ್ನು ನೀಡುತ್ತಿರುವರು. ಮಂಡಳದ ವತಿಯಿಂದ ಜರುಗಿದ ಕಾರ್ಯಕ್ರಮಗಳು ಕೆಳಗಿನಂತೆ ಇವೆ.

ತಾ|| ೯—೭—೪೬ನೆಯ ದಿನ ಶ್ರೀ. ಮೋಧಾ ಇವರು 'ಕಣ್ಣಿನ ಉಳಿತಾಯ'ವೆಂಬುದರ ಬಗ್ಗೆ ಭಾಷಣ ಮಾಡಿದರು.

ತಾ|| ೨೦—೭—೪೬ನೆಯ ದಿನ ಪ್ರೊ. ಎಚ್. ಜಿ. ಕುಲಕರಣಿ ಎಂ. ಎ. ಅವರು ಮಂಡಳದ ಉದ್ಘಾಟನೆಯನ್ನು ನೆರವೇರಿಸಿದರು. ಇವರು 'ಸುಂದರ ಸಂಶೋಧನೆ' ಎಂಬುದನ್ನು ಕುರಿತು ಸವಿಸ್ತಾರವಾಗಿ ಭಾಷಣ ಮಾಡಿದರು. ಶ್ರೀಮತಿ ಜನಳಿಯವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.

ತಾ|| ೨೭—೭—೪೬ನೆಯ ದಿನ ಮುಂಬರುವ ಪರೀಕ್ಷೆಗಾಗಿ ಶ್ರೀಮಾನ್ ಗೋಸಾವಿಯವರು 'ನಿಜ ಮಿತ್ರರಾರು?' ಎಂಬುದನ್ನು ಕುರಿತು ಉಪನ್ಯಾಸ ಮಾಡಿದರು.

ತಾ|| ೩೧—೭—೪೬ನೆಯ ದಿನ ಪ್ರೊ. ಭೂಸನೂರಮಠ ಎಂ. ಎ. ಅವರು "ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಏಕೀಕರಣ" ಎಂಬುದನ್ನು ಕುರಿತು ಭಾಷಣ ಮಾಡಿದರು.

ನಮ್ಮ ಹೊಸ ಇನ್‌ಸ್ಪೆಕ್ಟರರು



ಶ್ರೀ. ಅನಂತ ನಾರಾಯಣ ಸಾನೆ ಇವರು

ನಮ್ಮ ಭಾಗದ ಎಜ್ಯುಕೇತನಲ್ ಇನ್‌ಸ್ಪೆಕ್ಟರರಾಗಿದ್ದ ಏ. ಖಾನ್ ಸಾಹೇಬರು ಜುಲೈ ತಿಂಗಳಿನಲ್ಲಿ ಅಮದಾಬಾದಕ್ಕೆ ಇನ್‌ಸ್ಪೆಕ್ಟರರಾಗಿ ವರ್ಗಾಯಿಸಲ್ಪಟ್ಟರು. ಅವರ ಸ್ಥಳದಲ್ಲಿ ಈ ಭಾಗದ ಅಸಿಸ್ಟಂಟ ಎಜ್ಯುಕೇತನಲ್ ಇನ್‌ಸ್ಪೆಕ್ಟರರಾಗಿದ್ದ ಮೊ। ಏ. ಎನ್. ಸಾನೆ ಸಾಹೇಬರು ಎಜ್ಯುಕೇತನಲ್ ಇನ್‌ಸ್ಪೆಕ್ಟರರಾಗಿ ನಿಯಮಿಸಲ್ಪಟ್ಟರು.

ಶ್ರೀಮಾನ್ ಸಾನೆಯವರು ವಡುಗಾಂವಿಯವರು. ಮುಂಬಯಿ ವಿಶ್ವವಿದ್ಯಾಲಯದ ಪದವಿಧರರಾದ ಬಳಿಕ ೧೯೨೦ರಲ್ಲಿ ಸೊಟ್ಟನೊದಲು ಬೆಳಗಾಂವಿಯ ಸರದಾರ್ಸ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ನಿಯಮಿಸಲ್ಪಟ್ಟರು, ಇವರು ಹುರುಪಿನ ಶಿಕ್ಷಕರಾಗಿದ್ದರೆಂದು ಇವರ ಕೈಕೆಳಗೆ ಕಲಿತ ವಿದ್ಯಾರ್ಥಿಗಳು ಇಂದಿಗೂ ಹೇಳುತ್ತಿರುವರು. ಆ ಮೇಲೆ ಇವರು ಮುಂಬಯಿಯ ಎಲ್‌ಫಿನ್‌ಸ್ಟನ್ ಹೈಸ್ಕೂಲಿಗೆ ಸ್ಥಳಾಂತರಿಸಲ್ಪಟ್ಟರು. ಅಲ್ಲಿಯೂ ಅನೇಕ ವರ್ಷಗಳವರೆಗೆ ಉತ್ತಮ ರೀತಿಯಿಂದ ಕೆಲಸ ಮಾಡಿ ಮನ್ನಣೆ ಪಡೆದರು. ಭೂಗೋಲ ವಿಷಯ ಇವರಿಗೆ ಅತ್ಯಂತ ಪ್ರೀತಿಯದು. ಕೆಳಗಿನ ದರ್ಜೆಗಳಿಗೆ ಪ್ರತ್ಯಕ್ಷ ಪದ್ಧತಿ (ಡಿರೆಕ್ಟ ಮೆಥಡ್) ಯಿಂದ ಭೂಗೋಲನ್ನು ಕಲಿಸುವುದರಲ್ಲಿ ಇವರು ನಿಷ್ಣಾತರು. ಕೆಳಗಿನ ಇಯತ್ತೆ

ಗಳಿಗೆ ಇಂಗ್ಲಿಷ ಪ್ರಬಂಧ-ಬರೆಯುವುದನ್ನೂ ಕಲಿಸುವುದರಲ್ಲಿಯೂ ಇವರದು ಎತ್ತಿದ ಕೈ. ಕೆಳಗಿನ ಇಯತ್ತೆಗೆ ಕಲಿಸಲು ನಮಗೆ ಶಿಕ್ಷಕರೇ ಬೇಕಾಗುತ್ತಿತ್ತು. ಡಿರೆಕ್ಟ ಮೆಥಡ್‌ದಿಂದ ಕಲಿಸುವ ಶಿಕ್ಷಣ ಕಲಿಯಲ್ಲಿ ನಿಷ್ಣಾತರೆಂದು ಹೆಸರು ಪಡೆದು ಅಧಿಕಾರಿಗಳ ಮನ್ನಣೆಗೆ ಪಾತ್ರರಾದರು. ಮುಂಬಯಿಗೆ ಬಿ. ಟಿ. ಪವೀಕ್ಷಣಕ್ಕಾಗಿ ಹೋಗುತ್ತಿದ್ದ ಮುಂಬಯಿಯ ಪ್ರಾಂತದ ಎಲ್ಲ ಭಾಗಗಳ ವಿಕ್ಷಕರೂ ಇವರನ್ನು ಬಲು ಪ್ರೀತಿಯಿಂದ ಕಾಣುತ್ತಿದ್ದರು. ವಿಶೇಷವಾಗಿ ಕರ್ನಾಟಕದಿಂದ ಹೋದ ವಿದ್ಯಾರ್ಥಿಗಳಿಗಂತೂ ಇವರ ಮೇಲೆ ಅತೀವ ಪ್ರೀತಿ. ಏಕೆಂದರೆ ಆಗಿನ ಕಾಲದಲ್ಲಿ ಎಲ್‌ಫಿನ್‌ಸ್ಟನ್ ಸ್ಕೂಲಿನಲ್ಲಿಯ ಶಿಕ್ಷಕರಲ್ಲಿ ಇವರೊಬ್ಬರೇ ಕನ್ನಡ ಬಲ್ಲವರಾಗಿದ್ದರು. ಕಷ್ಟದಿಗನೇ ಇರಲಿ, ಗುಜರಾತಿಯೇ ಇರಲಿ, ಯಾರೇ ಇರಲಿ, ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಗೆ ಸಹಾಯ ಮಾಡುವುದು ಇವರ ಸ್ವಭಾವ. ಸ್ವಯಂಪ್ರೇರಣೆಯಿಂದಲೂ; ಆತ್ಮೀಯತೆಯಿಂದಲೂ, ಬುದ್ಧಿಮತಿಕೆಯಿಂದಲೂ ಶಿಕ್ತಿನಿಂದಲೂ ಮನಸ್ಸಿನಿಂದಲೂ ಕೆಲಸ ಮಾಡುತ್ತಿದ್ದುದನ್ನು ನೋಡಿ ಆಗ ಬಿ. ಟಿ. ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಮಿ. ಹ್ಯಾಂಪ್ಸನ್ ವಾಷೇಟರು ಇವರನ್ನು ತಮ್ಮ ಕಾಲೇಜಿನಲ್ಲಿ ಪ್ರಾಧ್ಯಾಪಕರನ್ನಾಗಿ ನಿಯಮಿಸಿಕೊಂಡರು. ಆ ಕಾಲೇಜಿನಲ್ಲಿ ಇವರು ಭೂಗೋಲ ವಿಷಯವನ್ನು ಅತ್ಯಂತ ಮಾರ್ಮಿಕವಾಗಿ ಹೇಳುತ್ತಿದ್ದರು, ನಾರಗರ್ಭಿತವಾಗಿ ಬೋಧಿಸುತಿದ್ದರು.

ಸರಕಾರವು ಬೆಳಗಾಂವಿಯಲ್ಲಿ ಬಿ. ಟಿ. ಕಾಲೇಜನ್ನು ಸ್ಥಾಪಿಸುವ ನಿಶ್ಚಯವನ್ನು ಮಾಡಿತು. ಶ್ರೀಮಾನ್ ಕ್ಯಾಂಗ್ರ ಕಟ್ಟಿಯವರು ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟರು. ಬಿ. ಟಿ. ಕಾಲೇಜಿಗೆ ಶಕ್ತ ಸ್ಥಳವನ್ನು ಕುದುರಿಸಿ ಅವರ ಸ್ಥಾಪನೆಗೆ ಕಾರಣರಾಗಿ ಶ್ರೀಮಾನ್ ಸಾನೆ ಅವರು ಪ್ರಿನ್ಸಿಪಾಲ ಕಟ್ಟಿಯವರ ವಿಶ್ವಾಸಕ್ಕೂ ಪಾತ್ರರಾದರು ಮತ್ತು ಬೆಳಗಾಂವಿಯ ಬಿ. ಟಿ. ಕಾಲೇಜಿಗೆ ಕನ್ನಡ ಬಲ್ಲವರೆಂದು ೧೯೨೧ರಲ್ಲಿ ವರ್ಗಾಯಿಸಲ್ಪಟ್ಟರು. ಈ ಕಾಲೇಜಿನಲ್ಲಿಯೂ ತಮ್ಮ ಭೂಗೋಲದಲ್ಲಿಯು ವಾಙ್ಮಯತೆಯನ್ನು ತೋರಿಸಿದರು. ಸರಕಾರದವರು ೧೯೨೬ರಲ್ಲಿ ಇವರನ್ನು ದಕ್ಷಿಣ ಭಾಗದ ಅಸಿಸ್ಟಂಟ್ ಎಜ್ಯುಕೇಶನಲ್ ಇನ್‌ಸ್ಪೆಕ್ಟರರನ್ನಾಗಿ ನಿಯಮಿಸಿದರು. ಈ ಸ್ಥಳದಲ್ಲಿಯೂ ಇವರು ಅವ್ಯಾಹತವಾಗಿ ಕಾರ್ಯಮಾಡಿ ಹೈಸ್ಕೂಲುಗಳನ್ನು ನಡೆಸುವವರಿಗೆ ತಮ್ಮ ಅನುಭವ ಬೆರೆತ ಸೂಚನೆಗಳನ್ನು ಕೊಟ್ಟು ಜನರ ಮನ್ನಣೆಗೂ ಪಾತ್ರರಾದರು. ಆ ಮೇಲೆ ಮಿ. ಜಾನ ಸಾಹೇಬರ ವರ್ಗವಾದ ಕೂಡಲೆ ಅವರ ಸ್ಥಳದಲ್ಲಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರಾಗಿ ನಿಯಮಿಸಲ್ಪಟ್ಟರು. ಇವರನ್ನು ನಿಯಮಿಸಿದುದು ಕನ್ನಡಿಗರ ಸುದೈವ. ಇವರು ಮಕ್ಕಳ ಶಾರೀರಿಕ ಮಾನಸಿಕ ವಿಕಾಸದಲ್ಲಿ ಆಸ್ಥೆಯುಳ್ಳವರು, ಮಮತೆಯುಳ್ಳವರು ಇವರ ಆಳಿಕೆಯಲ್ಲಿ ಕನ್ನಡ ನಾಡಿನ ಶಿಕ್ಷಣ ಕಾರ್ಯವು ಸುಗಮವಾಗಿ, ಸರಿಯಾಗಿ ಸಾಗಿ ಕೊನೆಗಾಣುವುದೆಂದು ಹಾರೈಸಲಾಗಿದೆ.

ಅಸಿಸ್ಟಂಟ್ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದಾಗ ಅವಿಶ್ರಾಂತವಾಗಿ ಶ್ರಮಪಟ್ಟು ಕೆಲಸ ಮಾಡಿದ್ದರ ಪರಿಣಾಮವಾಗಿ ಬೇಸ ಬಿದ್ದಿದೆ. ಈಗ ಬೀಜದಲ್ಲಿ ಸಾಕಷ್ಟು ವಾಸಿಯಾಗಿದೆ. ಸದ್ಯಕ್ಕೆ ಎರಡು ತಿಂಗಳ ರಜೆಯಲ್ಲಿದ್ದಾರೆ. ಈ ರಜೆಯ ಅವಧಿಯಲ್ಲಿ ಎ. ಇ. ಅವರಿಗೆ ಪಿ. ಎ. ಆಗಿ ಕೆಲಸ ಮಾಡುತ್ತಿದ್ದ ಮಿ. ಓ. ಬಿ. ಕೇಸರಿಯವರು ಇನ್‌ಸ್ಪೆಕ್ಟರರ ಚಾರ್ಜು ತೆಗೆದುಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಮಾನ್ ಸಾನೆ ಅವರ ಅದನ್ನು ಬೇಗ ಗುಣ ಹೊಂದಿ ಅಧಿಕಾರ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡು ನಮ್ಮ ನಾಡಿನ ಶಿಕ್ಷಣ ಕ್ರಮದಲ್ಲಿ ಸುಧಾರಣೆಗಳನ್ನು ಮಾಡಿ, ಶಿಕ್ಷಣದ ಮಟ್ಟವನ್ನು ಬೆಳೆಯಿಸಿ ಜನರ ಹಾಗೂ ಸರಕಾರದ ಮನ್ನಣೆಗೆ ಪಾತ್ರರಾಗಬೇಕೆಂದು ಭಗವಂತನನ್ನು ಬೇಡುತ್ತೇನೆ.

ವರ್ಗಾವರ್ಗಿ ಸುದ್ದಿಗಳು

ಶ್ರೀಮಾನ್ ಕೆ. ಬಿ. ತೇರಗಾಂವಕರ ಅವರು ಕಾರವಾರ ಜಿಲ್ಲೆಗೆ ಡಿ. ಇ. ಆಯ್. ಮಾಡಲ್ಪಟ್ಟು ವರ್ಗಾಯಿಸಲ್ಪಟ್ಟಿದ್ದರು . ಈಗ ಅವರು ಬೇಸಿಕ್ ಶಿಕ್ಷಣ ಶಾಸ್ತ್ರದಲ್ಲಿ ನಿಷ್ಣಾತರೆಂದು ಸರಕಾರದವರು ಮನಗಂಡು ಪುಣೆಯಲ್ಲಿ ನಡೆಯುತ್ತಿರುವ ಬೇಸಿಕ್ ವರ್ಗಗಳಿಗೆ ತರಬೇತಿ ಕೊಡಲು ಪ್ರಧಾನ ವ್ಯವಸ್ಥಾಪಕರೆಂದೂ ಅಧ್ಯಾಪಕರೆಂದೂ ವರ್ಗಾಯಿಸಲ್ಪಟ್ಟಿದ್ದಾರೆ ಇದರಂತೆಯೆ ಕೈಗಾರಿಕೆಯಲ್ಲಿ ನಿಷ್ಣಾತರಾದವರೂ ಧಾರವಾಡದ ಬೇಸಿಕ್ ಟ್ರೇನಿಂಗ ಕಾಲೇಜಿನಲ್ಲಿ ಕ್ರಾಫ್ಟ ಟೀಚರರಾಗಿದ್ದವರೂ ಆದ **ಶ್ರೀಮಾನ್ ನ್ಯಾಮತಿಯವರೂ** ಶ್ರೀ ತೇರಗಾಂವಕರರೊಡನೆ ಉದ್ಯೋಗ ಶಿಕ್ಷಣವನ್ನು ಕೊಡಲು ವರ್ಗಾಯಿಸಲ್ಪಟ್ಟಿರುವರು. ಇವರಿಬ್ಬರ ವರ್ಗವು ಕನ್ನಡಿಗರಿಗೆ ಹೆಮ್ಮೆಯ ಹಾಗೂ ಆನಂದದ ವಿಷಯವಾಗಿದೆ.

ಶ್ರೀಮಾನ್ ಎಸ್. ಬಿ. ನಾಡಿಗೇರ ಅವರು ಕಾರವಾರದಿಂದ ಬೆಳಗಾಂವಿ ಜಿಲ್ಲೆಯ ಸ್ಕೂಲ ಬೋರ್ಡಿನ ಏ. ಓ ಅವರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಅದರಂತೆ ಕಾರವಾರ ಏ. ಓ. ಅವರಾದ **ಶ್ರೀ ನಾಡಕರ್ಣಿ** ಅವರು ಧಾರವಾಡದ ಏ. ಓ. ಅವರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. **ಶ್ರೀಮಾನ್ ಕೆಜರಗಿ** ಅವರು ಕಾರವಾರದ ಏ. ಓ. ಅವರಾಗಿ ನೇಮಿಸಲ್ಪಟ್ಟಿದ್ದಾರೆ.

ಶ್ರೀಮಾನ್ ಟಿಕ್ಕರಮನೆ ಅವರು ಬೆಳಗಾಂವಿಯ ಬಿ. ಟಿ. ಕಾಲೇಜದಿಂದ ನಮ್ಮ ಭಾಗದ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಶ್ರೀ ಮಾನ್ ಎಸ್. ಆರ್. ಜೋಶಿ ಅವರು ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿಗೆ ಮೊದಲನೆಯ ಅಸಿಸ್ಟಂಟರಾಗಿ ವರ್ಗಾಯಸಲ್ಪಟ್ಟರು. ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮಾನ್ ಎಸ್. ಜಿ. ಜೈಚವಾಳ ಅವರು ಲಜಾರಿ ರಜೆಯ ಮೇಲೆ ಹೋಗಿದ್ದರಿಂದ ಶ್ರೀಮಾನ್ ಎಸ್. ಆರ್. ಜೋಶಿ ಅವರು ಪ್ರಿನ್ಸಿಪಾಲರ ಚಾರ್ಜನ್ನು ತೆಗೆದುಕೊಂಡು ಕಾರ್ಯವನ್ನು ಸಾಗಿಸುತ್ತಿದ್ದಾರೆ. ಪ್ರಿನ್ಸಿಪಾಲ ಜೈಚವಾಳರು ಬೇಗನೆ ಗುಣ ಹೊಂದಿ ಪ್ರಿನ್ಸಿಪಾಲರ ಅಧಿಕಾರ ಸೂತ್ರವನ್ನು ವಹಿಸುವರೆಂದು ಹಾರೈಸಲಾಗಿದೆ. ಶ್ರೀಮಾನ್ ಎಸ್. ಆರ್. ಜೋಶಿ ಅವರು ಕಾಲೇಜಿಗೆ ಬಂದು ಹಾಜರಾಗುವ ಪೂರ್ವದಲ್ಲಿ ಬೇಸಿಕ್ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿದ್ದ **ಶ್ರೀಮಾನ್ ಆರ್. ವ್ಹಿ. ದೇಸಾಯಿ** ಅವರು ಟ್ರೇನಿಂಗ ಕಾಲೇಜದ ತಾತ್ಪರ್ತಿಕ ಪ್ರಿನ್ಸಿಪಾಲರಾಗಿದ್ದರು.

ಧಾರವಾಡದ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಾಕ್ಟಿಸಿಂಗ್ ಸ್ಕೂಲಿನಲ್ಲಿ ೭ನೆಯ ವರ್ಗಕ್ಕೆ ಶಿಕ್ಷಕರಾಗಿದ್ದ **ಶ್ರೀಮಾನ್ ಕಟ್ಟಿ** ಅವರು ವಿಜಾಪುರಕ್ಕೆ ಎ. ಡಿ. ಇ. ಆಯ್. ಎಂದು ವರ್ಗಾಯಿಸಲ್ಪಟ್ಟರು ಮತ್ತು ೫ನೆಯ ವರ್ಗದ ಶಿಕ್ಷಕರಾಗಿದ್ದ **ಶ್ರೀಮಾನ್ ಶಿರಹಟ್ಟಿ** ಅವರು ಧಾರವಾಡ ಜಿಲ್ಲೆಯಲ್ಲಿ ಏ. ಡಿ. ಇ. ಆಯ್. ಆಗಿ ಕೆಲಸ ಮಾಡಬೇಕೆಂದು ವರ್ಗಾಯಿಸಲ್ಪಟ್ಟರು. ಕಾಲೇಜದ ಹಾಗೂ ಪ್ರಾಕ್ಟಿಸಿಂಗ ಸ್ಕೂಲಿನ ಶಿಕ್ಷಕರು ಸಂತೋಷಕೂಟವನ್ನೇರ್ಪಡಿಸಿ ಬೀಳ್ಕೊಟ್ಟರು ಮತ್ತು ಸರ್ವಾಂಗೀಣ ಉನ್ನತಿಯನ್ನು ಕೋರಿದರು.

ಬೇಸಿಕ್ ಟ್ರೇನಿಂಗ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದ **ಶ್ರೀಮಾನ್ ಎನ್. ಆರ್. ಹಿರೇಮಠ** ಅವರು ಬೇಸಿಕ್ ಸುಪರವಾಯಿಜರರಾಗಿ ವರ್ಗಾಯಿಸಲ್ಪಟ್ಟರು.

ಪ್ರಾಕ್ಟಿಸಿಂಗ ಸ್ಕೂಲಿನ ಹೆಡ್ ಮಾಸ್ತರರಾಗಿದ್ದ **ಶ್ರೀಮಾನ್ ಜಿ. ಎಸ್. ಹಿರೇಮಠ** ಸೇರಿದವಾವಧಿಯು ಒಂದು ವರ್ಷದ ವರೆಗೆ ಬೆಳೆಯಿಸಲ್ಪಟ್ಟುದು ಸಂತೋಷದ ಸಂಗತಿ.

"ನೀವು ಯಾರು?" ಎಂದು ಕೇಳುವಿರಾ?

೧

ಮುದ್ದು ಬಾಲರ ರಾಷ್ಟ್ರನಿಧಿಯನು
ತಿದ್ದಿ ಬೆಳಿಸಲು ಆಣೆ ತೊಟ್ಟಿಹ
ಸಿದ್ಧ-ಹಸ್ತರು ನಾವು ಈ ಪ್ರಾಥಮಿಕ ಶಿಕ್ಷಕರು ॥
ಸುದ್ದಿಯಿಲ್ಲದೆ ಹಳ್ಳಿಪಳ್ಳಿಯೊ
ಳಿದ್ದು ತಿಪ್ಪೆಯ ಕಸವು ಹೊನ್ನಿನೊ
ಲೆದ್ದು ಕಾಣಿಸುವಂತೆ ಮಾಡುತ ನಿಮಗೆ ಕಲಿಸಿದೆವು ॥

೨

ಕಳೆದ ಹಿರಿಮೆಯ ಹೊಳೆವು ತಿಳುಹಿಸಿ
ಬೆಳೆದ ಕಿರಿಮೆಯ ಕೇದು ತೋರಿಸಿ
ತಿಳಿವ ಬೆಳೆಯಿಸಲೋದು ಬರೆಹಗಳನ್ನು ಕಲಿಸುತಲಿ ॥
ಕಳೆದ ಋಷಿಗಳ ಹೊಸತು ರೂಪದೊ-
ಳಿಳಿದು ಬಂದಿಹ ತೆರದಿ ಬಾಳುತ
ಬಳಲಿ ದುಃಖದಿ ಜನಕೆ ಸೌಖ್ಯವ ಕೊಡುವ ಯೋಗಿಗಳು ॥

೩

ಶಿಕ್ಷಣದ ಕಲೆ ಶಾಸ್ತ್ರವರಿಯುತ
ಪಕ್ಷ ಪಾತಗಳನ್ನು ಕೊರೆಯುತ
ದಕ್ಷ ಸರಕಾರದಲಿ ಜನದಲಿ ಬೇಕುಬೇಕಾಗಿ ॥
ರಕ್ಷಣೆಗೆ ವರ್ಧನೆಗೆ ಮುಕ್ತಿಗೆ
ಲಕ್ಷಣಾನ್ವಿತ ಮಾರ್ಗದರ್ಶಕ
ಶಿಕ್ಷಕರೊ ನಾವ್! ಈ ಪ್ರಥಮ ಶಿಕ್ಷಕರೊ!! ಎಲ್ಲ ರಾಯರಿಗೆ ॥

೪

ಓರಿಗೆಯ ಒಗೆತನವ ನೋಡಿಯೆ
ಸಾರಿ ಶಿಕ್ಷಕ ವೃತ್ತಿಕೊಂಡಿರಿ
ಮೀರಿ ಮರೆಗುವ ದೂರಿ ಕೇಳುವ ಜೇಡಿ ನಾವಲ್ಲ ॥
ಕಾರಭಾರದಿ ನಾವು ಕಿರಿಯರೆ
ತೋರುತಿದ್ದರು ದೇವರಾಜ್ಯವ
ಕೋರಿ ಪಡೆದಿಹ ಧರ್ಮರಾಜ್ಯವ ಸೂತ್ರಜಾಲಕರು ॥

— ಎಚ್. ಜಿ. ಕಟ್ಟಿ

ಶೈಕ್ಷಣಿಕ ಸುದ್ದಿಗಳು

ಹುಬ್ಬಳ್ಳಿ:— ೧೩ನೆಯ ನಂಬರ ಉರ್ದು ಹೆಣ್ಣುಮಕ್ಕಳ ಶಾಲೆಯಿಂದ ೧೫ ವಿದ್ಯಾರ್ಥಿನಿಯರು ೧೯೪೬ನೆಯ ಇಸ್ವಿಯಲ್ಲಿ ಉರ್ದು ಮುಲ್ಕಿ ಪರೀಕ್ಷೆಗೆ ಕುಳಿತರು ಮತ್ತು ೧೧ ವಿದ್ಯಾರ್ಥಿನಿಯರು ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯ ಹೆಡ್ ಮಾಸ್ತರರಿಗೂ ಉಪಶಿಕ್ಷಿಕೆಯರಿಗೂ ಇದರ ಶ್ರೇಯಸ್ಸು ಸಲ್ಲುತ್ತದೆ.

ಕೊಡಗಾನೂರ:— ಇಲ್ಲಿಯ ಶಾಲಾ ವಾಚನಾಲಯವು ಚೆನ್ನಾಗಿ ನಡೆದಿದೆ. ಒಟ್ಟು ೨೩೬ ಪುಸ್ತಕಗಳು ಇವೆ. ಇದಕ್ಕೆ ಸದ್ಗೃಹಸ್ಥರು ಧನ ಸಹಾಯ ಮಾಡುತ್ತಿದ್ದಾರೆ. ಅನೇಕ ಮಹನೀಯರು ದರ್ಶನವಿತ್ತು ವಾಚನಾಲಯದ ಆಡಳಿತೆಯನ್ನು ಕೊಂಡಾಡಿದ್ದಾರೆ. ಗಣಪತಿ ಉತ್ಸವವೂ ನಡೆಯಿತು. ಸರ್ವ ಶ್ರೀ. ಪಕ್ಕಾರ, ದೇಶಪಾಂಡೆ, ಎಸ್. ಕುಲಕರ್ಣಿ ಅವರ ವಾಚನಾಲಯಕ್ಕೆ ಒಂದೊಂದು ರೂಪಾಯಿ ಕೊಟ್ಟರು.

ಯರಮುಖ:— ಸೋಮೇಶ್ವರ ವಾಚನಾಲಯವು ಶಾಲೆಯಲ್ಲಿ ಸ್ಥಾಪಿತವಾಗಿದೆ. ೪೦ರೂ. ವರ್ಗಣಿ ಕೂಡಿದೆ. ೧೯೪೩ರಲ್ಲಿ ಸ್ಥಾಪಿತವಾಗಿ ಊರ್ಜಿತ ಸ್ಥಿತಿಯನ್ನೈದುತ್ತಲಿದೆ. ಈಗ ೭೦ ಪುಸ್ತಕಗಳಿವೆ. ಸರಕಾರದಿಂದಲೂ ೧೦ರೂ. ಗ್ರಾಂಟು ಸಿಕ್ಕಿದೆ.

ಹಾಲಕೇರಿ:—ಶ್ರೀಮಾನ್ ಹಂಪ್ರಾಳ ಅವರ ಅಧ್ಯಕ್ಷತೆಯಲ್ಲಿ ೨೪-೫-೪೬ನೆಯ ದಿನ ಪಾಲಕರ ದಿನಾಚರಣೆಯು ಆಚರಿಸಲ್ಪಟ್ಟಿತು. ಅಧ್ಯಕ್ಷರು 'ಪಾಲಕರ ಕರ್ತವ್ಯ' ಎಂಬ ವಿಷಯದ ಬಗ್ಗೆ ವ್ಯಾಖ್ಯಾನ ಮಾಡಿದರು. ನಾಟಕ ಮುಂತಾದ ಮನರಂಜನೆಯ ಕಾರ್ಯಕ್ರಮಗಳು ನಡೆದವು. ಯಮ್ಮಿಗನೂರದ ಶ್ರೀ. ಬೆಟಗೇರಿ ಬಸಪ್ಪನವರು ವಿದ್ಯಾರ್ಥಿಗಳಿಗೆ ಮೆಚ್ಚುಗೆ ಕೊಡಲು ೨೦ರೂ. ಗಳನ್ನು ಕೊಟ್ಟರು.

ಹಂದಿಗುಂದ:— ಜನಸ್ಪ್ರಿಯ ಹೆಡ್ ಮಾಸ್ತರರಾದ ಶ್ರೀ. ಶಿ. ಜ. ಹಿರೇಮಠ ಅವರನ್ನು ಶೇತಕಿ ಟ್ರೇನಿಂಗಿಗೆ ಆರಿಸಿದ್ದರಿಂದ ಅವರಿಗೆ ಸಂತೋಷಕೂಟವನ್ನೇರ್ಪಡಿಸಿ ಬೀಳ್ಕೊಡುವ ಸಮಾರಂಭವು ನೆರವೇರಿಸಲ್ಪಟ್ಟಿತು.

ಸವದಿ:— ಸಂಗಮೇಶ್ವರ ಲಾಯಬ್ರರಿಗೆ ಶ್ರೀ. ಕೂಡಲಪ್ಪ ಪರಪ್ಪ ಗದಗ ಅವರು ೨೫ರೂ. ಮತ್ತು ಶ್ರೀ. ಬಸಪ್ಪ ಕೂಡಲಪ್ಪ ನವಲಗುಂದ ಅವರು ೧೫ರೂ. ದಾನವಾಗಿ ಕೊಟ್ಟಿದ್ದಕ್ಕಾಗಿ ಅವರಿಗೆ ವಾಚನಾಲಯವು ಋಣಿಯಾಗಿದೆ.

ವಳಸಂಗ:—ಕನ್ನಡ ಗಂಡು ಮತ್ತು ಹೆಣ್ಣು ಮಕ್ಕಳ ಶಾಲೆಯ ೯ನೆಯ ಹುಟ್ಟು ಹಬ್ಬವು ಕವಿತಿಲಕ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ೨೮-೭-೪೬ನೆಯ ದಿನ ಆಚರಿಸಲ್ಪಟ್ಟಿತು. ಏ. ಓ. ಅವರೂ ಶ್ರೀ. ರೋಹಿಡೆಕರರೂ ಸಮಾರಂಭಕ್ಕೆ ಆಗಮಿಸಿದ್ದರು. ಅನೇಕ ವಿವಿಧ ವಿನೋದಾವಳಿಗಳ ಕಾರ್ಯಕ್ರಮವನ್ನು ನೋಡಿ ಅಧ್ಯಕ್ಷರು ಆನಂದಪಟ್ಟರು. ಈ ಶಾಲೆಯಿಂದ ಈಸಲ ೭ ವಿದ್ಯಾರ್ಥಿಗಳಲ್ಲಿ ೬ ವಿದ್ಯಾರ್ಥಿಗಳು ಮುಲ್ಕಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಬೆಳವಡಿ:—ಕನ್ನಡ ನಂಜು ಮುಕ್ಕಳ ಶಾಲೆಯಿಂದ ಈ ವರುಷ ೭ನೆಯ ಇಯತ್ತೆಯಿಂದ ೧೫ ಮತ್ತು ೬ನೆಯ ಇಯತ್ತೆಯಿಂದ ಇಪ್ಪತ್ತು ಮುಲ್ಕಿ ಪರೀಕ್ಷೆಗೆ ಕುಳಿತಿದ್ದರು. ಇವರಲ್ಲಿ ಅನುಕ್ರಮವಾಗಿ ೧೫ ಮತ್ತು ೬ ಜನರು ಪಾಸಾಗಿದ್ದಾರೆ. ಬೈಲಹೊಂಗಲ ಪರೀಕ್ಷಾ ಕೇಂದ್ರದಲ್ಲಿ ಹಚ್ಚು ಸಂಖ್ಯೆಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಪಾಸಾದವರು ಬೆಳವಡಿಯ ವಿದ್ಯಾರ್ಥಿಗಳೇ. ಇವರ ಶ್ರೇಯಸ್ಸನ್ನು ಶ್ರೀ ಯೋದಾನಪುರ ಮಾಸ್ತರರಿಗೆ ಸಲ್ಲುವದು.

ರಾಣೆಬೆನ್ನೂರು—ಶ್ರೀ. ಲೋಹಿತಸ್ವಾಮಿಯವರ ಶಾಲಾ ಸುರುಬಗೇರಿ, ಇದರ ಪಾರಿತೋಷಕ ಸಮಾರಂಭವು ಮತ್ತು ಪಾಲಕ ವಿನಾಯಕರಾಯರು ೧೫-೬-೪೬ನೆಯ ದಿನ **ಶ್ರೀ. ಅಪ್ಪಣ್ಣ ಸ್ವಾಮಿ** ಮರಿಮಠ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾರೀರಕ ಚಟುವಟಿಕೆ, **ಅಭಿನಯ**, ಕೋಲಾಟ ಮುಂತಾದ ವಿವಿಧ ಕೃತ್ಯಗಳಿಂದ ಕಾರ್ಯಕ್ರಮಗಳು ಜರುಗಿದವು. ಅಧ್ಯಕ್ಷರು ಸಂಸ್ಥೆಗೆ ೫೦. ಮತ್ತು ಶ್ರೀ ಕಾರವತ್ತಿ ಪರಮೇಶ್ವರಪ್ಪ ೨೫ ರೂ. ದೇಣಿಗೆ ಮಾಡಿದರು.

ಶಿದ್ದೇ:—(ಕಾರವಾರಜಿಲ್ಲೆ) ಸ್ಥಳೀಯ ಪಂಚರಾದ ಶ್ರೀ. ಘನಶ್ಯಾಮ ವಿಠ್ಠಲ ಜೋಶಿ ಅವರು ತಾಲೆಮನೆಯಲ್ಲಿ ಕನ್ನಡ ಶಾಲೆಯ ಉಪಯೋಗಕ್ಕಾಗಿ ಒಂದು ಜಾಗವನ್ನು ಕೊಟ್ಟಿದ್ದಾರೆ.

ನಿಡಗುಂದಿಕೊಪ್ಪ:— ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳೂ ಉಧ್ಯಾಪಕರೂ ಸೇರಿ ಗಜಾನನೋತ್ಸವವನ್ನು ವಿಜೃಂಭಣೆಯಿಂದ ಸಾಂಗವಾಗಿ ನೆರವೇರಿಸಿದರು. ಸ್ಥಾನಿಕ ಸ್ಕೂಲ್ ಕಮಿಟಿಯ ಚೇರಮನ್ನರಾದ ಶ್ರೀ ಫಕೀರಪ್ಪ ಸಮೀ ಅವರ ಅಧ್ಯಕ್ಷತೆಯಲ್ಲಿ ಶ್ರೀಮನ್ನನ್ನು. ಖರು 'ಏಸ್ಯೆಯ ಮಾಹಿತಿ' ಕುರಿತು ಭಾಷಣ ಮಾಡಿದರು.

ತಿಗಡೊಳ್ಳಿ:— ಇಲ್ಲಿಯ ಪ್ರಾಥಮಿಕ ಶಾಲೆಯ ಹಿರಿಯ ಮಾಸ್ತರರಾದ ಶ್ರೀ **ಭೀಮಾಜಿ** ಅಪ್ಪಾಜಿ ಅವಲಕ್ಕಿ ಅವರು ೧೫-೬-೪೬ ರಂದು ನಿವೃತ್ತರಾದರು. ಊರವರೂ ವಿದ್ಯಾರ್ಥಿಗಳೂ ಸೇರಿ ಇವರಿಗೆ ಸಮಾರಂಭಪೂರ್ವಕವಾಗಿ ಬೀಳ್ಕೊಡಿಸಿ ತಮ್ಮ ಆದರ ಭಕ್ತಿಯನ್ನು ತೋರಿಸಿದರು.

ನರೇಗಲ್ಲು— ಕನ್ನಡ ಗಂಡು ಮಕ್ಕಳ ಶಾಲೆಯ ಮಾಸ್ತರರು ಶ್ರೀ. ಕಳ್ಳಿಮನಿ ಮತ್ತು ಕನ್ನಡ ಶಾಲೆಯ ಹೆಣ್ಣು ಮಾಸ್ತರರು ಶ್ರೀ ಮಲ್ಲಾಪುರ ಇವರು. ಶ್ರೀ. ಕಳ್ಳಿಮನಿಯವರು ಒಳ್ಳೆಯ ಕಳಕಳಿಯಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುತ್ತಿದ್ದರು. ಪ್ರತಿವರ್ಷ ಕನ್ನಡ ಶಾಲೆಯಿಂದ 'ಮಿಡಲ್‌ಸ್ಕೂಲ್' ಸ್ಕಾಲರ್‌ಶಿಪ್‌ಗೆ ಮುಂಚಿತವಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಟ್ಟು ಪರೀಕ್ಷೆಗೆ ಕಳಿಸುತ್ತಿರುತ್ತಾರೆ. ಈ ವರ್ಷ ಇಬ್ಬರು ಹುಡುಗರು ಸ್ಕಾಲರ್‌ಶಿಪ್ಪು ಪಡೆದಿದ್ದಾರೆ. ಇದಲ್ಲದೆ ತೇರ್ಗಡೆಯಾದ ಹಿರಿಯ ವಿದ್ಯಾರ್ಥಿಗಳಿಗೆ ಇಂಗ್ಲೀಷ ಶಾಲೆಯ ವಿದ್ಯಾರ್ಥಿಗಳಿಗಿಂತ ಇವರು ಜಿಲ್ಲೆಗೆ ಒಂದನೆಯ ನಂಬರ ಬರುವಿಕೆಯಲ್ಲಿ ಇವರ ಕರ್ತವ್ಯ ದಕ್ಷತೆಯನ್ನು ಕೊಂಡಾಡಿದರು.

ಹುಲೇಕಲ್:— ಕಾಡಾ ಮುಖರು ಗಾಂಧಿಯವರ ಸ್ಮರಣಾರ್ಥವಾಗಿ ಗಾಂಧಿ ಟೋಪಿ ಮತ್ತು ಅನುಗ್ರಹ ಎಂಬ ಎರಡು ಕಾದಂಬರಿಗಳನ್ನು ಪ್ರಕಟಿಸಿದರು. ಪುಸ್ತಕೋದ್ಧಾರ, ಲಂಚ ನಿರ್ಮೂಲನದ ಬಗ್ಗೆ ಭಾಷಣಗಳನ್ನು ಏರ್ಪಡಿಸಿದರು. ಸರಕಾರದ ಊರ ಪ್ರಮುಖ ಕೋರಲಾಗಿದೆ.

ಸಾಂವಶಿ:— ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಗಜಾನೋತ್ಸವವು ನೆರವೇರಿಸಲ್ಪಟ್ಟಿತು. 'ಪುರುಷ ವಧು' ಮತ್ತು 'ದೆವ್ವನ ಮನೆ' ಎಂಬ ನಾಟಕಗಳ ಅಭಿನಯವಾಯಿತು. ಅನೇಕ ಬಗೆಯ ಸ್ಪರ್ಧೆಗಳು ನಡೆದವು. ಶ್ರೀ. ಶ್ರೀನಿವಾಸಗೌಡ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಬಹುಮಾನಗಳನ್ನು ಪ್ರಥಮ ಬಂದ ವಿದ್ಯಾರ್ಥಿಗಳಿಗೆ ಹಂಚಲಾಯಿತು.

ಹಂಸನೂರ:— ೭—೯—೪೬ನೆಯ ದಿನ ಶಿಕ್ಷಕರ ಗ್ರುಪ್ ಸಮ್ಮೇಲನವು ಶ್ರೀ. ಎಸ್. ಪಿ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಬೀಟ ಆಫೀಸರ ಶ್ರೀ. ಎಚ್. ಜಿ. ಕಟ್ಟಿಯವರೂ ಆಗಮಿಸಿದ್ದರು. ಶಾ. ಶಿ. ಚಟುವಟಿಕೆ, ಮಾದರಿಯ ಪಾಠ, ಪಾಲಕರ ಸಹಾನುಭೂತಿ, ವಾಚನ ಕಲಿಸುವ ಪದ್ಧತಿ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆದವು. ಊರ ಪ್ರಮುಖರ ಸಹಾಯದಿಂದ ಪಾಟಿ ಪುಸ್ತಕಗಳು ಹಂಚಲ್ಪಟ್ಟವು.

ಕುಡುಪಲಿ:— ಹಿರಿಕೆಯ ತಾಲೂಕಿನ ಬೇಸಿಕ್ ಶಾಲೆಯ ಮೇಲಿನ ವರ್ಗದ ೪೮ ವಿದ್ಯಾರ್ಥಿಗಳು ಆನವೇರಿ ಸಂಗಮದ ಶೈಕ್ಷಣಿಕ ಪ್ರವಾಸ ಮುಗಿಸಿಗೊಂಡು ೧೫—೯—೪೬ಕ್ಕೆ ಇಲ್ಲಿಗೆ ಬಂದರು. ಶ್ರೀ. ದೊಡ್ಡಗೌಡ ಕುಪ್ಪೇಲೂರ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀ. ಎನ್ ಎಚ್ ಮರಿಗೌಡರು ಶೈಕ್ಷಣಿಕ ಪ್ರವಾಸದ ಮಹತ್ವದ ಬಗ್ಗೆ ಮಾತನಾಡಿದರು.

ಧಾರವಾಡದ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಚಟುವಟಿಕೆಗಳು

ಈ ಸಲ ಬೇಸಗೆಯ ಬಿಡುವಿನ ನಂತರ— ಜೂನ ೧೫ನೆಯ ತಾರೀಖಿನ ದಿನ ಸರಿಯಾಗಿ ಕಾಲೇಜನ್ನು ತೆರೆಯಲಾಯಿತು. ಪುರವಣಿ ಸರ್ಟಿಫಿಕೇಟ ಪರೀಕ್ಷೆಯ ಮೂಲಕ ಕಾಲೇಜಕ್ಕೆ ಸಾಕಷ್ಟು ಶಿಕ್ಷಿಕೆ ವಿದ್ಯಾರ್ಥಿನಿಯರು ಸಕಾಲದಲ್ಲಿ ಬಂದು ಸೇರುವದಾಗಲಿಲ್ಲ.

ಆರಂಭದ ತಿಂಗಳಲ್ಲಿ—ಪಾಠಗಳನ್ನು ಕೊಡುವಾಗ ಶಿಕ್ಷಿಕೆಯರು ಲಕ್ಷದಲ್ಲಿಡತಕ್ಕ ಶೈಕ್ಷಣಿಕ ತತ್ವಗಳು–ಪಾಠ ನಿರೀಕ್ಷಣೆಯ ಮಹತ್ವ–ಪಾಠ ನಿರೀಕ್ಷಣೆಯಲ್ಲಿ ಅಡಕವಾದ ಸಂಗತಿಗಳು–ಇವುಗಳನ್ನು ಕುರಿತು ಕಾಲೇಜದ ಹಿರಿಯ ಶಿಕ್ಷಕರಾದ–ಶ್ರೀ. ಕಂಬದ ಅವರು ಉಪನ್ಯಾಸವಿತ್ತರು. ಕಾಲೇಜದ ಶಿಕ್ಷಿಕೆ ವಿದ್ಯಾರ್ಥಿನಿಯರಿಗಾಗಿ–ಕಾಲೇಜದ ಶಿಕ್ಷಕ-ಶಿಕ್ಷಿಕೆಯರೂ, ಪ್ರಾಕ್ಟಿಸಿಂಗ ಸ್ಕೂಲಿನ ಶಿಕ್ಷಿಕೆಯರೂ ನೂರಾರು ಪಾಠಗಳನ್ನು ಕೊಟ್ಟರು.

* * * *

ತಾ|| ೨೭—೬—೧೯೪೬ನೆಯ ದಿನ ಡಾ. ಕಾಳೆ ಅವರು "ಕುರುಡತನವನ್ನು ಹೋಗಲಾಡಿಸುವ ಬಗೆ" ಎಂಬ ವಿಷಯವನ್ನು ಕುರಿತು ಮಾಯಾ ಲಾಂದರದ ಸಹಾಯದಿಂದ ವ್ಯಾಖ್ಯಾನ ಕೊಟ್ಟರು. ಜನರು ಕುರುಡರಾಗಲು ಇರುವ ಹಲವು ಪ್ರಸಂಗಗಳಲ್ಲಿ ಅವರ ಅಲಕ್ಷ್ಯವೇ ಮುಖ್ಯ ಕಾರಣವೆಂದೂ ಆರೋಗ್ಯ ನಿಯಮಗಳನ್ನನುಸರಿಸಿ ಸಾಕಷ್ಟು ದಕ್ಷತೆಯಿಂದ ಜೀವಿಜಲು ಪ್ರಯತ್ನ ಪಟ್ಟರೆ ಈ ದುರ್ದೈವಿ ಪ್ರಸಂಗದಿಂದ ಎಷ್ಟೋ ಜನರು ಪಾರಾಗಬಹುದೆಂದೂ ಕಾಲೇಜಿನ ಶಿಕ್ಷಿಕೆ ವಿದ್ಯಾರ್ಥಿನಿಯರಿಗೆ ತಿಳಿಸಿದರು.

ತಾ|| ೧೧—೭—೪೬ನೆಯ ದಿನ "ಚಿಕ್ಕ ಉಳಿತಾಯದ ಯೋಜನೆ"ಯನ್ನು ಕುರಿತು ಹಿಂದಿಯಲ್ಲಿ ಮಿಸ್ ಮೆಹತಾ ಅವರು ಭಾಷಣ ಮಾಡಿದರು. ಮಿಸ್ ಲೇಡೀ ಸುಪರಿಂಟೆಂಡಂಟರವರು ಅಧ್ಯಕ್ಷಸ್ಥಾನ ವಹಿಸಿದ್ದರು. ನಾಡಿನಲ್ಲಿದ್ದ ಬಡವರಿಗೂ, ಕೂಲಿಯವನಿಗೂ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ ಇದರಿಂದ ತುಂಬ ಲಾಭವಾಗುವದೆಂಬುದನ್ನು ಮನವರಿಕೆ ಮಾಡಿ ಕೊಟ್ಟರು. ಇದರ ಲಾಭವನ್ನು ಎಲ್ಲರೂ ಪಡೆಯಬೇಕಾಗಿ ಕೇಳಿಕೊಂಡರು. ಶ್ರೀ. ತಂಬದ ಅವರು ಶಿಕ್ಷಿಕೆ ವಿದ್ಯಾರ್ಥಿನಿಯರಿಗಾಗಿ ಅವರ ಭಾಷಣವನ್ನು ಕನ್ನಡದಲ್ಲಿ ಹೇಳಿ ಅವರ ಉಪಕಾರ ಸ್ಮರಿಸಿದರು.

ತಾ|| ೩೦—೪—೧೯೪೬ನೆಯ ದಿನ ಪ್ರತಿವರ್ಷದಂತೆ ಈ ಸಲವೂ ಕಾಲೇಜಿನಲ್ಲಿ ಶ್ರೀ. ಗಜಾನನ ಉತ್ಸವವನ್ನು ಸಾಕಷ್ಟು ಉತ್ಸಾಹದಿಂದ ನೆರವೇರಿಸಲಾಯಿತು. ಕಾಲೇಜಿನ ಶಿಕ್ಷಿಕೆ ವಿದ್ಯಾರ್ಥಿನಿಯರೇ ಶ್ರಮವಹಿಸಿ ಶ್ರೀ. ಗಣೇಶನಿಗಾಗಿ ಸುಂದರ ಮಂಟಪವನ್ನು ಪ್ರಾರ್ಥನಾ ಮಂದಿರದಲ್ಲಿ ನಿರ್ಮಾಣಿಸಿದ್ದರು. ಮಂದಿರದಲ್ಲಿ ಅವರು ಮಾಡಿದ ಅಲಂಕಾರವು ಉತ್ಸವಕ್ಕೆ ಕಳೆಯನ್ನು ಕೊಟ್ಟಿತ್ತು. ಚತುರ್ದಶಿ ದಿನದಿಂದ ಐದು ದಿನಗಳ ವರೆಗೆ ದಿನಾಲು ಕಾಲೇಜಿನ ಶಿಕ್ಷಿಕೆ-ವಿದ್ಯಾರ್ಥಿನಿಯರು ಪೂಜಾ ಕಾರ್ಯ ನೆರವೇರಿಸುತ್ತಿದ್ದರು. ಈ ಅಧ್ಯಾಪೇತರ ಚಟುವಟಿಕೆಯಲ್ಲಿ ಶಿಕ್ಷಕ ವರ್ಗವು ಸಾಕಷ್ಟು ಆಸ್ಥೆಯಿಂದ ಭಾಗವಹಿಸುತ್ತಿದ್ದುದು ಗಮನಾರ್ಹವಾದ ಸಂಗತಿಯು.

ತಾ|| ೬—೯—೪೬ನೆಯ ದಿನ ಮೈಸೂರ ಸಂಸ್ಥಾನದ ಶಾಸನಸಭೆಯ ಸದಸ್ಯರೂ 'ಬೆಳಕು' ಪತ್ರಿಕೆಯ ಸಂಪಾದಿಕೆಯರೂ ಆದ ಸೌ. ಲಕ್ಷ್ಮಮ್ಮ ಎಮ್. ಎ. ಅವರು "ಪ್ರೌಢ ಶಿಕ್ಷಣ"ವನ್ನು ಕುರಿತು ಭಾಷಣ ಮಾಡಿದರು. ಮಿಸ್ ಲೇಡೀ ಸುಪರಿಂಟೆಂಡಂಟರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಇಂದಿನ ಯುಗದಲ್ಲಿ ಸ್ತ್ರೀ ಸಮಾಜದ ದೃಷ್ಟಿಯೇ ಬದಲಾಗಬೇಕಾಗಿದೆ. ಸ್ತ್ರೀಯರಲ್ಲಿ ಕಲಿತವರು—ಕಲಿಯದವರು—ಎಂಬ ಎರಡು ಪಂಗಡಗಳಾಗಿವೆ. ನಾಡಿನ ಅಭ್ಯುದಯಕ್ಕಾಗಿ ಕಲಿತ ಹೆಣ್ಣು ಮಕ್ಕಳು ಕಲಿಯದೆ ಇದ್ದ ಹೆಣ್ಣು ಮಕ್ಕಳಿಗಾಗಿ ಸಾಕಷ್ಟು ದುಡಿಯಬೇಕು. ಅದಕ್ಕಾಗಿ ಪ್ರೌಢ ಶಿಕ್ಷಣವನ್ನು ಪ್ರತಿಯೊಬ್ಬ ಕನ್ನಡತಿಯು ಕೈಕೊಳ್ಳಬೇಕು. ಶಿಕ್ಷಿಕೆಯರಂತೂ ಅತ್ಯವಶ್ಯವಾಗಿ ಕೈಕೊಳ್ಳಬೇಕು. ಇದೇ ನಮ್ಮ ನಾಡಿನ ಭಾಗ್ಯದ ಗುಟ್ಟು. ಎಂದು ಮುಂತಾಗಿ ತಮ್ಮ ಸವಿ ನುಡಿಯಲ್ಲಿ ವಿಚಾರ ಪ್ರಭುಲ್ಲಿತ ಭಾಷಣ ಮಾಡಿದರು. ಈ ಕ್ಷೇತ್ರದಲ್ಲಿ ತಾವು ಎಷ್ಟೋ ವರುಷಗಳ ವರೆಗೆ ದುಡಿದ ಅನುಭವಗಳನ್ನು ನಿವೇದಿಸಿದರು. ಶ್ರೀ. ತಂಬದ ಅವರ ಆಭಾರಮನ್ನಣೆಯಿಂದ ಕಾರ್ಯಕ್ರಮವು ಕೊನೆಗೊಂಡಿತು.

E. S. ELIJAH
L. S. T. C. W. Dharwar

ಹತ್ತು ವರುಷಗಳ ಅನುಭವದಿಂದ ಬರೆದ

ಚಿ. ಶ್ರೀ. ಕುಲಕರ್ಣಿಯವರ ಶಾಲೋಪಯೋಗಿ ಪುಸ್ತಕಗಳು

ಮುಲ್ಕೀಪರೀಕ್ಷೆಗಾಗಿ

೧	ಗಣಿತ ಸಂಗ್ರಹ	೦ ೧೫ ೦
೨	ಇತಿಹಾಸ ಪ್ರಶ್ನೋತ್ತರ ಮಾಲೆ	೦ ೯ ೦
೩	ಭೂಗೋಲ ಪ್ರಶ್ನೋತ್ತರ ಮಾಲೆ	೦ ೯ ೦
೪	ಭೂಮಿತಿ ಪ್ರಶ್ನೋತ್ತರ ಮಾಲೆ	೦ ೮ ೦
೫	ಜಮಾಖರ್ಚು ,,	೦ ೧೧ ೦
೬	ಶಾಸ್ತ್ರೀಯ ವಿಷಯ ,,	೦ ೬ ೦
೭	ಆರೋಗ್ಯ ವಿಜ್ಞಾನ ,,	೦ ೯ ೦
೮	ವಾಕ್ಯರಚನೆ ಹಾಗೂ ನಿಬಂಧ ಬರಹ	೦ ೮ ೦
೯	ಈಗಿನ ರಾಜ್ಯವ್ಯವಸ್ಥೆ	೦ ೪ ೦
೧೦	ಗಂಡು ಹುಡುಗರ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦ ೯ ೦
೧೧	ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦ ೧೫ ೦
೧೨	ವಾಚನಮಾಲೆ	೦ ೮ ೦
೧೩	ಪದ್ಯಮಾಲೆ	೦ ೪ ೦
೧೪	ಪ್ರಶ್ನೋತ್ತರ ಭಾಷಾಭ್ಯಾಸ ಭಾಗ (೧)	೦ ೧೦ ೦
೧೫	,, (ವ್ಯಾಕರಣ) (ಭಾಗ ೨)	೦ ೧೦ ೦
೧೬	ಶಾಸ್ತ್ರೀಯ ವಿಷಯಸಾರ	೦ ೧೦ ೦
೧೭	ಭೂಮಿತಿ	೦ ೬ ೦
೧೮	ಹೈಸ್ಕೂಲ ಸ್ಕಾಲರಷಿಪ್ ಪರೀಕ್ಷೆಯ ಪ್ರಶ್ನೆಗಳು	೦ ೧೫ ೦
೧೯	ಮಿಡಲ್ ಸ್ಕೂಲು ಸ್ಕಾಲರ್‌ಷಿಪ್ ಪರೀಕ್ಷೆಯ ಪ್ರಶ್ನೆಗಳು	೦ ೮ ೦
೨೦	ಭಾರತ ಸ್ವರಾಜ್ಯ ಸಾಧನೆ	೦ ೫ ೦
೨೧	ಮುಲ್ಕೀಪರೀಕ್ಷೆಯ ಪ್ರಶ್ನೋತ್ತರ ೫ ಗ್ರಂಥ	೧ ೦ ೦
೨೨	ಇತಿಹಾಸ ಸಾರ	೦ ೪ ೦
೨೩	ಮಾದರಿಯ ನಿಬಂಧಗಳು	೦ ೬ ೦

ಕಳಗಿನ ವರ್ಗಗಳಿಗಾಗಿ

೧	೧ನೇ ಇಯತ್ತೆಯ ಸಾಮಾನ್ಯ ವಿಜ್ಞಾನ	೦ ೬ ೦
೨	೨ನೇ ,, ,,	೦ ೬ ೦
೩	೩ನೇ ,, ,,	೦ ೪ ೦
೪	೪ನೇ ,, ,,	೦ ೫ ೦
೫	೫ನೇ ,, ,,	೦ ೬ ೦
೬	೨ನೇ ಇಯತ್ತೆಯ ಭೂಗೋಲ (ಪ್ರಪಂಚ ಪರಿಚಯ) ಭಾಗ ೧	೦ ೬ ೦
೭	೩ನೇ ,, ,, ಭಾಗ ೨	೦ ೬ ೦
೮	೪ನೇ ,, ,, ಭಾಗ ೩	೦ ೬ ೦
೯	೫ನೇ ,, ,, ಭಾಗ ೪	೦ ೬ ೦
೧೦	೧ನೇ ತರಗತಿಯ ಕಥೆ	೦ ೦ ೬
೧೧	೨ನೇ ,,	೦ ೦ ೬
೧೨	೩ನೇ ,,	೦ ೨ ೦
೧೩	೪ನೇ ,,	೦ ೩ ೦
೧೪	ಶನಿಮಹಾತ್ಮೆ	೦ ೦ ೦
೧೫	ಪೌರಾಣಿಕ ಕಥೆಗಳು (೨-೪ ವರ್ಗಗಳ ಇತಿಹಾಸ)	೦ ೪ ೦
೧೬	೪ನೇ ವರ್ಗದ ನಿಬಂಧ ಮತ್ತು ವ್ಯಾಕರಣ	೦ ೫ ೦
೧೭	ಮಕ್ಕಳ ಕಥೆಗಳು. ಭಾಗ ೧	೦ ೪ ೦
೧೮	,, ಭಾಗ ೨	೦ ೪ ೦
೧೯	ಪೌರನೀತಿ ೧ನೇ ಇಯತ್ತೆಗಾಗಿ	೦ ೪ ೦
೨೦	,, ೨ನೇ ,,	೦ ೪ ೦
೨೧	,, ೩ನೇ ,,	೦ ೪ ೦
೨೨	,, ೪ನೇ ,,	೦ ೬ ೦

ಕೈಯಲ್ಲಿರುವ ಕೃತಿಗಳು

೧ ಪೌರನೀತಿ ೫ನೇ ವರ್ಗಕ್ಕಾಗಿ. ೨ ಪೌರನೀತಿ ೬ನೇ ವರ್ಗಕ್ಕಾಗಿ. ೩ ಪೌರನೀತಿ ೭ನೇ ವರ್ಗಕ್ಕಾಗಿ. ೪ ಕುಮಾರ ಕಿಟ್ಟಣ್ಣ. (ಹೊಸ ಆವೃತ್ತಿ). ೫ ಮಹಾತರ ಪರಿಚಯ,,. ೬ ರಾಮ ಕೃಷ್ಣ ನೀತಿಯ ಕಥೆಗಳ,. ೭ ಪುರಂದರದಾಸರ ಪರಿಚಯ ,, ೮ ಶಾರೀರಿಕ ಶಿಕ್ಷಣ (ಡ್ರಿಲ್ ಪುಸ್ತಕ)

೧ ಮಿಡಲ್ ಸ್ಕೂಲ ಸ್ಕಾಲರ್‌ಷಿಪ್ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೨ ಹೈಸ್ಕೂಲ ಸ್ಕಾಲರಷಿಪ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೩ ಪ್ರಪಂಚಪರಿಚಯ ಭಾಗ ೫ ೬ನೇ ವರ್ಗಕ್ಕಾಗಿ. ೪ ಪ್ರಪಂಚಪರಿಚಯ ಭಾಗ ೬ ೭ನೇ ವರ್ಗಕ್ಕಾಗಿ ೫ ಹಿಂದಣ ಹಿಂದಿನ ಇಂದಿನ ಉದ್ಧಾರಕರು.

ಶಿಕ್ಷಕರೂ, ಬಾಲಕರೂ ಎಂದಿನಂತೆ ಚಿ. ಶ್ರೀ. ಯವರ ಪುಸ್ತಕಗಳನ್ನೇ ಉಪಯೋಗಿಸಿ ಇವರ ಶ್ರಮದ ಲಾಭ ಪಡೆಯಬೇಕಾಗಿ ವಿನಂತಿ ಅದೆ.

ಪುಸ್ತಕ ಸಿಗುವ ಸ್ಥಳ

ಕೆ. ಎಸ್. ಕುಲಕರ್ಣಿ ಬುಕ್‌ಸೇಲರ. ಪಬ್ಲಿಶರ

ಸ್ಟೇಶನ್‌ರೋಡ, ಹುಬ್ಬಳಿ

ಮನೆಮನೆಯಲ್ಲಿಯೂ ಇರಬೇಕಾದ ಸ್ಫೂರ್ತಿದಾಯಕ ಗ್ರಂಥಗಳು!

೧. ಸುಭಾಷ-ಸೇವೋಲ್ಲಂಘನ

ಬೆಲೆ ೩—೪—೦ (ಅಂಚೆವೆಚ್ಚ ಸೇರಿ ೩—೧೫—೦)

ವಿವಿಧಯುಕ್ತ-ಸಾಹಸ-ವೇಷಗಳಿಂದ ಸರಕಾರಿ ಗೂಢಚಾರರ ಕಣ್ಣಿಗೆ ಅಂಜನಪಕ್ಷಿ ಸುಭಾಸರು ಪರದೇಶಗಳನ್ನು ಸಂಚರಿಸಿದ ರೋಮಾಂಚಕಾರಿ ಇತಿಹಾಸವನ್ನು ಶ್ರೀ. ಉತ್ತಮಚಿಂಪರು ಸರಸವಾದ ಬಯಲ್ಲಿ ಕತ್ತೇದಾರಿ ಕಾದಂಬರಿಯಂತೆ ಬರೆದಿದ್ದಾರೆ.

೨. ಆಜಾದ ಹಿಂದ

ಬೆಲೆ ೨—೦—೦ (ಅಂಚೆವೆಚ್ಚ ಸೇರಿ ೨—೪—೦)

ನೇತಾಜಿ ಸುಭಾಸರು ಕಟ್ಟಿದ ಆಜಾದಹಿಂದ ಫೌಜಿನ ಹೋರಾಟದ ಸಮಗ್ರ ಇತಿಹಾಸ ಕ್ಯಾ. ಲಕ್ಷ್ಮಿ, ಶಹಾನವಾಜ, ಸೈಗಲ, ಧಿಲನ, ಭೋಸಲೆ, ರಾಸಬಿಹಾರಿ ಮೊದಲಾದ ಸೇನಾನಿಗಳ ಕಥೆ ಇದರಲ್ಲಿವೆ.

೩. ನೇತಾಜಿ

ಬೆಲೆ ೨—೮—೦ (ಅಂಚೆವೆಚ್ಚ ಸೇರಿ ೨—೧೫—೦)

ನೇತಾಜಿ ಸುಭಾಸರ ಜೀವನ-ವಿಚಾರ-ಕಾರ್ಯಗಳ ಸಂಪೂರ್ಣ ದರ್ಶನ. ಅಲ್ಲಲ್ಲಿ ಮಾಡಿದ ಅಕಾಶವಾಣಿಯ ಭಾಷಣಗಳು. ಇತ್ಯಾದಿ.....

ಈ ಮೂರು ಪುಸ್ತಕಗಳನ್ನೂ ಒಯ್ಯುವವರು ೪—೬—೦ ಮನಿಯಾರ್ಡರ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಹೊಸ ಪುಸ್ತಕಗಳಿಗೆ ತ್ವರೆ ಮಾಡಿರಿ! ಲಾಭಪಡೆಯಿರಿ!

ಹೊಸ ಪದ್ಧತಿಯು

ಹಿಂದೀ ಜಮಾನಾ ಭಾಗ ೨

(ಮಧ್ಯಮ ಪರೀಕ್ಷೆಗೆ)

ಇದರಲ್ಲಿ ಕುಂತಿ, ಚೆಲ್ಲಾ, ಮಹಿಯಾರ್, ಬಡ್ಡಿ ಅಕಬರನ ಜಮಾನಾದಿನ ಇತರ ಪದ್ಯಗಳು ಮಾಡಿ, ಗಳ ಸಮೂಹಗಳು, ಕ್ರಿಕೆಟ್ ದೃಶ್ಯಕಾವ್ಯ ಗಳು ಇರುವವಲ್ಲದೆ, ಒಕ್ಕಲಿತವನ ಏಲುವಿನ ಶಾಲೆಯ ವಿದ್ಯಾರ್ಥಿ ಪತ್ರಿಕೆಯಲ್ಲಿ ಬರೆದ ಜಮಾ ಖರ್ಚು ಅಂದರೆ ತೋಟಿ ಬೇಜಾರಿಸಿ, ಬೀಳದ ಮನಸ್ಸಿನ ಮೇಲ್, ಕಳ್ಳ ಪೋಲೀಸ್ ಕಿಟ್ಟಿ, ಮೂರು ಜನರ ಪತ್ರಿಕೆಗಳು ಕಮಿಷನರಿಯ ಬಾಯಿಗೆಯ ಪತ್ರಿಕೆಗಳ ಸಮೂಹಗಳು ಇರುವದರಿಂದ ಇದು ಒಬ್ಬರು ಇಬ್ಬರಿಗೂ ಅಲ್ಲ ಎಲ್ಲ ಶಾಲೆಯ ಸ್ಟ್ಯಾಫಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ತಮ್ಮಾನೇಜಾ ಹಿಂದ ಸ್ಥಾನದಲ್ಲಿ ಎಲ್ಲರೂ ಕಮಿಷನ್ ಕೊಳ್ಳಿರಿ. ಬೆಲೆ ೧ ಅಣೆ

ಹೊಸ ಪದ್ಧತಿಯ

(೨) ಹಿಂದೀ ಜಮಾನಾ ಭಾಗ ೧

(ಪ್ರಾಥಮಿಕ ಪರೀಕ್ಷೆಗೆ)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿದ್ದಾರೆ. ಇದು ೫-೬ನೆಯ ಇಯತ್ತೆಯವರಿಗೂ ಹೊಸ್ತು ಮಕ್ಕಳ ಮುಲ್ಕೀ ಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ.

೨ ಹೊಸ ಪದ್ಧತಿಯ ಜಮಾನಾ ಭಾಗ ೨ ಇನ್ನೂ ಇಯತ್ತೆಯವರಿಗೆ ಕುಡಿಸಿಕೊಳ್ಳಲಿಲ್ಲವೇ ಬೆಲೆ: ೩ ಆಣೆ.

೩. ಅಂಗಸಾಧನ ಶಿಕ್ಷಕ: ಬೆಲೆ: ೪ ಆಣೆ.

೪. ಸೇವಾದಳದ ಸಂಗ್ರಹ: ಇದು ಈಗಿನ ಪರೀಕ್ಷೆಗೆ ಉಪಯೋಗಿಸುವದರಿಂದ ಸ್ಕೌಟ ರ ಮತ್ತು ಮುಲ್ಕೀ ಪರೀಕ್ಷೆಯವರಿಗೆ ಸುಸಂಧಿಯಿದೆ. ಬೆಲೆ: ೪ ಆಣೆ.

ವಿಕ್ರಯಸ:— ಶಾ. ಪಿ. ವಜ್ರನ್ನನವರ ಮಾಸ್ತರ ಜೊಳಿಗಾಪುರ ಪೇಟೆ, ವಿಜಾಪುರ.

Printed by R. Y. Mudgudl, at Ravindra Press, Dharwar and Published by S. R. Joshi Esqr., B. A., B. T. Principal Training College, For Men Dharwar at his Office 7403—46—1375.

ಕನ್ನಡ

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಸಂಪಾದಕರು:

ಶ್ರೀನಿವಾಸ ರಾಮಚಂದ್ರ ಜೋಶಿ, ಬಿ. ಎ., ಬಿ ಟಿ.

ಅಕ್ಟೋಬರ, ನವಂಬರ, ಡಿಸೆಂಬರ ೧೯೪೬

ಪ ರಿ ವಿ ಡಿ

೧.	ಆಜ್ಞಾಪಾಲನ, ಆಜ್ಞೆ	ಸ್ವಾಮಿ ವಿವೇಕಾನಂದ	೧
೨.	ಸಂವಾದಕೀಯ		೩
೩.	ಉದ್ಗಾಮಿ ಪದ್ಧತಿ	ಶ್ರೀ. ಎಸ್. ಜಿ. ಬೈಚವಾಳ, ಎಂ.ಎ.	೬
೪.	ಧಾರ್ಮಿಕ ಶಿಕ್ಷಣ	,, ಮಿರ್ಜಿ ಅಣ್ಣಾರಾಯರು	೧೩
೫.	ಪಾಯ್ಥೆಗೋರಸನ ಪ್ರಮೇಯ		೧೪
೬.	ಮಿಡಲ್ ಸ್ಕೂಲ ಸ್ಕಾಲರಶಿಪ್ ಪರೀಕ್ಷೆ ೧೯೪೭		೧೫
೭.	ಟ್ರೇನಿಂಗ ಕಾಲೇಜುಗಳ ಚಟುವಟಿಕೆಗಳು		೧೭
೮.	ಹೆಣ್ಣುಹಾದಿ (ಕವನ)	ಶ್ರೀ. ಕೋಠಿವಾಲೆ ಮಲ್ಲಪ್ಪ	೧೮
೯.	ಪ್ರಿನ್ಸಿಪಾಲ ಬೈಚವಾಳರು	ಶ್ರೀ. ಎಸ್. ಆರ್. ಜೋಶಿ	೧೯
೧೦.	ಪತ್ರದ ಪ್ರವಾಸ	,, ಗುರುನಾಥ ಜೋಶಿ	೧೯
೧೧.	ವರ್ಗಾವರ್ಗಿ ಸುದ್ದಿಗಳು		೨೧
೧೨.	ಗ್ರಂಥಾವಲೋಕನ	ಶ್ರೀಮತಿ ತುಳಸಾಬಾಯಿ ಪವಾರ	೨೨
೧೩.	ಶೈಕ್ಷಣಿಕ ಸುದ್ದಿಗಳು		೨೩

ಪ್ರಾಥಮಿಕ ಗಂಡು ಮತ್ತು ಹೆಣ್ಣುಮಕ್ಕಳ ಶಾಲೆಗಳ
ಹೊಸ ಅಧ್ಯಾಸ ಪರೀಕ್ಷೆಯ ಅನುಸರಿಸಿ ಬರೆದ

ಭೂಮಿತಿಯ ಪುಸ್ತಕಗಳು

ಬೇಗನೆ ಹೊರಬೀಳಲಿರುವವು

ಲೇಖಕರು:—

ಆಯ್. ಸಿ. ತಂಬದ. ಬಿ. ಎ., ಬಿ. ಟಿ.,
ಶಿಕ್ಷಕರು, ಹೆ. ಟ್ರೇ. ಕಾಲೇಜ, ಧಾರವಾಡ.

ಮತ್ತು

ಆರ್. ಆರ್. ಶೇಲಾರ,
ಶಿಕ್ಷಕರು ಪ್ರಾ. ಸ್ಕೂ. ಗಂ. ಟ್ರೇ. ಕಾಲೇಜ, ಧಾರವಾಡ.

೧. **ಪ್ರಾಥಮಿಕ ಭೂಮಿತಿ:** ೪ನೆಯ ಇಯತ್ತೆಗಾಗಿ
(ಈ ಪುಸ್ತಕವು ಬಾಲಕರ ವರ್ಗದಿಂದ ೪ನೆಯ ಇಯತ್ತೆಯ ವರೆಗೆ ಭೂಮಿತಿ ವಿಷಯಗಳ ಸಾರಾಂಶವನ್ನೂ ಒಳಗೊಂಡಿದೆ.)

೨. **ಪ್ರಾಥಮಿಕ ಭೂಮಿತಿ:** ೫ನೆಯ ಇಯತ್ತೆಗಾಗಿ

೩. **ಪ್ರಾಥಮಿಕ ಭೂಮಿತಿ:** ೬ನೆಯ ಇಯತ್ತೆಗಾಗಿ

೪. **ಪ್ರಾಥಮಿಕ ಭೂಮಿತಿ:** ೭ನೆಯ ಇಯತ್ತೆಗಾಗಿ

ಈ ಪುಸ್ತಕಗಳು ಬೇಸಿಕ್ ಶಾಲೆಗಳಿಗೂ ಮಾಧ್ಯಮಿಕ ಶಾಲೆಗಳ ಕೆಳಗಿನ ವರ್ಗಗಳಿಗೂ ಉಪಯುಕ್ತವಾಗಿವೆ.

ಸೋಲ ಏಜಂಟರು: **ಕರ್ನಾಟಕ ಬುಕ್ ಸರ್ವಿಸ**
ಸ್ಟೇಶನ್ ರೋಡ, **ಹುಬ್ಬಳ್ಳಿ.**

ಕ ನ್ನ ಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಶ್ರೀನಿವಾಸ ರಾಮಚಂದ್ರ ಜೋಶಿ ಬಿ. ಎ., ಬಿ. ಟಿ.

ಕೂಗುವೊಂದಾಗಿ । ಕರುಳೊಂದಾಗಿ । ಹೃದಯವದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ದ್ವೇಷ ಮತ್ಸರ
ಮದಂಗಳ ನೀಗಿ । ಸಾಗಲನುವಾಗಿರೈ ॥ ಭೋಗಬಿಟ್ಟೀಳಿಕ್ಕೈ ।
ಕನ್ನಡಮ್ಮನ ಕುವರರೇ ॥

— ಋಗ್ವೇದ.

ಸಂಪುಟ ೬೫	ಅಕ್ಟೋಬರ, ನವ್ಹಂಬರ, ಡಿಸೆಂಬರ ೧೯೪೬	ವರ್ಷ೧೯ ಸಂ. ೭, ೮, ೯,

ಆಜ್ಞಾಪಾಲನ

ಆಜ್ಞೆಯನು ಪಾಲಿಸುವಾತನೇ ಅಪ್ಪಣೆಯ ಕೊಡಬಲ್ಲ. ಮೊದಲು ಅಪ್ಪಣೆಯ ಪಾಲಿಸಲು ಕಲಿಯಿರಿಯ್ಯಾ. ನಮಗೆ ಬೇಕಾದುದು ಸಂಘ. ಸಂಘವೇ ಶಕ್ತಿ. ಅದರ ಗುಟ್ಟೇ ಆಜ್ಞೆಯ ಪಾಲನೆಯಲಿದೆಯೆಂದು ಅರಿಯಿರಯ್ಯಾ.

ಆಜ್ಞೆ

ಪ್ಲೇಗು ಮೈದೋರಿ ಜನತೆಯನು ಹೆದರಿಸುವ ತಾಣಕೆ, ಬರಗಾಲ ಬಿದ್ದ ಭೂಭಾಗಕೆ, ಜನತೆ ಕಷ್ಟದಲಿ ಮುಳುಗಿರುವ ಸ್ಥಳಕೆ ನೀವೆಲ್ಲ ಹೋಗಿ ಅವರ ಕಷ್ಟ-ದುಃಖ ಹರಣಮಾಡಿರಯ್ಯಾ. ನೀವು ನಿಮ್ಮ ಕರ್ತವ್ಯ ಮಾಡುವಾಗ ಹೆಚ್ಚೆಂದರೆ ಸಾಯಬಹುದು. ಅದಕೇಕೆ-ಚಿಂತೆ? ಪ್ರತಿದಿನವೂ ನಿಮ್ಮಂತೆ ಎಷ್ಟು ಜನ ಕ್ರಿಮಿ-ಕೀಟಗಳಂತೆ ಪುಟ್ಟುತಿಲ್ಲ ? ಸಾಯುತಿಲ್ಲ ? ಅವರಿಗೂ ನಿನುಗೂ ಅಂತರವೇನು ? ನೀವು ಸಾಯಲೇಬೇಕು, ಆದರೆ ಸಾಯಲು ಉಚ್ಚ ಧ್ಯೇಯವನಿಟ್ಟುಕೊಳ್ಳಿ. ಉಚ್ಚ ಧ್ಯೇಯಕ್ಕಾಗಿ ಮಡಿಯುವುದು ಲೇಸು. ಇದನು ಮನೆ ಮನೆಗೆ ಹೋಗಿ ಉಪದೇಶಿಸಿರಿ. ಇದರಿಂದ ನಿಮಗೂ ಕಲ್ಯಾಣವಾದೀತು, ನಾಡಿಗೂ ಹಿತವಾದೀತು. ನಮ್ಮ ನಾಡಿನ ಆಸೆ-ಆಕಾಂಕ್ಷೆಗಳು ನಿಮ್ಮನ್ನೇ ಅವಲಂಬಿಸಿವೆ. ಕಾಯಕ ಮಾಡಿದರೆ ಶಕ್ತಿ ತಾನಾಗಿ ಬರವುದು ಕಾಣಿರಯ್ಯಾ.
(ಜೋಗು)

—ಸ್ವಾಮಿ ವಿವೇಕಾನಂದ

ಸಂಪಾದಕೀಯ

ಪ್ರಾಥಮಿಕ ಶಿಕ್ಷಣವೂ ಶಿಕ್ಷಕರೂ:

ಎಲ್ಲ ಬಗೆಯ ಶಿಕ್ಷಣಕ್ಕೂ ಪ್ರಾಥಮಿಕ ಶಿಕ್ಷಣವೇ ತಳಹದಿ. ಭಾವಿ ಜನಾಂಗದ ದಿವ್ಯ ಮಂದಿರವು ಇದರ ಮೇಲೆಯೇ ಅವಲಂಬಿಸಿರುವುದು. ಇದು ಸರಿಯಾಗಿ ಆಗದಿದ್ದರೆ ಇದರ ಮೇಲೆ ಕಟ್ಟಿದ ಮಂದಿರವು ಒಹು ದಿನ ಬಾಳದು.

ಪ್ರಾಥಮಿಕ ಶಿಕ್ಷಣದ ಗಟ್ಟಿಮುಟ್ಟಾದ ತಳಹದಿಯನ್ನು ಹಾಕಲು ಜಾತಿ, ಮತ, ಪಂಥಗಳ ಸೋಂಕಿಲ್ಲದ ಯೋಗ್ಯ ಶಿಕ್ಷಕರೇ ಬೇಕೆಂಬುದು ನಿರ್ವಿವಾದದ ಮಾತಾಗಿದೆ. ಕೇವಲ ಮುಲ್ಕೀಪರೀಕ್ಷೆ ಪಾಸಾದವರನ್ನು ನಿಯಮಿಸುವುದು ಯೋಗ್ಯವಾಗಲಾರದು. ಮುಲ್ಕೀಪರೀಕ್ಷೆ ಪಾಸಾದವರು ಶಿಕ್ಷಕರಾಗಲು ಹಸುಳರು ಈ ಹಸುಳರನ್ನು ತರಬೇತಿ ಮಾಡಿ ಯೋಗ್ಯ ಶಿಕ್ಷಕರನ್ನಾಗಿ ಮಾಡಬೇಕಾದರೆ, ತರಬೇತಿ ಶಿಕ್ಷಣ ಸಂಸ್ಥೆಗಳು ಅತ್ಯಾವಶ್ಯಕ. ಕನ್ನಡ ನಾಡಿನಲ್ಲಿ ಈಗಿರುವ ತರಬೇತಿ ಶಿಕ್ಷಣ ಸಂಸ್ಥೆಗಳು ಅತಿ ಕಡಿಮೆಯಾಗಿವೆ. ಇನ್ನೂ ವಿಸ್ತೃತವಾಗಲಿರುವ ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ಈಗಿರುವ ಟ್ರೇನಿಂಗ್ ಸಂಸ್ಥೆಗಳು—ತರಬೇತಿ ಸಂಸ್ಥೆಗಳು—ಶಿಕ್ಷಕರನ್ನು ಪೂರೈಸಲಾರವು. ಕೇವಲ ಪಟ್ಟಣಗಳಲ್ಲಿರುವ ಟ್ರೇನಿಂಗ್ ಸಂಸ್ಥೆಗಳು ನಮ್ಮ ಭಾವಿ ಜನಾಂಗದ ಅಸ್ತಿವಾರವಾದ ಬೇಕಾದಷ್ಟು ಶಿಕ್ಷಣವನ್ನು ಕೊಟ್ಟು ಯೋಗ್ಯ ಶಿಕ್ಷಕರನ್ನು ಸಿದ್ಧಗೊಳಿಸಲಾರವು ಮತ್ತು ಸಾಕಷ್ಟು ಶಿಕ್ಷಕರನ್ನು ಪೂರೈಸಲಾರವು. ಆದುದರಿಂದ ಸರಕಾರದವರು ಸುತ್ತಲೂ ಹತ್ತರಿಯುವ ಹಳ್ಳಿಯ ವಾತಾವರಣವುಳ್ಳ ಕೇಂದ್ರಸ್ಥಾನದಲ್ಲಿ ಟ್ರೇನಿಂಗ್ ಸಂಸ್ಥೆಗಳನ್ನು ತೆರೆಯಬೇಕೆಂದೂ ಈಗಿನ ಟ್ರೇನಿಂಗ್ ಸಂಸ್ಥೆಗಳಿಗೆ ಹೆಚ್ಚು ವರ್ಗಗಳನ್ನು ಜೋಡಿಸುವ ಏರ್ಪಾಡು ಮಾಡಬೇಕೆಂದೂ ನಾವಿನಿತೆ ಹರಿಸಲಾರೆವು. ಮತ್ತು ದಿನ ದಿನಕ್ಕೆ ಬೆಳೆಯುತ್ತಿರುವ ಈ ಪ್ರಾಥಮಿಕ ಶಿಕ್ಷಣದ ಪವಿತ್ರ ಕಾರ್ಯಕ್ಕೆ ಮತ, ಪಂಥ, ಜಾತಿಧರ್ಮದ ಕಡೆಗೆ ಗಮನಕೊಡದೆ ಯೋಗ್ಯತೆಯುಳ್ಳ ಶಿಕ್ಷಕರನ್ನು ನಿಯಮಿಸಬೇಕೆಂದೂ ಸೂಚಿಸದೆ ಇರಲಾರೆವು. ಶಿಕ್ಷಣದಂಥ ಪವಿತ್ರ ಕ್ಷೇತ್ರದಲ್ಲಿ ಜಾತ್ಯಾಭಿಮಾನ ಭೂತವನ್ನು ಪ್ರವೇಶಿಸಗೊಡಬಾರದೆಂದು ಮದ್ರಾಸದ ಮಾನ್ಯ ಮಂತ್ರಿಗಳಾದ ಶ್ರೀ ಪ್ರಕಾಶಂರವರು ಎಂದೆ ಮೊನ್ನೆ ಒತ್ತಿ ಹೇಳಿದ್ದಾರೆ.

ಶಿಕ್ಷಣ ಸಂಸ್ಥೆಗಳೂ ಸಮಾಜಸೇವಕರೂ:

ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರೆಲ್ಲರೂ, ಸಮಾಜ ಸೇವಕರೆಲ್ಲರೂ ನಾಡಿನ ಏಳ್ಗೆಗಾಗಿ ಮಹತ್ಕಾರ್ಯವಾದ ಪ್ರಚಾರವನ್ನು ಸಂಘಟಿಸುವವರ ಕಡೆಗೆ ಮನಸ್ಸು ಹಾಕುವುದು ಮತ್ತು ಕಾರ್ಯಮಾಡುವುದು ಇವೆಲ್ಲಕ್ಕಿಂತ ಮಿಗಿಲಾದುದೆಂದು ಹೇಳಬೇಕಿಲ್ಲ. ಇವರೆಲ್ಲರೂ ಹಳ್ಳಿಯ ನೈರ್ಮಲ್ಯ, ಸಾಮಾಜಿಕ ವಾತಾವರಣ, ರಾಜಕೀಯ ಜಾಗೃತಿ, ಆರ್ಥಿಕ ಸ್ವಾವಲಂಬನ, ಜಾತೀಯ ಸೌಹಾರ್ದ, ಒಕ್ಕಲತನ, ಪಶುಸಂಗೋಪನೆ, ಶಾರೀರಿಕ ಬಲಸಂವರ್ಧನೆ ಇತ್ಯಾದಿಯ ಕಡೆಗೆ ಮನಸ್ಸು ಹಾಕಿ ಕಾರ್ಯಪ್ರವೃತ್ತರಾಗಬೇಕೆಂದು ಸೂಚಿಸುತ್ತೇವೆ. ಇವರೆಲ್ಲರೂ ತಮ್ಮ ಕಾರ್ಯಕದ ಜೊತೆಗೆ ಪತ್ರಿಕಾ ಪ್ರಚಾರ ಕಾರ್ಯದ ಕಡೆಗೆ ಗಮನಕೊಡಬೇಕೆಂದು ವಿನ್ನವಿಸಿಕೊಳ್ಳುತ್ತೇವೆ. ಇದನ್ನು ಇವರು ಮಾಡದಿದ್ದರೆ ಭಾವಿಜನಾಂಗದ ಅಭಿಶಾಪಕ್ಕೆ ಇವರು ಪಾತ್ರರಾಗಬೇಕಾಗುವುದು ಎಂಬುದು ಸೂಚನಾತ್ಮಕ ಎಚ್ಚರಿಕೆಯನ್ನು ಕೊಡಬಯಸುತ್ತೇವೆ.

ಪ್ರಾಥಮಿಕ ಶಿಕ್ಷಣದಲ್ಲಿ ಬೇಸಿಕ್ ಬಾಯಸ್ :

ಸದ್ಯದ ಪ್ರಾಥಮಿಕ ಶಿಕ್ಷಣದಲ್ಲಿ ಉದ್ಯೋಗಕ್ಕೆ ಇರಬೇಕಾದಷ್ಟು ಪ್ರಾಧಾನ್ಯತೆ ಇಲ್ಲ, ಅಗ್ರಿಕಲ್ಚರಲ್ ಬಾಯಸ್ ಸ್ಕೂಲುಗಳಲ್ಲಿ ಮಾತ್ರ ಒಕ್ಕಲತನಕ್ಕೆ ಪ್ರಾಧಾನ್ಯವಿದೆ. ಕೇವಲ ಒಕ್ಕಲತನದ ಸುಧಾರಣೆಯಿಂದ ಮಾನವನ ಏಳ್ಗೆಯಾಗದು. ಕೇವಲ ಹೊಟ್ಟೆಯೊಂದನ್ನೇ ಅವನು ತುಂಬಿಕೊಳ್ಳಬೇಕಾಗಿಲ್ಲ. ಮಾನವನನ್ನೂ ಮುಚ್ಚಿಕೊಳ್ಳಬೇಕಾಗಿದೆ. ಜಗತ್ತಿನಲ್ಲಿ ಸುಸಂಸ್ಕೃತನಾಗಿ ಬಾಳಬೇಕಾದರೆ, ತನ್ನ ನಾಡಿನ ಸಂಪತ್ತನ್ನು ಬೆಳೆಸಿಕೊಂಡು ತನ್ನ ಮಾನಸಿಕ ಉನ್ನತಿಯನ್ನೂ ಹೊಂದಿ ಜಗತ್ತಿಗೆ ಮಾರ್ಗದರ್ಶಿಯಾಗಬೇಕಾಗಿದೆ. ಅದಕ್ಕಾಗಿ ಅವನಿಗೆ ಬೌದ್ಧಿಕ ಅಭ್ಯಾಸದ ಜೊತೆಗೆ ಮೂಲ ಉದ್ಯೋಗಗಳನ್ನೂ ಕಲಿಸುವುದು ಅತ್ಯುಪಯುಕ್ತವಾಗಿದೆ. ಈ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಬೇಸಿಕ್ ಬಾಯಸ್ ಶಾಲೆಗಳು ಬೆಳೆದಷ್ಟೂ ನಾಡಿಗೆ ಹಿತಕರ. ಸರಕಾರದವರು ಇತ್ತ ಗಮನವೀಯಬೇಕೆಂದು ಸೂಚಿಸುತ್ತೇವೆ. ಅಲ್ಲಲ್ಲಿಯ ಪರಿಸ್ಥಿತಿಗನುಸರಿಸಿ ಆಯಾ ಹಳ್ಳಿಗಳಲ್ಲಿ ತಕ್ಕ ಉದ್ಯೋಗಗಳನ್ನು ಕಲ್ಪಿಸಿ ಆಯಾ ಉದ್ಯೋಗಗಳ ಮುಖಾಂತರವೇ ಶಿಕ್ಷಣದ ಕಾರ್ಯವನ್ನು ಸಾಗಿಸುವದು ಯಥೋಚಿತವಾದ ದ್ದೆಂದು ನಾವು ಸೂಚಿಸುತ್ತೇವೆ.

ಪ್ರೌಢ ಶಿಕ್ಷಣದ ವರ್ಗಗಳು:

ಪಟ್ಟಣಗಳಿಗಿಂತಲೂ ಪ್ರೌಢಶಿಕ್ಷಣವರ್ಗಗಳು ಅಗಣಿತ ಸಂಖ್ಯೆಯಲ್ಲಿ ಹಳ್ಳಿಗಳಿಗೆ ಆವಶ್ಯಕವಾಗಿವೆ. ಏಕಂದರೆ ಹಳ್ಳಿಗಳಲ್ಲಿ ವಾಸಿಸುವ ನೂರಕ್ಕೆ ೯೦ರಷ್ಟು ಜನ ನಿರಕ್ಷರಿಗಳಾಗಿದ್ದಾರೆ. ಅವರಿಗೆ ಜಗತ್ತಿನ ಜ್ಞಾನವಾಗುವುದು ನಾಡಿನ ಏಳ್ಗೆಯ ದೃಷ್ಟಿಯಿಂದ ಅತ್ಯವಶ್ಯ. ಅವರ ಏಳ್ಗೆಯೆ ನಿಜವಾದ ನಾಡಿನ ಏಳ್ಗೆ. ಮುಂದುವರೆಯುವ ಜಗತ್ತಿನ ಕಲ್ಪಣಿಯುಂಟಾಗಬೇಕಾದರೆ ಅವರು ಸಾಕ್ಷರಿಯಾಗಬೇಕಾಗುವುದು. ಅದಕ್ಕೋಸ್ಕರ ಸರಕಾರದವರು ಪ್ರೌಢ ಶಿಕ್ಷಣ ವರ್ಗಗಳನ್ನು ಹಳ್ಳಿಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ತರೆಯುವ ಏರ್ಪಾಡನ್ನು ಮಾಡಬೇಕೆಂದು ಸೂಚಿಸುತ್ತೇವೆ. ಈ ಪ್ರೌಢ ಶಿಕ್ಷಣ ವರ್ಗಗಳೂ ಬೇಸಿಕ್ ಬಾಯಸ್ ವರ್ಗಗಳಾಗಬೇಕೆಂದೂ ನಮ್ಮ ಬಯಕೆ.

ಮುಂಬಯಿ ಸರಕಾರದ ಪಂಚವಾರ್ಷಿಕ ಯೋಜನೆಯಲ್ಲಿ ಶಿಕ್ಷಣದ ಸ್ಥಾನ :

ಇಂದಿನ ಮುಂಬಯಿ ಸರಕಾರವು ಮುಂಬೈ ಪ್ರಾಂತದ ಏಳ್ಗೆಗಾಗಿ ಯೋಜನೆಯನ್ನು ಹಿಂದಕ್ಕೆ ರಷ್ಯಾದೇಶವು ತನ್ನ ಉತ್ಪನ್ನಿಗಾಗಿ ಕೈಕೊಂಡ ತೆರದಲ್ಲಿ ಕೈಕೊಂಡಿದೆ. ಈ ಯೋಜನೆಯಲ್ಲಿ ಶಿಕ್ಷಣಕ್ಕೆ ಅಗ್ರಸ್ಥಾನವನ್ನು ಕೊಡಲಾಗಿದೆ.ಪ್ರಾಂತದ ಉನ್ನತಿಗೆ ೬೬ ಕೋಟಿ ರೂಪಾಯಿಗಳನ್ನು ವೆಚ್ಚಮಾಡಬೇಕೆಂದು ಗೊತ್ತುಮಾಡಿದೆ. ಅದರಲ್ಲಿ ೧೬ ಕೋಟಿ ರೂಪಾಯಿಗಳನ್ನು ಶಿಕ್ಷಣಕ್ಕಾಗಿ ಮಂಜೂರ ಮಾಡಿದೆ. ಈ ಹಣವು ಹಿಂದಿನ ಸರಕಾರವು ಮಾಡುತ್ತಿದ್ದುದರ ಏದರಷ್ಟು ಹೆಚ್ಚು ಇದೆ. ಇದರಿಂದ ಇಂದಿನ ಮುಂಬಯಿ ಸರಕಾರವು ಶಿಕ್ಷಣಕ್ಕೆ ಎಷ್ಟು ಲಕ್ಷ ವನ್ನು ಕೊಡುತ್ತಿದೆಯೆಂಬುದು ಸ್ಪಷ್ಟವಾಗಿ ಕಂಡು ಬರುವಂತಿದೆ.ಹಿಂದಿನ ಮಂತ್ರಿಮಂಡಲಗಳು ಶಿಕ್ಷಣದಕಡೆಗೆ ಅಲಕ್ಷವನ್ನು ಮಾಡಿ ಶಿಕ್ಷಣ ಕ್ಷೇತ್ರದಲ್ಲಿ ದುಡಿಯತಕ್ಕ ಕೆಲಸಗಾರರಿಗೆ ನಿರಾಸೆಯ ವಾತಾವರಣವನ್ನು ಕಲ್ಪಿಸಿದ್ದವು. ಇಂದಿನ ಸರಕಾರವು ಈ ನಿರಾಶಾಮಯ ವಾತಾವರಣವನ್ನು ದೂರೀಕರಿಸಲೆತ್ನಿಸಿದುದು ಅಭಿನಂದನೀಯವಾಗಿದೆ.

ವಾಚನಾಲಯಗಳು:

ಶಿಕ್ಷಣವು ಹೆಚ್ಚು ಹೆಚ್ಚು ಬೆಳೆದಂತೆ ಓದುವ ಅಭಿರುಚಿಯೂ ಜನತೆಯಲ್ಲಿ ಬೆಳೆಯುತ್ತದೆ. ಸರ್ವರಿಗೂ ಎಲ್ಲ ಬಗೆಯ ಸಾಹಿತ್ಯವನ್ನು ಕೊಂಡು ಓದಲು ಸಾಧ್ಯವಾಗುವದಿಲ್ಲ. ಅದಕ್ಕಾಗಿ ಅಲ್ಲಲ್ಲಿಗೆ ಅನೇಕ ವಾಚನಾಲಯಗಳು ಸ್ಥಾಪಿಸಲ್ಪಡಬೇಕು. ಈಗ ಅಲ್ಲಲ್ಲಿ ಕೆಲವು ವಾಚನಾಲಯಗಳು ಮಾತ್ರ ಸ್ಥಾಪಿತವಾಗಿವೆ. ಅವು ಸಾಲವು. ಜನತೆಗೆ ಕಲಿತುದನ್ನು ಕಾಯ್ದುಕೊಳ್ಳಲಿಕ್ಕೂ, ಹೊಸ ಹೊಸ ಜ್ಞಾನವನ್ನು ಪಡೆದು ಜ್ಞಾನ ಭಾಂಡಾರವನ್ನು ತುಂಬಿಕೊಳ್ಳುವುದಕ್ಕೂ ವಾಚನಾಲಯಗಳು ಸಹಾಯಕವಾಗುವುವು. ಆದುದರಿಂದ ಶಿಕ್ಷಕರು ಅಲ್ಲಲ್ಲಿಗೆ ವಾಚನಾಲಯಗಳನ್ನು ಸ್ಥಾಪಿಸಬೇಕು ಮತ್ತು ಅವಕ್ಕೆ ಉತ್ತಮ ಸಾಹಿತ್ಯ ಕೃತಿಗಳನ್ನು ವರುಷ ವರುಷಕ್ಕೂ ಭರತಿ ಹಾಕುತ್ತ ಹೋಗಬೇಕು. ಇಷ್ಟೇ ಮಾಡುವುದರಿಂದ ಕಾರ್ಯವು ಸಾಗದು. ಕಲಿಸಿದ ಉತ್ತಮೋತ್ತಮ ಗ್ರಂಥಗಳನ್ನು ಓದುವ ರುಚಿಯನ್ನು ಹಳ್ಳಿಗರಿಗೆ ಹಚ್ಚಬೇಕೆಂದು ಸೂಚಿಸುತ್ತೇವೆ.

ಒಕ್ಕಲುತನದ ಕಾಲೇಜು:

ಕಳೆದ ಸಂಚಿಕೆಯಲ್ಲಿ ಕರ್ನಾಟಕಕ್ಕೊಂದು ಒಕ್ಕಲುತನದ ಕಾಲೇಜು ಅತ್ಯಾವಶ್ಯಕವೆಂದೂ ಅದು ಧಾರವಾಡದಲ್ಲಿಯೇ ಸ್ಥಾಪಿಸಲ್ಪಡುವದು ವಿಹಿತವಾದುದೆಂದೂ ಸೂಚಿಸಿದ್ದೆವು. ನಮ್ಮ ಸೂಚನೆಯು ಫಲಕಾರಿಯಾದುದಕ್ಕೆ ನಮಗೆ ಸಂತೋಷವಾಗುತ್ತದೆ. ಸರಕಾರದವರು ಕರ್ನಾಟಕಕ್ಕೆ ಒಕ್ಕಲುತನದ ಕಾಲೇಜನ್ನು ಕೊಟ್ಟು ಧಾರವಾಡದಲ್ಲಿ ಅದನ್ನು ಸ್ಥಾಪಿಸುವ ಕಾರ್ಯಕ್ಕೆ ಕೊಂಡುದಕ್ಕಾಗಿ ಇಂದಿನ ಒಕ್ಕಲುತನದ ಖಾತೆಯ ಮಂತ್ರಿಗಳಾದ ಮಾನ್ಯ ಎಮ್. ಪೀ. ಪಾಟೀಲರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಕೊರತೆಗಳು:

ಶಿಕ್ಷಣದ ದೃಷ್ಟಿಯಿಂದ ಕನ್ನಡನಾಡಿಗೆ ಇನ್ನೂ ಕೊರತೆಗಳು ಇವೆ. ನಮಗೆ ಇಂಜನಿಯರಿಂಗ್ ಕಾಲೇಜು ಇಲ್ಲ. ಮೆಡಿಕಲ್ ಕಾಲೇಜು ಇಲ್ಲ. ಕಾಮರ್ಸ ಕಾಲೇಜು ಇಲ್ಲ. ಇದರಿಂದಾಗಿ ನಮ್ಮ ಭಾಗದ ವಿದ್ಯಾರ್ಥಿಗಳು ನಮ್ಮ ಭಾಗವನ್ನು ಬಿಟ್ಟು ಹೊರಗೆ ಹೋಗಬೇಕಾಗುತ್ತದೆ. ಅನೇಕ ಕಷ್ಟಗಳನ್ನು ಸಹಿಸಬೇಕಾಗುತ್ತದೆ. ಆದುದರಿಂದ ಇಂದಿನ ಜನಹಿತ ಸಾಧಿಸುವ ಸರಕಾರ ಈ ಕಾಲೇಜುಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಿ ಜನತೆಯ ಮೆಚ್ಚುಗೆಗೆ ಪಾತ್ರವಾಗಬೇಕೆಂದೂ ಹಾರೈಸುತ್ತೇವೆ.

ಧಾರವಾಡ ಜಿಲ್ಲೆಯ ಗ್ರಾಮೋದ್ಯೋಗ ಪ್ರದರ್ಶನ:

ಗತಳಿ ಅಕ್ಟೋಬರ್ ತಿಂಗಳಲ್ಲಿ ಧಾರವಾಡ ಜಿಲ್ಲೆಯ ಲೋಕಲ್ ಬೋರ್ಡು ಸಂಸ್ಥೆಯವರು ಹುಬ್ಬಳ್ಳಿಯಲ್ಲಿ ಗ್ರಾಮೋದ್ಯೋಗ ಪ್ರದರ್ಶನವನ್ನು ಏರ್ಪಡಿಸಿದ್ದರು. ಕಳೆದ ವರ್ಷ ಈ ಬಗೆಯ ಪ್ರದರ್ಶನವು ಧಾರವಾಡದಲ್ಲಿ ಜರುಗಿತ್ತು. ಈ ಸಲ ಪ್ರದರ್ಶನದ ಉದ್ಘಾಟನೆಗೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಿಜ್ಜಾ ಜವರು ಬಂದಿದ್ದರು. ಅವರು ಗ್ರಾಮೋದ್ಯೋಗಗಳ ಮಹಿಮೆಯನ್ನು ಚೆನ್ನಾಗಿ ಮನಗಾಣಿಸಿ ಪಸಂದಿಸಿದ್ದು ಇಂಥ ಪ್ರದರ್ಶನಗಳ ಗುರಿಯಾವುದೆಂಬುದನ್ನು ಸ್ಪಷ್ಟಪಡಿಸಿ ಉದ್ಘಾಟನ ಸಮಾರಂಭವನ್ನು ಸಿರವೇರಿಸಿದರು. ಪ್ರದರ್ಶನಕ್ಕೆ

ಕನ್ನಡನಾಡಿನ ಎಲ್ಲ ಭಾಗಗಳಿಂದ ಕಲಾಕೌಶಲ್ಯದ ವಸ್ತುಗಳು ಬಂದಿದ್ದವು. ಸಾವಿರಾರು ಸ್ತ್ರೀ ಪುರುಷರು ಪ್ರದರ್ಶನದ ಲಾಭ ಪಡೆದರು. ಇಂಥ ಪ್ರದರ್ಶನಗಳಿಂದ ಗ್ರಾಮದ ಕೈಗಾರಿಕೆಗಳಿಗೆ ಪ್ರೋತ್ಸಾಹವು ಸಿಗುವುದು ಮತ್ತು ನಾಡಿನ ಕೈಗಾರಿಕೆ, ಕಲೆಗಳು ಬೆಳೆಯುವುವು. ಇಂಥ ಪ್ರದರ್ಶನಗಳು ಪ್ರತಿವರ್ಷವೂ ಪ್ರತಿಯೊಂದು ಜಿಲ್ಲೆಯಲ್ಲಿ ಮತ್ತು ತಾಲೂಕುಗಳಲ್ಲಿ ನೆರವೇರಿಸಲ್ಪಡಬೇಕು. ಧಾರವಾಡ ಜಿಲ್ಲೆಯ ಲೋಕಲ್ ಬೋರ್ಡಿನವರು ಈ ಮೇಲ್ಪಂಕ್ತಿಯನ್ನು ಉಳಿದ ಜಿಲ್ಲೆಗಳವರೂ ಅನುಸರಿಸಬೇಕೆಂದು ಸೂಚಿಸುತ್ತೇವೆ ಮತ್ತು ಧಾರವಾಡ ಜಲ್ಲಾ ಲೋಕಲ್‌ಬೋರ್ಡದ ಪ್ರೆಸಿಡೆಂಟರಾದ ಶ್ರೀ. ಕಂಬಾಕದರವರನ್ನೂ ಇನ್ನಿತರ ಸಹಾಯಕರನ್ನೂ ನಾವು ಅಭಿನಂದಿಸುತ್ತೇವೆ.

ಧಾರವಾಡ ಜಿಲ್ಲಾ ಆರನೆಯ ಸಾಹಿತ್ಯ ಸಮ್ಮೇಲನ, ಹುಬ್ಬಳ್ಳಿ:

೧೯೪೬ ಅಕ್ಟೋಬರದಲ್ಲಿ ಹುಬ್ಬಳ್ಳಿಯಲ್ಲಿ ಧಾರವಾಡ ಜಿಲ್ಲೆಯ ಆರನೆಯ ಸಾಹಿತ್ಯ ಸಮ್ಮೇಳನವು ಶ್ರೀಮಾನ್ ಆ. ನ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಪಾಟೀಲ ಕಲ್ಲನಗೌಡರು ಸಮ್ಮೇಳನದ ಉದ್ಘಾಟನ ಸಮಾರಂಭವನ್ನೇರ್ಪಡಿಸಿದರು. ಸಮ್ಮೇಳನಕ್ಕೆ ಅಂಗವಾಗಿ ನಾಟ್ಯಗೋಷ್ಠಿ, ಕರ್ನಾಟಕ ವಿದ್ಯಾಪೀಠಗೋಷ್ಠಿ, ಕವಿಗೋಷ್ಠಿ ಮೊದಲಾದವುಗಳೂ ನಡೆದವು. ತರುಣ ಲೇಖಕರ ಲೇಖನ ಸಂಗ್ರಹವೊಂದರ ಉದ್ಘಾಟನ ಸಮಾರಂಭವು ನೆರವೇರಿತು. ಸಮ್ಮೇಲನವು ಯಶಸ್ವಿಯಾಗಿ ಕೊನೆಗಂಡಿತು. ಸಾಹಿತ್ಯವು ಜನಜೀವನಕ್ಕೆ ಸಮೀಪವಾಗಿರಬೇಕು. ಕಲ್ಪನಾ ಸಾಮ್ರಾಜ್ಯಕ್ಕೆ ಮೀಸಲಾಗಿರಬಾರದೆಂದು ಸಾರುವುದೇ ಸಮ್ಮೇಳನದ ಗುರಿಯಾಗಿದ್ದಂತೆ ಕಂಡು ಬಂದಿತು. ಸಾಹಿತ್ಯವು ಜನಜೀವನದ ಪ್ರತಿಬಿಂಬವಾಗಿರಬೇಕೆಂದು ಸರ್ವರೂ ಒಪ್ಪತಕ್ಕ ಮಾತೇ ಆಗಿದೆ. ಅಧ್ಯಕ್ಷರ ಭಾಷಣ ಪ್ರಗತಿಶೀಲ ಲೇಖಕರ ರಕ್ಷಣ ಕವಚದಂತಿತ್ತು. ತರುಣ ಸಾಹಿತಿಗಳಿಗೆ ಅವರು ಮಾಡಿದ ಸಲಹೆಗಳು ಸೂಕ್ತವಾಗಿದ್ದುವು. ಇತರ ಗೋಷ್ಠಿಗಳ ಕಾರ್ಯಕಲಾಪಗಳೂ, ಅಧ್ಯಕ್ಷರ ಭಾಷಣಗಳೂ ಮನನೀಯವಾಗಿದ್ದವು. ದೇಶದ ಸಂಕ್ರಾಂತಿ ಕಾಲದಲ್ಲಿ, ಬಡವರ ಹೊಟ್ಟೆಗೆ ಕಾಟಿಯನ್ನು ಕೊಡುವುದಕ್ಕಾಗಿ ಹೆಣಗುತ್ತಿರುವ ಜವಾಹಿರ ಸರಕಾರವು ಸ್ಥಾಪಿತವಾಗುವ ಕಾಲದಲ್ಲಿ ಹುಬ್ಬಳ್ಳಿಯ ಸಾಹಿತ್ಯ ಪ್ರೇಮಿಗಳು ಈ ಸಮ್ಮೇಳನವನ್ನು ಕರೆದು ಯಶಸ್ವಿಯಾದುದು ಅಭಿನಂದನೀಯವಾಗಿದೆ.

ಉದ್ಗಾಮಿ ಪದ್ಧತಿ

(Inductive Method)

(ನಿಗಮನ ಪದ್ಧತಿ)

ಶ್ರೀ. ಎಸ್. ಜಿ. ಜೈಚವಾಳ, ಎಂ. ಎ.

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

ಈ ಸಮಸ್ಯೆಯನ್ನು ವರ್ಗಕ್ಕೆ ಚೆನ್ನಾಗಿ ಆಗುವಂತೆ ಜಾಗರೂಕತೆಯನ್ನು ಶಿಕ್ಷಕನು ವಹಿಸಬೇಕಾಗುವುದು. ಕರಿಹಲಿಗೆಯ ಮೇಲೆ ಅದನ್ನು ಬರೆದರೆ ಚೆನ್ನು. ಉದ್ಗಾಮಿ ಪದ್ಧತಿಯಲ್ಲಿ ಸಮಸ್ಯೆಯಿಂದಲೇ ಪಾಠವು ಪ್ರಾರಂಭವಾಗಬೇಕು. ಸಮಸ್ಯೆಯನ್ನು ಹಿಡಿದೆತ್ತಿ ಅದರ ಮಹತ್ವವು ವರ್ಗಕ್ಕೆ ಚೆನ್ನಾಗಿ ತಿಳಿಯುವಂತೆ ಹಿನ್ನೆಲೆಯನ್ನು ಸಿದ್ಧಗೊಳಿಸುವುದೇ ಮೊದಲಮೆಟ್ಟಿನ ಕರ್ತವ್ಯವಾಗಿದೆ ಎಂದು ಹೇಳಬಹುದು

ಇಂಥ ಸಮಸ್ಯೆಯನ್ನು ಮೊಟ್ಟಮೊದಲು, ಮಧ್ಯದಲ್ಲಿ ಅಥವಾ ಕೊನೆಯಲ್ಲಿ ಹೇಳುವುದು ವಿಹಿತವೋ ಅಲ್ಲವೋ ಎಂಬುದನ್ನು ವಿವೇಚಿಸುವ. ಪಾಠವು ಮೇಲಿನಂತೆ ಸಂಬಂಧವುಳ್ಳ ಹಲವು ಪಾಠಗಳಿಂದ ಕೂಡಿದುದಾಗಿದ್ದರೆ ಸಮಸ್ಯೆಯನ್ನು ಹಿನ್ನೆಲೆಯನ್ನು ನಿರೂಪಿಸಿದ ನಂತರ ಹೇಳುವುದು ಒಳಿತು. ಅದಕ್ಕೂ ಮೊದಲು ಹೇಳಿದರೆ ವರ್ಗವು ಪ್ರಸ್ತುತ ಪಾಠಕ್ಕೆ ಸಿದ್ಧವಾಗುವ ಮೊದಲೇ ಹೇಳಿದಂತಾಗುವುದು. ಹಲವು ಪಾಠಗಳುಳ್ಳ ಪಾಠವು ಮೊದಲಿನದಾಗಿದ್ದರೆ ಅಥವಾ ಸ್ವತಂತ್ರವಾದ ಪಾಠವಿದ್ದರೆ ವಿಷಯವನ್ನು ಅಥವಾ ಸಮಸ್ಯೆಯನ್ನು ಹಿನ್ನೆಲೆಯ ಹತ್ತಿರ ಅಥವಾ ಹಿನ್ನೆಲೆಯ ಪ್ರಾರಂಭದ ಹತ್ತಿರ ಹೇಳುವುದು ವಿಹಿತವಾದುದು. ಹೀಗೆ ಮಾಡದೆ ಹೋದಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸುವ ಸಾಧನವೇ ಇಲ್ಲದಂತಾಗಿ ವಿದ್ಯಾರ್ಥಿಗಳು ಗೊಂದಲದಲ್ಲಿ ಬೀಳುವರು. ಸಮಸ್ಯೆಯನ್ನು ಹೇಳಿದ ನಂತರ ಅದರ ಮಹತ್ವವನ್ನು ಅರುಹುವುದಕ್ಕಾಗಿ ಯೋಗ್ಯ ವಾತಾವರಣವನ್ನು ಕಲ್ಪಿಸಿಕೊಡಬೇಕು. ಗ್ರಂಥಕರ್ತರೂ ಉಪನ್ಯಾಸಕರೂ ವಿಷಯ ಪ್ರಾರಂಭನನ್ನು ಆಕರ್ಷಕವಾಗಿ ಮಾಡುವಂತೆ ಪಾಠದ ಪ್ರಾರಂಭವು ವಿದ್ಯಾರ್ಥಿಗಳ ಮನಸ್ಸನ್ನು ಬಲವಾಗಿ ಆಕರ್ಷಿಸುವುದಾಗಿರಬೇಕು.

ಇತ್ಯಾದಿ ಮೇಲೆ 'ಪಕ್ಷ' (Data) ವನ್ನು ಸ್ಥಾಪಿಸಬೇಕಾದುದು ಅವಶ್ಯಕ. ಅದನ್ನು ಹೇಗೆ ಸ್ಥಾಪಿಸಬೇಕೆಂಬುದನ್ನು ಮೇಲಿನ ಪಾಠದ ವಿಷಯವನ್ನೇ ಉದಾಹರಣೆಗಾಗಿ ತೆಗೆದುಕೊಂಡು ನೋಡೋಣ. ಹಲವು ಪ್ರಸಂಗಗಳಲ್ಲಿ ಜಡಿಯುವ ಆರ್ದ್ರತೆಯನ್ನು ಏಕೆ ಹೊರಗೆ ಬಿಡುತ್ತದೆಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳು ಬಿಡಿಸಲು ಯತ್ನಿಸುವರು. ಜಾಣನಾನ ಶಿಕ್ಷಕನು ವಿದ್ಯಾರ್ಥಿಗಳು ತಮಗೆ ತೋರಿದ ರೀತಿಯಲ್ಲಿ ಬಿಡಿಸಲಿ ಎಂದು ಅವರಿಗೆ ಅವಕಾಶವನ್ನು ಕಲ್ಪಿಸಿಕೊಡುವನು. ಅವರ ಸೂಚನೆಗಳಲ್ಲಿ ಒಳಿತಾದುದನ್ನು ಸ್ವೀಕರಿಸಿ ಅಸಂಬದ್ಧವಾದವುಗಳನ್ನು ಬಿಟ್ಟುಬಿಡುವನು. ಏಕೆಂದರೆ ಕಾರಣಸ್ಯ ಕಾರಣವನ್ನು ಗೊತ್ತುಹಚ್ಚುವಾಗ ಸ್ವಯಂ

ಸ್ಫೂರ್ತಿಯೇ ಅವಶ್ಯಕವಾದುದಾಗಿರುವುದು. ವಿದ್ಯಾರ್ಥಿಗಳ ಅನಿರ್ಬಂಧ ಹಾಗೂ ಮನ ರಂಜಕವಾದ ಸಹಕಾರವನ್ನು ಉದ್ಗಾಮೀ ಪದ್ಧತಿಯು ಹತ್ತಿಡುವುದಿಲ್ಲ. ಎಲ್ಲ ವಿಚಾರಗಳ ಸಮಸ್ಯೆಯನ್ನು ಬಿಡಿಸಲು ವಿಧಾನಗಳ ಪರೀಕ್ಷೆಯನ್ನು ಮಾಡಬೇಕಾಗುವುದು. ಏಕೆಂದರೆ ಊಹಾಪೋಹವಿಲ್ಲದಿದ್ದರೆ ತರ್ಕವು—ವಿಚಾರಧಾರೆಯು (Thinking) ಸರಿಯಾಗಿ ನಡೆಯ ಲಾರದು. ವಿಷಯವು ಇಲ್ಲದಿದ್ದರೆ ವಿಚಾರವು ಕುಂಠಿತವಾಗುವುದು. ವಿಷಯವಿಧಾನಗಳೇ (ಪಕ್ಷವೇ) ವಿಚಾರದ ಆಹಾರ. ವಿಧಾನಗಳನ್ನು ಪರೀಕ್ಷಿಸಿ ಹೊಸ ವಿಧಾನಗಳನ್ನು ಮಾಡ ಲಿಕ್ಕೆ ಹಚ್ಚಿಸಲು ಅಸಮರ್ಥನಾದ ಶಿಕ್ಷಕನು ವಿದ್ಯಾರ್ಥಿಗಳು ದಡ್ಡರು ಎಂದರೆ ತನ್ನ ದಡ್ಡ ತನವನ್ನು ಹೊರಗೆಡವಿದಂತಾಗುವುದು. ಈ ರೀತಿಯ ಶಿಕ್ಷಕರೂ ಅನೇಕರಿರುವರು. ಇಂಥವರು ತಮ್ಮ ತಪ್ಪನ್ನು ಮುಚ್ಚಿಕೊಳ್ಳುವುದಕ್ಕಾಗಿ ವಿದ್ಯಾರ್ಥಿಗಳ ಮೇಲೆ ಅದನ್ನು ಹೊರಿಸಿಬಿಡುವರು. ಈ ಸಮಸ್ಯೆಯನ್ನು ಉದ್ಗಾಮಿ ಪದ್ಧತಿಯಿಂದ ಬಿಡಿಸಲು ಎರಡು ಪ್ರಕಾರದ ಸಾಧನಗಳು ಇರುವವು.

(೧) ಸಾಮಾನ್ಯ ನಿಯಮವನ್ನು ಕಂಡು ಹಿಡಿಯುವದಕ್ಕಾಗಿ ಬೇಕಾಗುವ ವಸ್ತುಗಳ ಅಥವಾ ಸಂಗತಿಗಳ ಉದಾಹರಣೆಗಳು.

(೨) ತಾತ್ಪರ್ಯಕವಾಗಿ ಊಹಿಸಿದ ಸಮಸ್ಯೋತ್ತರಗಳು.

ಮೇಲೆಕೊಟ್ಟ ಸಮಸ್ಯೆಯನ್ನು ಬಿಡಿಸಲು ಹವಣಿಸುವ ಒಬ್ಬ ವಿದ್ಯಾರ್ಥಿಯು ಕತ್ತ ಲಾದ ಬಳಿಕ ಹವೆಯು ಆರ್ದ್ರತೆಯನ್ನು ಬಿಡುವುದೆಂದು ಹೇಳಬಹುದು. ತನ್ನ ಈ ಮಾತನ್ನು ಸಮರ್ಥಿಸಲು ಕೆಣಕಿದರೆ ಮಳೆಯಾಗುವಾಗ, ಹಿಮಬೀಳುವಾಗ, ನೋಡಗಳು ಸಿದ್ದವಾಗು ವಾಗ, ಸಾಮಾನ್ಯವಾಗಿ ಕತ್ತಲಾಗುವುದೆಂದೂ ಇಬ್ಬನ್ನಿಯ ಹನಿಗಳು ರಾತ್ರಿಯಲ್ಲಿಯೆ ಕವಿದು ಬೀಳುತ್ತವೆಂದು ಹೇಳಬಹುದು. ವಿಷಯವನ್ನು ಉದ್ಗಾಮಿ ಪದ್ಧತಿಯಿಂದ ವಿಕಾಸ ಗೊಳಿಸುವಾಗ ಕೆಲವು ಸಂಗತಿಗಳ ಮೇಲಿಂದ ಅಥವಾ ಕೇವೊಂದು ಸಂಗತಿಯಿಂದ 'ಸಾಮಾನ್ಯ ಕಾರಣವು' ಸೂಚಿಪವಾಗುವುದು ಮತ್ತು ಕೆಲವು ವಿಶಿಷ್ಟ ಸಂಗತಿಗಳ ಸಹಾ ಯದಿಂದ ಕೆಲವು ಸಿದ್ಧಾಂತಗಳನ್ನು ಸಿದ್ಧಗೊಳಿಸಲಿಕ್ಕೂ ಕೆಲವನ್ನು ನಿಜವಲ್ಲವೆಂದು ಹೇಳ ಲಿಕ್ಕೂ ಅನುಕೂಲವಾಗುವುದು; ಅಲ್ಲದೆ ಅವುಗಳಲ್ಲಿ ವಾರ್ಪಾಡನ್ನು ಸೂಚಿಸಲು ಅನು ವಾಗಿ ಸಾಮಾನ್ಯ ಕಾರಣವನ್ನು ಗೊತ್ತುಪಡಿಸಲೂ ಬರುವುದು. ವಿದ್ಯಾರ್ಥಿಯು ಮೇಲೆ ಕೊಟ್ಟ ಕಾರಣಗಳಿಂದ ಕತ್ತಲೆಗೂ ಘನೀಭವನಕ್ಕೂ ಸಂಬಂಧವಿದೆಯೆಂದು ತೋರಿದರೂ ವರ್ಗದ ಉಳಿದ ವಿದ್ಯಾರ್ಥಿಗಳಾಗಲಿ ಶಿಕ್ಷಕನಾಗಲಿ ಸಮಾಧಾನ ಹೊಂದುವುದಿಲ್ಲ. ಮೇಲಿನ ಸಿದ್ಧಾಂತಕ್ಕೆ ನಿರೋಧವಾಗಿ ಕಾಣುವ ಹಲಕೆಲವು ಕಾರಣಗಳನ್ನು ಸೂಚಿಸಿ ಬೇರೆ ವಿಧಾನ ಗಳನ್ನು ಮಾಡಿ ಕೆಳಗೆ ಕಾಣಿಸಿದಂತೆ ವಿಶಿಷ್ಟ ಉದಾಹರಣೆಗಳನ್ನು ಸಂಗ್ರಹಿಸಬಹುದು

(೧) ಹಿಮರ್ಪದಿಂದ ಕೂಡಿದ ನೀರುಳ್ಳ ಪಾತ್ರೆಯ ಮೇಲೆ ಕಂಡು ಬರುವ 'ನೀರು ಗುಳ್ಳೆಗಳು' (ಬೆವರು ಹನಿಗಳು)

(೨) ಅಡಗೆ ಮನೆಯ ಕಿಡಕಿಗಳ ಮೇಲೆ ಕಾಣುವ ಆರ್ದ್ರತೆ.

(೩) ಕನ್ನಡಕಗಳ ಮಸುಕಾಗುವಿಕೆ.

(೪) ಕಿಡಕಿಯ ಕಾಜಿನ ಬಾಗಿಲ ಮೇಲಿನ ಉಸಿರು. (ಉಸುರಿನ ಪರಿಣಾಮ)

(೫) ಚಳಿ ಬಿದ್ದ ದಿವಸದಲ್ಲಿ ಮನುಷ್ಯನ ಬಾಯಿಂದ ಹೊರಬಿದ್ದ ಉಸಿರು.

(೬) ಚಹಾ ಕಿಟಲಿಯಿಂದ ಹೊರಹೊಮ್ಮುವ (Steaming of tea-kettle)

ಈ ಆರು ಉದಾಹರಣೆಗಳು ಬೆಳಕು ಕತ್ತಲೆಯ ಪ್ರಶ್ನೆಯನ್ನು ಮನ್ನಿಸದೆ ಝುಗಝುಗಿಸುವ ಹಗಲಿನಲ್ಲಿಯೂ ರಾತ್ರಿಯಲ್ಲಿಯೂ ಸಂಭವಿಸುವುವು. ಕತ್ತಲೆಯೆಂಬ ಕಾರಣವನ್ನು ಬಿಟ್ಟು ಬೇರೊಂದು ಕಾರಣವನ್ನು ಹುಡುಕಬೇಕಾಯಿತು.

ಮೇಲಿನ ಉದಾಹರಣೆಗಳ ಪರೀಕ್ಷೆಯಿಂದ ವರ್ಗದಲ್ಲಿಯ ಒಬ್ಬ ವಿದ್ಯಾರ್ಥಿಯು ನುಣುಪಾದ ಪದಾರ್ಥವು ಹಗಲಿದ ಕೂಡಲೆ ಹನಿಯು ಆರ್ದ್ರತೆಯನ್ನು ಬಿಟ್ಟುಕೊಡುವುದೆಂಬ ಮಾತನ್ನು ಸೂಚಿಸಬಹುದು. ಈ ವಿಧಾನವು ಮೊದಲಿನ ನಾಲ್ಕು ಉದಾಹರಣೆಗಳಿಗೆ ಮಾತ್ರ ಅನ್ವಯಿಸುವುದು. ಐದನೆಯ ಆರನೆಯ ಉದಾಹರಣೆಗಳಿಗೆ ಸಂಭವಿಸುವುದಿಲ್ಲ. ಮೊದಲೇ ವಿವರಿಸಿದ ಹಿನು ಮತ್ತು ಮಳೆಗಳ ವಿಚಾರವೇನು? ಆದ್ದರಿಂದ ಈ ಕಾರಣವನ್ನು ನಿರ್ದಾರಿಸಲೇಬೇಕಾಗುವುದು. ಎಲ್ಲ ಉದಾಹರಣೆಗಳನ್ನೂ ಅನ್ವಯಿಸುವ ಯೋಗ್ಯ ಕಾರಣವನ್ನು ಗೊತ್ತು ಹಚ್ಚಬೇಕು.

ಈ ಸಮಯದಲ್ಲಿ ಒಬ್ಬ ವಿದ್ಯಾರ್ಥಿಗೆ ತನಿಭವನಕ್ಕೆ ತಂಪು ತಗಲುವಿಕೆಯೇ ಮುಖ್ಯ ಕಾರಣವೆಂದು ತೋಚಬಹುದು. ಎಲ್ಲ ಉದಾಹರಣೆಗಳಲ್ಲಿಯೂ ತಂಪುತಗಲುವಿಕೆಯು ಸಾಮಾನ್ಯ ಕಾರಣವೆಂದು ತೋರುವುದು. ಈ ಮಾತನ್ನು ವಿರೋಧಿಸುವ ಉದಾಹರಣೆಗಳು ಇಲ್ಲದ ಮೂಲಕ ವರ್ಗದ ಮುಂದಿರುವ ಸಮಸ್ಯೆಯನ್ನು ಬಿಡಿಸಿದಂತಾಗುವುದು. ಘನೀಭವನದ ವಿಶಿಷ್ಟ ಉದಾಹರಣೆಗಳು, ಸರಿತೋರಬಹುದಾದ ಉತ್ತರಗಳು ಅಥವಾ ವಿಧಾನಗಳು—ತಾತ್ಕಾಲಿಕ ಸಿದ್ಧಾಂತಗಳು ಈ ಸಮಸ್ಯೆಯನ್ನು ಬಿಡಿಸಲು ಅವಶ್ಯವಿರುವುವೆಂದು ಸ್ಪಷ್ಟವಾದಂತೆ ಆಯಿತು.

(೩) ಉತ್ತರಗಳೆಂದು ತೋರಿದ ವಿಧಾನಗಳನ್ನು ಪರೀಕ್ಷಿಸುವುದು:— ಪ್ರತಿಯೊಂದು ಸೂಚನೆಯನ್ನು ಪರೀಕ್ಷಿಸಿ ನೋಡುವಾಗ ಕೊಂಚಕೊಂಚ ತಿಳಿವು ಮಾರ್ಪಾಡುಗಳನ್ನು ಮಾಡಬೇಕಾಗುವುದು. ಯೋಗ್ಯಕಾರಣಗಳ ಮೇಲಿನ ತನಕ ವಿಚಾರಗಳು ಹೊಯ್ದಾಡಿತಾಕಲಾಡುತ್ತವೆ. ಅದುಪರಿಂದ ಕಲಿಸುವಿಕೆಯ ಈ ಮೂರನೆಯ ಮೆಟ್ಟಿಲಿನ 'ತುಲನೆ, ಸಾಮಾನ್ಯಸ್ವರೂಪಗ್ರಹಣ' ದಲ್ಲಿಯೆ ಮೊಹವಿಸಿ ಎಂದು ತೋರುವುದು. ಏಕೆಂದರೆ ಇಲ್ಲಿ ಸರಿಕಾಣಬಹುದಾದ ಕಾರಣಗಳ ಜೊತೆಗೆ ಇನ್ನೂ ವಿಶಿಷ್ಟ ಉದಾಹರಣೆಗಳನ್ನೂ ಅವುಗಳಲ್ಲಿ ಅಡಕವಾದ ವಿಧಾನಗಳನ್ನೂ ಪರೀಕ್ಷಿಸಿ ಸಾಮಾನ್ಯ ಸ್ವರೂಪವನ್ನು ಅವುಗಳೊಳಗಿಂದ ಹುಡುಕಿ ಎಗೆಯುವುದಿದೆಯೆಂಬ ಗ್ರಹಿಕೆಯನ್ನು ಪರೀಕ್ಷಣ ಅನುಯಾಯಿಗಳು ಮಾಡಿಕೊಂಡಿದ್ದರು. ತುಲನೆಮಾಡುವುದಕ್ಕೆ ಸಾಮಾಜ್ಞ ಬೇಕೂ ಅಥವಾ ಮಾರ್ಗದರ್ಶಿತ್ವವೂ ಇರಲಿಲ್ಲ. ಏನೋ ಅಂಥಹದೊಂದು ಬಳಿಯಿರುವ ಕಾರಣಗಳನ್ನು ಹೇಗಾದರೂ ಕಂಡು ಹಿಡಿಯುವ ಕ್ರಮವು ನಡೆದು ಕಡೆಗೆ ಶಿಕ್ಷಕರಿಂದ ಸರಿಯಾದ ಉತ್ತರವನ್ನು ಹೇಳಿಕೊಡುತ್ತಿದ್ದನು.

ಉದಾಹರಣೆಗಳಲ್ಲಿಯೇ ಸಾಮಾನ್ಯ ಸ್ವರೂಪವನ್ನು ತಿಳಿಯಲು ಯತ್ನಿಸುತ್ತಿದ್ದರೇ ಹೊರತು ಉದಾಹರಣೆಗಳ ಹೊರಾಂಗಣದಿಂದ ಸಾಮಾನ್ಯ ನಿಯಮವನ್ನು ಹುಡುಕಿ ತೆಗೆಯಲು ಯತ್ನಿಸುತ್ತಿರಲಿಲ್ಲ. ಶಿಕ್ಷಕರಿಂದ ಪಡೆದುಕೊಂಡ ಮೇಲಿಂದ ಒಂದು ಉತ್ತರವನ್ನೊ ವಿಧಾನವನ್ನೊ ಸೂಚಿಸಿ ಅದು ಮಿಕ್ಕ ಉದಾಹರಣೆಗಳಿಗೆಲ್ಲವೂ ಅನ್ವಯಿಸದಿದ್ದರೆ ನಿರಾಕರಿಸಿಬೇಕೆಂದು ಹೊಸ ಯೋಗ್ಯ ವಿಧಾನವನ್ನು ಹೊಳೆಯಿಸುವುದು. ಹೀಗೆ ವಿಧಾನಗಳ ಶಾಸ್ತ್ರೀಯ ತೋಫಣೆಯಲ್ಲಿ ತಿರಸ್ಕಾರವಾದ ಉತ್ತರಗಳೂ ತಿಳಿಯದ ಹೆಸರಿಗಳ ವರೆಗೆ ನಡೆಯಬಹುದು

ವಿಧಾನಗಳು ಇಲ್ಲದೆ ಹೋದರೆ ಪ್ರಾರಂಭಾವಸ್ಥೆಯಲ್ಲಿಯೆ ವಿಚಾರ ಕ್ರಮವು ಕುಂಠಿತವಾಗುವುದು. ಸಮಸ್ಯೆಯನ್ನು ಬಿಡಿಸಲು ಮಾಡುವ ಎಲ್ಲ ಸೂಚನೆಗಳನ್ನು ತಾಳ್ಮೆಯಿಂದ ಕೇಳಿಕೊಳ್ಳಬೇಕು. ಯೋಗ್ಯ ಉತ್ತರವನ್ನರಿತ ಶಿಕ್ಷಕನಿಗೆ ವಿದ್ಯಾರ್ಥಿಗಳ ಉತ್ತರಗಳು ತಿಳಿಗೇಡಿತನದ ಮಾದರಿಗಳೆಂದು ತೋರಿದರೂ ಅವನು ತನ್ನ ತಾಳ್ಮೆಯನ್ನು ಕಳೆದುಕೊಳ್ಳಬಾರದು. ವಿದ್ಯಾರ್ಥಿಯು ಗಾಂಭೀರ್ಯದಿಂದ ತನಗೆ ತಿಳಿದಷ್ಟುಮಾಡಿದ ಸೂಚನೆಯ ಅಪಹಾಸ್ಯವನ್ನು ಮಾಡುವುದು ಅಕ್ಷಮ್ಯಾಪರಾಧವಾದುದು. ಸರಿಯಾದ ಉತ್ತರವು ದೊರೆತಮೇಲೆ ಮಾಡುವ ಸೂಚನೆಗಳೇ ಬೇರೆ; ಮೊದಲು ಮಾಡುವ ಸೂಚನೆಗಳೇ ಬೇರೆ. ಶಿಕ್ಷಣ ಕ್ರಮದಲ್ಲಿ ಯಾವ ಸೂಚನೆಗಳನ್ನೂ ಮಾಡದೆ ಇರುವುದಕ್ಕಿಂತ ತಪ್ಪು ಸೂಚನೆಗಳನ್ನು ಮಾಡುವುದು ಲೇಸೇ ಎಂದು ಹೇಳಬಹುದು. ಏಕೆಂದರೆ ತಪ್ಪು ಸೂಚನೆಯೆ ಸರಿಯಾದ ಸೂಚನೆಯ ಮಾರ್ಗದರ್ಶಿಯೆಂದು ಶಿಕ್ಷಕನು ತಿಳಿಯಬೇಕು. ಏಕೆಂದರೆ ಶಿಕ್ಷಕನಿಗೆ ಆ ತಪ್ಪು ಸೂಚನೆಯಿಂದ ಸರಿಯಾದ ಸೂಚನೆಯ ವರೆಗೆ ವಿದ್ಯಾರ್ಥಿಯನ್ನು ಒಯ್ಯಲು ಅನುವು ದೊರೆಯುವುದು, ವಿದ್ಯಾರ್ಥಿಗೆ ತನ್ನ ತಪ್ಪನ್ನು ತಾನೇ ಕಂಡು ಹಿಡಿಯುವಂತೆ-ಮಾಡಲು ಸುಸಂಧಿಯು ದೊರೆಯುವುದು. ವಿದ್ಯಾರ್ಥಿಗಳಿಗಾದರೂ ಇದಕ್ಕಿಂತ ಮಿಗಿಲಾದ ಸಾಧನವು ದೊರೆಯಲಾರದು.

(ಈ) ಸಾಮಾನ್ಯ ನಿಯಮದ ರಚನೆ:— ಈ ಮೆಟ್ಟಿನಲ್ಲಿ ಎಲ್ಲರೂ ಒಪ್ಪುವ ವಿಧಾನವನ್ನು ಯೋಗ್ಯವಾದ ಸಂಕ್ಷಿಪ್ತವಾದ ಭಾಷೆಯಲ್ಲಿ ಸಿದ್ಧಗೊಳಿಸುವುದೇ ಮುಖ್ಯ ಕಾರ್ಯವಾಗಿದೆ. ಇಂಥ ವಾಖ್ಯೆಯನ್ನಾಗಲಿ ನಿಯಮಗಳನ್ನಾಗಲಿ ತಯಾರಿಸುವಾಗ ವಿದ್ಯಾರ್ಥಿಗಳಿಗೆ ಸಮಭಾಗಿಗಳಾಗಲು ಅವಕಾಶವನ್ನು ಕೊಡಬೇಕು. ಇಬ್ಬರು ಅಥವಾ ಮೂವರು ವಿದ್ಯಾರ್ಥಿಗಳಿಗೆ ತಮ್ಮ ವಿಚಾರವನ್ನು ಕರಿಹಲಿಗೆಯ ಮೇಲೆ ಬರೆಯಲು ಹೇಳಿ ಉಳಿದವರೂ ಶಿಕ್ಷಕನೂ ಬರೆದುದನ್ನು ತಿದ್ದಲು ಯತ್ನಿಸಬೇಕು. ಹೊಸ ಪಾರಿಭಾಷಿಕ ಶಬ್ದಗಳನ್ನೂ ಶಬ್ದ ಸಮುಚ್ಚಯಗಳನ್ನೂ ಶಿಕ್ಷಕನು ಒದಗಿಸಿಕೊಡಬೇಕು. ವಿಷಯವನ್ನು ಸಂಕ್ಷೇಪದಲ್ಲಿ ಹೇಳುವಾಗಲೂ ವರ್ಣನೆಯನ್ನು ಸಂಕ್ಷೇಪದಲ್ಲಿ ಹೇಳುವಾಗಲೂ ಇವು ಸಹಾಯವನ್ನೀಯುವುವು. ಅದುಮರಿಂದ ಅಗತ್ಯವೆನಿಸಿದಾಗ ಅವುಗಳನ್ನು ಚೆನ್ನಾಗಿ ತಿಳಿಸಿಹೇಳಬೇಕು. ವಿದ್ಯಾರ್ಥಿಗಳಾದರೂ ಅವುಗಳ ಲಾಲಿತ್ಯವನ್ನೂ ಸೌಷ್ಠವವನ್ನೂ ನೋಡಿ ಮೆಚ್ಚಿ ಅವುಗಳನ್ನು ಆಸ್ಥೆಯಿಂದ ಉಪಯೋಗಿಸಿ ಅವುಗಳ ಮೇಲೆ ಪ್ರಭುತ್ವವನ್ನು ಪಡೆಯುವರು.

ಸಮಸ್ಯೆಗೂ ಕಡೆಯ ನಿರ್ಣಯವನ್ನೊಳಗೊಂಡ ಸಾಮಾನ್ಯ ನಿಯಮಕ್ಕೂ ಅನುಕೂಲವುಳ್ಳ ಸಂಬಂಧವಿದೆ. ಸಮಸ್ಯೆಯಲ್ಲಿ ಎತ್ತಿದ ಪ್ರಶ್ನೆಗೆ ಇದು ಸಮರ್ಪಕ ಉತ್ತರವಾಗಿರುವುದು. ಹಾಗಿಲ್ಲದಿದ್ದಲ್ಲಿ ಎಲ್ಲಿಯೊ ನಡುಮಾರ್ಗದಲ್ಲಿ ವಿಚಾರಕ್ರಮವು ದಾರಿಯನ್ನು ಬಿಟ್ಟು ಹೋಗಿದೆಯೆಂದು ತಿಳಿಯಬೇಕು.

(ಉ) ಸಾಮಾನ್ಯ ನಿಯಮದ ಉಪಯೋಗ ಮತ್ತು ನಿಯಮದ ಸಾಮಾನ್ಯತ್ವದ ಪರೀಕ್ಷೆ:— ಘನೀಭವನದ ತತ್ತ್ವವು ತಿಳಿದ ಮೇಲೆ ಇಬ್ಬನ್ನಿಯು ಹೇಗೆ ಬೀಳುತ್ತದೆಂಬುದನ್ನು ತಿಳಿಸಿ ಹೇಳಲಿಕ್ಕೆ ವಿದ್ಯಾರ್ಥಿಗಳಿಗೆ ಹಚ್ಚಬೇಕು. ಕ್ರಿಯಾವಿಶೇಷಣದ ವ್ಯಾಖ್ಯೆಯನ್ನು ವಿಶಿಷ್ಟ ಉದಾಹರಣೆಗಳಿಂದ ತಿಳಿಸಿ ಹೇಳಿದ ಮೇಲೆ ವಾಕ್ಯಗಳೊಳಗಿನ ಕ್ರಿಯಾ ವಿಶೇಷಣಗಳನ್ನು ಆಯ್ದು ಗುರುತಿಸಲಿಕ್ಕೆ ಹೇಳಬೇಕು. ಅಪೂರ್ಣಾಂಕಗಳ ಭಾಗಾಕಾರ ಅಥವಾ ವರ್ಗಮೂಲವನ್ನು ತೆಗೆಯುವ ರೀತಿಯನ್ನು ಕಲಿಸಿದ ಮೇಲೆ ಆಯಾ ಕ್ರಿಯೆಗಳನ್ನೊಳಗೊಂಡ ಲೆಕ್ಕಗಳನ್ನು ಬಿಡಿಸುವಂತೆ ಹೇಳಬೇಕು. ಕಂಡು-ಹಿಡಿದ ನಿಯಮವನ್ನು ಅನೇಕ

ಉದಾಹರಣೆಗಳನ್ನು ಬಿಡಿಸಿ ಮನನ ಮಾಡಿಕೊಳ್ಳದಿದ್ದರೆ ಆ ನಿಯಮವನ್ನು ಸಂಪೂರ್ಣವಾಗಿ ಗ್ರಹಿಸಿದಂತಾಗುವುದಿಲ್ಲ.

ಸಾಮಾನ್ಯ ನಿಯಮದ ಸತ್ಯತೆಯನ್ನು ಅನೇಕ ಉದಾಹರಣೆಗಳ ಸಹಾಯದಿಂದ ಪರಿಶೀಲಿಸಿ ನೋಡುವುದು ಉದ್ಗಾಮಿ-ಪದ್ಧತಿಯಲ್ಲಿ ಅವಶ್ಯವಾದ ಅಂಗವಾಗಿರುವುದು. ತಂಪಿನಿಂದ ಹವೆಯೊಳಗಿನ ಆರ್ದ್ರತೆಯು ಹೊರಬೀಳುವುದೆಂಬ ವಿಧಾನವನ್ನು ಸಾಮ್ಯತೆ ಅಥವಾ ತಾಳೆಯ ತರ್ಕಶಾಸ್ತ್ರದಲ್ಲಿಯ ರೀತಿಯಿಂದ ಶೋಧಿಸಿ ನೋಡಬೇಕು. ನಮ್ಮೆದುರಿಗಿನ ಉದಾಹರಣೆಗಳಲ್ಲಿ ಸಾಮಾನ್ಯ ಸ್ವರೂಪವು ಕಂಡು ಬಂದಿತೊ ಇಲ್ಲವೊ ಎಂಬುದನ್ನು ಮಾತ್ರ ನೋಡಿದೆವು. ಆದರೆ ತರ್ಕಶಾಸ್ತ್ರವು ಇಷ್ಟಕ್ಕೇ ಸಮಾಧಾನವನ್ನು ಹೊಂದುವುದಿಲ್ಲ. ಕಾಜಿನಮೇಲೆ ಕಂಡು ಬರುವ ಘನೀಭವನದ ನಾಲ್ಕು ಉದಾಹರಣೆಗಳಿದ್ದರೆ ಮಾತ್ರ ನುಣುಪಾದ ವಸ್ತುವಿನ ಮೇಲೆ ಆ ಕ್ರಿಯೆಯು ನಡೆಯುತ್ತದೆಂಬ ವಿಧಾನವನ್ನು ಸಹ ನಾವು ಅಂಗೀಕರಿಸಬೇಕಾಗಿತ್ತು. ಏಕೆಂದರೆ ಆ ಮಾತು ಎಲ್ಲ ಉದಾಹರಣೆಗಳಿಗೂ ಸಾಮಾನ್ಯವಾಗಿತ್ತು. ಆದರೆ ಆ ಅನುಮಾನವು-ನಿರ್ಣಯವು ಕಷ್ಟವಾಗುತ್ತಿತ್ತು. ಏಕೆಂದರೆ ಈ ಅನುಮಾನವನ್ನು ಅಲ್ಲಗಳೆಯುವಂಥ ಎಷ್ಟೋ ಉದಾಹರಣೆಗಳು ಇರಬಹುದು. ಅದ್ದರಿಂದ ವೈಷಮ್ಯದ ರೀತಿಯನ್ನು ಹಚ್ಚಿನೋಡುವುದು ಅಗತ್ಯವಿರುವುದು. 'ನುಣುಪಾಗಿರುವಿಕೆಯು ಘನೀಭವನದ ಕಾರಣವೆಂದು ಒಪ್ಪುವ ಮೊದಲು ನುಣುಪಿಲ್ಲದ ಕಾಜು, ಕಬ್ಬಿಣ, ಬಂಡೆಗಲ್ಲುಗಳು ಮುಂತಾದ ಹುರಟರಕಾದ ವಸ್ತುಗಳ ಮೇಲೆ ಆರ್ದ್ರತೆಯು ನೀರಿನ ರೂಪ (ಘನೀಭವನ) ವನ್ನು ಹೊಂದುವುದಿಲ್ಲವೆಂಬುದನ್ನು ನಿಶ್ಚಯಿಸಬೇಕು. ಪ್ರಯೋಗ ಮಾಡಿದರೆ ಇಂಥ ಹುರಟರಕ ವಸ್ತುಗಳ ಮೇಲೆ ಸಹ ಘನೀಭವನವಾಗುವುದೆಂದು ಸಹಜವಾಗಿ ತೋರುವುದು. ಆದ್ದರಿಂದ ನುಣುಪಾಗಿರುವಿಕೆಯು ಘನೀಭವನದ ಕಾರಣವಾಗಲಾರದು.

ತಂಪು ತಗಲುವಿಕೆ'ಗೆ ವೈಷಮ್ಯದ ನಿಯಮವನ್ನು ಹಚ್ಚಿ ನೋಡಲಾಗಿ ನಮ್ಮ ಅನುಮಾನವು ಸರಿಯಾದುದೆಂದು ಈವ್ಯವೇ ಗೋಚರವಾಗುವುದು. ಉಷ್ಣತೆಯೊಂದನ್ನುಳಿದು ಎಲ್ಲ ರೀತಿಯಲ್ಲಿ ಒಂದಕ್ಕೊಂದು ಹೋಲುವ ಎರಡು ಉದಾಹರಣೆಗಳನ್ನಾಗಲಿ ಉದಾಹರಣೆಗಳ ಗುಂಪನ್ನಾಗಲಿ ತೆಗೆದುಕೊಂಡು ವಿಚಾರಿಸುವ. ಒಂದು ಕಾಜಿನ ಪಾತ್ರೆಯಲ್ಲಿ ಬರ್ಫದ ನೀರನ್ನೂ ಬೇರೊಂದರಲ್ಲಿ ಬಿಸಿಯಾದ ನೀರನ್ನೂ ಹಾಕಿ, ತಂಪಾದ ಕಾಜಿನ ಮೇಲೆ ಊದಿ, ಮತ್ತೊಂದು ಬಿಸಿಯಾದ ಕಾಜಿನ ಮೇಲೆ ಊದಿನೋಡಿದರೆ ಮೊದಲನೆಯ ವಸ್ತುವಿನ ಮೇಲೆ ಘನೀಭವನವಾಗುವುದೆಂದೂ ಎರಡನೆಯದರ ಮೇಲೆ ಆಗುವುದಿಲ್ಲವೆಂದೂ ಕಂಡುಬರುವುದು.

ಇವೆರಡು ಉದಾಹರಣೆಗಳಲ್ಲಿ ಯಾವ ಸ್ವರೂಪದಲ್ಲಿ ಅಂತರವು ಕಾಣುವುದೋ ಅದೇ ಘನೀಭವನವಾಗುವುದರ ಅಥವಾ ಆಗದೆ ಇರುವುದರ ಕಾರಣವಿರಲಿಕ್ಕೇ ಬೇಕು.

ವರ್ಗದ ಕೋಣೆಯಲ್ಲಿ ವೈಷಮ್ಯ ತತ್ವಗಳ ಧಾರಾಳವಾದ ಉಪಯೋಗದಿಂದ ಸಮಸ್ಯೆಯನ್ನು ಬಿಡಿಸುವುದೇ 'ಅನುಮಾನಗಳ ಪರೀಕ್ಷೆ' ಅಥವಾ ಸಿದ್ಧಸ್ವರೂಪವೆಂದು ತಿಳಿಯತಕ್ಕದ್ದು. ಈ ತರದ ಪರೀಕ್ಷೆಯು ಶಾಸ್ತ್ರೀಯ ಪ್ರಪಂಚದಲ್ಲಿಯೂ ಸಾಮಾಜಿಕ ಜೀವನದಲ್ಲಿಯೂ ಅತ್ಯಂತ ಮಹತ್ವವಾದುದು. ಇದರ ಮಹತ್ವವನ್ನು ತಿಳಿದ ವಿದ್ಯಾರ್ಥಿಯು ಶೋಧಕಬುದ್ಧಿಯುಳ್ಳವನಾಗುವನು. ಈ ಬುದ್ಧಿಯೇ ಬಹು ಮೋಹಕವಾಗಿಯೂ ಪ್ರಿಯವಾಗಿಯೂ ತೋರುವ ಗ್ರಹಿಕೆಗೂ ಮತ್ತು ಪರೀಕ್ಷೆಯನ್ನು ಎದುರಿಸಿ ಸಿದ್ಧತೆಯನ್ನು ಪಡೆದ

ನಿರ್ಣಯಕ್ಕೂ ಇರುವ ಅಂತರವನ್ನು ಕಂಡುಹಿಡಿಯಲು ಹಚ್ಚುವುದು. ತಾನು ಮಾಡುವ ಪ್ರತಿಯೊಂದು ಮಹತ್ವದ ವಿಧಾನವನ್ನು ಪರೀಕ್ಷೆಯ ಒರೆಗಲ್ಲಿಗೆ ಹಚ್ಚಬೇಕೆಂಬ ಉತ್ಕಟ ಇಚ್ಛೆಯನ್ನೂ ಅರ್ಥಗರ್ಭಿತವಾದ ವಿಧಾನಕ್ಕೆ ಸಾಕಷ್ಟು ಪೋಷಕದ್ರವ್ಯವನ್ನು ಪೂರೈಸುವ ಮನದ ನಿರ್ಧಾರವನ್ನೂ ತೋರಿಸುವುದು. ಇಂಥ ಶೋಧಕ ಬುದ್ಧಿಯನ್ನು ವಿದ್ಯಾರ್ಥಿಗಳಲ್ಲಿ ವಿಕಾಸಗೊಳಿಸಿ ಬಲಪಡಿಸುವುದೇ ಶಿಕ್ಷಕನ ಆದ್ಯಕರ್ತವ್ಯ. ಆದ್ದರಿಂದ ಅವನು ವಿಧಾನಗಳ ಸತ್ಯಾಸತ್ಯತೆಯನ್ನೂ ಕಾರ್ಯ ಕಾರಣಗಳ ಸಂಬಂಧಗಳ ಔಚಿತ್ಯವನ್ನೂ ಪರೀಕ್ಷಿಸಿ ಜೀವನದ ವಿವಿಧ ಕ್ಷೇತ್ರಗಳಲ್ಲಿ ಶೋಧಕ ಬುದ್ಧಿಯ ಮಹತ್ತ್ವವನ್ನು ತೋರಿಸುವ ಯಾವ ಸಂಧಿಯನ್ನೂ ಕಳೆದುಕೊಳ್ಳಬಾರದು.

ಉದ್ಗಾಮಿ ಪದ್ಧತಿಯ ಸುಧಾರಿಸಿದ ಮೆಟ್ಟಿಗಳನ್ನು ಕೆಳಗೆ ಕಾಣಿಸಿದಂತೆ ವಿವರಿಸಬಹುದು—

(೧) ಸಮಸ್ಯೆ – ಮತ್ತು ಹಿನ್ನೆಲೆ

(೨) ಪಕ್ಷ—(ಅ) ವಿಶಿಷ್ಟ ಉದಾಹರಣೆಗಳು.

(ಆ) ಸಿದ್ಧಾಂತ ಅಥವಾ ತಾತ್ಪರ್ತಿಕ ಉತ್ತರಗಳು.

(೩) ಸಿದ್ಧಾಂತಗಳ ಪರೀಕ್ಷೆ— (ಕಾರ್ಯ ಕಾರಣಗಳ ವಿವೇಚನೆಯ ಸಹಾಯದಿಂದ)

(೪) ಸಾಮಾನ್ಯ ನಿಯಮ ಅಥವಾ ಅನುಮಾನ

(೫) ಅನುಮಾನದ ಉಪಯೋಗ ಮತ್ತು ಮೇಳನೋಡುವಿಕೆ

ಹರ್ಬರ್ಟನ ಮೆಟ್ಟಿಗಳ ಕೊಡ ಕುಲನೆ ಮಾಡಿ ನೋಡಿದರೆ ಕೆಲವು ಮಹತ್ತ್ವವುಳ್ಳ ಅಂತರಗಳು ಮೊದಲನೆಯ ಮೂರು ಮೆಟ್ಟಿಗಳಲ್ಲಿ ಕಂಡು ಬರುವುವು. ಸಮಸ್ಯೆಯ ಮೂಲ ಭೂತವಾದ ಮಹತ್ತ್ವ, ಹಿನ್ನೆಲೆಯ ಕಾರ್ಯದ ಮಹತ್ತ್ವ, ಸನ್ನಿವೇಶದ ತೊಡಕನ್ನು ಬಿಡಿಸಬಹುದಾದ ತಾತ್ಪರ್ತಿಕ ಸಿದ್ಧಾಂತಗಳ ಸೇರಿಸುವಿಕೆ, ಅವುಗಳನ್ನು ತೂಗಿ ನೋಡಿ ಪ್ರಥಕ್ಕರಿಸುವ ಕಾರ್ಯಕ್ಕಿಂತ ಅವುಗಳನ್ನು ಪರೀಕ್ಷಿಸಿ ಸಿದ್ಧಗೊಳಿಸುವುದರ ಶ್ರೇಷ್ಠತೆ ಇವೆಲ್ಲವುಗಳ ಮೂಲಕ ಉದ್ಗಾಮಿ ಪದ್ಧತಿಯ ಸಮಸ್ಯೆಗಳನ್ನು ಶಿಕ್ಷಕರು ಹೆಚ್ಚು ರಸವತ್ತಾದ ಮತ್ತು ಚೈತನ್ಯಯುಕ್ತ ರೀತಿಯಿಂದ ಬಿಡಿಸಬಹುದೆಂದು ಬಲವಾಗಿ ಆಶಿಸಲು ಅವಕಾಶವಿರುವುದು. ಈ ವಿಶಿಷ್ಟ ಸ್ವರೂಪಗಳನ್ನು ವಿವರಿಸುವುದರಿಂದ ಅವುಗಳನ್ನು ಸಾಲಾಗಿ ಒಂದರ ಹಿಂದೊಂದನ್ನು ಶಿಕ್ಷಕರು ಅನುಸರಿಸಲೇಬೇಕೆಂಬ ಸೂಚನೆಯು ಧ್ವನಿತವಾಯಿತೆಂದು ಮಾತ್ರ ತಿಳಿಯಬಾರದು. ಮೆಟ್ಟಿಗಳು ಹತ್ತುವದಕ್ಕಾಗಿಯೇ ಏರ್ಪಟ್ಟವೆಯೆಂದೂ ಮತ್ತೆ ಕೆಲವು ಸಲ ಎರಡು ಮೆಟ್ಟಿಲುಗಳನ್ನು ಏರ ಹಚ್ಚುವುದು ಸಭ್ಯರೀತಿಯ ಸೂಚನೆಯೆಂದೂ ತಿಳಿಯಲು ಅವಕಾಶವಿದೆ.

ಈ ತೆರೆದ ಮೆಟ್ಟಿಗಳನ್ನು ಅಥವಾ ತರ್ಕಬದ್ಧವಾದ ಬೇರೆ ಯಾವದೇ ರೀತಿಯ ಕಟ್ಟುನಿಟ್ಟಿಗಳನ್ನು ಅನುಸರಿಸಿದರೆ ಅವುಗಳ ದುರುಪಯೋಗ ಮಾಡಿದಂತಾಗುವುದು. ವರ್ಗದ ಕೋಣೆಯಲ್ಲಿ ಹಾಗೆ ಮಾಡಿದರೆ ಅವುಗಳಿಂದ ಕೃತ್ರಿಮತೆ, ವೇಳೆಯ ಅಪವ್ಯಯ, ಮೊದಲಾದ ದೋಷಗಳು ತಟ್ಟಬಹುದು. ಈ ಮೆಟ್ಟಿಗಳು ವಿಚಾರಕ್ರಮದ ಮುಖ್ಯ ಸ್ವರೂಪಗಳನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ಆಯಾ ಸ್ವರೂಪಗಳ ದೃಢ ಪರಿಚಯವಾಗುವಂತೆ ಶಿಕ್ಷಕನಿಗೆ ದಾರಿತೋರಿಸಲು ಸಹಾಯವಾದರೆ ಅವು ತಮ್ಮ ಕಾರ್ಯವನ್ನು ನಿರವೇರಿಸಿದಂತಾಯಿತು. ವಿದ್ಯಾರ್ಥಿಗಳು ಕೈಕೊಳ್ಳುವ ದಾರಿಯು ಸಾಧಾರಣವಾಗಿ ಗುಡ್ಡಸುತ್ತಿ ಮೈಲಾ

ರಕ್ಕೆ ಬರುವಂತಿರಬಹುದು. ಅವರ ಲಕ್ಷ್ಯವು ಕೊಟ್ಟ ವರ್ಷದ ಮೇಲೂ ಅದರಿಂದ ಹೊರ ಡಬಹುದಾದ ಪರಿಣಾಮದ ಮೇಲೂ ಕೇಂದ್ರೀಕವಾಗಬೇಕು. ಅವರ ವಿಚಾರಕ್ರಮವು ನೋಟಿನ ತರಗತಿಗಳಲ್ಲಿ ಮಾನಸ ಶಾಸ್ತ್ರೋಕ್ತವಾಗಿರಬೇಕೆ ಹೊರತು ತರ್ಕಬದ್ಧ ರೀತಿಗೆ ಅನ್ವಯಿಸಬಾರದು.

ಉದ್ಗಾಮಿ ಪದ್ಧತಿಯಲ್ಲಿ ವಿಚಾರಕ್ರಮವನ್ನು ಜಾಣತನದಿಂದ ಉಪಯೋಗಿಸಿದರೆ ಶಿಕ್ಷಣವು ಮನವಾರೆ ಸಾಗುವುದಲ್ಲದೆ ನೇಕೆಯ ಉಳಿತಾಯವನ್ನೂ ಸಾಧಿಸಬಹುದು. ಮುಖ್ಯ ಸ್ವರೂಪಗಳ ಮಹತ್ವವನ್ನು ಕಂಡ ಶಿಕ್ಷಕನು ವಿಷಯಾಂತರವಿಲ್ಲದೆ ಪಾಠವನ್ನು ಜಾಗ್ರತೆಯಾಗಿ ಜಾಗ್ರತನಾಗಿ ಸಾಗಿಸುವನು. ನೀರು ವಾಯುರೂಪವನ್ನು ಹೊಂದುವ (ಬಾಷ್ಪೀಭವನದ) ಪಾಠವಾದ ಕೂಡಲೆ ಘನೀಭವನದ ಪಾಠವನ್ನು ಕೆಲವು ನಿಮಿಷಗಳ ಲ್ಲಿಯೇ ವರ್ಗಕ್ಕೆ ಕಲಿಸಬಹುದು. ಸಮಸ್ಯೆಯನ್ನು ವರ್ಗದ ಎದುರಿನಲ್ಲಿ ಇಟ್ಟಕೂಡಲೆ ಜಾಗ್ರತವಾದ ವರ್ಗದ ವಿದ್ಯಾರ್ಥಿಗಳು ಸಮಸ್ಯೆಯನ್ನು ಬಿಡಿಸುವ ರೀತಿಯನ್ನು ಅಡಿ ತೋರಿ ಸಲು ಉತ್ಸುಕರಾಗುವರು. ಮೊದಲು ಮೂಡಿದ ಸೂಚನೆಯೆ ಸರಿಯಾದ ಉತ್ತರವಾಗ ಬಹುದು. ಹಾಗಾದರೆ ಶಿಕ್ಷಕನು ಬಯಸುವ ಉತ್ತರವು ಅಥವಾ ಸಿದ್ಧಾಂತವು ತೀವ್ರ ಹೊರಟಷ್ಟೂ ಗುಣವೇ ಸರಿ. ಆ ಸೂಚನೆ ಅಥವಾ ವಿಧಾನವನ್ನು ಆ ಬಳಿಕ ಪರೀಕ್ಷಿಸು ವುದು ಅವಶ್ಯವಾದುದು. ಎಷ್ಟೋ ವಿಶಿಷ್ಟ ಉದಾಹರಣೆಗಳನ್ನು ವಿದ್ಯಾರ್ಥಿಗಳೂ ಶಿಕ್ಷ ಕರೂ ಕೊಡಬಹುದು. ಆ ಮೇಲೆ ಸಾಮಾನ್ಯತತ್ತ್ವವನ್ನು ಯೋಗ್ಯಭಾಷೆಯ ಎರಕದಲ್ಲಿ ಹೊಯ್ದು ಅದರ ಸತ್ಯತೆಯನ್ನು ಕಂಡು ಹಿಡಿಯಬಹುದು. ಕೆಲವು ಉದಾಹರಣೆಗಳಿಂದ ಕಾರಣವಾಗಲಿ ತತ್ತ್ವವಾಗಲಿ ಸ್ಪಷ್ಟವಾಗುವುದು. ವ್ಯಾಕರಣದೊಳಗಿನ ವ್ಯಾಖ್ಯೆಗಳನ್ನು ಅಥವಾ ಗಣಿತ ಬೀಜಗಣಿತದೊಳಗಿನ ನಿಯಮಗಳನ್ನು ಅಭ್ಯಾಸ ರೂಢಿಮಾಡಿಸಲು ಹೆಚ್ಚು ಅವಧಿಯು ಬೇಕಾಗಬಹುದು. ಬಾಷ್ಪೀಭವನದ ಕಾರಣವು ವಿದ್ಯಾರ್ಥಿಗಳಿಂದ ತೀವ್ರ ವಾಗಿ ಸೂಚಿಸಲ್ಪಟ್ಟರೆ ಅದರ ಬಗ್ಗೆ ಇರುವ ಪಾಠವು ಮೂವತ್ತು ನಿಮಿಷಗಳಲ್ಲಿ ಮುಗಿಯ ಬಹುದು. ವಿದ್ಯಾರ್ಥಿಗಳ ಸಹಕಾರವು ದೊರೆತರೆ ಅವರು ಆ ವಿಷಯವನ್ನು ಚೆನ್ನಾಗಿ ಗ್ರಹಿಸುವರು.

ಸಾಮಾನ್ಯ ತತ್ತ್ವಗಳು, ನಿಯಮಗಳು, ವ್ಯಾಖ್ಯೆಗಳು:— ಇವುಗಳನ್ನು ಶಿಕ್ಷಕನು ಉದ್ಗಾಮಿ ಪದ್ಧತಿಯಿಂದ ಕಲಿಸಬೇಕಾಗುವುದು. ಸಾಮಾನ್ಯ ತತ್ತ್ವಗಳನ್ನು ಮೇಧಾವಿ ಗಳು ಕಂಡು ಹಿಡಿದು ಮಾನವನ ಪ್ರಗತಿಗೆ ಕಾರಣರಾಗಿರುವರು. ಅವರ ತತ್ತ್ವಗಳ ಬಗ್ಗೆ ಎರಡನೆಯವರ ಬಾಯಿಂದ ಅಥವಾ ಓದಿ ಜಗರು ತಿಳಿದುಕೊಳ್ಳಬಹುದು. 'ಮನುಷ್ಯ ರೆಲ್ಲರೂ ಮರ್ತ್ಯರು' 'ಆಧಾರವಿಲ್ಲದ ವಸ್ತುಗಳು ಕೆಳಗೆ ಬೀಳುವುವು.' 'ವಸಂತ ಕಾಲದ ಮಳೆಯು ಹುಲ್ಲುಗಾವಲುಗಳನ್ನು ಸಿದ್ಧಗೊಳಿಸುವುದು' ಮುಂತಾದ ಸಾಮಾನ್ಯಜ್ಞಾ ನದ ವಿಷಯಗಳನ್ನು ಯಾರೂ ಬುದ್ಧಿಪೂರ್ವಕ ಪ್ರಯತ್ನದಿಂದ ಬಿಡಿಸಬೇಕಾಗಿಲ್ಲ. ಅನು ಭವದಿಂದಲೇ ಈ ವಿಷಯಗಳು ಗೊತ್ತಾಗಿ ಬಿಡುವುವು. ಸಾಮಾನ್ಯ ತತ್ತ್ವಗಳು ಬುದ್ಧಿ ಪೂರ್ವಕ ಉದ್ಗಾಮಿ ಪದ್ಧತಿಯು ನಿಜವಾದ ಬಲದಿಂದಲೂ ಆಂತರಿಕ ಉದ್ಗಾಮಿಕ್ರಿಯೆ ಅಥವಾ ಅನುಭವದ ಬಲದಿಂದಲೂ ಭಾಷೆಯು (ಶುಷ್ಕ, ಪ್ರತ್ಯಕ್ಷ, ಮೌಖಿಕ) ಸಾಹಾ ಯ್ಯದ ಬಲದಿಂದಲೂ ಉಂಟಾಗಿರುವುವು, ಇಂತಹ ರೀತಿಗಳಿಂದಲೇ ಸಾಧ್ಯವಾಗಿರುವುವು.

ಧಾರ್ಮಿಕ ಶಿಕ್ಷಣ

(ಶ್ರೀ. ಆಯ್. ಸಿ. ತಂಬದ, ಬಿ. ಎ., ಬಿ. ಟಿ.
ಇವರ ಇಂಗ್ಲೀಷ ಲೇಖನದ ಆಧಾರದಿಂದ)

ದೇವನಲ್ಲಿ ವಿಶ್ವಾಸ ಪ್ರೀತಿಗಳನ್ನು ಹುಟ್ಟಿಸುವ ಧರ್ಮವು ಮಾನವ ಜೀವನಕ್ಕೆ ಅತ್ಯಗತ್ಯವಾಗಿದೆ. ಏಕಂದರೆ ಈ ಭಾವನೆಯ ಬಲದಿಂದಲೇ ಮನುಷ್ಯನು ಪ್ರಪಂಚದಲ್ಲಿ ಎಂಥ ದುರ್ಧರ ಪ್ರಸಂಗಗಳಲ್ಲಿಯೂ ಹಣ್ಣಾಗದೆ ಉಳಿಯುವನು. ಮೇಲಾಗಿ ಈ ಧರ್ಮವು, ಯುಗ ಯುಗಾಂತರದಿಂದ ಬೆಳೆದು ಬಂದ ಮಾನವ ಸಂಸ್ಕೃತಿಯ ಒಂದು ಫಲ, ಸೊತ್ತು. ಧರ್ಮವನ್ನು ಶಿಕ್ಷಣದಿಂದ ಹೊರದೂಡಿದರೆ ಬಾಲಕರಿಗೆ ಸ್ವಾಭಾವಿಕವಾಗಿ ಸಿಗಬೇಕಾಗಿದ್ದ ಸಂಸ್ಕೃತಿಯ ಸೊತ್ತನ್ನು ನಾವು ಕಸಿದುಕೊಂಡಂತಾಗುತ್ತದೆ.

ಶಿಕ್ಷಣ ಯೋಜನೆಯಲ್ಲಿ ಧರ್ಮಕ್ಕೂ ಸ್ಥಾನವಿದೆ, ಎಂಬುದನ್ನು ಒಪ್ಪಿದಲ್ಲಿ ಸಾರ್ವಜನಿಕ ಸಾಲೆಗಳಲ್ಲಿ ಧಾರ್ಮಿಕ ಶಿಕ್ಷಣದ ಸ್ಥಾನವೇನು. ರೀತಿ ನೀತಿಗಳೇನು, ನಾವು ಕೊಡಬಯಸುವ ಧಾರ್ಮಿಕ ಶಿಕ್ಷಣ ಎಷ್ಟರಮಟ್ಟಿಗೆ ವ್ಯವಹಾರ್ಯವಾದೀತು, ಯಾವ ಸ್ವರೂಪದಲ್ಲಿ ಫಲಕೊಟ್ಟೀತು, ಇತ್ಯಾದಿ ಪ್ರಶ್ನೆಗಳು ಏಳುತ್ತವೆ. ಹಿಂದುಸ್ಥಾನದಲ್ಲಿ ಹಲವು ಮತಗಳು ಇದುದರಿಂದ ಧಾರ್ಮಿಕ ಶಿಕ್ಷಣವು ಇನ್ನು ನಮಗೊಂದು ಸಮಸ್ಯೆಯಾಗಿಯೇ ಉಳಿದಿದೆ. ಅದಕ್ಕೆಂದೇ ಮಹಾತ್ಮರು ಹೀಗೆ ಹೇಳಿದುದು. " ರಾಷ್ಟ್ರೀಯ ಧರ್ಮವೊಂದನ್ನು ನಿರ್ಮಾಣ ಮಾಡದ ಹೊರತು ಮತಾನುಸಾರವಾಗಿ ಧಾರ್ಮಿಕ ಶಿಕ್ಷಣ ಕೊಡುವುದು ದುಸ್ಸಾಧ್ಯ. ಇನ್ನು ಪ್ರತಿಯೊಂದು ಮತಕ್ಕೂ ಸ್ಥಾನ ಕೊಡುವುದಾದರೆ ಅಂಥ ಶಿಕ್ಷಣವು ಮನೆಯಲ್ಲಿಯೇ ಸಾಗುವುದು ಒಳಿತು, ಹೆಚ್ಚು ಪರಿಣಾಮಕರವಾದುದು.

ಇನ್ನು ಸಾರ್ವಜನಿಕ ಸಾಲೆಗಳಲ್ಲಿ ಮತಾತೀತವಾದ, ವಿಶ್ವಮಾನ್ಯವಾದ ಧರ್ಮದ ಶಿಕ್ಷಣ ಕೊಡಬೇಕು. ಅದು ಸರ್ವ ಧರ್ಮಗಳ ಸಾರವಾಗಿರುವುದು. ಮೇಲಾಗಿ ಎಲ್ಲ ಧರ್ಮೀಯರಲ್ಲಿ ಐಕ್ಯವನ್ನುಂಟು ಮಾಡುವುದು, ಎಂದೂ ಪ್ರತಿಪಾದಿಸಬಹುದು. ಆದರೆ ಇದು ಎಷ್ಟರಮಟ್ಟಿಗೆ ವ್ಯವಹಾರ್ಯವಾಗುವುದು ? ಹೇಳಲಿಕ್ಕೇನೋ ಉದಾತ್ತ ವಿಚಾರ; ಕೃತಿಯಲ್ಲಿ ಕಂಡು ಬರುವುದು ವಿಚಾರದ ವಿಪರ್ಯಾಸವೇ, ಇದು ಸ್ವಾಭಾವಿಕ. ಹೇಗೆಂದರೆ ಪ್ರತಿಯೊಬ್ಬ ಶಿಕ್ಷಕನೂ ಜನ್ಮತಃ ಒಂದು ಮತಕ್ಕೆ ಅಂಟಿಕೊಂಡೇ ಬೆಳೆದವನು, ಅವನದೇ ಆದ ಒಂದು ಮತದೃಷ್ಟಿಯುಳ್ಳವನು. ಧಾರ್ಮಿಕ ಶಿಕ್ಷಣ ಕೊಡುವಾಗ ಶಿಕ್ಷಕನು ತನ್ನ ಮತದಿಂದ ಅತೀತನಾಗಿರುವುದು ಸಾಧ್ಯವಿಲ್ಲ. ಒಂದು ವೇಳೆ ಶಿಕ್ಷಕನ ಈ ವೈಯಕ್ತಿಕ ದೋಷವು ಮಕ್ಕಳ ಮೇಲೆ ಪರಿಣಾಮವನ್ನು ಮಾಡಲಿಕ್ಕಿಲ್ಲ. ಅಂದರೂ ಈ ರೀತಿಯಿಂದ ಕೊಟ್ಟ ಧಾರ್ಮಿಕ ಶಿಕ್ಷಣವು ಕಳೆಯಿಲ್ಲದುದೂ ಪರಿಣಾಮಕರವಲ್ಲದುದೂ ಆಗುವುದು. ಇಲಿಯನ್ನು ಒಳಗೆ ಇರಗೊಟ್ಟು ಬಿಲದ ಬಾಯಿಯನ್ನು ಮಣ್ಣಿನಿಂದ ಮೆತ್ತಿದಂತಾಗುವುದು.

ಇಂಥ ನಿರುಪಯೋಗಿ ಧಾರ್ಮಿಕ ಶಿಕ್ಷಣ ನಮಗೆ ಬೇಕಾಗಿಲ್ಲ. ನಮಗೆ ಈಗ ಅವಶ್ಯವಾದುದು ಮತಗಳ ಶಿಕ್ಷಣ. ವಿದ್ಯಾರ್ಥಿಗಳ ಜೀವನದಲ್ಲಿ ನೈತಿಕ ಸಾಮರ್ಥ್ಯ, ಭಾವನೆಗಳ ಪ್ರಚೋದನೆಗಳನ್ನುಂಟು ಮಾಡುವ ಧಾರ್ಮಿಕ ಶಿಕ್ಷಣಬೇಕು. ನಿಜವಾಗಿಯೂ ವಿದ್ಯಾ

ರ್ಥಿಗಳು ನಿಜವಾದ ಹಿಂದು, ಇಸ್ಲಾಂ, ಕ್ರಿಸ್ತ, ಮತೀಯರಾಗಬೇಕು. ಆಗ ಮತಗಳು ಪ್ರಗತಿಗೆ ಅಡ್ಡಿಯನ್ನುಂಟುಮಾಡಲಾರವು.

ಧಾರ್ಮಿಕ ಶಿಕ್ಷಣದ ಗುರಿ ನಿರಿಗಳು ಹೀಗಿರುವದರಿಂದ ಸಾರ್ವಜನಿಕ ಸಾಲೆಗಳಲ್ಲಿ ಇದನ್ನು ಸಾಗಿಸಬೇಕೋ ಬೇಡವೋ ಎಂಬ ವಿಷಯವು ಚರ್ಚಾತೀತವಾಗಿದೆ. ಆದುದರಿಂದ ಮತೀಯ ಸಾಲೆಗಳಲ್ಲಿ ಆಯಾ ಮತದ ಧಾರ್ಮಿಕ ಶಿಕ್ಷಣ ಕೊಡಲಿಕ್ಕೂ, ಸಾರ್ವಜನಿಕ ಸಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗಾಗಿ ಬೇರೆಡೆಗಳಲ್ಲಿ ತಮ್ಮ ಮತಗಳಿಗೆ ಸಂಬಂಧಿಸಿದ ಶಿಕ್ಷಣ ಕೊಡಲಿಕ್ಕೂ ಅನುಮೋದನೆ ಕೊಡಬಹುದಾಗಿದೆ. ಈ ಕೆಲಸಕ್ಕೆ ಗ್ಯಾಂಟೆಡ್ ಸಂಸ್ಥೆಗಳೂ, ಧಾರ್ಮಿಕ ಸಂಸ್ಥೆಗಳೂ ಮುಂದೆ ಬಂದರೆ ಅವುಗಳನ್ನು ಅವಶ್ಯವಾಗಿ ರಾಷ್ಟ್ರೀಯ ಸರಕಾರ ಪ್ರೋತ್ಸಾಹಿಸಬೇಕು. ಮತ ಸಂಬಂಧಿಕವಾದ ಇಂಥ ವರ್ಗಗಳು ಐಕ್ಯದ ತಳಗಟ್ಟಿನ ಮೇಲೆ ನಿಲ್ಲಬೇಕು. ವಿದ್ಯಾರ್ಥಿ ಶಿಕ್ಷಕರೆಲ್ಲರ ಮೇಲೆಯೂ ನಿಜವಾದ ಧರ್ಮದ ವಾತಾವರಣ ಆವರಿಸಬೇಕು. ಇಂಥ ವರ್ಗಗಳು ಮತ ಮತಗಳಲ್ಲಿ ದ್ವೇಷ ತುಂಬುತ್ತಿದ್ದರೆ—ವೈರಸಾಧಿಸುತ್ತಿದ್ದರೆ—ಅದಕ್ಕೆ ಕಾರಣವು ಧಾರ್ಮಿಕ ಶಿಕ್ಷಣವಲ್ಲ; ಶಿಕ್ಷಣ ಕೊಡುವ ಅಸಾಧು ಪದ್ಧತಿಯು.

ದಯೆಯು ಧರ್ಮದ ಮೂಲ ಧಾರ್ಮಿಕನು ನಿಜವಾದ ಪ್ರೇಮಿಯು. ಪ್ರೇಮಿ ಸಹಿಷ್ಣುವು. ಹೀಗಿರುವುದರಿಂದ ಭಾರತದಲ್ಲಿಯ ಈ ಜಾತೀಯ ಗೊಂದಲಗಳಿಗೆಲ್ಲ ಮತಗಳು ಕಾರಣವಾಗಲಾರವು. ಇದಕ್ಕೆ ಧಾರ್ಮಿಕಶಿಕ್ಷಣದ ಕಡೆಗೆ ನಾವು ಮಾಡಿದ ಅಲಕ್ಷವೇ ನಿಜವಾದ ಕಾರಣವಾಗಿದೆ.

— ಮಿರ್ಜಿ ಅಣ್ಣಾರಾಯರು.

ಪಾಯ್ಥಗೋರಸನ ಪ್ರಮೇಯ

ಸೂಚನೆ

ನಮ್ಮ ಭಾಗದಲ್ಲಿಯ ಶಾಲೆಗಳಲ್ಲಿ ಪಾಯ್ಥೆಗೋರಸನ ಪ್ರಮೇಯ ಮತ್ತು ಕಾಟಕೋನ ತ್ರಿಕೋಣಗಳ ರಚನೆಯನ್ನು ಕಲಿಸಲಾಗುತ್ತದೆ. ಆದಾಗ್ಯೂ ಅದು ಯಾವದು ಮತ್ತು ಎಲ್ಲಿದೆಯೆಂಬುದು ಅನೇಕರಿಗೆ ಗೊತ್ತಿರುವುದಿಲ್ಲ. ಪ್ರಾಥಮಿಕ ಶಾಲಾ ಅಭ್ಯಾಸ ಪತ್ರಿಕೆಯಲ್ಲಿ ಅಂಕಗಣಿತ ವಿಷಯದಬಗ್ಗೆ ಒನೇ ಪ್ಯಾರಾದಲ್ಲಿ ಈ ವಿಷಯವು ನಿರ್ದೇಶಿಸಲ್ಪಟ್ಟಿದೆ. ಆದು ಎಲ್ಲಿ ಸಿಗುತ್ತದೆಂದು ನನ್ನನ್ನು ಅನೇಕರು ಕೇಳಿದ್ದಾರೆ. ಅವರಿಗೆಲ್ಲರಿಗೂ ಇತರ ಶಿಕ್ಷಕರಿಗೂ ನಾವು **ಶ್ರೀ. ಪಿ. ಎಸ್. ಚಂದಾವರಕರ** ಬಿ. ಎ. ಅವರಿಂದ ರಚಿತವಾದ **ಹೊಸ ಭೂಮಿತಿಯ** ಎರಡನೆಯ ಭಾಗದಲ್ಲಿ ೧೨೦—೧೦೯ ಪುಟಗಳನ್ನು ನೋಡಬೇಕೆಂದು ಸೂಚಿಸುತ್ತೇವೆ. ಈ ಪುಟಗಳಲ್ಲಿ ಇದ್ದ ಕಾಟಕೋನ ತ್ರಿಕೋನಗಳ ಪ್ರಮೇಯಕ್ಕೇ ಪಾಯ್ಥೆಗೋರಸ್ ಪ್ರಮೇಯವೆನ್ನುವರು.

ಅಭ್ಯಾಸಪತ್ರಿಕೆಯಲ್ಲಿ ಕಂಸಗಳ ನಡುವೆ ಕೊಟ್ಟ ಅಂಕಿಗಳು ಕಾಟಕೋಣ ತ್ರಿಕೋಣದ ಮೂರೂ ಭುಜಗಳ ಪ್ರಮಾಣವನ್ನು ತೋರಿಸುತ್ತವೆ. ಉದಾ:—

$$೩^೨ + ೪^೨ = ೫^೨$$

$$೫^೨ + ೧೨^೨ = ೧೩^೨$$

ಮತ್ತು $೮^೨ + ೧೫^೨ = ೧೭^೨$

— ಸಂಪಾದಕರು

ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ ೧೯೪೭

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶಿಷ್ಟಪ್ರಕಾರದ ವಿದ್ಯಾರ್ಥಿ ವೇತನಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯು ೧೯೪೭ನೇ ಇಸ್ವಿಯ ಫೆಬ್ರುವರಿ ತಿಂಗಳ ೧೦ ಮತ್ತು ೧೧ನೆಯು ತಾರೀಖುಗಳ ದಿವಸ ದಕ್ಷಿಣಭಾಗದೊಳಗಿನ ಪ್ರತಿಯೊಂದು ಜಲ್ಲಾ ಕೇಂದ್ರದಲ್ಲಿ ನಡೆಯಬೇಕೆಂದು ಗೊತ್ತಾಗಿದೆ.

ಈ ಕೆಳಗೆ ಬರೆದಷ್ಟು ಸ್ಕಾಲರಶಿಪ್ಪುಗಳು ಆಯಾ ಜಿಲ್ಲೆಗಳಲ್ಲಿ ಆಯಾ ವರ್ಗಗಳ ವಿದ್ಯಾರ್ಥಿಗಳಿಗೆ ದೊರೆಯುವವು.

ಜಿಲ್ಲೆಯ ಕೇಂದ್ರದ ಹೆಸರು	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು			
		ಮಾಧ್ಯಮಿಕ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ. ಗಳ ಬಗ್ಗೆ	ಒಟ್ಟು
ಧಾರವಾಡ	೨	೧೩	೫	೧೧	೩೧
ಬೆಳಗಾವಿ	೨	೧೩	೫	೬	೨೬
ವಿಜಾಪುರ	೨	೧೦	೫	೭	೨೪
ಕಾರವಾರ	೨	೫	೧	೩	೧೧
ಸೊಲ್ಲಾಪುರ	೨	೧೦	೫	೫	೨೨
ಒಟ್ಟು	೧೦	೫೧	೨೧	೩೨	೧೧೪

ಹಿಂದುಳಿದ ವರ್ಗಗಳ ಸ್ಕಾಲರಶಿಪ್ಪುಗಳ ಸೈಕಿ ನೂರಕ್ಕೆ ೨೦ರಷ್ಟು ಸ್ಕಾಲರಶಿಪ್ಪುಗು ಹೆಣ್ಣುಮಕ್ಕಳಿಗಾಗಿ ಕಾಯ್ದಿರಿಸಲ್ಪಟ್ಟಿವೆ. ಕಾರವಾರ ಜಿಲ್ಲೆಯ ಹಿಂದುಳಿದ ವರ್ಗಗಳ ಸ್ಕಾಲರಶಿಪ್ಪು ಒಂದು ವರ್ಷ ಒಬ್ಬ ಹುಡುಗಿಗೂ ಒಂದು ವರ್ಷ ಒಬ್ಬ ಹುಡುಗನಿಗೂ ಕೊಡಲ್ಪಡುವುದು. ೧೯೪೭ನೆಯ ವರ್ಷದ ಸ್ಕಾಲರಶಿಪ್ಪು ಹುಡುಗನಿಗೆ ಕಾಯ್ದಿರಿಸಲ್ಪಟ್ಟಿದೆ. ಮುಸಲ್ಮಾನ ವಿದ್ಯಾರ್ಥಿಗಳ ಸ್ಕಾಲರ ಶಿಪ್ಪಿನಲ್ಲಿ ಒಂದನ್ನು ಹೆಣ್ಣುಮಕ್ಕಳಿಗಾಗಿ ಕಾಯ್ದಿರಿಸಲಾಗಿದೆ.

೨. ಬೆಳಗಾಂವಿಯ ಕೇಂದ್ರದ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡವೊಂದೇ ಎಂದೂ, ಸೊಲ್ಲಾಪುರ ಕೇಂದ್ರದ ಭಾಷೆಯು ಮರಾಠಿ ಒಂದೇ ಎಂದೂ ಗೊತ್ತಾಗಿದೆ. ಅದರೆ ಮುಸಲ್ಮಾನ ಉಮೇದವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಮತ್ತು ಉರ್ದು ಭಾಷೆಯು ಅವರ ಪ್ರಾಂತಿಕ ಭಾಷೆಯೆಂದು ತಿಳಿಯಲಾಗಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಾಗಿರುವ ಒಂದು ಕಮಿಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಯುವುದು. ಎ. ಕೆ. ಗರ್ಲ್ಸ್ ಹೈಸ್ಕೂಲಿನ ಹೆಡ್ ಮಿಸ್ಟ್ರೆಸರು ಧಾರವಾಡ ಜಿಲ್ಲಾ-ಕೇಂದ್ರದ ಅಧ್ಯಕ್ಷರು.

೪. ಪರೀಕ್ಷೆಗೆ ಕೂತ್ರಲಿಚ್ಛಿಸುವ ಉಮೇದಾರರು ತಮ್ಮ ಅರ್ಜಿಗಳನ್ನು ಮುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೬ನೆಯ ಇಸ್ವಿಯ ಜನವರಿ ತಿಂಗಳ ೫ನೆಯ ತಾರೀಖಿನ ಒಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಈ ಅರ್ಜಿಯ ನಮೂನೆಗಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮೀಟಿಯ ಅಧ್ಯಕ್ಷರಿಗೆ ಅರ್ಜಿ ಮಾಡಿಕೊಂಡು ಅನುಮತಿ ತರಿಸಿಕೊಳ್ಳಬಹುದು. ಅರ್ಜಿಯ ಸಂಗಡಲೇ ೧ ರೂ. ಫೀಯನ್ನೂ ಕಳುಹಿಸಲೇಬೇಕು ಅರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಅಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀ ಹಣವೂ ಅಧ್ಯಕ್ಷರಿಗೆ ಮುಟ್ಟಲೇ ಬೇಕು. ಆ ತಾರೀಖನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯು ಹಣವನ್ನು ಸ್ವೀಕರಿಸಲಿಕ್ಕಿಲ್ಲ. **ಹಿಂದುಳಿದ ವರ್ಗಗಳ ಉಮೇದವಾರರು ಫೀ ಕೊಡುವ ಕಾರಣವಿಲ್ಲ.** ಉಳಿದ ನಿಯಮಗಳು ಮೊದಲಿನಂತೆ ಇವೆ.

ಮಿಡಲ್ ಸ್ಕೂಲ್ ಹಾಗೂ ಹೈಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ (೧೯೪೬)

ಕಾರ್ಯಕ್ರಮ

ಸೋಮವಾರ ತಾ. ೧೦-೨-೧೯೪೬ನೆಯ ದಿನ ೧೧॥ ಯಿಂದ ೧೨॥ ವರೆಗೆ ಅಂಕಗಣಿತ; ೧॥ ಯಿಂದ ೨-೧೫ರ ವರೆಗೆ ಸಾಮಾನ್ಯವಿಜ್ಞಾನ (೧ನೆಯ ಕಾಗದ); ೩ ರಿಂದ ೩-೪೫ರ ವರೆಗೆ ಸಾಮಾನ್ಯ ವಿಜ್ಞಾನ (೨ನೆಯ ಕಾಗದ). ಮಂಗಳವಾರ ತಾ.೧೧-೨-೧೯೪೬ನೆಯ ದಿನ ೨ರಿಂದ ೨-೪೫ರ ವರೆಗೆ ಪ್ರಾಂತಿಕಭಾಷೆ (೧ನೆಯ ಕಾಗದ); ೪ ರಿಂದ ೪ ೪೫ರ ವರೆಗೆ ಪ್ರಾಂತಿಕಭಾಷೆ (೨ನೆಯ ಕಾಗದ).

ಹೈಸ್ಕೂಲು ಸ್ಕಾಲರಶಿಪ್ ಪರೀಕ್ಷೆಯು ಗುರುವಾರ ೬-೨-೧೯೪೬ರಿಂದ ಶನಿವಾರ ೮-೨-೧೯೪೬ ೫॥ ಗಂಟೆಯವರೆಗೆ ನಡೆಯುವುದು.

ದಕ್ಷಿಣ ಭಾಗದ
ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ,
ಧಾರವಾಡ ೬ನೆಯ ಡಿಸೆಂಬರ ೧೯೪೬

(ಸಹಿ) P. B. DESAI
ದಕ್ಷಿಣಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರ್
ಅವರ ಪರವಾಗಿ.

ಟ್ರೇನಿಂಗ್ ಕಾಲೇಜುಗಳ ಚಟುವಟಿಕೆಗಳು

ಗಂಡು ಮಕ್ಕಳ ಟ್ರೇನಿಂಗ್ ಕಾಲೇಜ್, ಧಾರವಾಡ

ತಾ॥ ೧೦—೮—೪೬ನೆಯ ದಿನ ಶ್ರೀಮಾನ್. ಎಸ್. ಆರ್. ಕಂಠಿ ಎಮ್. ಎಲ್. ಎ. ಪಾರ್ಲಿಮೆಂಟರಿ ಸೆಕ್ರೆಟರಿ ಅವರು 'ಕರ್ನಾಟಕದ ಯೋಜನೆ'ಯನ್ನು ಕುರಿತು ಭಾಷಣ ಮಾಡಿದರು. ಪ್ರಿನ್ಸಿಪಾಲ ಜೋಶಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು

ತಾ|| ೧೭—೪—೪೯ನೆಯ ದಿನ ಕಾಲೇಜದ ಚಟುವಟಿಕೆಯ ಭಾಗವಾಗಿ ಶಿ. ವಿದ್ಯಾರ್ಥಿಗಳ ವಾದವಿವಾದವನ್ನು ಏರ್ಪಡಿಸಲಾಗಿತ್ತು. "ಪ್ರಾಥಮಿಕ ಶಿಕ್ಷಣವು ಸ್ವಾವಲಂಬಿಯುಳ್ಳದಾಗಬೇಕು" ವೆಂಬುದು ವಿಷಯವಾಗಿತ್ತು. ಬಹುಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಷಯವು ಬಿದ್ದುಹೋಯಿತು.

ತಾ|| ೧೭—೪—೪೯ನೆಯ ದಿನ ಕಾಲೇಜದ ಅಧ್ಯಾಪಕರಲ್ಲೊಬ್ಬರಾದ ಶ್ರೀಮಾನ್ ಇಂಚಲ್ಕರಂಜಿ ಬಿ. ಎ. ಬಿ. ಟಿ. ಯವರು ''ಕರ್ನಾಟಕ ಏಕೀಕರಣವ''ನ್ನು ಕುರಿತು ಭಾಷಣ ಮಾಡಿದರು.

ತಾ|| ೨೦—೪—೪೯ನೆಯ ದಿನ ಶ್ರೀಯುತ ವ್ಹಿ. ಬಿ. ನಾಯಿಕ ಎಂ. ಎ. ಅವರು "ಶಿಕ್ಷಣದಲ್ಲಾಗಲಿರುವ ಕ್ರಾಂತಿ"ವೆಂಬುದನ್ನು ಕುರಿತು ಮಾತನಾಡಿದರು. ಮುಖ್ಯಾಧ್ಯಾಪಕರಾದ ಶ್ರೀ. ಜೋಶಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ತಾ|| ೨—೧೨—೪೯ನೆಯ ದಿನ ಕೊಲ್ಲಾಪುರ ಸನಸ್ಥಾನದ ಶಿಕ್ಷಣ ಕಾರ್ಯದರ್ಶಿಗಳಾದ ಶ್ರೀ. ನಾಯಿಕ ಅವರು ಶಿಕ್ಷಕರು ಸಂಶೋಧಕರಾಗಬೇಕೆಂಬ ಬಗ್ಗೆ ಮಾತನಾಡಿದರು.



ಕಾಶಿ ಹಿಂದೂ ವಿಶ್ವವಿದ್ಯಾಲಯದ ಸ್ಥಾಪಕರಾದ ಪಂಡಿತ ಮದನ ಮೋಹನ ಮಾಲವೀಯವರ ನಿಧನದ ಬಗ್ಗೆ ಶೋಕ ಪ್ರದರ್ಶನ ಸಭೆಯಾಯಿತು.

ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ್ ಧಾರವಾಡ

ತಾ|| ೨–೧೦–೪೯ನೆಯ ದಿನ ಶಿಕ್ಷಕರೂ ಶಿಕ್ಷಕ-ಶಿಕ್ಷಿಕೆಯರೂ, ಶಿಕ್ಷಿಕೆ ವಿದ್ಯಾರ್ಥಿನಿಯರೂ, ಹಾಗು ಪ್ರಾಕ್ಟೀಸಿಂಗ ಸ್ಕೂಲಿನ ಶಿಕ್ಷಿಕೆಯರೂ, ವಿದ್ಯಾರ್ಥಿನಿಯರೂ ಗಾಂಧಿ ಜಯಂತಿಯನ್ನು ಆಚರಿಸಿದರು. ಶ್ರೀ. ಟಿ. ಕೆ. ಪಾಟೀಲರು (ಸಂ. ಕ. ಕೃಪೆಯಿಂದ ಮಾಹಾತ್ಮಾಜಿ ಅವರು-ಇಡೀ ಮಾನವ ಕಲ್ಯಾಣಕ್ಕೆ ಸಲ್ಲಿಸಿದ ಸೇವೆ, ನಾಡಿಗಾಗಿ ಮಾಡಿದ ತ್ಯಾಗ, ರಾಷ್ಟ್ರಕ್ಕಾಗಿ ಕೈಕೊಂಡ ಅವರ ಅದ್ಭುತ ಕಾರ್ಯ-ಮುಂತಾದ ವಿಚಾರಗಳನ್ನು ಎತ್ತಿ ಮಹಾತ್ಮಾ ಗಾಂಧಿ ಅವರ ಜೀವನ ಚರಿತ್ರೆಯನ್ನು ಹೇಳಿದರು. ಮೆ! ಲೇಡೀ ಸುಪರಿಂಟೆಂಡಂಟರವರು ಹಿರಿತನ ವಹಿಸಿದ್ದರು.

ಪ್ರೋತ್ಸಾಹನೆಗಾಗಿ

ಹೆಣ್ಣಿನ ಹಾಡಿ

ತಂಗಿ ಬೀಸೋಣ ತಂಗಿ ಬೀಸೋಣ । ಈ ಸಂಸಾರ ಸಾಗರ ಈಸೋಣ ॥ ಪ ॥

ಮಾಂಗಲ್ಯ ಧಾರಣ ಮಾಡೋಣ । ಹಣೆಯಲಿ ಕುಂಕುಮ ಧರಿಸೋಣ ।
ಅತ್ತೆಯ ಮನೆಯುದಾರಿ ಹಿಡಿಯೋಣ । ಪತಿಗೆ ಸತಿಯಾಗಿರೋಣ ॥ ೧ ॥

ಅತ್ತೆ ಮಾವರ ಮಾನ ಕಾಯೋಣ । ಭಾವ ಮೈದುನರ ಪ್ರೀತಿಗಳಿಸೋಣ ।
ಪತಿಯಲಿ ಭಕ್ತಿಯ ಇರಿಸೋಣ । ಕುಲಕೋಟಿ ಉದ್ಧರಿಸೋಣ ॥ ೨ ॥

ಶಿವ ಶಿವ ನಾಮವ ನೆನೆಯೋಣ । ದೇಶಾಭಿಮಾನ ಹಿಡಿಯೋಣ ।
ಕನ್ನಡಕಾಗಿ ದುಡಿಯೋಣ । ಬಿಡುಗಡೆ ಭಾರತ ಪಡೆಯೋಣ ॥ ೩ ॥

ಕನ್ನಡ ಕವನವ ಬರೆಯೋಣ । ನಾಡದೇವಿಯ ಜೋಗುಳ ಹಾಡೋಣ ।
ಹಿಂದಿನತಿರುಳನು ತಿಳಿಸೋಣ । ಹುರುಪನು ತುಂಬಿಸಿ ನಡೆಯೋಣ ॥ ೪ ॥

— ಕೋತಿವಾಲೆ ಮಲ್ಲಪ್ಪ

೨ನೆಯವರ್ಷ ಶಿ. ವಿ. ಕೆ. ಗಂ. ಮ. ಟ್ರೇ. ಕಾ. ಧಾರವಾಡ

ಸೇವಾನಿವೃತ್ತ

ಪ್ರಿನ್ಸಿಪಾಲ ಬೈಚವಾಳರು

ಪ್ರಿನ್ಸಿಪಾಲ್ ಬೈಚವಾಳ ಶ್ರೀನಿವಾಸರಾಯರು ಹಿರೇಹಾಳ ಗ್ರಾಮದಲ್ಲಿ ೧೮೯೩ರಲ್ಲಿ ಹುಟ್ಟಿದರು. ಗದುಗಿನಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನೂ ಇಂಗ್ಲಿಷ್ ಐದನೇ ಇಯತ್ತೆಯ ಶಿಕ್ಷಣವನ್ನೂ ಮುಗಿಸಿಕೊಂಡು ಧಾರವಾಡ ಹೈಸ್ಕೂಲನ್ನು ಸೇರಿದರು. ೧೯೦೭-ಲರಲ್ಲಿ ಒಳ್ಳೆಯ ರೀತಿಯಾಗಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ತಮ್ಮ ಜ್ಞಾನದ ಹಸಿವನ್ನು ಹಿಂಗಿಸಿಕೊಳ್ಳುವುದಕ್ಕಾಗಿ ೧೯೧೦ರಲ್ಲಿ ಪುಣೆಯ ಫರ್ಗ್ಯೂಸನ್ ಕಾಲೇಜನ್ನು ಸೇರಿದರು. ಕಾಲೇಜಿನಲ್ಲಿರುವಾಗ ಅಲ್ಲಿಯ ಆಂಗ್ಲ ಭಾಷೆಯ ಪ್ರೊಫೆಸರರಾದ ಶ್ರೀಮಾನ್ ರಾಜವಾಡೆಯವರ ಅತ್ಯಂತ ಪ್ರೀತಿಗೆ ಪಾತ್ರರಾದರು. ಕಾಲೇಜದ ಪಠ್ಯೇತರ ಚಟುವಟಿಕೆಗಳಲ್ಲಿಯೂ ಒಳ್ಳೆಯ ಹೆಸರು ಪಡೆದಿದ್ದರು. ಇವರು ಈಸುವುದರಲ್ಲಿ ತೋರಿಸುವ ನೈಪುಣ್ಯವನ್ನು ಕಂಡು ಮಹಾರಾಷ್ಟ್ರದವರಿಗೆ ಆಶ್ಚರ್ಯವಾಗುತ್ತಿತ್ತು. ಫುಟ್‌ಬಾಲ್ ಆಟದಲ್ಲಿ ಇವರು ಚಾಂಪಿಯನ್ನರಾಗಿದ್ದರು. ಇವರ ಆಟ ಪ್ರೇಕ್ಷಣೀಯವಾಗಿರುತ್ತಿತ್ತು. ಇವರು ಚಂಡನ್ನು ಹೊಡೆಯುವಾಗ ನಾ ನೀ ಎನ್ನುವ ಆಟಗಾರರು ಅಂಜಿ ದೂರ ಸರಿಯುತ್ತಿದ್ದರು. ಅಂಗ ಸಾಧನೆಯಲ್ಲೂ ಇವರದು ಮೇಲುಗೈ. ಕುಸ್ತಿ ಆಡುವುದರಲ್ಲಿಯೂ ಪ್ರಾವೀಣ್ಯತೆ ಪಡೆದವರು. ಹೀಗೆ ಕಾಲೇಜದಲ್ಲಿ ನಾಲ್ಕು ವರ್ಷಗಳವರೆಗೆ ಕೆನ್ನಡಿಗರ ಕೀರ್ತಿಯನ್ನು ಬೆಳಗಿ ೧೯೧೪ರಲ್ಲಿ ಇಂಗ್ಲಿಷ್ ಮತ್ತು ಪಾಲಿ ತೆಗೆದುಕೊಂಡು ಇಂಗ್ಲಿಷಿನಲ್ಲಿ ಆನರ್ಸ ಸಂಪಾದಿಸಿ ಬಿ. ಎ. ಆದರು. ಕೂಡಲೆ ಧಾರವಾಡ ಹೈಸ್ಕೂಲಿನಲ್ಲಿ ಅಸಿಸ್ಟಂಟ್ ಶಿಕ್ಷಕರ ಸ್ಥಾನವು ಸಿಕ್ಕಿತು. ಯಾವ ಸಾಲೆಯಲ್ಲಿ ಕಲಿತಿದ್ದರೊ ಅದೇ ಶಾಲೆಗೆ ಶಿಕ್ಷಕರಾಗಿ ನಿಯಮಿಸಲ್ಪಟ್ಟದ್ದರಿಂದ ಇವರ ಹುರುಪಿಗೆ ಪುಟಕೊಟ್ಟಂತಾಯಿತು. ಧಾರವಾಡ ಹೈಸ್ಕೂಲಿನಲ್ಲಿ ಕೆಲಸ ಮಾಡುತ್ತಿರುವಾಗ ಸೇವಾನಿವೃತ್ತ ಪ್ರಿನ್ಸಿಪಾಲ ತೊರಗಲ್ ಹಾಗೂ ಪ್ರಿನ್ಸಿಪಾಲ ಉಮಡಿ ಇವರ ಕೂಡ ಕಾವ್ಯ ಅಭ್ಯಾಸವೂ ಇತಿಹಾಸ ಮತ್ತು ಅರ್ಥಶಾಸ್ತ್ರ ತೆಗೆದುಕೊಂಡು ಎಂ. ಎ. ಪರೀಕ್ಷೆಯಲ್ಲಿ ೧೯೧೬ರಲ್ಲಿ ತೇರ್ಗಡೆ

ಹೊಂದಿದರು. ಬುದ್ಧಿವಂತರಲ್ಲಿ ತಮ್ಮ ವೈಶಿಷ್ಟ್ಯಪೂರ್ಣವಾದ ಕುಶಾಗ್ರ ಬುದ್ಧಿಯನ್ನು ಇವರು ತೋರಿಸಿಯೆ ಬಿಡುತ್ತಿದ್ದರು. ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದಾಗ್ಯೂ ಇಂಗ್ಲಿಷ್ ಮತ್ತು ಇತಿಹಾಸ ವಿಷಯಗಳು ಇವರಿಗೆ ಹೆಮ್ಮೆಯ ವಿಷಯಗಳಾಗಿದ್ದವು. ೧೯೧೯ರಲ್ಲಿ ಸೆಕೆಂಡರಿ ಟೀಚರ್ಸ್ ಕಾಲೇಜಕ್ಕೆ ಕಳಿಸಲ್ಪಟ್ಟರು. ಅಲ್ಲಿಯೂ ತಮ್ಮ ಕನ್ನಡತನವನ್ನು ತೋರಿಸುತ್ತ ತಮ್ಮ ಶಿಕ್ಷಣದ ನೈಪುಣ್ಯವನ್ನು ತೋರಿಸಿ ಆಗಿನ ಬಿ. ಟಿ. ಪರೀಕ್ಷೆಗೆ ಸಮಾನವೆಂದು ಎಣಿಸಲ್ಪಟ್ಟ ಎಸ್. ಟಿ. ಸೀ. ಡ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಬಳಿಕ ಬೆಳಗಾಂವಿಗೆ ವರ್ಗಾಯಿಸಲ್ಪಟ್ಟು, ನಂತರ ೧೯೨೧ರಲ್ಲಿ ಕಾರವಾರಕ್ಕೆ ವರ್ಗಾಯಿಸಲ್ಪಟ್ಟರು. ಇಂಗ್ಲೀಷ್ ಭಾಷೆಯ ಮೇಲಿನ ಇವರ ಪ್ರಭುತ್ವ ನೋಡಿ ಸರಕಾರದವರು ಇವರನ್ನು ಕರ್ನಾಟಕ ಕಾಲೇಜಿನ ಇಂಗ್ಲಿಷ್ ಪ್ರೊಫೆಸರರನ್ನಾಗಿ ನಿಯಮಿಸಿದರು. ಅನಂತರ ಪುನಃ ಇವರು ಕಾರವಾರ ಹೈಸ್ಕೂಲಿಗೆ ಹೋಗಬೇಕಾಯಿತು. ಅಲ್ಲಿಂದ ಪುನಃ ೧೯೩೬ರಲ್ಲಿ ಧಾರವಾಡ ಹೈಸ್ಕೂಲಿಗೆ ಬಂದರು. ಧಾರವಾಡ ಹೈಸ್ಕೂಲು ಗರ್ಲ್ಸ್ ಹೈಸ್ಕೂಲಾಗುವವರೆಗೆ ಅಲ್ಲಿದ್ದು ನಂತರ ಕನ್ನಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿಗೆ ಬಂದರು. ಪ್ರಿನ್ಸಿಪಾಲ್ ಉಮಡಿಯವರ ನಂತರ ಪ್ರಿನ್ಸಿಪಾಲರಾದರು. ಇವರಿಗೆ ಸಂಧಿವಾತವಿದ್ದುದರಿಂದ ೫೫ವರ್ಷಗಳಾಗುವ ಪೂರ್ವದಲ್ಲಿ ೧೫ ವರ್ಷ ಮೊದಲೇ ನಿವೃತ್ತರಾದರು.

ಇವರು ಉತ್ತಮ ಮೇಧಾವಿಗಳಾಗಿದ್ದು ಶಿಕ್ಷಣ ಶಾಸ್ತ್ರವೆಂಬ ಮನನೀಯವಾದ ತಮ್ಮ ಅನುಭವ ಬೆರೆಯಿಸಿದ ಉತ್ತಮ ಪುಸ್ತಕವನ್ನು ಬರೆದಿದ್ದಾರೆ. 'ಶಿಕ್ಷಣಕಲೆ' ಎಂಬ ಇವರ ಪುಸ್ತಕವು ಇನ್ನೂ ಅಚ್ಚಿನಲ್ಲಿ ಇದೆ. ಆಗಾಗ್ಗೆ ಶೈಕ್ಷಣಿಕ ಮಾಸಿಕ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಇವರ ಸ್ವಭಾವ ತುಸು ಚುರುಕು ಇದ್ದರೂ ಹೃದಯ, ಮನಸ್ಸು ಒಳ್ಳೇ ಕೋಮಲವಾಗಿದ್ದವು. ತಮ್ಮ ಕೈಯೊಳಗಿನ ಶಿಕ್ಷಕರ ಮೇಲಂತೂ ಪಂಚಪ್ರಾಣ. ವಿದ್ಯಾರ್ಥಿಗಳು ಯಾವುದೇ ತಪ್ಪು ಮಾಡಿದರೂ ದೊಡ್ಡಮನಸ್ಸಿನಿಂದ ಕ್ಷಮಿಸುತ್ತಿದ್ದರು. ಕೈಯಲ್ಲಿ ಬೇಕಾದಷ್ಟು ಅಧಿಕಾರವಿದ್ದರೂ ಇವರು ಯಾರಿಗೂ ಕೆಡಕು ಮಾಡಲಿಲ್ಲ. ಇವರಿಗೆ ಬೇಗನೆ ಶರೀರ ಸ್ವಾಸ್ಥ್ಯವು ಲಭಿಸಲೆಂದೂ ಇವರಿಂದ ಶೈಕ್ಷಣಿಕ ಗ್ರಂಥಗಳು ಬೇಗ ಬೆಳಕು ಕಂಡು ಕರ್ನಾಟಕದ ಶಿಕ್ಷಕರ ಕೈಗೆ ಸೇರಲೆಂದೂ ಹಾರೈಸುತ್ತೇವೆ. ಅಲ್ಲದೆ ಪ್ರಾಪಂಚಿಕ ಕಷ್ಟ ನಷ್ಟಗಳು ಎಷ್ಟೇ ಇದ್ದರೂ ಪ್ರಕೃತಿ ಎಷ್ಟೇ ಅಸ್ವಸ್ಥವಿದ್ದರೂ ಇವರ ಉಲ್ಲಸಿತವೃತ್ತಿ ಎಂದೂ ಕಡಿಮೆಯಾಗಿದ್ದಿಲ್ಲ. ಈ ಉಲ್ಲಸಿತ ವೃತ್ತಿ ಶಿಕ್ಷಕರಿಗೆ ಕೈದೀಪವಾಗಲೆಂದು ಹಾರೈಸುತ್ತೇವೆ.

(ಬ್ಲಾಕು ಸಂಯುಕ್ತ ಕರ್ನಾಟಕದ ಕೃಪೆಯಿಂದ)

ಪತ್ರದ ಪ್ರವಾಸ

ಹೊತ್ತಿಗೆ ಸರಿಯಾಗಿ ನಮ್ಮ ಮನೆಗೆ ಕಾಗದ ಪತ್ರಗಳು ಪ್ರವಾಸಮಾಡಿ ಬರುವುದನ್ನು ನೋಡಿದರೆ ಅಂಚೆ ಕಚೇರಿಯ ಆಡಳಿತದ ಬಗ್ಗೆ ನಮಗೆ ಅಚ್ಚರಿಯಾಗುತ್ತದೆ. ಎಲ್ಲರಿಗಿಂತ ಹೆಚ್ಚಾಗಿ ನಾವು ಅಂಚೆಯಾಳಿನ ದಾರಿಯನ್ನು ಕಾಯುತ್ತಿರುತ್ತೇವೆ. ಏಕೆಂದರೆ ಅವನು ನಮಗೆ ನಮ್ಮ ಪ್ರಿಯಜನರ, ಆಪ್ತರೇಷ್ಟರ ಪತ್ರಗಳನ್ನೂ ಸುಂದರ ಮನೋಹರ ಮಾಸ-ವಾರ ದೈನಿಕ ಪತ್ರಿಕೆಗಳನ್ನೂ ತಂದುಕೊಟ್ಟು ನಮ್ಮನ್ನು ಆನಂದೋದಧಿಯಲ್ಲಿ ತೇಲಾಡಿಸುವನು. ಒಮ್ಮೊಮ್ಮೆ ಕಾಗದ ಪತ್ರಗಳು ಕಪ್ಪು ಜನರಿಗೆ ಕೊಡಲ್ಪಡುತ್ತವೆ. ಅದರಿಂದಾಗಿ ನಮಗೆ

ಆಗಬೇಕಾದ ಆನಂದವು ತಡಮಾಡಿ ಆಗುವುದರಿಂದ ಆನಂದದ ಸ್ವಾರಸ್ಯವು ಇಲ್ಲದಂತಾಗುವುದು. ಏಕೆಂದರೆ ನಾವು ವಿಳಾಸವನ್ನು ಸರಿಯಾಗಿ, ಸುಂದರವಾಗಿ, ಸ್ಪಷ್ಟವಾಗಿ ಬರೆಯುವುದಿಲ್ಲ. ನಿಷ್ಕಾಳಜಿಯಿಂದ ವಿಳಾಸವನ್ನು ಬರೆಯುತ್ತೇವೆ.

ವಿಳಾಸವು ಅಂಚೆಯಾಳಿಗೆ ಸರಿಯಾಗಿ ತಿಳಿಯುವಂತಿರಬೇಕು. ವಿಳಾಸವು ಸರಿಯಾಗಿ ಸುಂದರವಾಗಿ ಬರೆಯಲ್ಪಟ್ಟರೆ ಪತ್ರಗಳನ್ನೂ ಪಾರ್ಸಲುಗಳನ್ನೂ ಮನಿಯಾರ್ಡರನ್ನೂ ಪಡೆಯತಕ್ಕವರಿಗೆ ಸಮಯಕ್ಕೆ ಸರಿಯಾಗಿ ಮುಟ್ಟಿಸಲು ಅಂಚೆ ಕಚೇರಿಗೆ ಸಾಧ್ಯವಾಗುವುದು. ವಿಳಾಸವನ್ನು ಸರಿಯಾಗಿ ಸ್ಪಷ್ಟವಾಗಿ ಪೂರ್ಣವಾಗಿ ಬರೆಯದೆ ಹೋದಲ್ಲಿ ಕಾಗದ-ಪತ್ರ ಮುಂತಾದವುಗಳನ್ನು ಪಡೆಯತಕ್ಕವನನ್ನು ಅಂಚೆಯಾಳು ಹುಡುಕುತ್ತ ಅಲೆಯಬೇಕಾಗುವುದು. ಇದರಿಂದ ಜನತೆಗೇ ತೊಂದರೆಯಾಗುವುದು. ಆದುದರಿಂದ ವಿಳಾಸವನ್ನು ಸರಿಯಾಗಿ ಬರೆಯಬೇಕಾಗುವುದು. ಒಂದೇ ಹೆಸರಿನ ಇಬ್ಬರು ವ್ಯಕ್ತಿಗಳು ಇದ್ದಾಗ ಅವರ ಉದ್ಯೋಗವನ್ನೂ ವಿಳಾಸದಲ್ಲಿ ಬರೆಯುವುದು ವಿಹಿತವಾದುದು. ವಿಳಾಸ ಬರೆಹದ ಒಂದು ಮಾದರಿಯನ್ನು ಕೆಳಗೆ ಕೊಟ್ಟಿದೆ:—

ಶ್ರೀ. ಗಂಗಾರಾಮ,
ಪೋಲೀಸ ಕಾನ್‌ಸ್ಟೇಬಲ್
೧೨, ಹನುಮಾನ್ ರೋಡ್
ನಸಿರಾಬಾದ (ರಾಜಪುತಾನಾ)

ಹೀಗೆ ಸ್ಪಷ್ಟವಾಗಿ ಬರೆದರೆ ಅಂಚೆಯಾಳಿಗೆ ಪತ್ರ ಮುಂತಾದವುಗಳನ್ನು ಅರಿಸಿಕೊಳ್ಳಲಿಕ್ಕೆ, ಪತ್ರಗಳನ್ನು ಪಡೆಯತಕ್ಕವರು ಪರಊರಿಗೆ ಹೋದಲ್ಲಿ ಅವರ ವಿಳಾಸದನ್ನು ಸರಿಪಡಿಸಿ ಅವರು ಹೋದ ಊರಿಗೆ ಕಳಿಸಲಿಕ್ಕೂ ಅನುಕೂಲವಾಗುವುದು. ಆದುದರಿಂದ ನಿಮ್ಮ ಕಾಗದ ಪತ್ರ ಮುಂತಾದವು ನಿಮ್ಮ ಜನರಿಗೆ ಸರಿಯಾಗಿ ಮುಟ್ಟಬೇಕಾಗಿದ್ದರೆ ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು:—

೧. ಅಂಚೆಯ ವೆಚ್ಚವನ್ನು ಪೂರ್ಣವಾಗಿ ಕೊಡಿರಿ. ಪೂರ್ಣ ಅಂಚೆಯ ಮಹಸೂಲನ್ನು ಕೊಟ್ಟು ಪತ್ರ ಮುಂತಾದವುಗಳನ್ನು ಕಳಿಸಿರಿ. ಅಂಚೆಯ ಮಹಸೂಲು ಕೊಡದೆ (ಅನ್‌ಪೇಡ್) ಪತ್ರಾದಿಗಳನ್ನು ಕಳಿಸಿದರೆ ನಿಮ್ಮ ಸ್ನೇಹಿತರು ನಿಮಗೆ ಉತ್ತರವೀಯುವದನ್ನು ಬಿಟ್ಟೇ ಬಿಡಬಹುದು.

೨. ವಿಳಾಸವನ್ನು ಸೀಸಕಡ್ಡಿಯಿಂದ ಅಸಡ್ಡೆಯಾಗಿ ಬರೆಯಬೇಡಿರಿ. ಮಸಿಯಿಂದ ಸುಂದರವಾಗಿ ಸ್ಪಷ್ಟವಾಗಿ ಬರೆಯಿರಿ.

೩. ಈ ಕ್ರಮದಿಂದ ಪೂರ್ಣ ವಿಳಾಸ ಬರೆಯಿರಿ—

ಮೊದಲು ಪಡೆಯತಕ್ಕವನ ಪೂರ್ಣ ಹೆಸರು, ನಂತರ ಅವನ ಉದ್ಯೋಗ, ನಂತರ ಅವನು ಇರತಕ್ಕ ಮನೆಯ ನಂಬರು ಅಥವಾ ಹೆಸರು, ನಂತರ ಬೀದಿ, ನಂತರ ಊರು, ನಂತರ ಪೋಸ್ಟ ಆಫೀಸಿನ ಊರು, ನಂತರ ಜಿಲ್ಲೆ, ನಂತರ ಪ್ರಾಂತ. ಊರಿನ ಹೆಸರು ಧಾರಾಳಿಗಿ, ಎದ್ದು ಕಾಣುವಂತೆ ಬರೆಯಬೇಕಾದುದು ಅತ್ಯಗತ್ಯವಾದುದು, ಮಹತ್ವ ಪೂರ್ಣವಾದುದು. ಅವಶ್ಯವೆನಿಸಿದಲ್ಲಿ ಪ್ರಾಂತದ ಹೆಸರನ್ನೂ ಬರೆಯಬಹುದು.

೪. ಪೋಸ್ಟ ಆಫೀಸಿನ ಊರಿನ ಹೆಸರನ್ನು ದಪ್ಪವಾದ ಅಕ್ಷರಗಳಲ್ಲಿ ಬರೆಯಿರಿ. ಇದರಿಂದ ಪತ್ರಗಳನ್ನು ವಿಂಗಡಿಸಿ ಆರಿಸಿ ಕಳಿಸಲು ಅನುಕೂಲವಾಗುವುದು.

೫. ವಿಳಾಸವನ್ನು ಕ್ರಮದಿಂದ ಬರೆಯುವಾಗ ಸಾಲುಗಳ ನಡುವೆ ಸಾಕಷ್ಟು ಸ್ಥಳವನ್ನು ಬಿಡಿರಿ. ಇದರಿಂದ ಪತ್ರಾದಿಗಳನ್ನು ಪಡೆಯತಕ್ಕವನು ಪರಸ್ಥಳಕ್ಕೆ ಹೋಗಿದ್ದರೆ ಆ ಸ್ಥಳದ ವಿಳಾಸವನ್ನು ಬರೆಯಲು ಅನುಕೂಲವಾಗುವುದು.

೬. ಪತ್ರಾದಿಗಳನ್ನು ಅಂಚೆಯ ಪೆಟ್ಟಿಗೆಯಲ್ಲಿ ಹಾಕುವ ಮೊದಲು ಅದಕ್ಕೆ ತಗಲುವ ಅಂಚೆಯ ತಿಕೀಟುಗಳನ್ನು ಸರಿಯಾಗಿ ಪೂರ್ಣವಾಗಿ ಹಚ್ಚಿದೆಯೊ ಇಲ್ಲವೊ ಎಂಬುದನ್ನೂ ವಿಳಾಸವನ್ನು ಸರಿಯಾಗಿ ಬರೆದಿದೆಯೊ ಇಲ್ಲವೆಂಬುದನ್ನೂ ಪಾಕೀಟು ಸರಿಯಾಗಿ ಮುಚ್ಚಲ್ಪಟ್ಟಿದೆಯೊ ಇಲ್ಲವೊ ಎಂಬುದನ್ನೂ ನೋಡಿರಿ; ನಂತರ ಅಂಚೆ ಪೆಟ್ಟಿಗೆಯಲ್ಲಿ ಪತ್ರಾದಿಗಳನ್ನು ಹಾಕಿರಿ. *

---

* ಈ ವಿಷಯವನ್ನು ಮುಂಬಯಿ ವಿದ್ಯಾಖಾತೆಯ ಡೈರೆಕ್ಟರರು ಪ್ರತಿಯೊಂದು ಸಾಲೆಯಲ್ಲಿ ವಿದ್ಯಾರ್ಥಿಗಳಿಗೆ ಕಲಿಸಬೇಕೆಂದು ತಿಳಿಸುತ್ತಾರೆ. ಅದುದರಿಂದ ಶಿಕ್ಷಕರು ಈ ವಿಷಯವನ್ನು ವಿದ್ಯಾರ್ಥಿಗಳಿಗೂ ಹಳ್ಳಿಗರಿಗೂ ಕಲಿಸಬೇಕೆಂದು ಸೂಚಿಸುತ್ತೇವೆ.

— ಸಂಪಾದಕರು

ವರ್ಗಾವರ್ಗಿಯ ಸುದ್ದಿಗಳು

೧೯೪೬ ಅಕ್ಟೋಬರ, ನವಂಬರ, ಡಿಸೆಂಬರ ತಿಂಗಳುಗಳಲ್ಲಿ ಆದ ವರ್ಗಾವರ್ಗಿಯ ಸುದ್ದಿಗಳು ಇಂತಿವೆ:—

ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮೆ। ಪಿ. ಎನ್. ಸಾನೆ ಸಾಹೇಬರು ಕಾಯಿಲೆಯಿಂದ ಗುಣಹೊಂದಿ ತರುಗಿ ಬಂದು ತಮ್ಮ ಅಧಿಕಾರ ಸೂತ್ರವನ್ನು ಕೈಗೆ ತೆಗೆದುಕೊಂಡರೆಂದು ತಿಳಿಸಲು ಸಂತೋಷವೆನಿಸುತ್ತದೆ. ಶ್ರೀಮಾನ್. ಪಿ. ಬಿ. ದೇಸಾಯಿ ಅವರು ತಮ್ಮ ಪಿ. ಎ. ಸ್ಥಳವನ್ನು ಪುನಃ ಅಲಂಕರಿಸಿದರು.

ಶ್ರೀ ಕೆಜರಗಿ ಅವರು ಧಾರವಾಡ ಜಿಲ್ಲೆಯ ಹೆಡ್ ಡೆಪ್ಯುಟಿಯ ಅಧಿಕಾರವನ್ನು ಸ್ವೀಕರಿಸಿದರು. ಮತ್ತು ಶ್ರೀ. ಬಿ. ಎಂ. ಶಿಂತ್ರೆಯವರು ಕಾರವಾರ ಡಿಸ್ಟ್ರಿಕ್ಟ ಸ್ಕೂಲ್ ಬೋರ್ಡಿಗೆ ಏ. ಓ. ಅವರಿಗಾಗಿ ನಿಯಮಿಸಲ್ಪಟ್ಟರು ಈಗ ಅವರು ಅನಾರೋಗ್ಯದಿಂದ ಇರುವರೆಂದು ತಿಳಿದುಬರುತ್ತದೆ. ಗದಗಿನ ಏ. ಓ ರವರಾದ ಶ್ರೀ. ಗುಂಜಿಕರ ಅವರು ಕಾರವಾರ ಡಿ. ಇ. ಆಯ್. ಅವರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಮತ್ತು ಗದುಗಿಗೆ ಶ್ರೀ ಯಾರಗೆಲ್ ಇವರ ನೇಮಣುಕಿಯಾಗಿದೆ. ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಶಿಕ್ಷಕರಾಗಿದ್ದ ಶ್ರೀ. ಆಯ್. ಎಸ್. ಜಿದರಿ ಅವರು ಎ. ಡಿ. ಇ. ಆಂತ್ ಅವರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಶ್ರೀಮಾನ್ ಜಾಲಿಹಾಳ ಅವರು ಕರ್ನಾಟಕ ಕಾಲೇಜಿಗೆ ಶಾರೀರಕ ಶಿಕ್ಷಕರಾಗಿ ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನಿಂದ ವರ್ಗಾಯಿಸಲ್ಪಟ್ಟಿರುವರು. ಗಂ. ಟ್ರೇ. ಕಾಲೇಜಿಗೆ ಶ್ರೀ. ರಾಯಜೂರ್ ಬಿ. ಎ., ಶ್ರೀ. ಹ. ಗು. ಜೋಶಿ ಬಿ. ಎ. ಅವರು ಶಿಕ್ಷಕರಾಗಿ ನಿಯಮಿಸಲ್ಪಟ್ಟಿದ್ದಾರೆ.

ವಿಜಾಪುರ ಜಿಲ್ಲೆಯ ಸ್ಕೂಲ್ ಬೋರ್ಡಿನ ಏ. ಓ. ಅವರಾದ ಶ್ರೀ. ಜೆ. ಆರ್. ಭಂಡಿವಾಡ ಅವರು ಇದೇ ತಿಂಗಳಲ್ಲಿ ಸೇವಾನಿವೃತ್ತರಾಗಿರುವರು.

ಗ್ರಂಥಾವಲೋಕನ

ಸಚಿತ್ರ ಸೂಚಿಶಿಲ್ಪಕಲೆ: ಲೇಖಕರು ಶ್ರೀ. ಹಳಪೇಟಿ ಚಿಂತಾಮಣಿರಾಯರು ಸೂಚಿ ಶಿಲ್ಪವಿಶಾರದ, ಧಾರವಾಡ. ರಾಯಲ್ ೧೫ ಆಕಾರದ ೧೦೬ ಪುಟಗಳ ಪುಸ್ತಕದ ಸಾದಾ ಪ್ರತಿಯ ಬೆಲೆ ೨-೮-೦. ಸುಂದರ ಪ್ರತಿಯ ಬೆಲೆ ೩-೦-೦.

ಸೂಚಿ ಶಿಲ್ಪಕಲೆ, ಮತ್ತು ಈ ಕಲೆಗೆ ಆಧಾರವಾದ ಶಾಸ್ತ್ರ ಇವುಗಳನ್ನು ಸಾಕಷ್ಟು ವಿವರವಾಗಿ ವಿವೇಚಿಸಿದ ಗ್ರಂಥಗಳು ನಮ್ಮ ಉತ್ತರ ಕರ್ನಾಟಕದಲ್ಲಿ ಇಲ್ಲವೆಂದೇ ಹೇಳಬಹುದು. ಇಂಥ ಪರಿಸ್ಥಿತಿಯಲ್ಲಿ ಶ್ರೀ. ಹಳಪೇಟಿ ಚಿಂತಾಮಣಿರಾಯರು ಸೂಚಿಶಿಲ್ಪದ ಶಿಕ್ಷಣಕ್ಕೆ ಸಹಾಯಕವಾದ ತಮ್ಮ "ಸೂಚಿಶಿಲ್ಪಕಲೆ" ಗ್ರಂಥವನ್ನು ಹೊರಡಿಸಿದುದು ಅಭಿಂದನೀಯವಾಗಿದೆ. ಸೂಚಿ ಶಿಲ್ಪಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು ಎಂದರೆ ಅಳತೆ ತೆಗೆದುಕೊಳ್ಳುವದು, ಕತ್ತರಿಸುವದು, ಚಿತ್ರಣ, ಹೊಲಿಗೆ, ಯಂತ್ರಪರಿಚಯ, ದಪ್ಪು ಮಾಡುವದು, ಬಟ್ಟೆಗಳನ್ನು ಸ್ವಚ್ಛ ಮಾಡುವದು, ಇದರಲ್ಲಿ ಅಡಕವಾಗಿವೆ. ಹೊಲಿಗೆಗೆ ಸಂಬಂಧಿಸಿದ ಪ್ರತಿಯೊಂದು ವಿಷಯವು ಚಿತ್ರಗಳಿಂದ ಸ್ಪಷ್ಟಮಾಡಲ್ಪಟ್ಟಿದೆ. ಈ ಗ್ರಂಥವು ಪ್ರಾ. ಶಾ. ಪ್ರ. ಪರೀಕ್ಷೆಯ ವಿದ್ಯಾರ್ಥಿನಿಯರಿಗೂ, ಹೊಲಿಗೆಯ ವ್ಯವಸಾಯ ಮಾಡುವವರಿಗೂ, ಸಾಮಾನ್ಯ ಸ್ತ್ರೀಪುರುಷರಿಗೂ, ಒಳ್ಳೇ ಉಪಯುಕ್ತವಾಗಿರುವದೆಂಬದರಲ್ಲಿ ಸಂದೇಹವಿಲ್ಲ.

— **ತುಳಸಾಬಾಯಿ ಪವಾರ**
ಅ. ಮಿ. ಪ್ರಾ. ಸ್ಕೂಲ್ ಧಾರವಾಡ

ಕನ್ನಡ ಗಂ. ಮ. ಪ್ರಾಥಮಿಕ ಶಾಲಾ ಪ್ರಮಾಣಪತ್ರ

ಪೂರ್ವ ಪರೀಕ್ಷೆ ೧೯೪೭

— ಸೂಚನೆ —

ಪ್ರಾಕ್ಟಿಸಿಂಗ್ ಸ್ಕೂಲಿನ ಪ್ರಿಲಿಮ್ಸರಿ ಪರೀಕ್ಷೆಯ ಪ್ರಶ್ನೆ-ಪತ್ರಿಕೆಗಳನ್ನು ಬೇಡುವವರ ಸಂಖ್ಯೆಯು ಹೆಚ್ಚುತ್ತಲಿದ್ದುದರಿಂದ ಅವು ಎಲ್ಲರಿಗೂ ದೊರೆಯುವಂತೆ ಯೋಜನೆ ಮಾಡಿದ್ದೇವೆ. ಅನುಭವಿಕರೂ ಉತ್ಸಾಹಿಗಳೂ ನಮ್ಮ ಕಡೆಗೆ ಪ್ರಶ್ನೆತೆಗೆದು ಕಳುಹಿಸಿಕೊಡಬಹುದು. ಒಳ್ಳೆಯ ಪ್ರಶ್ನೆಗಳಿಗೆ ಪ್ರೋತ್ಸಾಹ ಕೊಡುವೆವು. ಬಹುಕಾಲ ಅನುಭವವುಳ್ಳ ತಜ್ಞರ ಮಂಡಲವೊಂದನ್ನೂ ನಿರ್ಮಿಸಿ, ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ, ಮುದ್ರಿಸಿ ಬರುವ ಜನವರಿ ತಿಂಗಳಲ್ಲಿ ಗ್ರಾಹಕರಿಗೆ ಕೊಡುವವು. ಮೇಲ್ತರಗತಿಯ ಮಾದರಿಯ ಪ್ರಶ್ನೆಗಳನ್ನು, ಒಳ್ಳೆಯ ಕಾಗದದಲ್ಲಿ ಮುದ್ದಾಗಿ ಮುದ್ರಿಸುವೆವು. ಹೆಚ್ಚಿನ ವಿವರಗಳನ್ನು ಸಮಾಕ್ಷವು ಇಲ್ಲವೆ ಪತ್ರಮುಖಾಂತರ ತಿಳಿದುಕೊಳ್ಳಬಹುದು, ಬೆಲೆ ಒಂದು ಸೆಟ್ಟಿಗೆ ಅಂಚೆಯು ವೆಚ್ಚ ಸಹಿತ ೮ಆಣೆ ಮಾತ್ರ ಇರುವದು. ಹೆಚ್ಚಿಗೆ ಪ್ರತಿಗಳನ್ನು ಕರಿಸಿಕೊಳ್ಳುವವರಿಗೆ ಯೋಗ್ಯ ಕಮೀಶನ್ನು ಕೊಡುವೆವು. ಮುಂಗಡ ಹಣ ಕಳಿಸಿದವರಿಗೆ ಪ್ರತಿಗಳು ದೊರೆಯುವವು.

ಜಿ. ಸಿ. ಹಿರೇಮಠ
ಹೆಡ್ ಮಾಸ್ತರ, ಪ್ರಾಕ್ಟಿಸಿಂಗ್ ಸ್ಕೂಲ್, ಗವರ್ನಮೆಂಟ್ ಟ್ರೇನಿಂಗ್ ಕಾಲೇಜ ಕಾರಮೆಸ, ಧಾರವಾಡ

ಶೈಕ್ಷಣಿಕ ಸುದ್ದಿಗಳು

೧೯೬೬ ಅಕ್ಟೋಬರ, ನವಂಬರ, ಡಿಸೆಂಬರ ತಿಂಗಳುಗಳಲ್ಲಿ ನಮ್ಮ ಭಾಗದಲ್ಲಿ ನಡೆದ ಶೈಕ್ಷಣಿಕ ಚಟುವಟಿಕೆಗಳ ಸುದ್ದಿಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ. ಉಳಿದವುಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು.

ಸಭೆ—ಸಮಾರಂಭ—ಸಮ್ಮೇಲನಗಳು

ಲಿಂಗದ ಹಳ್ಳಿಯಲ್ಲಿ **ಶ್ರೀ. ಟಿ. ಸಿ. ಕಮತ**ರವರ ಅಧ್ಯಕ್ಷತೆಯಲ್ಲಿ ಕುಮಾರೇಶ್ವರ ವಾಚನಾಲಯದ ಳನೆಯ ಹುಟ್ಟು ಹಬ್ಬವೂ ಗ್ರುಪ್ ಶಿಕ್ಷಕ–ಶಿಕ್ಷಿಕೆಯರ ಸಮ್ಮೇಲನವೂ ಗಾಂಧೀ ವ್ಯಾಯಾಮ ಮಂದಿರದ ಉದ್ಘಾಟನ ಸಮಾರಂಭವೂ ನೆರವೇರಿಸಲ್ಪಟ್ಟವು. **ಬಂಕಾಪುರ**ದಲ್ಲಿ ಸೇವಾನಿವೃತ್ತರಾದ ಶ್ರೀ. **ಬಂಗಾರೆಪ್ಪ ವನಹಳ್ಳಿ** ಮಾಸ್ತರರಿಗೆ ಬೀಳ್ಕೊಡುವ ಸಮಾರಂಭವಾಯಿತು. **ನರೇಗಲ್ಲ, ಮಾದೂರ, ಯರಮುಖ, ಇಂಗಳಗಿ, ಕೋಟೆ ಉಮಚಗಿ** ಈ ಊರುಗಳಲ್ಲಿ ನಾಡ ಹಬ್ಬದ ಉತ್ಸವವು ವಿವಿಧ ಕಾರ್ಯಕ್ರಮಗಳೊಡನೆ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. **ಯರಮುಖ**ದಲ್ಲಿ **ಗಾಂಧಿ ಜಯಂತಿ**ಯೂ ಆಚರಿಸಲ್ಪಟ್ಟಿತು. **ಹುಬ್ಬಳ್ಳಿ** ಮನಸಿಪಾಲ್ಟಿಯ ಸ್ಕೂಲ್ ಬೋರ್ಡಿನ ಆಫೀಸರರಾದ ಶ್ರೀ. **ಬಿ. ಪಿ. ಮನಗೋಳಿ**ಯವರು ಸೇವಾನಿವೃತ್ತರಾದ ಬಗ್ಗೆ ಅನೇಕ ಸಂಘಸಂಸ್ಥೆಗಳು ಅವರಿಗೆ ಸಂತೋಷಕೂಟಗಳನ್ನು ಏರ್ಪಡಿಸಿ ಸನ್ಮಾನ ಮಾಡಿದವು. **ಉಗರಗೋಳ**ದಲ್ಲಿ ಆನಂದ ಮಹೋತ್ಸವವು ಎಂದಿನಂತೆ ನಡೆಯಿತು. **ಹಲಗೇರಿ**ಯಲ್ಲಿ **ಶ್ರೀ. ಸಿರಸಂಗಿ**ಯವರ ಅಧ್ಯಕ್ಷತೆಯಲ್ಲಿ ಗ್ರುಪ್ ಶಿಕ್ಷಕ–ಶಿಕ್ಷಿಕೆಯರ ಸಮ್ಮೇಲನವು ಜರುಗಿತು. **ಮಾಂಜರಿ**ಯಲ್ಲಿ ಗ್ರುಪ್ ಶಿಕ್ಷಕ–ಶಿಕ್ಷಿಕೆಯರ ಸಮ್ಮೇಲನವು **ಮಿ॥ ಪತಾಣ** ಅವರ ಹಿರಿಯತನದಲ್ಲಿ ನೆರೆಯಿತು. ಸರ್ವ **ಶ್ರೀ. ಉಣಕಲ್ಲ, ಬುರಡೆಬಾಯಿ,** ಹಾಗೂ ಶ್ರೀ **ಸಾನೆ** ಸಾಹೇಬರೂ ಆಗಮಿಸಿದ್ದರು. ತಾಲೂಕಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರೂ ಶಿಕ್ಷಣಾಭಿಮಾನಿಗಳೂ ಆಗಮಿಸಿದ್ದರು. ಭಾಷಣ ಮನರಂಜನೆಯ ಕಾರ್ಯಕ್ರಮದೊಂದಿಗೆ ಸಮ್ಮೇಲನವು ಯಶಸ್ವಿಯಾಗಿ ಜರುಗಿತು. **ಅಂಕೋಲಾ**ದಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರಾಥಮಿಕ ಶಿಕ್ಷಕ ಸಂಘದ ಬೆಳ್ಳಿಯ ಹಬ್ಬವು ವಿಜೃಂಭಣೆಯಿಂದ ನೆರವೇರಿತು. **ಪ್ರೊ. ಜಾಗಿರದಾರ** ಅವರು ಉದ್ಘಾಟಕರಾಗಿದ್ದರು. **ಶ್ರ. ಮಾವಿನಕುರ್ವೆ ಭವಾನಿ ಶಂಕರ** ಅವರು ಅಧ್ಯಕ್ಷರಾಗಿದ್ದರು. ಶ್ರೀ. ಮ. ರಾ. ಶೆಟ್ಟಿ ಅವರು ಸ್ವಾಗತಾಧ್ಯಕ್ಷರಾಗಿದ್ದರು. **ಶ್ರೀ. ಸ. ಹ. ಗಾಂವಕರ** (ಪಾರ್ಲಿಮೆಂಟರಿ ಸೆಕ್ರೆಟರಿ, ಮುಂಬಯಿ) ಅವರೂ ಸಭೆಗೆ ದಯಮಾಡಿಸಿದ್ದರಿಂದ ಉತ್ಸವಕ್ಕೆ ಕಳೆ ಬಂದಿತ್ತು. **ಧಾರವಾಡ**ದಲ್ಲಿ ಶ್ರೀ. ಖ. ವಿ. ಕಳಾಸಾಪುರ ಇವರಿಗೆ ಗದುಗಿಗೆ ವರ್ಗವಾದದರಿಂದ ಧಾರವಾಡ ಶಹರ ಪ್ರಾಥಮಿಕ ಶಿಕ್ಷಕ ಸಂಘದವರೂ ಅನುಕ್ರಮವಾಗಿ **ಡಾ॥ ಕಬ್ಬೂರ ನಾರಾಯಣರಾಯರ** ಮತ್ತು **ಶ್ರೀ ವ್ಹಿ. ಆರ್. ಕೊಪ್ಪಳ** ಎಂ. ಎ. ಅವರ ಹಿರಿಯತನದಲ್ಲಿ ಸತ್ಕಾರ ಸಮಾರಂಭವನ್ನೇರ್ಪಡಿಸಿ ಬೀಳ್ಕೊಂಡರು.

ಸಹಾಯ—ಪ್ರೋತ್ಸಾಹ

ಬೆಳಕೂಡದಲ್ಲಿ ಶ್ರೀ. ಟಿ. ಆರ್. **ಪೇಮಲಾಪುರಿ** ಅವರ ಪ್ರಯತ್ನದಿಂದ ಸ್ಥಾಪಿಸಲ್ಪಟ್ಟ ಪಂಡಿತ ಮಾಲವಿ ವಾಕ್ಸ್ಪರ್ಧಾ ಸಂಘವು **ಶ್ರೀ. ಸೊಲ್ಲಾಪುರಕರ** ಇನಾಮುದಾರ ನಾಡೇಲ್ಲಿ ಜರುಗಿ ಹರಿಜನ ಬಾಲಕರಿಗೆ ಗಾಂಧಿ ಟೊಪ್ಪಿಗೆ ಹಾಗೂ ಬಟ್ಟೆಗಳು ಹಂಚಲ್ಪಟ್ಟವು.

ಹೊಸ ಅಭ್ಯಾಸಪತ್ರಿಕೆಯಂತೆ ರಚಿಸಲ್ಪಟ್ಟ ಪುಸ್ತಕಗಳು

[ಶಿಕ್ಷಕರಿಗೂ ಹುಡುಗರಿಗೂ ಅತ್ಯುಪಯುಕ್ತವಾದ ಹೊಸ ಅಭ್ಯಾಸ ಪತ್ರಿಕೆಯಂತೆ ತಯಾರಾದ ಪುಸ್ತಕಗಳು ಈದೀಗ ಮೂರಾಟಕ್ಕೆ ಸಿದ್ಧವಾಗಿವೆ. ಹೊಸ ಶಿಕ್ಷಣ ಪದ್ಧತಿಯ ಮೇರೆಗೆ ಪಾಠಗಳು ಶಿಕ್ಷಣ ತಜ್ಞರಿಂದ ಸಿದ್ಧಗೊಳಿಸಲ್ಪಟ್ಟಿವೆ. ಚಿತ್ರಗಳ ಮುಖಾಂತರ ಸಂಭಾಷಣೆಯ ಪಾಠಗಳನ್ನು ಸುಗಮವಾಗಿ ಕಲಿಸಲು ಬರುವಂತಿವೆ. ಚಿಕ್ಕಮಕ್ಕಳಿಗೆ ಪುಸ್ತಕಗಳು ಮನೋರಂಜಕವಾಗುವಂತೆ, ಅಂದವಾಗಿ ಕಾಣುವಂತೆ ಸಿದ್ಧವಾಗಿವೆ. ಈ ತರದ ಹೊಸ ಗ್ರಂಥಮಾಲೆಯು ಕನ್ನಡದಲ್ಲಿ ಇದೇ ಮೊಟ್ಟಮೊದಲನೆಯದು. ಮುಂದಿನ ಪುಸ್ತಕಗಳನ್ನು ನಿರೀಕ್ಷಿಸಿ. ಈ ಪುಸ್ತಕಗಳಿಲ್ಲದೆ ಲಾಯಬ್ರರಿಗಳಿಗೆಲ್ಲ ಬೇಕಾಗುವ ಪುಸ್ತಕಗಳು ಸಿಗುತ್ತವೆ.]

ಸಚಿತ್ರ ಸಾಮಾನ್ಯ ವಿಜ್ಞಾನಮಾಲೆ—

೧. **೧ನೆಯ ಕುಸುಮ:**— (೧ನೆಯ ಇಯತ್ತೆಗೆ) ವನಸ್ಪತಿ-ಪ್ರಾಣಿ-ಪಕ್ಷಿ-ಹವೆ-ನೀರು-ಬೆಂಕಿ-ಭೂತು-ಆಕಾಶವನೋಟ ಮೊದಲಾದ ವಿಷಯಗಳು. ಮನರಂಜನವಾದ ೫೫ ಚಿತ್ರಗಳು. ಬೆಲೆ ೦-೪-೬

೨. **೨ನೆಯ ಕುಸುಮ:**— (೨ನೆಯ ಇಯತ್ತೆಗೆ) ವನಸ್ಪತಿ-ಪಶು-ಪಕ್ಷಿಗಳ ವಿಷಯಗಳು. ಗೃಹಣಗಳ ವಿಚಾರವಿದೆ. ೩೨ ಚಿತ್ರಗಳು. ಬೆಲೆ ೦-೫-೬

೩. **೩ನೆಯ ಕುಸುಮ:**— (೩ನೆಯ ಇಯತ್ತೆಗೆ) ವನಸ್ಪತಿಗಳ ಭಾಗಗಳು, ಬೀಜಮೊಳೆಯುವ ಕ್ರಮ, ಸೃಷ್ಟಿಯಲ್ಲಿ ಪರಸ್ಪರ ಅವಲಂಬನ ಮೊದಲಾದ ವಿಷಯಗಳು. ವಿಷಯವನ್ನು ಸ್ಪಷ್ಟಪಡಿಸುವ ೩೮ ಚಿತ್ರಗಳು. ಬೆಲೆ ೦—೬—೬

೪. **೪ನೆಯ ಕುಸುಮ:**— (೪ನೆಯ ಇಯತ್ತೆಗೆ) ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ, ಮಾನವ ಶರೀರಶಾಸ್ತ್ರಗಳ ವಿಷಯಗಳು. ಪ್ರಯೋಗಗಳು ಹಾಗೂ ೨೩ ಚಿತ್ರಗಳು. ಬೆಲೆ ೦-೮-೦

ಸಚಿತ್ರ ಪೌರನೀತಿಮಾಲೆ—

೧. **೧ನೆಯ ಕುಸುಮ:**— (೧ನೆಯ ಇಯತ್ತೆಗೆ) ಸ್ವಚ್ಛತೆ, ಉಪಕರಣಗಳ ಉಪಯೋಗ, ಸೌಜನ್ಯದಿಂದ ಮಾತಾಡುವದು ಮುಂತಾದ ವಿಷಯಗಳು. ಉತ್ತಮ ೫೫ ಚಿತ್ರಗಳು, ಬೆಲೆ ೦-೪-೦

೨. **೨ನೆಯ ಕುಸುಮ:**— (೨ನೆಯ ಇಯತ್ತೆಗೆ) ಮಗುವಿನ ಶಾಲೆಯ ಹಾಗೂ ಗೃಹಜೀವನದ ವಿಷಯಗಳು. ಆಕರ್ಷಕ ೬ ಚಿತ್ರಗಳು. ಬೆಲೆ ೦-೫-೦

೩. **೩ನೆಯ ಕುಸುಮ:**— (೩ನೆಯ ಇಯತ್ತೆಗೆ) ಸ್ಥಾನಿಕ-ಜೀವನಕ್ರಮದ ನಿರೀಕ್ಷಣೆ, ಮಗುವಿನ ಶಾಲೆಯ ಜೀವನ ಹಾಗು ಗೃಹಜೀವನ, ಮಗುವು ಸಮಾಜದ ಅಂಗವು ಎಂಬ ವಿಷಯಗಳು. ಉತ್ತಮ ೮ ಚಿತ್ರಗಳು. ಬೆಲೆ ೦-೬-೦

೪. **೪ನೆಯ ಕುಸುಮ:**— (೪ನೆಯ ಇಯತ್ತೆಗೆ) ಸಮಾಜದ ಅಭ್ಯಾಸ, ಜನತೆಯ ಸೌಕರ್ಯ ಶಾಲಾಪಂಚಾಯತ ಮೊದಲಾದ ವಿಷಯಗಳು. ಪ್ರಸಂಗಗಳನ್ನು ಕಣ್ಣೆದುರಿಗೆ ಕಟ್ಟುವಂಥ ೧೮ ಚಿತ್ರಗಳು. ಬೆಲೆ ೦-೭-೦

ಸಚಿತ್ರ ಭೂಗೋಲಮಾಲೆ—

೧. **೧ನೆಯ ಕುಸುಮ:**— (೧ನೆಯ ಇಯತ್ತೆಗೆ) ಅಚ್ಚಿನಲ್ಲಿದೆ

೨. **೨ನೆಯ ಕುಸುಮ:**— (೨ನೆಯ ಇಯತ್ತೆಗೆ) ವಾಸಸ್ಥಳದ, ಪ್ರಾದೇಶಿಕ ಹಾಗು ಜಗತ್ತಿನ ಭೂಗೋಲ ಎಂಬ ವಿಷಯಗಳು. ಕಾಲೂಕಿನ ಭೂಗೋಲವಿದೆ. ಚಿತ್ರನಕಾಶಗಳು. ಬೆಲೆ ೦-೫-೦

೩. **೩ನೆಯ ಕುಸುಮ:**— (ಧಾರವಾಡ ಜಿಲ್ಲೆಯ ವರ್ಣನೆ. ೩ನೆಯ ಇಯತ್ತೆಗೆ) ವ್ಯವಹಾರಿಕ ನಿರೀಕ್ಷಣೆ, ಹಿಂದದಲ್ಲಿಯೂ,ಪರದೇಶದಲ್ಲಿಯೂಹುಟ್ಟುವ ಪದಾರ್ಥಗಳು ಹಾಗು ಜಗತ್ತಿನ ಭೂಗೇಲ ಮೊದಲಾದ ವಿಷಯಗಳು. ವಿವಿಧ ಜನಾಂಗದ ಜನರ ಚಿತ್ರಗಳು, ನಕಾಶಗಳು. ಬೆಲೆ ೦—೧೨—೦

ಭೌಗೋಲಿಕ ನಕಾಶ ಪುಸ್ತಕಮಾಲೆ—

೧. **೧ನೆಯ ಕುಸುಮ:**— (೩ನೆಯ ಇಯತ್ತೆಗೆ) ಕಾರ್ಯಕಾರಣಕ್ಕೆ ಸಂಬಂಧಪಟ್ಟ ಹೊಸ ಮಾದರಿಯ ಪ್ರಶ್ನೆಗಳು. ಬಾಹ್ಯರೇಖೆಯ ನಕಾಶಗಳು, ಚಿತ್ರಗಳು. ೦—೩—೦

೨. **೨ನೆಯ ಕುಸುಮ:**— (೪ನೆಯ ಇಯತ್ತೆಗೆ) ಹೊಸ ಮಾದರಿಯ ಪ್ರಶ್ನೆಗಳು, ಮುಂಬಯಿ ಕರ್ನಾಟಕ, ಮುಂ. ಇಲಾಖೆ, ಹಿಂದದೇಶ ಹಾಗು ಜಗತ್ತಿನ ನಕಾಶಗಳು

ರಾಮಾಶ್ರಯೆ ಬುಕ್ ಡಿಪೊ, ಧಾರವಾಡ ಬೆಲೆ ೦-೬-೦

ಹತ್ತು ವರುಷಗಳ ಅನುಭವದಿಂದ ಬರೆದ

ಚಿ. ಶ್ರೀ. ಕುಲಕರ್ಣಿಯವರ ಶಾಲೋಪಯೋಗಿ ಪುಸ್ತಕಗಳು

ಮುಲ್ಕೀಪರೀಕ್ಷೆಗಾಗಿ

೧	ಗಣಿತ ಸಂಗ್ರಹ	೦	೧೫	೦
೨	ಇತಿಹಾಸ ಪ್ರಶ್ನೋತ್ತರ ಮಾಲೆ	೦	೯	೦
೩	ಭೂಗೋಲ ಪ್ರಶ್ನೋತ್ತರ ಮಾಲೆ	೦	೯	೦
೪	ಭೂಮಿತಿ ಪ್ರಶ್ನೋತ್ತರ ಮಾಲೆ	೦	೮	೦
೫	ಜಮಾಖರ್ಚು ,,	೦	೧೧	೦
೬	ಶಾಸ್ತ್ರೀಯ ವಿಷಯ ,,	೦	೭	೦
೭	ಆರೋಗ್ಯ ವಿಜ್ಞಾನ ,,	೦	೯	೦
೮	ವಾಕ್ಯರಚನೆ ಹಾಗೂ ನಿಬಂಧ ಬರೆಹ	೦	೮	೦
೯	ಈಗಿನ ರಾಜ್ಯವ್ಯವಸ್ಥೆ	೦	೪	೦
೧೦	ಗಂಡು ಹುಡುಗರ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦	೯	೦
೧೧	ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಯ ಪ್ರಶ್ನೆಗಳು	೦	೧೨	೦
೧೨	ವಾಚನಮಾಲೆ	೦	೮	೦
೧೩	ಪದ್ಯಮಾಲೆ	೦	೪	೦
೧೪	ಪ್ರಶ್ನೋತ್ತರ ಭಾಷಾಭ್ಯಾಸ ಭಾಗ (೧)	೦	೧೦	೦
೧೫	,, (ವ್ಯಾಕರಣ) (ಭಾಗ ೨)	೦	೧೦	೦
೧೬	ಶಾಸ್ತ್ರೀಯ ವಿಷಯಸಾರ	೦	೧೦	೦
೧೭	ಭೂಮಿತಿ	೦	೭	೦
೧	ಹೈಸ್ಕೂಲ ಸ್ಕಾಲರಷಿಪ್ ಪರೀಕ್ಷೆಯ ಪ್ರಶ್ನೆಗಳು	೦	೧೨	೦
	ಮಿಡಲ್‌ಸ್ಕೂಲು ಸ್ಕಾಲರಷಿಪ್ ಪರೀಕ್ಷೆಯ ಪ್ರಶ್ನೆಗಳು	೦	೮	೦
೨೦	ಭಾರತ ಸ್ವರಾಜ್ಯ ಸಾಧನೆ	೦	೫	೦
೨೧	ಮುಲ್ಕೀಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ	೧	೦	೦
೨೨	ಇತಿಹಾಸ ಸಾರ	೦	೪	೦
೨೩	ಮಾದನಿಯ ನಿಬಂಧಗಳು	೦	೭	೦

ಕೆಳಗಿನ ವರ್ಗಗಳಿಗಾಗಿ

೧	೧ನೇ ಇಯತ್ತೆಯ ಸಾಮಾನ್ಯ ವಿಜ್ಞಾನ	೦	೩	೦
೨	೨ನೇ ,, ,,	೦	೩	೦
೩	೩ನೇ ,, ,,	೦	೪	೦
೪	೪ನೇ ,, ,,	೦	೫	೦
೫	೫ನೇ ,, ,,	೦	೬	೦
೬	೨ನೇ ಇಯತ್ತೆಯ ಭೂಗೋಲ (ಪ್ರಪಂಚ ಪರಿಚಯ) ಭಾಗ ೧	೦	೦	೬
೭	೩ನೇ ,, ,, ಭಾಗ ೨	೦	೬	೦
೮	೪ನೇ ,, ,, ಭಾಗ ೩	೦	೬	೦
೯	೫ನೇ ,, ,, ಭಾಗ ೪	೦	೭	೦
೧೦	೧ನೇ ತರಗತಿಯ ಕಥೆ	೦	೧	೬
೧೧	೨ನೇ ,,	೦	೧	೬
೧೨	೩ನೇ ,,	೦	೨	೦
೧೩	೪ನೇ ,,	೦	೩	೦
೧೪	ಶನಿಮಹಾತ್ಮೆ	೦	೧	೦
೧೫	ಪೌರಾಣಿಕ ಕಥೆಗಳು (೨-೩ ವರ್ಗಗಳ ಇತಿಹಾಸ)	೦	೩	೦
೧೬	೩ನೇ ವರ್ಗದ ನಿಬಂಧ ಮತ್ತು ವ್ಯಾಕರಣ	೦	೫	೦
೧೭	ಮಕ್ಕಳ ಕಥೆಗಳು. ಭಾಗ ೧	೦	೪	೦
೧೮	,, ಭಾಗ ೨	೦	೪	೦
೧೯	ಪೌರನೀತಿ ೧ನೇ ಇಯತ್ತೆಗಾಗಿ	೦	೩	೦
೨೦	,, ೨ನೇ ,,	೦	೩	೦
೨೧	,, ೩ನೇ ,,	೦	೪	೦
೨೨	,, ೪ನೇ ,,	೦	೬	೦

ಕೈಯಲ್ಲಿರುವ ಕೃತಿಗಳು

೧ ಪೌರನೀತಿ ೫ನೇ ವರ್ಗಕ್ಕಾಗಿ. ೨ ಪೌರನೀತಿ ೬ನೇ ವರ್ಗಕ್ಕಾಗಿ. ೩ ಪೌರನೀತಿ ೭ನೇ ವರ್ಗಕ್ಕಾಗಿ. ೪ ಕುಮಾರ ಕಿಟ್ಟಣ್ಣ. (ಹೊಸ ಆವೃತ್ತಿ). ೫ ಮಹಾತ್ಮರ ಪರಿಚಯ,,. ೬ ರಾಮ ಕೃಷ್ಣ ನೀತಿಯ ಕಥೆಗಳ,, ೭ ಪುರುಂದರದಾಸರ ಪರಿಚಯ.., ೮ ಶಾರೀರಿಕ ಶಿಕ್ಷಣ (ಡ್ರಿಲ್ ಪುಸ್ತಕ)

೧ ಮಿಡಲ್ ಸ್ಕೂಲ ಸ್ಕಾಲರ ಷಿಪ್ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೨ ಹೈಸ್ಕೂಲ ಸ್ಕಾಲರಷಿಪ ಪರೀಕ್ಷೆಯ ಪ್ರಶ್ನೋತ್ತರ ಸಂಗ್ರಹ. ೩ ಪ್ರಪಂಚಪರಿಚಯ ಭಾಗ ೫ ೬ನೇ ವರ್ಗಕ್ಕಾಗಿ. ೪ ಪ್ರಪಂಚಪರಿಚಯ ಭಾಗ ೬ ೭ನೇ ವರ್ಗಕ್ಕಾಗಿ ೫ ಹಿಂದಪ ಹಿಂದಿನ ಇಂದಿನ ಉದ್ಧಾರಕರು.

ಶಿಕ್ಷಕರೂ, ಬಾಲಕರೂ ಎಂದಿನಂತೆ ಚಿ. ಶ್ರೀ. ಯವರ ಪುಸ್ತಕಗಳನ್ನೇ ಉಪಯೋಗಿಸಿ ಅವರ ಶ್ರಮದ ಲಾಭ ಪಡೆಯಬೇಕಾಗಿ ವಿನಂತಿ ಅದೆ.

ಪುಸ್ತಕ ಸಿಗುವ ಸ್ಥಳ

ಕೆ. ಎಸ್. ಕುಲಕರ್ಣಿ ಬುಕ್‌ಸೇಲರ, ಪಬ್ಲಿಷರ್ಸ,

ಸ್ಟೇಶನ್‌ರೋಡ, ಹುಬ್ಬಳ್ಳಿ

ಸಾಹಿತ್ಯದ ಸುಗ್ಗಿ

ಪ್ರತಿಯೊಬ್ಬರೂ ತಪ್ಪದೆ ಒದಬೇಕಾದ ಸರಸ-ಸುಮನೋಹರ ಪುಸ್ತಕಗಳು

ಸೋಡಶಿ (ಶರತ್ಕಾದಂಬರಿ)	೨-೦-೦	ಪ್ರತಿಬಿಂಬ (ಕಥಾಸಂಗ್ರಹ)	೦-೬-೦
ವಿಜಯಾ ,,	೧-೮-೦	ಸುದರ್ಶನ (ಅನಂದಕಂದ)	೧-೮-೦
ದೇವದಾಸ ,,	೧-೮-೦	ಪ್ರೇಮಪಥ (ಶರತ್)	೦-೫-೦
ಶ್ರೀಕಾಂತ (೪ ಭಾಗ ಪೂರ್ಣ)	೧೦-೦-೦	ರಾಜಯೋಗಿ (ಅನಂದಕಂದ)	೦-೧೪-೦
ರಾಜಲಕ್ಷ್ಮಿ (ಶರತ್)	೧-೮-೦	ಮನೆಯ ಸುಖಶಾಂತಿ	೦-೧೨-೦
ವೈಕುಂಠನ ಮೃತ್ಯುಪತ್ರ	೧-೮-೦	ಮಹಾಸತಿ (ಶರತ್)	೦-೫-೦
ಅನ್ನಪೂರ್ಣಾಮಂದಿರ (ಕಾದಂಬರಿ)	೨-೦-೦	ಸನ್ಯಾಸಿನಿ (ಹ. ಪಿ. ಜೋಶಿ)	೦-೧೦-೦
ಚಕಮಕಿ (ಬೇಂದ್ರೆ)	೨-೦-೦	ಕನ್ನಡಿಯ ಪುರ್ಜಾ (ಶಂ. ಬಾ.)	೧-೧೨-೦
ಸಾವಿನ ಉತ್ತರಯಲ್ಲಿ (ಎಸ್ಕೆ)	೩-೦-೦	ಪ್ರೇಮಾರಾಧನೆ (ಶರತ್)	೦-೪-೦
ಗಂಡುಹೆಣ್ಣಿನ ಸಮಸ್ಯೆ	೩-೮-೦	ಸ್ವಾತಂತ್ರ್ಯದ ಇತಿಹಾಸ	
ರಸಋಷಿ (ಪ್ರೇಮಚಂದ)	೩-೦-೦	ಅಜಾದ ಹಿಂದ (ಸಚಿತ್ರ)	೧-೮-೦
ಘಾಟೇಮುಪುಳ (ವೇಮುರಿ)	೧-೮-೦	ನೇತಾಜಿ ,,	೧-೮-೦
ಬಿರುಗಾಳಿ (ಪ್ರೋ. ಫಡಕೆ)	೩-೮-೦	ಸುಭಾಸ ಸೀಮೋಲ್ಲಂಘನ	೧-೮-೦
ಭೂಮಾತೆ ಮತ್ತು ಮಾನವರು	೧-೮-೦	ಕಾಮಶಾಸ್ತ್ರದ ಗ್ರಂಥಗಳು	
ರೇಡಿಯೋ ನಾಟಕಗಳು (ಬಿ. ಚಿ.)	೧-೮-೦	ಅನಂಗರಂಗ (ಶೇ. ಅ.)	೧-೮-೦
ಧರ್ಮಸಂಕಟ (ಕಾದಂಬರಿ)	೨-೪-೦	ರತಿರಹಸ್ಯ (ಶೇ. ಅ.)	೧-೮-೦
ಬೆಳವಲದ ಭಾಗ್ಯಲಕ್ಷ್ಮಿ	೨-೮-೦	ಕಾಮ ಪಂಚಮಿ (ಹೊ. ಶ್ರೀನಿವಾಸ)	೧-೮-೦
ಸಮ್ರಾಟ್ ಹರ್ಷವರ್ಧನ	೨-೦-೦	ಕಾಮ ಮಂಜರಿ (ಶೇ. ಅ.)	೧ ೮ ೦
ಡಾಕ್ಟರ ಗಿರೀಶ (ಹತ್ತೇದಾರಿ)	೦-೬-೦	ವಿಕೃತರತಿ	೧ ೮ ೦
ಉರ್ದೂಕಥಾವಳಿ (ಜೋಶಿ)	೦-೮-೦		

(ವಿ. ಪಿ. ವೆಚ್ಚಬೇರೆ)

ಈ ಪುಸ್ತಕಗಳಲ್ಲಿ—೧೦ ರೂ. ಗಳಿಗಿಂತ ಹೆಚ್ಚಿಗೆ ಪುಸ್ತಕ ತರಿಸುವವರಾದರೆ ಅಂಚೆವೆಚ್ಚ ಉಚಿತ. ೨೦ ರೂ. ಗಳಿಂತ ಹೆಚ್ಚಿಗೆ ತರಿಸುವುದಾದರೆ ರೂ. ೪ ಕ್ಕೆ ಎಂಟಾಣೆ ಕಮಿಶನ್ ಸಹ ಕೊಡಲಾಗುವದು. ನುಂಗಡ ಹಣವೊಂದಿಗೆ ಆರ್ಡರ್ ಕಳಿಸಿರಿ

ಸಮಾಜ ಪುಸ್ತಕಾಲಯ, ಧಾರವಾಡ

ಹೊಸ ಪುಸ್ತಕಗಳಿಗೆ ತ್ವರೆ ಮಾಡಿರಿ! ಲಾಭಪಡೆಯಿರಿ!

ಹೊಸಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೨
(ವ್ಯಾಪಾರಿ ಜಮಾಖರ್ಚು)

ಇವರಲ್ಲಿ ಹುಡುಗ, ಚೆಕ್ಕು, ಮನಿಆರ್ಡರ, ಪಟ್ಟಿ ಅಕರಣ ಜಮಾಖರ್ಚಿನ ಇತರ ಪರುಗಳು ಹುಡುಗಳ ನಮೂನೆಗಳು, ಪ್ರಶ್ನೆಗಳು. ಪ್ರಶ್ನೆಕಾಗದಗಳು ಇರುವದಲ್ಲದೆ, ಒಕ್ಕಲತನದ ಹಿರಿಯ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರದ ಜಮಾಖರ್ಚು ಆಂದರ ಡೇಲಿ ಲೇಬರ ಶೀಟು, ವೀಕಲಿ ಮಸ್ಟರ ರೋಲ್, ಕಲ್ಟಿವೇಶನ್ ಶೀಟು, ಮುಂತಾದವುಗಳ ಪತ್ರಿಕೆಗಳೂ ಕಬೂಲಾಯಿತಿ, ಬಾಡಿಗೆಯ ಪತ್ರಗಳ ನಮೂನೆಗಳು ಇರುವದರಿಂದ ಇದು ೬ನೆಯ ಇಯತ್ತೆಯವರಿಗೂ ಅಗ್ರಿಕಲ್ಚರ ಬಾಯಸ್ ಕ್ಲಾಸಿನವರಿಗೂ ಉಪಯುಕ್ತವಾಗಿದೆ. ಸ್ವಲ್ಪಪ್ರತಿಗಳಿರುವದರಿಂದ ನಮೂನೆಗಾಗಿ ಬಂದ ತಕ್ಷಣ ನೀವೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೮ ಆಣೆ.

ಹೊಸ ಪದ್ಧತಿಯ
(೧) ಹಿಂದೀ ಜಮಾಖರ್ಚು ಭಾಗ ೧
(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಪಜ್ಜು ಮುಕ್ಕಳ ಮುಲ್ಕೀಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೮ ಆಣೆ.

೨. ಆರಂಭದ ಜಮಾಖರ್ಚು: ೬ನೆಯ ಇಯತ್ತೆಯವರಿಗೆ ಉಪಯೋಗವದೆ. ಬೆಲೆ: ೩ ಆಣೆ.

೩. ಅಂಗಸಾಧನ ಶಿಕ್ಷಕ: ಬೆಲೆ: ೪ ಆಣೆ.

೪. ಗಣಿತಪಾಠ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ ಮತ್ತು ಮುಲ್ಕೀಪರೀಕ್ಷೆಯವರಿಗೆ ಉಪಯುಕ್ತವಿದೆ.

ಬೆಲೆ: ೪ ಆಣೆ.

ವಿಳಾಸ:— **ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.**

Printed by F. Y. Mindgudli at Ravindra Press, Dharwar and Published by S. R. Joshi Esqr., B. A., B. T. Principal Training College, For-Men Dharwar at his Office 7403—46—1375.

ಕನ್ನಡ

ಪ್ರಾಥಮಿಕ ಶಿಕ್ಷಣ

ರ್ಯಾಂಗ್ಲರ ಡಿ. ಬಿ. ಪಾವಟೆ.

(ಇದರಲ್ಲಿ ಕನ್ನಡ ಶಾಲಾಪತ್ರಿಕೆಯೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಸಂಪಾದಕರು:

ಶ್ರೀನಿವಾಸ ರಾಮಚಂದ್ರ ಜೋಶಿ, ಬಿ. ಎ., ಬಿ. ಟಿ.

ಜನೆವರಿ, ಫೆಬ್ರುವರಿ, ಮಾರ್ಚ ೧೯೪೭

ಪರಿವಿಡಿ

೧.	ವಿದ್ಯಾರ್ಥಿಗಳಿಗೆ ಉಪದೇಶ	ಪಂಡಿತ ಜವಾಹರಲಾಲ ನೆಹರು	೧
೨.	ಸಂಪಾದಕೀಯ		೨
೩.	ಹಳ್ಳಿಗರ ಸುಧಾರಣೆ	ಶ್ರೀ. ಎಸ್. ಆರ್. ಜೋಶಿ. ಬಿ. ಎ., ಬಿ. ಟಿ.	೬
೪.	ಸ್ವೀಕಾರ ಮತ್ತು ಅಭಿಪ್ರಾಯ		೯
೫.	ಬಹುವರ್ಣ ಮಾದರಿಯ ಪಾಠದ ಟಿಪ್ಪಣಿ.	ಶ್ರೀ. ಲ. ಬಿ ಜಾಲಿಸತ್ತಿಗಿ ಬಿ. ಎ., ಬಿ. ಟಿ	೧೦
೬.	ಶ್ರೀ ಮಿರ್ಜಿ ಅಣ್ಣಾರಾಯರು		೧೨
೭.	ನನ್ನ ನೌಕೆ (ಕವನ)	ಶ್ರೀ. ಮಿರ್ಜಿ ಅಣ್ಣಾರಾಯರು	೧೩
೮.	ನಮ್ಮ ಡೈರೆಕ್ಟರರು		೧೪
೯.	ಪುಲ್ಕಿ ಪರೀಕ್ಷೆ ಮತ್ತು ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮ.		೧೭
೧೦.	ಶೃಂಖಲಾ ಮೂಲಕ ಅಲಂಕಾರಗಳು.		೨೧

ಸೂಚನೆ

ಅಂಕಗಣಿತ:— ಲೇಖಕರು ಶ್ರೀ. ಬಿ. ಎಸ್. ಪುರೋಹಿತ. ಪ್ರಕಾಶಕರು ಶ್ರೀ. ಎನ್. ಎಸ್. ಬೆಂಗೇರಿ, ವಿಜಯ ಮುದ್ರಾಲಯ ಧಾರವಾಡ. ಬೆಲೆ ೦—೧೨—೦. ಈ ಪುಸ್ತಕವು ನಾಲ್ಕನೆಯ ಆವೃತ್ತಿಯದು ಎಂದು ಅಚ್ಚಾಗಿದೆ. ಇದನ್ನು ೨ನೆಯ ಆವೃತ್ತಿಯೆಂದು ತಿದ್ದುಪಡಿ ಮಾಡಿದಲ್ಲಿ ವಾತ್ರ ಪ್ರಾಥಮಿಕ ಶಾಲೆಗಳ ನಾಲ್ಕನೆಯ ಇಯತ್ತೆಗೆ ಪಠ್ಯಪುಸ್ತಕವೆಂದು ಮಂಜೂರಾಗಿದೆಯೆಂದು ತಿಳಿಯಬೇಕು.

ಧಾರವಾಡ
೧೪—೧—೧೯೪೨

(ಸಹಿ) ಪಿ. ಬಿ. ದೇಸಾಯಿ
ದ ಭಾ ಎಜ್ಯುಕೇಶನಲ್ಲ ಇನಸ್ಪೆಕ್ಟರರ ಪರವಾಗಿ

ಕಂಬನಿ

ಸುಮಾರು ೪೭ವರ್ಷಗಳ ಹಿಂದೆ ಧಾರವಾಡ ಟ್ರೇನಿಂಗ್ ಕಾಲೇಜಿನ ಕನ್ನಡ ಭಾಷೆಯ ವ್ಯಾಖ್ಯಾನಕರಾಗಿ ಬಂದು ತಮ್ಮ ರಸವತ್ತಾದ ಕಾವ್ಯವಾರದಿಂದ ಇಲ್ಲಿಯ ವಿದ್ಯಾರ್ಥಿಗಳಲ್ಲಿ ಕನ್ನಡ ನುಡಿಯಲ್ಲಿ ಅಭಿರುಚಿಯನ್ನು ತುಂಬಿ, ಅನೇಕಾನೇಕ ಶಿಷ್ಯರನ್ನು ಕನ್ನಡ ಭಕ್ತರನ್ನು ಮಾಡಿ ನಮ್ಮ ನಾಡಿನಲ್ಲಿ ಕನ್ನಡದ ಬಗೆಗೆ ಹೊಸ ಚೈತನ್ಯವನ್ನುಂಟುಮಾಡಿ ಇದೇ ಟ್ರೇನಿಂಗ್ ಕಾಲೇಜಿನಲ್ಲಿ ೨೩ ವರ್ಷ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿ ನಮ್ಮ ನಾಡಿಗೆಲ್ಲ ಮಾನ್ಯರಾಗಿದ್ದ ವಿದ್ವನ್ಮಣಿಗಳಾದ ಪಂಡಿತ ಕಟ್ಟಿ ಶ್ರೀನಿವಾಸ ಮೂರ್ತಾಚಾರ್ಯರವರು ಮೊನ್ನೆ ತಮ್ಮ ನಶ್ವರ ಶರೀರವನ್ನು ತ್ಯಜಿಸಿ ನಮ್ಮನ್ನೂ ತಮ್ಮ ಕುಟುಂಬದವರನ್ನೂ ಬಹು ದುಃಖಕ್ಕೀಡುಮಾಡಿದರು. ಅವರ ತಪಸ್ವಿಯಾದ ಆತ್ಮವು ಆತ್ಯಂತಿಕ ಆನಂದವನ್ನು ಹೊಂದಲಿ ಎಂದೂ ಮತ್ತು ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿದ್ದ ಶಿವಪ್ಪ ವಿದ್ಯಾರ್ಥಿಗಳಾದ ಕಾಕೋಳ (ಗದಗ) ದೇ ಗಿ. ಲಮಾಣಿ, ಕದಮ, ಅಕಾಲ ನಿಧನ ಹೊಂದಿದರು. ಮೃತರ ಆತ್ಮಕ್ಕೆ ಶಾಂತಿಯನ್ನು ಹೊಂದಲಿ ಎಂದೂ ಶಿ. ವಿದ್ಯಾರ್ಥಿಗಳೂ ಅಧ್ಯಾಪಕರೂ, ಪಂಡಿತ ಪೂಜಾರ ಹಾಗೂ ಪಂಡಿತ ಕೇಶವ ಶರ್ಮ್ಮಗಲಗಲಿ ಅವರ ಹಿರಿಯತನದಲ್ಲಿ ಸಭೆ ಸೇರಿ ಪರಮಾತ್ಮನನ್ನು ಪ್ರಾರ್ಥಿಸಿದರು.

ಕ ನ್ನ ಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಶ್ರೀನಿವಾಸ ರಾಮಚಂದ್ರ ಜೋಶಿ ಬಿ. ಎ., ಬಿ. ಟಿ.

ಕೂಗುಮೊಂದಾಗಿ । ಕರುಳೊಂದಾಗಿ । ಹೃದಯವುದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ವಿದ್ವೇಷ ಕುಕ್ಷರ
ಮದಂಗಳ ನೀಗಿ । ಸಾಗಲನುವಾಗಿರ್ಕೆ ॥ ಭೋಗಬಿಟ್ಟೀಳಿರ್ಕೆ ।
ಕನ್ನಡಮ್ಮನ ಕುವರರೇ ॥

— ಯುಗ್ವೇದ.

ಸಂಪುಟ ೮೫ ಜನೇವರಿ, ಫೆಬ್ರುವರಿ, ಮಾರ್ಚಿ ೧೯೪೭ ವರ್ಷ ೧೯ ಸಂ.೧೦, ೧೧, ೧೨,

ವಿದ್ಯಾರ್ಥಿಗಳಿಗೆ ಉಪದೇಶ

ಈ ಅಖಿಲ ಭಾರತೀಯ ವಿದ್ಯಾರ್ಥಿ ಕಾಂಗ್ರೆಸ್ಸು ಅಖಿಲ ವಿಶ್ವದ ವಿದ್ಯಾರ್ಥಿ ಸಮ್ಮೇಳನದ ತಳಹದಿ. ಇಲ್ಲಿ ಸೇರಿದ ಪ್ರತಿನಿಧಿಗಳು ತಮ್ಮ ತಮ್ಮ ರಾಷ್ಟ್ರದ ಪ್ರತಿನಿಧಿಗಳಷ್ಟೇ ಇರುವರಲ್ಲದೆ ಒಂದು ನಿಶ್ಚಿಯ ಧ್ಯೇಯ ಇದಿ ವಿಶ್ವದ ವಿಕತೆಯ ಪ್ರತಿನಿಧಿಗಳಾಗಿದ್ದಾರೆ. ವಿಶ್ವದ ಭೂಮಿ ಪ್ರಪಂಚದ ಮಹಾ ದೇಶಗಳ ತಾಯಿ, ವಿಶ್ವಸಂಸ್ಥೆಯ ಜನನಿ, ವಿಶ್ವದಿಂದಲೇ ಜಗತ್ತಿನ ಇತಿಹಾಸದ ಆರಂಭವಾಗಿದೆ. ಇತಿಹಾಸವನ್ನು ನೋಡಿದರೆ ಸಂಸ್ಕೃತಿ, ನಾಗರಿಕತೆಯ ದೃಷ್ಟಿಯಿಂದಲೂ ವಿಶ್ವದಲ್ಲೇ ಪ್ರಪಂಚದ ಮೇಲೆ ಪ್ರಭುತ್ವ ಸ್ಥಾಪಿಸಿತ್ತೆಂಬುದು ತಿಳಿಯುತ್ತದೆ. ಸುಮಾರು ೨೦೦ ವರ್ಷಗಳಿಂದ ವಿಶ್ವದ ಭಾಗ್ಯ ಸಂಕಟಕ್ಕೊಳಗಾಗಿದೆ. ಇದರ ಹೊಣೆ ಯುರೋಪದ ಪ್ರಭುತ್ವ ಮೇಲಷ್ಟೇ ಇಲ್ಲ, ವಿಶ್ವದ ನಿವಾಸಿಗಳ ನಿಷ್ಕ್ರಿಯತೆ ಹಾಗೂ ಅಕರ್ಮಣ್ಯತೆಯ ಮೇಲೂ ಇದೆ. ಅವರಲ್ಲಿ ಕ್ರಿಯಾಶೀಲರಾದವರು ಮುಂದುವರೆದಿದ್ದಾರೆ. ನಾವು ವಿಶ್ವದಲ್ಲಿ ಹೊಸ ಜಾಗ್ರತಿಯನ್ನು ನೋಡುತ್ತಿದ್ದೇವೆ. ವಿಶ್ವದ ಎಚ್ಚತ್ತು ನಿಲ್ಲುತ್ತಿದೆ. ವಿಶ್ವವು ಅನೇಕ ಸಂಕಟಗಳನ್ನು ಎದುರಿಸಬೇಕಾಗುವದು. ಆದಾಗ್ಯೂ ಆದರಲ್ಲಿ ನವೀನ ಶಕ್ತಿಯ ಸಂಚಾರವಾಗುವದೆಂಬುದರಲ್ಲಿ ಸಂದೇಹವಿಲ್ಲ. ನವೀನ ವಿಶ್ವದ ನಿರ್ಮಾಣವು ವಿಶ್ವದ ಯುವಕ ಮತ್ತು ಯುವತಿಯರ ಕೈಯಲ್ಲಿರುವುದು.

— ಪಂಡಿತ ಜವಾಹರಲಾಲ ನೆಹರು-

(ದಿಲ್ಲಿಯಲ್ಲಿ ಸೇರಿದ ಅಖಿಲ ಭಾರತೀಯ ವಿದ್ಯಾರ್ಥಿ ಕಾಂಗ್ರೆಸ್ಸಿನಲ್ಲಿ ಮಾಡಿದ ಭಾಷಣ)

ಸಂಪಾದಕೀಯ

ಒತ್ತಾಯದ ಶಿಕ್ಷಣ:

ಭಾರತದ ಯುದ್ಧೋತ್ತರ ಶಿಕ್ಷಣದ ಸಂಬಂಧವಾಗಿ ಸಾರ್ಜಂಟ್ ರಿಪೋರ್ಟು ಪ್ರಸಿದ್ಧವಾಗಿದೆ. ಅದರ ಬಗ್ಗೆ ಸರಕಾರವು ಏನು ಮಾಡುತ್ತಿದೆ ಮತ್ತು ಏನು ಮಾಡಲಿದೆಯೆಂಬುದನ್ನು ಕುರಿತು ನಡುಗಾಲ ಸರಕಾರದ ವಿದ್ಯಾ ಮಂತ್ರಿಗಳಾಗಿದ್ದ ಮೂನಶೀಯ ಚಕ್ರವರ್ತಿ ರಾಜಗೋಪಾಲಾಚಾರ್ಯರು ಕೊಟ್ಟ ಹೇಳಿಕೆಯಲ್ಲಿ ಒತ್ತಾಯದ ಶಿಕ್ಷಣ, ಪ್ರೌಢ ಶಿಕ್ಷಣ, ತಾಂತ್ರಿಕ ಶಿಕ್ಷಣ, ಮಾಧ್ಯಮಿಕ ಹಾಗೂ ವಿಶ್ವವಿದ್ಯಾಲಯದ ಶಿಕ್ಷಣ, ಟ್ರೇನಿಂಗ ವರ್ಗಗಳು ಮುಂತಾದ ಐದು ವರ್ಷದ ಶೈಕ್ಷಣಿಕ ಯೋಜನೆಯನ್ನು ಕೇಂದ್ರೀಯ ಸರಕಾರವೂ ಪ್ರಾಂತಿಕ ಸರಕಾರಗಳೂ ಸೇರಿ ಸಿದ್ಧಗೊಳಿಸಿವೆಯೆಂದು ಸಾರಿದ್ದರು.

ಈ ನೀತಿಯ ಮೇರೆಗೆ ಎಲ್ಲಕ್ಕೂ ಮೊದಲು ಒತ್ತಾಯದ ಶಿಕ್ಷಣದ ಕಡೆಗೆ ಮುಂಬಯಿ ಸರಕಾರವು ಗಮನ ಕೊಟ್ಟಿದೆ ಮತ್ತು ಅದರಂತೆ ಕಾರ್ಯವನ್ನೂ ಪ್ರಾರಂಭಿಸಿಬಿಟ್ಟಿದೆ. ರಾಷ್ಟ್ರದ ಹಿತದ ದೃಷ್ಟಿಯಿಂದ ಇದು ಎಷ್ಟು ಅವಶ್ಯವಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಸರಕಾರದ ಒತ್ತಾಯದ ಶಿಕ್ಷಣದ ನೀತಿಯು ಪ್ರಶಂಸನೀಯವೂ ಸ್ವಾಗತಾರ್ಹವೂ ಆಗಿದೆ.

ಕಳೆದ ಜೂನ ತಿಂಗಳಲ್ಲಿ ಮುಂಬಯಿಯಲ್ಲಿ ಕರೆದ ಶೈಕ್ಷಣಿಕ ಪರಿಷತ್ತಿನಲ್ಲಿ ನಮ್ಮ ಪ್ರಾಂತದ ಮುಖ್ಯ ಮಂತ್ರಿಗಳು ಒತ್ತಾಯದ ಶಿಕ್ಷಣವನ್ನು ಕುರಿತು ಹೀಗೆ ಹೇಳಿದ್ದರು—ಒತ್ತಾಯದ ಶಿಕ್ಷಣವು ಕನಿಷ್ಠಪಕ್ಷಕ್ಕೆ ನಾಲ್ಕು ವರುಷದ ಅಭ್ಯಾಸ ಕ್ರಮವನ್ನು ಒಳಗೊಂಡಿರಬೇಕು ಮತ್ತು ಇದಕ್ಕೆ ಮಕ್ಕಳ ವಯಸ್ಸು ೬ ರಿಂದ ೧೧ ಇರಬಹುದು. ಮೊದಲ ವರ್ಷದಲ್ಲಿ ೬ ರಿಂದ ೭ ವರ್ಷದ ವಯಸ್ಸಿನ ಹುಡುಗರಿಗೆ ಒತ್ತಾಯದ ಶಿಕ್ಷಣವು ಕೊಡಲ್ಪಡುವದು. ಹಾಗೆಯೆ ಅದು ಮುಂದೆ ದೆಳೆಯುತ್ತ ೬ ರಿಂದ ೧೧ ವರುಷದ ಹುಡುಗರಿಗೆ ಕೊಡಲ್ಪಡುವುದು.

ಈ ಒತ್ತಾಯದ ಶಿಕ್ಷಣವು ಮೊದಲು ಸಾವಿರಕ್ಕೆ ಮೇಲ್ಪಟ್ಟ ಜನಸಂಖ್ಯೆಯ ಹಳ್ಳಿಗಳಿಂದ ಪ್ರಾರಂಭವಾಗಿ ಸಾವಕಾಶವಾಗಿ ಎಲ್ಲ ಹಳ್ಳಿಗಳಿಗೂ ಪಸರಿಸುವುದು.

ಬ್ರಿಟಿಶರ ೧೫೦ ವರ್ಷಗಳ ಆಳಿಕೆಯಲ್ಲಿ ನೂರಕ್ಕೆ ೧೦ರಷ್ಟು ಜನ ಸಾಕ್ಷರಿಗಳಾಗಿದ್ದಾರೆ. ಲೋಕಪ್ರಿಯ ಮಂತ್ರಿ ಮಂಡಳದ ಈ ಯೋಜನೆ ನೀತಿಯಿಂದ ಸುಮಾರು ೧೦-೧೫ ವರ್ಷಗಳಲ್ಲಿ ನೂರಕ್ಕೆ ನೂರು ಜನ ಸಾಕ್ಷರಿಗಳಾಗುವರು.

ಸರಕಾರದ ಈ ಯೋಜನೆಯು ಯಶಸ್ವಿಯಾಗಲೆಂದು ಹಾರೈಸುತ್ತೇವೆ.

ಪ್ರಾಥಮಿಕ ಶಿಕ್ಷಕರ ಸಂಬಳ:

ಶಿಕ್ಷಕರ ಹಾಗೂ ಕೂಲಿಕಾರರ ಸಂಬಳ ಹೆಚ್ಚಾಗಬೇಕೆಂಬ ಕೂಗು ಭಾರತದ ಮೂಲೆ ಮೂಲೆಯಲ್ಲಿ ಎದ್ದಿದೆ. ಮುಂಬಯಿ ಪ್ರಾಂತದಲ್ಲಿಯೂ ಎಲ್ಲ ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೂಗನ್ನು ಸಮಾಧಾನದಿಂದ ಕೇಳಿಕೊಂಡು ಪ್ರಾಥಮಿಕ ಶಿಕ್ಷಕರ

ಸಂಬಳದ ಪ್ರತ್ಶೆಯನ್ನು ಪ್ರಾಂತದ ಸದ್ಯದ ಸ್ಥಿತಿಗತಿಯ ಕಡೆಗೆ ಗಮನವಿಟ್ಟುಕೊಂಡು ಬಿಡಿಸಿದ ರೀತಿ ಮತ್ತು ಅವರು ಕೊಟ್ಟ ಆಶ್ವಾಸನ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ ಆಶಾದಾಯಕವಾಗಿದೆ.

ಕಳೆದ ಅಕ್ಟೋಬರ ಎಂಟನೆಯ ತಾರೀಖಿನ ದಿನ ಕೇಂದ್ರೀಯ ಸಂಬಳ ವೃದ್ಧಿಯ ಕಮಿತನ್ನಿನ ಎದುರಿಗೆ ದಿಲ್ಲಿ ಪ್ರಾಂತೀಯ ಶಿಕ್ಷಕ ಸಂಘದ ಅಧ್ಯಕ್ಷರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಹಳ್ಳಿಗಳಲ್ಲಿಯ ಪ್ರಾಥಮಿಕ ಶಿಕ್ಷಕರಿಗೆ ೬೦—೨—೭೦—೧೦—೧೦೦; ಪಟ್ಟಣಗಳಲ್ಲಿಯ ಪ್ರಾಥಮಿಕ ಶಿಕ್ಷಕರಿಗೆ ೯೦—೬—೧೦೫—೫—೧೫೫ ರೂಪಾಯಿ ವೇತನ ಸಿಗಬೇಕೆಂದು ಪ್ರತಿಪಾದಿಸಿದರು. ಇತ್ತ ಮುಂಬಯಿ ಸರಕಾರದ ಮಾನ್ಯ ಶಿಕ್ಷಣ ಮಂತ್ರಿಗಳು ಗಮನಕೊಡಬೇಕೆಂದು ಬಿನ್ನವಿಸಿಕೊಳ್ಳುತ್ತೇವೆ. ಮತ್ತು ದಿಲ್ಲಿ ಶಿಕ್ಷಕ ಸಂಘದ ಅಧ್ಯಕ್ಷರು ಬೇಡಿದ ಸಂಬಳ ಪ್ರಮಾಣವನ್ನು ಪಡೆಯಲು ತಮ್ಮ ಅರ್ಹತೆಯನ್ನೂ ಯೋಗ್ಯತೆಯನ್ನೂ ಬೆಳಿಸಿಕೊಳ್ಳಬೇಕೆಂದು ಪ್ರಾಥಮಿಕ ಶಿಕ್ಷಕರನ್ನೂ ಬಿನ್ನವಿಸಿಕೊಳ್ಳುತ್ತೇವೆ.

ಒಕ್ಕಲುತನದ ಕಾಲೇಜು:

ಧಾರವಾಡದಲ್ಲಿ ಒಕ್ಕಲುತನದ ಕಾಲೇಜನ್ನು ತೆರೆಯುವ ನಿರ್ಧಾರವನ್ನು ಸರಕಾರದವರು ಮಾಡಿದ್ದಾರೆ. ಅದರ ಮೇರೆಗೆ ಇದೇ ಜೂನ್ ತಿಂಗಳಲ್ಲಿ ಕಾಲೇಜು ಪ್ರಾರಂಭವಾಗಲಿದೆ. ಅದರ ಬಿದ್ಧತೆಯೂ ಭರದಿಂದ ಸಾಗಿದೆ. ಸದ್ಯಕ್ಕೆ ಕಾಲೇಜಿನ ವರ್ಗಗಳು ಕರ್ನಾಟಕ ಕಾಲೇಜಿನ ಕಟ್ಟಡದಲ್ಲಿ ನಡೆಯುವವು. ಜೊತೆಗೆ ಹೊಸ ಕಟ್ಟಡ ನಿರ್ಮಾಣ ಕಾರ್ಯವೂ ಸಾಗುವುದು. ಕಾಲೇಜು ಬೇಗ ಉನ್ನತಿ ಹೊಂದಿ ಕನ್ನಡ ನಾಡಿನ ಒಕ್ಕಲತನದ ಬೆಳವಣಿಗೆಗೆ ಸಹಾಯಕವಾಗಿ ಕೀರ್ತಿ ಹೊಂದಲೆಂದೂ ಹಾರೈಸುತ್ತೇವೆ.

ಕರ್ನಾಟಕ ವಿಶ್ವವಿದ್ಯಾಲಯ:

ಮುಂಬಯಿ ಪ್ರಾಂತದಲ್ಲಿ ಪ್ರಾದೇಶಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ದೃಷ್ಟಿಯಿಂದ ೧೯೫೯ರಲ್ಲಿ ಮುಂಬೈ ಸರಕಾರವೂ ಮುಂಬೈ ವಿಶ್ವವಿದ್ಯಾಲಯವೂ ವಿಚಾರ ಮಾಡಿದುವು. ಪ್ರಾದೇಶಿಕ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ವಿಹಿತವೆಂದು ನಿಶ್ಚಿತವಾಯಿತು.

ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯ ಸೂಚನೆಗಳ ಮೇರೆಗೆ ಮಹಾರಾಷ್ಟ್ರ ವಿಶ್ವವಿದ್ಯಾಲಯವನ್ನು ಸರಕಾರವು ಪುಣೆಯಲ್ಲಿ ಸ್ಥಾಪಿಸುವ ಕಾರ್ಯಕ್ಕೆ ಮೊದಲು ಪ್ರವೃತ್ತವಾಯಿತು. ಕರ್ನಾಟಕ ವಿದ್ಯಾಪೀಠ ಗೋಷ್ಠಿಯ ಕಾರ್ಯವು ಭರದಿಂದ ಸಾಗಿತು. ಕನ್ನಡ ಜನತೆಯ ಬೇಡಿಕೆಯು ಹೆಚ್ಚಾಯಿತು. ಸರಕಾರವು ಕರ್ನಾಟಕ ವಿಶ್ವವಿದ್ಯಾಲಯವನ್ನು ೧೯೫೦ರಲ್ಲಿ ಸ್ಥಾಪಿಸುವದಾಗಿ ಆಶ್ವಾಸನವನ್ನಿತ್ತಿತು. ಅದಕ್ಕಾಗಿ ಮುಂಬೈ ಸರಕಾರದ ಈ ಪ್ರಾದೇಶಿಕ ವಿಶ್ವವಿದ್ಯಾಲಯ ಸ್ಥಾಪಿಸುವ ನೀತಿಯು ಅಭಿನಂದನೀಯವಾಗಿದೆ. ಅದರೆ ಮಹಾರಾಷ್ಟ್ರ ವಿಶ್ವವಿದ್ಯಾಲಯವು ಕರ್ನಾಟಕದ ಪ್ರದೇಶಗಳನ್ನು ಆಕ್ರಮಿಸಿದಂತೆ ನೋಡಿಕೊಳ್ಳುವುದೂ ಸರಕಾರದ ಹಾಗೂ ಕನ್ನಡಿಗರ ಕರ್ತವ್ಯವಾಗಿದೆ.

ಪ್ರಾಥಮಿಕ ಶಿಕ್ಷಣದ ಬಗ್ಗೆ ಸರಕಾರದ ಆಸ್ಥೆ:

ಮುಂಬಯಿ ಸರಕಾರವು ಪ್ರಾಂತದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚಿಸಬೇಕೆಂಬ ಬಗ್ಗೆಯೂ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬ ಬಗ್ಗೆಯೂ ಹೆಚ್ಚು ಆಸ್ಥೆಯನ್ನು ವಹಿಸಿದೆಯೆಂಬುದು ಸಂತೋಷದ ಸಂಗತಿ. ಈ ಕಾರ್ಯಕ್ಷೇತ್ರದ ಶೀಲಸವು ಸುಸೂತ್ರವಾಗಿ ಸಾಗಬೇಕೆಂದು ಅಡ್ಮಿನಿಸ್ಟ್ರೇಟಿವ್ ಆಫೀಸರರಿಗೆ ಅಸಿಸ್ಟಂಟರನ್ನೂ ಒತ್ತಾಯದ ಶಿಕ್ಷಣದ ಕಾರ್ಯಕ್ಕಾಗಿ ಅಟೆಂಡನ್ಸ್ ಆಫೀಸರರನ್ನೂ ನಿಯಮಿಸಿದೆ ಎಂಬುದು ಪ್ರಾಥಮಿಕ ಶಿಕ್ಷಣದ ಬಗ್ಗೆ ಸರಕಾರವು ಆಸ್ಥೆವಹಿಸುತ್ತಿದೆಯೆಂಬುದಕ್ಕೆ ಪ್ರಮಾಣವಾಗಿದೆ. ಇನ್ನೂ ಇಕ್ಕ ಹೆಚ್ಚಾಗಿ ಸರಕಾರದ ಆಸ್ಥೆ ಹೆಚ್ಚಾಗಲೆಂದು ಹಾರೈಸುತ್ತೇವೆ.

ಕನ್ನಡ ಸಾಹಿತ್ಯ ಸಮ್ಮೇಲನ:

ಈ ಸಲ ಕನ್ನಡ ಸಾಹಿತ್ಯ ಸಮ್ಮೇಲನವು ಪರಪನಹಳ್ಳಿಯಲ್ಲಿ ಮೇ ತಿಂಗಳಲ್ಲಿ ನೇರಲಿದೆ. ಅದಕ್ಕೆ ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಮೈಸೂರು ಸರಕಾರದ ಓರಿಯಂಟಲ್ ಟ್ರಾನ್ಸ್ಲೇಟರರಾದ ಶ್ರೀಮಾನ್ ಪಿ. ಕೆ. ವೆಂಕಟರಾಮಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಸಾಹಿತ್ಯ ಸಮ್ಮೇಲನವು ಕನ್ನಡದ ಸಮಸ್ಯಗಳ ಬಗ್ಗೆ ಸರಿಯಾದ ದಾರಿಯನ್ನು, ಗಡಿಸಾದಿನ ವಿಷಯವಾಗಿ ಮಾಡಬೇಕಾದ ಕಾರ್ಯವನ್ನು ಸೂಚಿಸುವುದೆಂದೂ, ಗೊತ್ತುವಳಿಗಳನ್ನು ಆದಷ್ಟು ಕಡಮೆ ಮಾಡಿ ಹೆಚ್ಚು ಕಾರ್ಯ ಪ್ರನೃತ್ತವಾಗಲೆಂದೂ ಹಾರೈಸುತ್ತೇವೆ. ಮತ್ತು ನಿಯೋಜಿತ ಅಧ್ಯಕ್ಷರನ್ನು ಆಫಿನಂಮಿಸುತ್ತೇವೆ. ಆದರೆ ಎಪ್ರಿಲ್ ತಿಂಗಳದ ಕೊನೆಯ ದಿನಗಳಲ್ಲಿ ಸಮ್ಮೇಳನವನ್ನು ಜರಗಿಸುವುದು ಅಷ್ಟು ಯೋಗ್ಯವಾದುದಾಗದೆಂದು ಬಗೆಮ ಮೇ ತಿಂಗಳಲ್ಲಿ ಜರುಗಿಸಿದುದರಿಂದ ಅನೇಕ ಕನ್ನಡ ಪ್ರೇಮಿಗಳಾದ ಸರಕಾರಿ ನೌಕರರಿಗೆ ಹಾಗೂ ಅಧ್ಯಾಪಕರಿಗೆ ಸಮ್ಮೇಳನಕ್ಕೆ ಹೋಗಲು ಅನುಕೂಲತೆಯುಂಟಾಯಿತು. ದಿಸೆಂಬರವ ಕೊನೆಯ ದಿನಗಳಲ್ಲಿ . ಸಮ್ಮೇಳನ ಜರುಗತಕ್ಕದ್ದು ವಿಹಿತವಾದದ್ದು. ಇನ್ನು ಮುಂದೆ ಇತ್ತ ಸಾಹಿತ್ಯ ಪರಿಷತ್ತು ಗಮನ ಕೊಡುವುದೆಂದು ಭಾವಿಸಲಾಗಿದೆ.

ಟ್ರೇನಿಂಗ ಕಾಲೇಜುಗಳು:

ಸರಕಾರದ ಪರವಾಗಿ ಕಾರವಾರ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿ (ಟ್ರೇನಿಂಗ್) ಕಾಲೇಜು ಇದೇ ಜೂನ ತಿಂಗಳಲ್ಲಿ ತೆರೆಯಲ್ಪಡಲಿದೆಯೆಂದು ದಟ್ಟ ಸುದ್ದಿ ಇದೆ. ಈ ಸುದ್ದಿ ನಿಜವಾಗಲೆಂದು ಹಾರೈಸುತ್ತೇವೆ.

ಕಲಾಶಿಕ್ಷಣ:

ಕಾಂಗ್ರೆಸ್ ಮಂತ್ರಿ ಮಂಡಲವು ಕಲಾ ಶಿಕ್ಷಣದ ಕಡೆಗೂ ಗಮನ ಕೊಡತೊಡಗಿತು. ಮುಂಬಯಿ ಸರಕಾರವು ತಜ್ಞರ ಒಂದು ಕಮಿಟಿಯನ್ನು ನಿಯಮಿಸಿತು. ಆ ಕಮಿಟಿಯು ಮಾಡಿದ ಶಿಫಾರಸುಗಳ ಮೇರೆಗೆ ಪ್ರಾಥಮಿಕ ಶಿಕ್ಷಕರಿಗೂ ಡ್ರಾಯಿಂಗ ಶಿಕ್ಷಣದ ಜ್ಞಾನವನ್ನು ಹೆಚ್ಚಾಗಿ ಮಾಡಿಕೊಡುವ ಉದ್ದೇಶದಿಂದ, ಪ್ರಾಥಮಿಕ ಶಿಕ್ಷಣ ಪಡೆಯುತಿರುವ ವಿದ್ಯಾರ್ಥಿಗಳ ಜ್ಞಾನವು ಕಲಾ ಶಿಕ್ಷಣದ ಕಡೆಗೆ ಹೋಗಿ, ಅವರ ಒಲವು ಪ್ರವೃತ್ತಿ

ಮೂಲ ಶಿಕ್ಷಣದ ಕಡೆಗೆ, ತಾಂತ್ರಿಕ, ಯಾಂತ್ರಿಕ ಜ್ಞಾನಾರ್ಜನೆಯ ಕಡೆಗೆ ಒಲಿಯಬೇಕೆಂಬ ಉದ್ದೇಶದಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಇದೇ ವರ್ಷದ ಬೇಸಿಗೆಯ ರಜೆಯಲ್ಲಿ ಡ್ರಾಯಿಂಗ ಶಿಕ್ಷಣ ತರಬೇತಿ ವರ್ಗಗಳು ಪ್ರಾರಂಭವಾಗಲಿವೆ. ಈ ವರ್ಗಗಳು ಅಯಾ ಜಿಲ್ಲೆಯ ಏ. ಓ. ಅವರ ಮೇಲ್ವಿಚಾರಣೆಯಲ್ಲಿ ನಡೆಯುವವು. ಪ್ರಾಥಮಿಕ ಶಿಕ್ಷಕರು ಈ ವರ್ಗಗಳಿಗೆ ಆರಿಸಲ್ಪಡುವರು; ಡಿ. ಇ. ಆಯ್. ಅವರು ನಿರವಾಗುವರು; ಅಲ್ಲದೆ ಆರಿಸಿದ ಶಿ. ವಿದ್ಯಾರ್ಥಿಗಳೊಡನೆ ಈ ವರ್ಗಗಳಲ್ಲಿ ಅವರೂ ಹಾಜರಿರುವರು. ಈ ವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ ೧೦೦ರಿಂದ ೧೫೦ರವರೆಗೆ ಇರುವುದು.

ಈ ವರ್ಗಗಳು ಪ್ರಾರಂಭವಾಗುವ ದಿನ ಏ. ಓ ಅವರಾಗಲಿ ಡಿ. ಇ. ಆಯ್. ಅವರಾಗಲಿ ಉದ್ಘಾಟನ ಭಾಷಣ ಮಾಡುವರು. ವರ್ಗಗಳು ಮುಂಜಾನೆ ಮತ್ತು ಮಧ್ಯಾಹ್ನ ಕಾಲಾವಧಿಯಲ್ಲಿ ನಡೆಯುವವು. ದಿನಾಲು ಶಿ. ವಿದ್ಯಾರ್ಥಿಗಳ ಹಾಜರಿಯೂ ತೆಗೆದುಕೊಳ್ಳಲ್ಪಡುವುದು. ವೇಳೆಯನ್ನು ಏ. ಓ. ಅವರು ನಿರ್ಧರಿಸುವರು.

ಈ ಡ್ರಾಯಿಂಗ ತರಬೇತಿ ವರ್ಗಗಳಿಗೆ ತಜ್ಞರಾದ ಡ್ರಾಯಿಂಗ ಶಿಕ್ಷಕರು ನಿಯಮಿಸಲ್ಪಟ್ಟಿರುವರು. ಅವರ ಆಧೀನಕ್ಕೆ ಎರಡು ವರ್ಗಗಳು ಒಳಪಟ್ಟಿರುವವು. ವಿಷಯಗಳ ದೃಷ್ಟಿಯಿಂದ ಸಾಮಾನ್ಯವಾಗಿ ಎರಡು ಗುಂಪುಗಳು ಮಾಡಲ್ಪಡಬಹುದು :—ಗುಂಪು ೧. ಫ್ರೀ ಹ್ಯಾಂಡ ಡ್ರಾಯಿಂಗ್. ಗುಂಪು ೨. ಭೂಮಿತಿ ಉಪಕರಣಗಳ ಸಹಾಯದೊಡನೆ ಡ್ರಾಯಿಂಗ್.

ಈ ಕಲಾ ಶಿಕ್ಷಣ ತರಬೇತಿಯ ವರ್ಗಗಳು ಧಾರವಾಡದ ಕನ್ನಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ನಡೆಯಲಿವೆ. ಶ್ರೀ. ಅ. ಈಮಡೋಳಿ ಹಾಗೂ ಶ್ರೀ. ಬಡಿಗೇರ ಅವರು ಈ ವರ್ಗಗಳಿಗೆ ಶಿಕ್ಷಕರಾಗುವರು.

ಸೂಚನೆ

ಮುಂಬರುವ ಬೇಸಿಕ್ ಎಜ್ಯುಕೇಶನದ ಸಂಚಿಕಾಗಾರಿಕೆಯೆಂದು ನಾವು ಈ ಸಲ ಕೆಲವು ಶಾಲೆಗಳಿಗೆ ಅವು ಶಾಲೆಯ ತೋಟವನ್ನು ಮಾಡಿಕೊಳ್ಳಲಿಚ್ಛಿಸುತ್ತಿದ್ದಲ್ಲಿ ಕಾಯಪಲ್ಲೆಯ ಬಗೆ ಬಗೆಯ ಬೀಜಗಳನ್ನು ಪುಕ್ಕಟೆಯಾಗಿ ಕೊಡಲಿಚ್ಛಿಸುತ್ತೇವೆ. ಆಯಾ ಶಾಲೆಗಳ ಮುಖಂಡಿನ ಶಿಕ್ಷಕರು ಬೀಜಗಳು ಬೇಕಾದಲ್ಲಿ ಸಾಕಷ್ಟು ಅಂಚೆ ಬೆಲ್ಲ ಕಳಿಸಿ ನಮಗೆ ಬರೆದು ತರಿಸಿಕೊಳ್ಳಬೇಕು.

ಎಸ್. ಆರ್. ಜೋಶಿ
ಪ್ರಿನ್ಸಿಪಾಲ
ಟ್ರೇನಿಂಗ ಕಾಲೇಜ, ಧಾರವಾಡ

ಹಳ್ಳಿಗರ ಸುಧಾರಣೆ

ಲೇಖಕರು:—ಶ್ರೀ. ಎಸ್. ಆರ್. ಜೋಶಿ, ಬಿ. ಎ; ಬಿ. ಟಿ.

ಇಂದು ಜಗತ್ತಿನ ಸೋಟ ಹಳ್ಳಿಗರ ಕಡೆಗೆ ಹೊರಳಿದೆ. ಭಾರತೀಯ ಮುಖಂಡರ ಲಕ್ಷ್ಯವೂ ಹಳ್ಳಿಗಳ ಹಾಗೂ ಹಳ್ಳಿಗರ ಕಡೆಗೆ ತಿರುಗಿದೆ. ಹಳ್ಳಿಗರ ಜೀವನದಲ್ಲಿ ಚೈತನ್ಯವನ್ನು ಹುಟ್ಟಿಸಲು ನಾನಾ ಯೋಜನೆಗಳನ್ನು ಸಿದ್ಧಗೊಳಿಸುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಹಳ್ಳಿಗರೇ ಇಡೀ ದೇಶದ ಜನರಿಗೆ ಹೊಟ್ಟೆಗೆ ಆಹಾರ ಮತ್ತು ದೇಹಕ್ಕೆ ಬಟ್ಟೆ ಒದಗಿಸಿ ಕೊಡುವವರು. ಅವರ ಸ್ಥಿತಿ ಇಂದು ತೋಚಿನೀಯವಾಗಿದೆ. ಅವರ ಉದ್ಧಾರವಾಗದ ಹೊರತು ದೇಶದ ಉದ್ಧಾರವಾಗುವುದಿಲ್ಲ. ಅವರ ಉದ್ಧಾರ ಕಾರ್ಯವನ್ನು ಮಾಡುವ ದೆಂತು, ಯಾರು ಮಾಡಬೇಕು ಎಂಬುದನ್ನೂ ಹಳ್ಳಿಗರ ಜೀವನದಲ್ಲಿ ಚೈತನ್ಯವನ್ನು ತುಂಬಲು ಯಾರು ಯಾರು ಯಾವ ರೀತಿಯಲ್ಲಿ ಕೆಲಸ ಮಾಡಬಲ್ಲರೆಂಬುದನ್ನೂ ತಿಳಿಸುವದು ಈ ಲೇಖನದ ಉದ್ದೇಶ.

ಹಳ್ಳಿಗರು ಉದ್ಧಾರಕರ್ತರು ಮತ್ತು ಅವರ ಉದ್ಧಾರ ಎಂತು ಮಾಡಬೇಕೆಂಬುದನ್ನು ವಿವರಿಸುವ ಮೊದಲು ಹಳ್ಳಿಗರಲ್ಲಿ ಎಷ್ಟು ಬಗೆಯ ಜನರು ಇರುವರು ಮತ್ತು ಹಳ್ಳಿಗರ ಉದ್ಧಾರ ಕಾರ್ಯದಲ್ಲಿ ಎಡರಾಗಿ ಯಾರು ಪರಿಣಮಿಸುವರೆಂಬದನ್ನು ಮೊದಲು ವಿಚಾರಿಸ ಬೇಕೆಂಬುದು ಅವಶ್ಯಕ. ಹಳ್ಳಿಗರಲ್ಲಿ ಸಾಧಾರಣವಾಗಿ ಐದು ಬಗೆಯ ಜನರು ಇರುವುದು ಕಂಡು ಬಂದಿದೆ.

೧. ಜಮೀನದಾರರು, ಇನಾಮದಾರರು, ಸಾಹುಕಾರರು, ಈ ಮೂವರು ಒಂದು ಗುಂಪಿಗೆ ಸೇರಿದವರು. ಇವರು ಲಾವಣಿ ಹಣ, ಬಡ್ಡಿ ವ್ಯವಹಾರ, ಅರಳಿ ಮುಂತಾದ ಸಾಹಸದ ವ್ಯಾಪಾರವನ್ನು ಮಾಡಿ ಜೀವಿಸುವವರು. ಹಳ್ಳಿಗರ ಸುಧಾರಣೆಯು ಇವರ ದೃಷ್ಟಿಯಲ್ಲಿ ದೊಡ್ಡಸ್ತಿಕೆಯನ್ನು ತರುವಂಥ ಕೆಲಸ. ಮನಃಪೂರ್ವಕವಾಗಿ ಹಳ್ಳಿಗರ ಸುಧಾರಣೆಯಾಗಬೇಕೆಂದು ಇವರು ಇಚ್ಛಿಸುವವರಲ್ಲ. ಇವರು ಮಾಡುವ ಸುಧಾರಣೆಯ ಕೆಲಸ ತೋರಿಕೆಯದು, ಕ್ಷಣಿಕ ದೊಡ್ಡಸ್ತಿಕೆಯನ್ನು ತಂದುಕೊಡುವಂತಹದು. ಸಾಲಿಸು ಪಂಚರಾಗುವುದು, ಸಹಕಾರಿಸಂಘ, ಸೊಸಾಯಿಟಿಗಳ ಮೆಂಬರರಾಗುವುದು ಮುಂತಾವ ಕಾರ್ಯಗಳೇ ಹಳ್ಳಿಗರ ಸುಧಾರಣೆಯ ಕಾರ್ಯಗಳೆಂದು ತಿಳಿಯುವರು. ಇವರು ಇಷ್ಟ ಪಟ್ಟರೆ ಬೇಕಾದಂಥ ಉತ್ತಮವಾದ ಕಾರ್ಯವನ್ನು ಮಾಡಿ ತೋರಿಸಬಲ್ಲ ಸಾಮರ್ಥ್ಯ ವಿದ್ದವರು. ಆದರೆ ಆ ಸಾಮರ್ಥ್ಯವನ್ನು ತೋರಿಸಲು ಪ್ರಯತ್ನ ಪಡುವುದು ಕಡಿಮೆ. ತಾವು ಸ್ವತಃ ಕೆಲಸ ಮಾಡದೆ ಅನ್ಯರಿಂದ ಮಾಡಿಸಿಕೊಂಡು ಕೀರ್ತಿ ಲಾಭ ಪಡೆಯಬೇಕೆಂಬ ಮನೋವೃತ್ತಿಯುಳ್ಳವರು. ಇವರಿಂದ ನಮ್ಮ ಹಳ್ಳಿಗಳು ಸುಧಾರಿಸಬಹುದೆಂದು ವಿಶ್ವಾಸ ವಿಟ್ಟು ಕಾರ್ಯಪ್ರವೃತ್ತರಾಗುವದು ನಾಳಿಗುದ್ದಿ ಮೈನೋಯಿಸಿಕೊಂಡಂತೆ.

೨. ಹುಟ್ಟು ಒಕ್ಕಲಿಗರು ಇವೊಂದು ಗುಂಪಿಗೆ ಸೇರಿದವರು. ಒಕ್ಕಲುತನವೇ ಇವರ ಮುಖ್ಯ ಉದ್ಯೋಗ. ಉತ್ತಮ ದನಗಳನ್ನು ಸಾಕುವುದು, ಹೊಲಗಳಿಗೆ ಒಳ್ಳೆಯ

ಗೊಬ್ಬರ ಹಾಕಿ ಪರಿತ್ರಮ ಪಟ್ಟು ಹೆಚ್ಚು ಬೆಳೆ ಬೆಳೆದುಕೊಳ್ಳುವುದು ಇವರಿಗೆ ಹೆಮ್ಮೆಯ ವಿಷಯ. ಇವರಲ್ಲಿ ಮಿತವ್ಯಯತನವು ಹೆಚ್ಚಾಗಿ ಕಂಡುಬರುವುದು. ಯಾವ ಗೋಚಿಗೂ ಹೋಗದೆ ಕಡಿಮೆ ಖರ್ಚಿನಲ್ಲಿ ಉಪಜೀವನ ಸಾಗಿಸಿಕೊಂಡು ಹೋಗುವದು ಇವರಲ್ಲಿಯ ದೊಂದು ದೊಡ್ಡ ಗುಣ. ಇವರು ಮೊದಮೊದಲು ತಮ್ಮ ಮಕ್ಕಳನ್ನು ಸಾಲೆಗೆ ಕಳಿಸಿ, ಅಮೇಲೆ ಬಿಡಿಸಿ ಒಕ್ಕಲುತನಕ್ಕೇ ಅವರನ್ನು ಸೇರಿಸಿಕೊಳ್ಳಬೇಕೆಂಬ ಹಂಬಲ ಹೆಚ್ಚು ಇವರಿಗೆ. ಇವರಲ್ಲಿ ಸಾಲವಿದ್ದವರು ಬಹಳಿಲ್ಲ. ಆದರೆ ಇತ್ತೀಚಿಗೆ ಇವರು ಅತಿವೃಷ್ಟಿ, ಅನಾವೃಷ್ಟಿ, ಯುದ್ಧ, ಬರಗಾಲ, ಕರಭಾರ ಮುಂತಾದುದರ ಫಲವಾಗಿ ಸಾಲಗಾರರಾಗಿದ್ದಾರೆ. ಆದಾಗ್ಯೂ ಇವರಲ್ಲಿ ಕೆಲವರಿಗೆ ಸಣ್ಣ ಬಡ್ಡಿ ವ್ಯವಹಾರವನ್ನು ಸಪ ಮಾಡುತ್ತಾ ತಮ್ಮ ಸಾಗುವಳಿ ಕಾರ್ಯವನ್ನು ಸಾಗಿಸಿಕೊಂಡು ಚೆನ್ನಾದ ರೀತಿಯಲ್ಲಿ ಹೊಲಗಳನ್ನಿಟ್ಟುಕೊಳ್ಳುವುದರಲ್ಲಿ ಅಭಿರುಚಿ ಬಹಳ.

೩. ಒಕ್ಕಲುತನದ ಸಾಕಷ್ಟು ಅನುಭವವಿಲ್ಲವಿದ್ದರೂ ಇತರ ಉದ್ಯೋಗಗಳನ್ನು ಬಿಟ್ಟು ಒಕ್ಕಲತನ ಮಾಡುವ ಜನರ ಇನ್ನೊಂದು ಗುಂಪು ಹಳ್ಳಿಯಲ್ಲುಂಟು. ಇವರು ಇತರರಿಂದ ಕೆಲಸ ಮಾಡಿಸಿಕೊಂಡು ಹೊಟ್ಟೆ ಹೊರಕೊಳ್ಳುವರು. ಇವರ ಹೊಲಗಳು ಉಪಾಧ್ಯಾಯರ ಹೊಲಗಳಂತೆ ನಿಷ್ಕಾಳಜಿತನದಿಂದ ಸಾಗುವಳಿ ಮಾಡಲ್ಪಟ್ಟುವು ಇರುತ್ತವೆ. ಹೊಲಗಳು ಬೆಳೆಯದಸೂಲಕ ರೈತರು ಲಾವಣಿ ಹಣ ಕೊಡವಲ್ಲರೆಂದು ಯಾವಾಗಲೂ ರೈತರನ್ನೆ ದೂಷಿಸುತ್ತ ಕಡೆಗೆ ಹೊಲದ ಮೇಲೆ ಸಾಲ ತೆಗೆದು ಉಪಜೀವನ ಸಾಡುವರು.

೪. ಹಳ್ಳಿಗಳಲ್ಲಿ ಉದ್ಯೋಗ ದಂಧೆಗಳನ್ನು ನೂಡಿ ಹೊಟ್ಟೆ ತುಂಬಿಕೊಳ್ಳುವಂಥವರೂ ಇದ್ದಾರೆ. ಇವರಲ್ಲಿ ನೇಕಾರರು, ಬಡಿಗರು, ಕಮ್ಮಾರರು, ಕುಂಬಾರರು, ಒಡ್ಡರು, ಸಿಂಪಿಗರು ಮುಂತಾದವರು ಸಮಾವೇಶವಾಗುತ್ತಾರೆ. ಯುದ್ಧಪ್ರಯುಗ ಪ್ರಾರಂಭವಾದಂದಿನಿಂದ ಇವರ ಸ್ಥಿತಿ ದಿನದಿನಕ್ಕೆ ಕೆಟ್ಟುಹೋಗಿದೆ. ಇವರ ಸ್ಥಿತಿ ಈಗ ಅತ್ಯಂತ ಹೀನವಾಗಿದೆ.

೫. ಮೇಲ್ಕಾಣಿಸಿದವರ ಹೊರತಾಗಿ 'ಜಿಲ್ಲರ' ಇದ್ದ ಇನ್ನೂ ಕೆಲವರು ಹಳ್ಳಿಗಳಲ್ಲಿದ್ದಾರೆ. ಇವರು ಅತ್ಯಂತ ಕಷ್ಟ ಸ್ಥಿತಿಯಲ್ಲಿರುವರು. ಅವರಿಗೆ ಕೂಲಿಯ ಹೊರತು ಬೇರೆ ಕೆಲಸವಿಲ್ಲ. ಈಗ ಕೂಲಿಯ ದರವೂ ಬಹಳ ಕಡಿಮೆಯಾಗಿದೆ. ಕೂಲಿಕಾರರ ಹುಡುಗರು ಈಗಿನ ಶಾಲೆಗಳಲ್ಲಿ ಕಂಡುಬರುವುದಿಲ್ಲ. ದವಾಖಾನೆಗಳಲ್ಲಿಯು ಔಷಧೋಪಚಾರದ ಸೌಕರ್ಯವೂ ಇವರಿಗೆ ಸಿಕ್ಕುವುದಿಲ್ಲ. ಇವರಲ್ಲಿ ನೂರಕ್ಕೆ ಎಂಭತ್ತು ಜನರು ಸಾಲದಲ್ಲಿ ಮುಳುಗಿದ್ದಾರೆ. ಗಲಂ/೦ ಬಡ್ಡಿ ತೆತ್ತುತ್ತಾರೆ. ವಿಶೇಷತಃ ಇಂಥವರಿಗಾಗಿಯೇ ಹಳ್ಳಿಯ ಸುಧಾರಣೆಯಾಗಬೇಕೆಂದು ನಾವು ಈಗ ಬಯಸುತ್ತೇವೆ. ಉಳಿದ ಹಳ್ಳಿಗರ ಸುಧಾರಣೆಯಾಗಬೇಕಾದುದು ಅವಶ್ಯಕವಾಗಿದ್ದರೂ ಈ ಐವನೆಯ ಗುಂಪಿಗೆ ಸೇರಿದವರ ಸುಧಾರಣೆಯು ಮೊದಲು ಆಗಬೇಕು. ಇವರ ಸ್ಥಿತಿ ಸುಧಾರಿಸಿದರೆ ಉಳಿದ ನಾಲ್ಕೂ ಗುಂಪುಗಳ ಜನರ ಸ್ಥಿತಿಯು ತಾನಾಗಿಯೆ ಸುಧಾರಿಸುತ್ತ ಹೋಗುವುದು. ಇವರ ಸುಧಾರಣೆಯಿಂದ ಮೇಲಿನ ಗುಂಪಿನ ಜನರ ಸುಧಾರಣೆಯೂ ಆಗುವುದು, ಇವರೂ ಬುದ್ಧಿಗಲಿಯುವರು.

ಹಳ್ಳಿಗರ ಜೀವನದಲ್ಲಿ ಅನೇಕ ಎಡರುಗಳು—ಅಡಚಣೆಗಳುಂಟಾಗಿ ಅವರು ಅತ್ಯಂತ ಕಷ್ಟಕ್ಕೀಡಾಗಿದ್ದಾರೆ. ಅವರ ಜೀವನದಲ್ಲಿ ದುಃಖವನ್ನು ಬೆರೆಸುವುದಕ್ಕೆ ಕಾರಣವಾದ ಸಂಗತಿಗಳಲ್ಲಿ ಕೆಳಗಿನವು ಮುಖ್ಯವಾದುವು.

೧. ಮಳೆಯ ಅಭಾವ—ಬರಗಾಲದ ಭಯ

೨. ಔಷಧೋಪಚಾರದ ಸೌಕರ್ಯದ ಅಭಾವ

೩. ಹೊಲಗೆಲಸ ಬಾಹುಲ್ಯದ ಮೂಲಕ ಮಕ್ಕಳಿಗೆ ಶಿಕ್ಷಣದ ಅಭಾವ

೪. ಯಾಂತ್ರಿಕ ಸಾಮಗ್ರಿಗಳ ಅಪಾರ ಉಪಯೋಗ.

೫. ಗ್ರಾಮ ಪಂಚಾಯತಿಗಳ ಅಭಾವ; ಕೋರ್ಟುಗಳ ವಿಪುಲತೆ.

೬. ಹಳ್ಳಿಗನ "ಸುಧಾರಣೆ—ಬದಲಾವಣೆ ಬಯಸದ ಸ್ವಭಾವ."

ಸದ್ಯದಲ್ಲಿ ರಾಷ್ಟ್ರೀಯ ಜೀವನದಲ್ಲಿ ಹಳ್ಳಿಗರು ಘಟಕರಲ್ಲಿ ಗಣ್ಯರಾಗುತ್ತಿದ್ದಾರೆ. ಹಳ್ಳಿಗರು ನಿರಕ್ಷರಿಯಿದ್ದರೂ ಸುಶಿಕ್ಷಿತರೂ ಸುಸಂಸ್ಕೃತರೂ ಅಗಿರುವರಲ್ಲವೆ ವ್ಯವಹಾರ ಜ್ಞಾನದಲ್ಲಿ ಅವರು ಏನೂ ಕಡಿಮೆ ಇಲ್ಲ. ಅವರು ತಮ್ಮ ನೇಗಿಲಕ್ಕೆ ಅಂಟಿಕೊಂಡಿರುವರು. ಇವರ ಮೇಲೆಯೇ ಪಟ್ಟಣಿಗರು ಅವಲಂಬಿಸಬೇಕಾಗಿದೆ. ಈ ರೀತನ್ ಕಾಲದಲ್ಲಿಯಂತೂ ಪಟ್ಟಣಿಗರು ಹಳ್ಳಿಗರನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿದೆ. ಪಟ್ಟಣಿಗರಲ್ಲಿ ಪಟ್ಟಣದ ಜೀವನಕ್ಕೆ ಬೇಸತ್ತು ಸಂಪು ಮುಂತಾದವುಗಳನ್ನು ಹೂಡುವ ಒಲುಮೆ ಕಂಡು ಬರುತ್ತಿದೆ. ಆದರೆ ಹಳ್ಳಿಯ ನೇಗಿಲ ಯೋಗಿಗಳು ಫಲಾಕಾಂಕ್ಷೆಯನ್ನು ಸಹ ದೇವರ ಕಡೆಗೇ ಬಿಟ್ಟು ತಮ್ಮ ದುಡಿತವನ್ನು ಯಾವಾಗಲೂ ಸಾಗಿಸುತ್ತಿರುವರು. ಆದರೆ ಹಳ್ಳಿಗರಲ್ಲಿ ಕೆಲವರು ಸುಧಾರಿಸಿದವರು ಹಳ್ಳಿಗಳನ್ನು ಬಿಟ್ಟು ಪಟ್ಟಣ ಸೇರುತ್ತಿರುವರು. ಇದು ದೇಶಕ್ಕೆ ವಿಷಾದಕರವಾದುದು.

ಇವರ ಸುಧಾರಣೆಯನ್ನು ಕೆಳಗೆ ಕಾಣಿಸಿದ ರೀತಿಯಲ್ಲಿ ಮಾಡಬಹುದು:

೧. ಹಳ್ಳಿಯವನ್ನು ಇಟ್ಟುಕೊಂಡು ಹೊಸದರ ಕಡೆಗೆ ಅನುಕೂಲ ದೃಷ್ಟಿಯಿಂದ ನೋಡಿ ಅದನ್ನು ಬೆರೆಸುವದು.

೨. ಹಳ್ಳಿಯ ಜನರು ಸ್ಕೂಲ ಕಾಲೇಜುಗಳಲ್ಲಿ ಅಭ್ಯಸಿಸಿದಸಂತರ ಅವರು ಹಳ್ಳಿಯನ್ನು ಬಿಟ್ಟು ಹೋಗುವುದನ್ನು ತಡೆಯುವುದು.

೩. ಹಳ್ಳಿಗರಿಗೆ ಯಂತ್ರ, (ಸುಧಾರಿಸಿದ) ಗೊಬ್ಬರ ಮುಂತಾದವುಗಳ ಬಗ್ಗೆ ಮಾಹಿತಿ ಮಾಡಿಕೊಡುವುದು. ದಿನ ದಿನಕ್ಕೆ ವಿಜ್ಞಾನದಲ್ಲಿ ಆಗುತ್ತಿರುವ ಹೊಸ ಹೊಸ ಸುಧಾರಣೆಗಳ ಜ್ಞಾನವನ್ನು ಅವರಿಗೆ ಸಾಧಾರಣವಾಗಿಯಾದರೂ ಮಾಡಿಕೊಡಬೇಕು. ಇಲ್ಲದಿದ್ದರೆ ಅವುಗಳಲ್ಲಿ ಅವರು ಹಿಂದೆ ಬೀಳುವ ಸಂಭವವುಂಟು.

೪. ಸಹಕಾರೀ ಸಂಘ, ಸಾಲೆ, ಲಾಯಬ್ರರಿ, ರಾತ್ರಿ ಶಾಲೆ, ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡ್ ಪ್ರದರ್ಶನ, ದನಗಳ ಸಮ್ಮೇಲನ, ಹಿಕ್ಕಲತನದ ವಸ್ತುಗಳ ಪ್ರದರ್ಶನ, ಸ್ಪಡ್ಬುಲ್ ಸಂಗೋಷನ, ಸುಧಾರಿಸಿದ ಕೃಷಿಯ ಜ್ಞಾನದಾನ. ನೀರಾವರಿಯ ಸವಲತ್ತಾರಿಸಿದ

ರೀತಿ ಮುಂತಾದವುಗಳಿಂದ ಸುಧಾರಣೆ ಮಾಡಬಹುದಾಗಿದೆ. ಹಳ್ಳಿಗರ ಲಕ್ಷ್ಯವು ಸ್ವಚ್ಛತೆಯ ಕಡೆಗೆ ಹೋಗುವಂತೆ ಮಾಡುವದು ಸಹ ಸುಧಾರಣೆಯ ಒಂದು ಅಂಗಪ್ರಧಾನವಾಗಿದೆ.

ಈ ಬಗೆಯ ಸುಧಾರಣೆಗಳನ್ನು ಶಿಕ್ಷಕರು, ಶಿಕ್ಷಣ ಖಾತೆಯ ಬೀಟ ಆಫೀಸರರು ಇತರ ಖಾತೆಯ ಬೀಟ ಆಫೀಸರರು ಮಾಡಬಹುದು. ಅವರು ಯಾವ ಯಾವ ರೀತಿಯಲ್ಲಿ ಮಾಡಬಹುದೆಂಬುದನ್ನು ಮುಂದಿನ ಸಂಚಿಕೆಯಲ್ಲಿ ವಿಚಾರಿಸಲಾಗುವದು.

(S. W. Moo Maw ಇವರ Education and Village Improvement ಎಂಬುವರ ಆಧಾರದಿಂದ)

ಸ್ವೀಕಾರ ಮತ್ತು ಅಭಿಪ್ರಾಯ

ಡ್ರಾಯಿಂಗ ಶಿಕ್ಷಕ:—ಲೇಖಕರು ಶ್ರೀ. ಅ. ಕಮಡೊಳ್ಳಿ, ಆರ್ಟ ಮಾಸ್ಟರ. ಪ್ರಕಾಶಕರು: ಭಾರತೀಯ ಸಾಹಿತ್ಯ ಮಂದಿರ, ಧಾರವಾಡ. ಪುಸ್ತಕ ದೊರೆಯುವ ಸ್ಥಳ: ಸುಪ್ರೀಮು ಸ್ಟುಡಿಯೊ, ಸ್ಟೇಶನ್ ರೋಡ ಹುಬ್ಬಳ್ಳಿ. ಕ್ರೌನ ೧/೮ ದಳ ಪುಟಗಳು ಮತ್ತು ೧೧ ಚಿತ್ರಗಳು+೧ ಬಣ್ಣದ ಮೇಳ ಚಕ್ರ. ಬೆಲೆ ೧—೨—೦

ಕನ್ನಡ ಕಲಾವಿದರಾದ ಶ್ರೀ. ಅ. ಕಮಡೊಳ್ಳಿ ಅವರ ಕೀರ್ತಿಲತೆ ಲಂಡನ್ನಿನ ವರೆಗೂ ಹಬ್ಬಿದೆ. ೨೦-೨೫ ವರ್ಷ ಈ ಕಲೆಯ ವ್ಯಾಸಂಗ ಹಾಗೂ ಅಧ್ಯಾಪನದ ಅನುಭವ ಇವರಿಗೆ ಇದೆ. ವಿಷಯ ನಿರೂಪಣೆಯ ಹದ ಇವರ ಲೇಖಣಿಕಯಲ್ಲಿದೆ. ಕಲೆ ಇವರ ಕುಂಚದಲ್ಲಿ ಪರಿಣತಿಯನ್ನು ಹೊಂದಿದೆ. ಈ ಮಹನೀಯರು ಈ ಪುಸ್ತಕದಿಂದ ಕನ್ನಡ ಸಾಹಿತ್ಯದ ಒಂದು ಕೊರತೆಯನ್ನು ತುಂಬಿದ್ದಾರೆ.

ಆಕಾರ ತುಂಬಿಕೊಳ್ಳುವ (ಮಾಸ್) ಸರಳಗೈ (ಫ್ರೀ ಆರ್ಮ), ಸೌಂದರ್ಯದ, ಕೃತ್ರಿಮ ವಸ್ತುಗಳ, ಜ್ಞಾಪಕ ಶಕ್ತಿಯ್ಯುಕಾಲ್ಪನಿಕ, ಮನುಷ್ಯ-ಪಶು-ಪಕ್ಷಿ-ಪ್ರಾಣಿಗಳ, ಸುಳುವು ಹೊಳುವುಗಳ, ಅಳತೆಯ ಅಕ್ಷರ ಒಳಹುದ ಡ್ರಾಯಿಂಗುಗಳನ್ನು ಕಲಿಯುವ ಹಾಗೂ ಕಲಿಸುವ ವಿಧಾನವನ್ನು ಸರಳ ಶೈಲಿಯಲ್ಲಿ ನಿವೇದಿಸಿ ಬಣ್ಣದ ಮಿಶ್ರಣದ ತತ್ವಗಳನ್ನು ನಿರೂಪಿಸಿದ್ದಾರಲ್ಲದೆ ಕೆಲವು ನಿರೀಕ್ಷಣೆ ಹಾಗೂ ಕಲಿಸುವಿಕೆಯ ಬಗ್ಗೆ ಸೂಚನೆಗಳನ್ನು ಮಾಡಿದ್ದಾರೆ. ಈ ಪುಸ್ತಕವು ಪ್ರಾಥಮಿಕ ಶಾಲೆಗಳ, ಪೂರ್ವಮಿಕ ಶಾಲೆಗಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಚಿತ್ರಕಲೆಯ ಅಭ್ಯಾಸ ಮಾಡಿಯಿಸುವವರಿಗೂ ಅತ್ಯುಪಯುಕ್ತವಾಗಿದೆ. ವಿಶೇಷತಃ ಚಿತ್ರಕಲೆಯ ಪ್ರಾಥಮಿಕ ಪ್ರಗತಿಗೆ ಪುಸ್ತಕವು ನೆರವಾಗುತ್ತದೆ. ಇಂಥ ಉಪಯುಕ್ತ ಪುಸ್ತಕ ಬರೆದುದಕ್ಕಾಗಿ ಲೇಖಕರನ್ನು ಅಭಿನಂದಿಸುತ್ತೇವೆ. ಹಾಗೂ ಅದಕ್ಕೂ ಹೆಚ್ಚಿನ ಕರಗತಿಯ ಚಿತ್ರಕಲೆಯ ಅಧ್ಯಯನಕ್ಕೆ ಸಹಾಯಕವಾಗುವ ಅನೇಕ ಪುಸ್ತಕಗಳು ಈ ನುರಿತ ಚಿತ್ರ ಶಿಲ್ಪಿಗಳ ಕೈಯಿಂದ ಹೊರ ಬೀಳಲೆಂದು ಹಾರೈಸುತ್ತೇವೆ.

—ಎಸ್. ಆರ್. ಜೋಶಿ.

ಬಹುವರ್ಗ ಮಾದ

ಶಿಕ್ಷಕರು:— ಶ್ರೀ. ಲ. ಬಿ. ಜಾಲಿಸತ್ತಿ, ಬಿ. ಎ ಬಿ. ಟಿ.

ಬಾಲಕರ ವರ್ಗ

ವಿಷಯ:—ಕೈಕೆಲಸ

ಪ್ರ. ವಿ:—ಕಾಗದದಿಂದ ತಿರುಗಣಿಯನ್ನು ಮಾಡುವದು.

ಉಪಕರಣ:—ಕತ್ತರಿಸಿದ ಬಣ್ಣದ ಕಾಗದ, ಬೆಂಡು, ಟಾಚಣಿ.

ಪ್ರಸ್ತಾವನೆ:—ಜಾತ್ರೆಯಿಂದ ನೀವು ಯಾವ ಯಾವ ಆಟಿಗೆಯ ನಾಮಾನುಗಳನ್ನು ತರುತ್ತೀರಿ? ಇವರ ಬಗ್ಗೆ ವಿಚಾರ ಮಾಡಿ ನಮನಲ್ಲಿಟ್ಟುಕೊಳ್ಳಿರಿ.

....

ಆಟಿಗೆಯ ಸಾಮಾನುಗಳ ಹೆಸರುಗಳನ್ನು ಕೇಳಿಕೊಳ್ಳುವದು. ಶಿಕ್ಷಕನು ತಂದ ತಿರುಗಣಿಯನ್ನು ತೋರಿಸುವದು. ಅದರ ಹೆಸರನ್ನು ಕೇಳುವದು.

ಉದ್ದೇಶ ಕಥನ:—ಇಂಥ ತಿರುಗಣಿಯನ್ನು ಮಾಡಲು ಈಗ ಕಲಿಯೋಣ.

ತಿರುಗಣಿಯ ನೀರೀಕ್ಷಣೆ
ತಿಕ್ಷಕನ ಪ್ರತ್ಯಕ್ಷ ಕೃತಿ.

ಉಪಕರಣಗಳನ್ನು ಕೊಟ್ಟು ಬಾಲಕರಿಗೆ ತಿರುಗಣಿಗಳನ್ನು ಮಾಡಲಿಕ್ಕೆ ಹಚ್ಚುವದು.

ಬಾಲಕರು ಮಾಡಿದ ಕೆಲಸವನ್ನು ತಪಾಸಿಸುವದು ಹಾಗೂ ತಪ್ಪಿದ್ದಲ್ಲಿ ತಿದ್ದುವದು.

ಚೆನ್ನಾಗಿ ಮಾಡಿದವರನ್ನು ಪ್ರೋತ್ಸಾಹಿಸುವದು.

ಉಪಸಂಹಾರ:—ಒಂದು ಚಿಕ್ಕ ಹಾಡನ್ನು ಕಲಿಸಿ ಮಕ್ಕಳನ್ನು ಹೊರಗೆ ಹೋಗಲು ಬಿಡುವದು.

ತಿರುಗಣಿ ಮಾಡಲು ಕಲಿತಿಹೆವು।
ಗಿರಿಗಿರಿ ತಿರುಗುವ ತಿರುಗಣಿಯು॥
ಗೆಳೆಯರೆ ತಿರುಗಣಿ ಆಡಲು ನಾವು।
ಗಾಳಿಗೆ ಹಿಡಿಯಲು ಓಡೋಣ॥

೧ನೆಯ ವರ್ಗ

ವಿಷಯ:— ಭಾಷೆ

ಪ್ರ. ವಿ. :—ಚಿತ್ರಗಳ ಹೆಸರಿನ ಬರಹ

ಉಪಕರಣ—ಕಮಂಡಲಿನ ಚಿತ್ರ ಮತ್ತು ಆಶ್ರಮದ

ಪ್ರಸ್ತಾವನೆ:— ಕಮಂಡಲಿನ ಚಿತ್ರವನ್ನು ತೋರಿ
ಇದನ್ನು ಯಾರು ಉಪಯೋಗಿ

ಆಶ್ರಮದ ಚಿತ್ರದರ್ಶನ:— ಈ ಚಿತ್ರದಲ್ಲಿ ಏನೇನು
ಎಂಬುದನ್ನು ನೋಡಿರಿ.

....

ಉದ್ದೇಶ ಕಥನ:—ಈ ಚಿತ್ರದೊಳಗೆ ಕಾಣುವ
ಹೆಸರುಗಳನ್ನು ಬರೆಯಲಿಕ್ಕೆ ಕಲಿಯುವಾ.

ಆ ಚಿತ್ರದ ನಿರೀಕ್ಷಣೆ:— ಪ್ರಶ್ನೆಗಳನ್ನು ಕೇಳಿ
ಕೆಲವು ವಸ್ತುಗಳ ಹೆಸರುಗಳನ್ನು ಹೊರಡಿಸುವದು.

ಈಗ ಕಲಿತ ಹೆಸರುಗಳನ್ನು ಒಂದರ ಕೆಳಗೆ ಒಂದು
ವಾಗಿ ಪಾಟಿಯ ಮೇಲೆ ಬರೆದು ತಿದ್ದಿರಿ.

..... ಬಾಲಕರ ತಪ್ಪುಗಳನ್ನು ತಿದ್ದುವದು.

ಗೃಹಪಾಠ:—ನಿಮ್ಮ ಮನೆಯೊಳಗೆ ಕಾಣುವ ಹತ್ತು
ಹೆಸರುಗಳನ್ನು ಬರೆದುಕೊಂಡು ಬನ್ನಿ.

ಟಿಪ್ಪು:—(೧)..... ಇಂಥ ಸೆರೆ ಇದ್ದಲ್ಲಿ ಆ ವರ್ಗದ ವಿಷಯ
(೨) ನಡುನಡುವೆ ಅವಶ್ಯವಿದ್ದಲ್ಲಿ ಇತರ ವರ್ಗಗಳ ಕಡೆಗೆ ಲಕ್ಷ್ಯ ಕೊ

ದ ಟಿಪ್ಪಣಿಗಳು

ತಾ || ೧೧—೧೨—೧೯೪೪. ವೇಳೆ:—೧ ತಾಸು

೨ನೆಯ ವರ್ಗ

ಯ:— ಸಾಮಾನ್ಯ ವಿಜ್ಞಾನ

ವಿ.:— ಶುದ್ಧ ಮತ್ತು ಅಶುದ್ಧ ನೀರು.

ಕರಣ:— ಅಶುದ್ಧ ನೀರಿನ ಪಾತ್ರೆಗಳು

ಚ:— ಉಡಿಯುವ ನೀರನ್ನು ನೀವು ಎಲ್ಲಿಂದ ತರುತ್ತೀರಿ ನ್ನು ಆಲೋಚಿಸಿ ಇಡಿರಿ.

....

ುವ ನೀರನ್ನು ಎಲ್ಲೆಲ್ಲಿಂದ ತರುತ್ತಾರೆಂಬವನ್ನು ಸು.

ಳ:—ಬಾವಿ, ಕೆರೆ, ಹೊಳೆ, ಮತ್ತು ಹಳ್ಳಗಳ ನೀರನ್ನು ಕ್ಕೆ ಯಾವ ರೀತಿಯಿಂದ ಶುದ್ಧ ಮಾಡಬೇಕೆಂಬವನ್ನು ನು.

—ನಾಲ್ಕು ಬೇರೆ ಬೇರೆ ಪ್ರಕಾರದ ನೀರಿನ ಕಾಜಿನ ನ್ನು ಇಡುವದು. ಈ ಪಾತ್ರೆಗಳಲ್ಲಿ ಯಾವ ತರದ ನೀರು ಬವನ್ನು ಪರೀಕ್ಷಿಸಿ ಇಡಿರಿ.

ಪಾತ್ರೆಗಳಲ್ಲಿಯ ನೀರಿನ ಪರೀಕ್ಷೆ

ಾಡಲಿಕ್ಕೆ ಪ್ರಯೋಗಗಳು:—

ನೀರು ... .ಸೋಸುವದು.

ಂ "... .... ಸುಣ್ಣ ಸ್ಪಟಿಕಗಳನ್ನು ಹಾಕುವದು.

ನೀರು"... .... ಕೆಲಹೊತ್ತು ಇಟ್ಟು ಮೇಲಿನ ತಿಳಿನೀರನ್ನು ಕಂಡಿಯುವದು.

ರು "... .... ಕುದಿಸಿ ಸೋಸುವದು.

—ನೀವು ಯಾತ್ರೆಗೆ ಹೋದಾಗ ಆಲ್ಲಿಯ ನೀರು ಯಾವ ಸಬುದು ತಿಳಿಯುವದಿಲ್ಲ. ಆವನ್ನು ಹೇಗೆ ಕುಡಿಯ

ಚ:— ಬೇರೆ ಬೇರೆ ಪ್ರಕಾರದ ಅಶುದ್ಧ ನೀರನ್ನು ಹೇಗೆ ಾಡಬೇಕೆಂಬವನ್ನು ಕೆಳಗಿನಂತೆ ತುಂಬಿಕೊಂಡು ಬರ್ರಿ.

ಪ್ರಕಾರ.	ಹೇಗೆ ಶುದ್ಧ ಮಾಡಬೇಕು

೩ನೆಯ ವರ್ಗ

ವಿಷಯ:—ಭೂಗೋಲ

ಪ್ರ. ವಿ:—ಹರಿಯುವ ನೀರಿನ ಕಾರ್ಯಗಳು

ಉಪಕರಣ:—ಗುಡ್ಡಗಾಡು, ಹೊಳೆ, ಮತ್ತು ಬೈಲುಗಳನ್ನು ತೋರಿಸಿದ ಮಾಡೆಲ್ಲ್

ಪ್ರಸ್ತಾವನೆ:—ಮಾಡೆಲ್ಲನ್ನು ತೋರಿಸುವದು:—ಇದರಲ್ಲಿ ತಗ್ಗು; ದಿನ್ನೆಗಳು ಎಲ್ಲಿಅವೆ, ಎಂಬದನ್ನು ನೋಡಿರಿ.

....

ತಗ್ಗು ದಿನ್ನೆಗಳು ಎಲ್ಲಿರುವನೆಂಬವನ್ನು ವಿವೇಚಿಸುವದು.

ಉ. ಕಥನ:—ಹಾಗಾದರೆ ಇಲ್ಲಿಂದ ಮುಳಿಯನೀರು ಹರಿದು ಹೋಗಬೇಕಾದರೆ ಯಾವ ಯಾವ ಕಾರ್ಯಗಳು ಆಗುತ್ತವೆ ಎಂಬದನ್ನು ನೋಹೋಣ.

ಪ್ರಯೋಗ:—ಮಾಡೆಲ್ಲಿನೊಳಗೆ ಎತ್ತರ ಸ್ಥಳದಿಂದ ನೀರು ಹರಿಯುವಂತೆ ಬಿಡುವದು.

ಹರಿಯುವ ನೀರಿನ ಕಾರ್ಯಗಳ ಪರೀಕ್ಷೆ:

ನೀರು ಹರಿಯುತ್ತ ಹೋಗುವಾಗ ಏನೇನು ಮಾಡುತ್ತದೆಂಬವನ್ನು ಚೆನ್ನಾಗಿ ನೋಡಿಕೊಳ್ಳಿರಿ.

ಹರಿಯುವ ನೀರಿನ ಕಾರ್ಯಗಳನ್ನು ಹೊರಡಿಸುವದು ಮತ್ತು ಕೆಳಗಿನಂತೆ ಟಿಪ್ಪಣಿಯನ್ನು ಬರೆಯಿಸುವದು.

ಹರಿಯುವ ನೀರಿನ ಕಾರ್ಯಗಳು:—(೧) ಮಣ್ಣು ಕೊಡಿ ರಾಡಿಯಾಗುತ್ತದೆ. (೨) ಇಳುಕಲಿನ ಕಡೆಗೆ ಹರಿಯುತ್ತದೆ. (೩) ಮೆತ್ತಗಿನ ಭೂಮಿಯನ್ನು ಕೊರೆಯುತ್ತವೆ. (೪) ಕಳವಿಗೆ ಸಿಕ್ಕ ಕಲ್ಲು ಸವೆದು ಉಳುಪಾಗುತ್ತದೆ. (೫) ಬೈಲಿನಲ್ಲಿ ಸಾವಕಾಶ ಹರಿಯುವಾಗ ರೇವೆಯ ಮಣ್ಣನ್ನು ಬಿಡುತ್ತದೆ. ಮತ್ತು ಫಲವ ತ್ತಾದ ಹೊಸ ಭೂಮಿಯು ತಯಾರಾಗುತ್ತದೆ.

ಉಪಸಂಹಾರ:—ಮುಂದಿನ ಸರತಿ ನದಿಗಳ ಉಗಮ, ಸಂಗಮ, ಪಾತ್ರ ಮತ್ತು ಶಾಖೆಗಳು ಇವುಗಳ ಬಗ್ಗೆ ಕಲಿಯುವಾ.

ಸಿ, ಅಪರ ಪ್ರಾಥಮಿಕ ವರ್ಗಕ್ಕೆ ಶಿಕ್ಷಕರು ಸಾಗುವದು.

ಉದೀಯಮಾನ್ ಸಾಹಂತ ಶ್ರೀ. ಮಿರ್ಜಿ ಅಣ್ಣಾರಾಯರು

ಶ್ರೀ. ಮಿರ್ಜಿ ಅಣ್ಣಾರಾಯರೊಬ್ಬರು ಕನ್ನಡ ತರುಣ ಬರಹಗಾರರು. ಇದೀಗ ಇಪ್ಪತ್ತೆಂಟು ವರ್ಷ ವರ್ಷ ವಯಸ್ಸು. ಬೆಳಗಾಂವಿ ಜಿಲ್ಲೆಯ ಸೇಡಬಾಳ ಇವರ ಜನ್ಮಸ್ಥಳ. ಬಡತನವನ್ನು ಕಂಡುಂಡವರು. ಅದನ್ನು ಚಿತ್ರಿಸುವಲ್ಲಿ ಕುಶಲ ಕೈಯಿವರದು. ಈಗಾಗಲೇ 'ನಿಸರ್ಗ' 'ರಾಷ್ಟ್ರಪುರುಷ' ಎಂಬೆರಿಡು ಕಾದಂಬರಿಗಳನ್ನು 'ದತ್ತವಾಣಿ' 'ಲೇಖನಕಲೆ' ಮೊದಲಾದ ವಿಮರ್ಶ ಗ್ರಂಥಗಳನ್ನೂ ಬರೆದಿದ್ದಾರೆ. 'ಚಿನ್ಮಯ ಚಿಂತಾಮಣಿ' ಎಂಬ ಹಳಗನ್ನಡವ ಗ್ರಂಥ ಸಂಪಾದನೆ ಮಾಡಿಮುಮೂ ಉಂಟು. 'ಜಯಂತ' ಜಯಕರ್ನಾಟಕ'ಗಳಲ್ಲಿ ಆಗಾಗ ಬರೆಯುತ್ತಿದ್ದಾರೆ. 'ಜಯಕರ್ನಾಟಕದಲ್ಲಿ ಪ್ರಕಟವಾದ' ಕನ್ನಡ ಸಾಹಿತ್ಯದಲ್ಲಿ ಜೈನ ಯುಗ' ಎಂಬ ಪ್ರಬಂಧಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಬಹುಮಾನ ಕೊಟ್ಟಿದೆ. 'ನಿಸರ್ಗ' ಕಾದಂಬರಿಯಂತೂ ಮೈಸೂರಿನ ದೇವರಾಜ ಬಹಾದ್ದೂರ ನಿಧಿಯ ಪ್ರಥಮ ಪಾರಿತೋಷಕವನ್ನು, ವಿದ್ಯಾವರ್ಧಕ ಸಂಘದ ಲಲಿತ ಸಾಹಿತ್ಯ ವಿಭಾಗದ ಈ ವರ್ಷದ ಸಂಪೂರ್ಣ ಬಹುಮಾನ ಧನವನ್ನು ಪಡೆದಿದೆ. ಮೊನ್ನೆ ಜಾನೇವರಿ ಹದಿನೈದನೆಯ ತಾರೀಖಿಗೆ ಪ್ರೊ. ದೇಸಾಯಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹಲವರು ಮಾತಾಡಿ 'ಚೆನ್ನ ಬಸವ ಪುರಾಣ' ವನ್ನು ಮೆಚ್ಚುಗೆಯಾಗಿ ಕೊಟ್ಟು ಟ್ರೇನಿಂಗ ಕಾಲೇಜವೂ ಇವರನ್ನು ಗೌರವಿಸಿದೆ.

'ನಿಸರ್ಗ'ವನ್ನು ಶ್ರೀ. ಗುರುನಾಥ ಜೋಶಿಯವರು, ಹಿಂದಿಗೆ ಪರಿವರ್ತಿಸಲಿದ್ದಾರೆ.

ಇವರು ಸಾಹಿತಿಗಳಿದ್ದಂತೆ ಒಳ್ಳೆಯ ಶಿಕ್ಷಕರೂ ಆಹುದು. ಇದೀಗ ಟ್ರೇನಿಂಗನ್ನು ಪಡೆಯಲು ಧಾರವಾಡಕ್ಕೆ ಬಂದಿದ್ದಾರೆ. ಇವರಲ್ಲಿ ಕನ್ನಡದ ಒಲವನ್ನು ಹುಟ್ಟಿಸಿದವರೂ ಶ್ರೀ. ಅತ್ತಾರಾಮು ವಿಷ್ಣು ಪತಕಿ ಎಂಬ ಶಿಕ್ಷಕರು ಅವರೇ ಲಣ್ಣಪ್ಪ ಅಪ್ಪಣ್ಣ ಮಿರ್ಜಿ ಎಂಬ ವಿದ್ಯಾರ್ಥಿಯ ಪ್ರಾಥಮಿಕ ಶಿಕ್ಷಣದ ಗುರುಗಳು. ಮುಂದೆ ಸಾಹಿತ್ಯೋಪಾಸನೆಯಲ್ಲಿ ದಾರಿ ತೋರಿಸಿದವರು. ವಿಲ್ಡಿಂಗ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ರಂಗನಾಥ ಶ್ರೀನಿವಾಸ ಮುಗಳಿಯವರು. ಇವರ ಒಲವಿನ ಆಶ್ರಯ ದೊರೆತಾಗ ಮಿರ್ಜಿಯವರು ರಚಿಸಿದ ಭಾವಗೀತೆಯೊಂದನ್ನು ಇದೇ ಸಂಚಿಕೆಯಲ್ಲಿ ಕೊಡಲಾಗಿದೆ.

ಈ ತರುಣ ಬರೆಹಗಾರರಿಗೆ ಉಜ್ವಲ ಭವಿಷ್ಯತ್ತು ಕಾದಿದೆ.

—ಸಂಪಾದಕರು

ನನ್ನ ನೌಕೆ

೧

ತುಂಬಿದ ತೊರೆಯಲಿ ತೂರುವ ತೆರೆಯಲಿ
ನನ್ನಾ ನೌಕೆಯು ನಡೆದಿತ್ತು;
ಗಾಳಿಯ ಹೊಡತಕೆ ಜೋಲಿಯು ಹೊಡೆಯುತ
ಸೆಳವಿನ ಸಂಗಡ ಸಾಗಿತ್ತು.

೨

ಮುಂದಿನ ತಿರುಗಣಿ ಸುಡುವಿಗೆ ಸಿಗುವುದೊ,
ಎಂಬಾ ಭೀತಿಯು ಜನಿಸಿತ್ತು;
ಒಳಗೈ ತರುತಿಹ ನೀರಿನ ಭಾರಕೆ
ಅಲ್ಲೇ ಮುಗುಳುವುದೆನಿಸಿತ್ತು.

೩

ಅಳಿವೋ? ಉಳಿವೋ? ತೊರೆಯೋ? ತಡಿಯೋ?
ಕಣ್ಣಿಗೆ ಕತ್ತಲು ಕವಿದಿತ್ತು.
ಬುದಿಯೆನೆಲ್ಲಿಂ ದೋಡುವೆನೆಲ್ಲಿಗೆ
ಏನೂ ತಿಳಿಯದ ಹಾಗಿತ್ತು.

೪

ಬಗೆಯೂಳದಿ ಬೇಗುದಿ ವೆಳೆದಿರಲಾ
ಬಾಳಿನ ಬಳ್ಳಿಯು ಬಾಡಿತ್ತು.
ಮುಳುಗೇಳುತ್ತಿರೆ ಪಡವನು ಸೇರುವ
ಆಸೆಯ ಕಿರಣವು ಕಂಡಿತ್ತು.

೫

ನೌಕೆಯ ನೆಲೆಯುಲಿ ನೆಟ್ಟಗೆ ಬೀಸಿದ
ಹಗ್ಗದ ಜುಟಿಯನು ಹಿಡಿದಂದು,
ಸೇರುತಿರಾಜೆಯ ಪಡವನು, ತಿಳಿದೆನು
ಆದು ಕೆಲೆಯೊಲಿನಿನ ಹುಯ್ಯೆಂದು.

—ಮಿರ್ಜಿ ಅಣ್ಣಾರಾಯ

———

ರಾಂಗ್ಲರ ಡಿ. ಸಿ. ಪಾವಟೆಯವರು

ನಮ್ಮ ಡಾಯಮಿಕ್ಷೆರರು

೧೪೭ ಜನೇವರಿ ೨೪ನೆಯ ತಾರೀಖಿನ ದಿನವು ಕನ್ನಡಿಗರಿಗೆ—ವಿಶೇಷವಾಗಿ ವಿದ್ಯಾಖಾತೆಯಲ್ಲಿ ದುಡಿಯುತಕ್ಕ ಕನ್ನಡಿಗರಿಗೆ ಆನಂದದ ಹೆಮ್ಮೆಯ ದಿನ. ಕಡೆಗೆಣಿಸುತ್ತ ಬಂದಿದ್ದ ಕನ್ನಡ ನಾಡಿಗೆ ವಿದ್ಯಾಖಾತೆಯಲ್ಲಿ ಸರ್ವೋಚ್ಚ ಸ್ಥಾನಮಾನ ದೊರೆತ ದಿನ. ಸತತವಾಗಿ ಹದಿನೈದು ವರುಷ ಮುಂಬೈ ಪ್ರಾಂತದ ವಿದ್ಯಾಖಾತೆಗೆ ಅನಾಸಕ್ತಭಾವದಿಂದ ಶಾಂತಚಿತ್ತದಿಂದ ಸೇವೆ ಸಲ್ಲಿಸಿದ ಕನ್ನಡ ತಾಯ ಸುಪುತ್ರರಲ್ಲೊಬ್ಬರಾದ ರ್ಯಾಂಗ್ಲರ್ ಡಿ ಸಿ. ಪಾವಟಿ ಅವರು ಅಂದು ಮುಂಬಯಿ ವಿದ್ಯಾಖಾತೆಯ ಡೈರೆಕ್ಟರರ ಸ್ಥಾನವನ್ನಲಂಕರಿಸಿದರು. ಅವರಿಗೆ ದೊರೆತ ಈ ಸ್ಥಾನಕ್ಕೆ ಅವರ ಸತತ ಅಧ್ಯಯನ—ಅಧ್ಯಾಪನ, ನಿಷ್ಪಕ್ಷಪಾತವಾಗಿ ವಿದ್ಯಾಖಾತೆಯು ಆಡಳಿತೆಯ ಸೂಕ್ಷ್ಮ ಸಂಚಾಲನೆಯ ನೀತಿ, ಪ್ರಪಂಚದ ನಾನಾ ದೇಶಗಳ ಶಿಕ್ಷಣ ಸಂಸ್ಥೆಗಳ ಸಂದರ್ಶನ, ಅನುಭವ ಇವೆ ಅಡಿಗಲ್ಲು.

ಶ್ರೀಮಾನ್ ಡಿ. ಸಿ. ಪಾವಟೆಯವರು ಬೆಳಗಾವಿ ಜಿಲ್ಲೆಯ ಮುನುದಾವೂಡ ಎಂಬ ಹಳ್ಳಿಯಲ್ಲಿ ಸನ್ ೧೯೦೦ ರಲ್ಲಿ ಜನ್ಮ ಹೊಂದಿದರು. ಇವರ ಮನೆತನ ತೀರ ಬಡತನದ್ದು ಶಾಲೆಯ ಫೀಯನ್ನು ಕೊಡುವುದೂ ಇವರ ತಂದೆಯವರಿಗೆ ಕಷ್ಟಸಾಧ್ಯವಾಗಿತ್ತು. ಆದರೆ ಇವರೂ ಇವರ ಅಣ್ಣಂದಿರೂ ಎಲ್ಲರೂ ಬುದ್ಧಿವಂತರು. ಮುನುದಾವೂರ ಕನ್ನಡ ಶಾಲೆಯ ಮಾಸ್ತರರು ಇವರ ಚುರುಕು ಬುದ್ಧಿವನ್ನು ಕಂಡು ೧೯೧೫ ಇಯತ್ತೆಯ ಪರೀಕ್ಷೆ ಸಮಯದ ವೇಳೆಗೆ ಮನೆಯಲ್ಲಿ ಕಲಿಸಿ ಪರೀಕ್ಷೆಯ ಹೊತ್ತಿಗೆ ಶಾಲೆಗೆ ಹೆಸರು ಹಚ್ಚಿಸಿಕೊಳ್ಳುತ್ತಿದ್ದರು. ಶ್ರೀ. ಪಾವಟೆಯವರು ಒಂದನೆಯ ಇಯತ್ತೆಯಲ್ಲಿರುವಾಗ ದಿವಂಗತ ವಿನಾಯಕ ಬಾಬಾಜಿ ಜೋಶಿ ಅವರು ಪರೀಕ್ಷೆ ತೆಗೆದುಗೊಳ್ಳಲು ಹೋಗಿದ್ದರು. ಶ್ರೀ. ಜೋಶಿ ಅವರ ಬುದ್ಧಿಮಾಪನ ಶಕ್ತಿಯನ್ನಳೆಯುವ ಕಠಿನ ಪ್ರಶ್ನೆಗಳೆಲ್ಲಕ್ಕೂ ಸಮರ್ಪಕವಾಗಿ ಉತ್ತರವಿತ್ತ ಬಾಲಕರಲ್ಲಿ ಇವರೊಬ್ಬರೇ. ಶ್ರೀ ಜೋಶಿ ಅವರು ಇವರ ಉತ್ತರಗಳಿಂದ ಸಂತುಷ್ಟರಾಗಿ ದಿವಂಗತ ಚನ್ನಬಸಪ್ಪ ಹೂಲಿ ಅವರ ಗಣಿತ ಪುಸ್ತಕವನ್ನು ಇವರಿಗೆ ಇನಾಮವಾಗಿ ಕೊಟ್ಟರು. ಬೀಜಕ್ಕೆ ಬಿಡುವ ಕಾಯನ್ನು ಮಿಡಿಯಿಲ್ಲಿ ನೋಡು ಎಂದು ಶ್ರೀ. ಜೋಶಿ ಅವರ ಅಂತರಾತ್ಮ ಅಂದು ನುಡಿದಿರಬೇಕು. ೧ನೆಯ ಇಯತ್ತೆಯ ಪರೀಕ್ಷೆಯ ದಿನ ಕೊನೆಯ ನಂಬರಿನ ಸ್ಥಾನದಲ್ಲಿದ್ದ ಇವರು ೨, ೩, ೪ನೆಯ ಇಯತ್ತೆಗಳಲ್ಲಿ ೧ನೆಯ ನಂಬರಿನಲ್ಲಿದ್ದು ಪರೀಕ್ಷೆಯಲ್ಲಿಯೂ ಆ ಸ್ಥಾನ ಬಿಡದೆ ವ್ಯಾಥಮಿಕ ಶಿಕ್ಷಣವನ್ನು ಮುಗಿಸಿಕೊಂಡು ರಬಕವಿಗೆ ಇಂಗ್ಲಿಷ ವಿದ್ಯಾಭ್ಯಾಸಕ್ಕಾಗಿ ಹೋದರು. ಅಲ್ಲಿಂದ ೧೦ನೆಯ ಇಯತ್ತೆಯ ಅಭ್ಯಾಸ ಮುಗಿಸಿಕೊಂಡು ಗೋಕಾಕಕ್ಕೆ ಹೋದರು. ಅಲ್ಲಿ ಮುಂದಿನ ಎರಡು ತರಗತಿಗಳ ಅಧ್ಯಯನ ತೀರಿಸಿಕೊಂಡು ಮುಂದಿನ ಅಧ್ಯಾಪಕಕ್ಕಾಗಿ ಕೊಲ್ಹಾಪುರಕ್ಕೆ ಹೋದರು. ಐದನೆಯ ತರಗತಿಯಲ್ಲಿ ಅರು ತಿಂಗಳ ಅಭ್ಯಾಸ ಮಾಡುವುದುರೊಳಗಾಗಿ ತಮ್ಮ ಬುದ್ಧಿ ಕೌಶಲ್ಯ ತೋರಿಸಿ ಸರಕಾರೀ ವಿದ್ಯಾರ್ಥಿ ವೇತನ ಪಡೆದು ೬, ೭ನೆಯ ಇಯತ್ತೆಯಲ್ಲಿ ಮೊದಲಿಗರಾಗಿದ್ದುಕೊಂಡು ೧೯೧೯ರಲ್ಲಿ ಕೊಲ್ಹಾಪುರಕ್ಕೆ ಮೊದಲಿಗರಾಗಿ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

ಕಾಲೇಜು ವಿದ್ಯಾಭ್ಯಾಸ ೧೯೧೯ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಪ್ರಾರಂಭವಾಯಿತು. ಸ್ಕೀನ್ಸಿಯನ್ಸ್, ಇಂಟರ ಪರೀಕ್ಷೆಯಲ್ಲಿ ಮೊದಲ ತರಗತಿಯಲ್ಲಿ ಉತ್ತೀರ್ಣರಾಗಿ ಇವರು

೧೯೨೩ರಲ್ಲಿ ೧೩ನೆಯ ತರಗತಿಯಲ್ಲಿ ಬಿ. ಎ. ಪಾಸಾದರು. ೧೯೨೪ರಲ್ಲಿ ಕರ್ನಾಟಕ ಕಾಲೇಜಿನಲ್ಲಿ ಫೆಲೊ ಆಗಿದ್ದರು.

ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ಆಗ ಕನ್ನಡ ನಾಡಿನ ಮೇಧಾವಿಗಳೆಲ್ಲ ಪ್ರಯತ್ನಿಸುತ್ತಿದ್ದರು. ವಿಶ್ವ ವಿದ್ಯಾಲಯ ಸಂಚಾಲನೆಯನ್ನು ಮಾಡಬಲ್ಲ ಯೋಗ್ಯ ವ್ಯಕ್ತಿಗಳಿಗೆ ಪ್ರೋತ್ಸಾಹ ಕೊಟ್ಟು ಆದರ್ಶವನ್ನು ಮುಟ್ಟಬೇಕಾಗುವಷ್ಟು. ಈ ಮೇಧಾ ಶಕ್ತಿ ಇವರಲ್ಲಿದ್ದುದನ್ನು ಅರಿತು ನವಲಗುಂದ ಮತ್ತು ಶಿರಸಂಗಿ ಟ್ರಸ್ಟ್ ನಿಧಿಯವರು ಇವರಿಗೆ ಸರದೇಶಕ್ಕೆ ಹೋಗಿ ಅಧ್ಯಯನ ಮುಗಿಸಿಕೊಂಡು ತಿರುಗಿ ಭಾರತಕ್ಕೆ ಬಂದನಂತರ ಬೆಳಗಾಂವಿಯಲ್ಲಿ ಸ್ಥಾಪಿತವಾಗಲಿದ್ದ (ಲಿಂಗರಾಜ) ಕಾಲೇಜಿನ ಪ್ರಿನ್ಸಿಪಾಲರಾಗಿ ಕಾರ್ಯ ಮಾಡುತ್ತ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯ ಕಾರ್ಯ ಮಾಡಬೇಕೆಂಬ ಕರಾರು ಹಾಕಿ ೧೯೨೪ ಜುಲೈ ತಿಂಗಳಲ್ಲಿ ಇಂಗ್ಲಂಡಿಗೆ ಕಳಿಸಿದರು. ಅಲ್ಲಿಗೆ ಹೋದನಂತರ ಆರು ತಿಂಗಳಲ್ಲಿ ಟ್ರೈಪಾಸ್ ಪೊದಲನೆಯ ಪರೀಕ್ಷೆಯಲ್ಲಿ ಪೊದಲನೆಯ ತರಗತಿಯಲ್ಲಿ ಪಾಸಾದರು. ಮುಂದೆ ಒಂದು ವರ್ಷದ ಅವಧಿಯೊಳಗೆ ರ್ಯಾಂಗ್ಲರರಾದರು. ಅದೇ ಕಾಲಕ್ಕೆ ಇವರಿಗೆ ಐ. ಸಿ. ಎಸ್. ಸೇರುವ ಸುಸಂಧಿ ಒದಗಿದರೂ, ಇವರು ತಮ್ಮ ಭಾವೀಧ್ಯೇಯದ ದೃಷ್ಟಿಯಿಂದ ಅದನ್ನು ಸ್ವೀಕರಿಸಲಿಲ್ಲ. ಗಣಿತ ಶಾಸ್ತ್ರದ ಹೆಚ್ಚಿನ ಅಭ್ಯಾಸ ಅನುಕೂಲಕ್ಕಾಗಿ ಇವರು ಫ್ರೆಂಚ್, ಜರ್ಮನ್ ಭಾಷೆಗಳನ್ನು ಕಲಿತಿರುವರು. ಯುರೋಪದೊಳಗಿನ ಎಲ್ಲ ವಿದ್ಯಾ ಸಂಸ್ಥೆಗಳನ್ನು ಸಂದರ್ಶಿಸಿ, ನಾನಾ ಶಿಕ್ಷಣ ಪದ್ಧತಿಗಳ ಅನುಭವ ಪಡೆದುಕೊಂಡು ೧೯೨೭ರಲ್ಲಿ ಭಾರತಕ್ಕೆ ಮರಳಿದರು.

ಭಾರತಕ್ಕೆ ಬಂದೊಡನೆಯೇ ಬೆಳಗಾವಿಯಲ್ಲಿ ಕಾಲೇಜು ಸ್ಥಾಪಿಸಿ ಕರ್ನಾಟಕ ವಿಶ್ವ ವಿದ್ಯಾಲಯ ಸ್ಥಾಪನೆಯ ಕಾರ್ಯಕ್ಕೆ ಕೈಹಾಕಿದರು. ನಾಡಿನಲ್ಲಿ ತಿರುಗಾಡಿ ಧನ ಸಂಗ್ರಹ ಮಾಡಿದರು, ತಕ್ಕ ವಾತಾವರಣ ಉಂಟು ಮಾಡಿದರು. ಆದರೆ ಆಗಿನ ಸರಕಾರ ಮನ್ನಣೆ ಕೊಡದೆ ಕಾಲೇಜ ಯೋಜನೆಯನ್ನು ನೆನಗುದಿಗೆ ಹಾಕಿಬಿಟ್ಟಿತು.

೧೯೨೯ರಲ್ಲಿ ಕಾಶಿಯ ಹಿಂದು ವಿಶ್ವ ವಿದ್ಯಾಲಯದಿಂದ ಕರೆ ಬಂದುದರಿಂದ ಕೇವಲ ಪ್ರತಿ ತಿಂಗಳು ೩೫೦ರೂಪಾಯಿ ಸಂಬಳದ ಮೇಲೆ ಗಣಿತಾಧ್ಯಾಪಕರಾಗಿ ಕಾಶಿಗೆ ಹೋದರು. ಅಲ್ಲಿ ೧೯೩೧ ವರ್ಷ ಕಾರ್ಯ ಮಾಡಿದರು. ಅಲ್ಲಿದ್ದಾಗ 'ಕ್ಯಾಲಿಕ್ಯುಲಸ್'ದ ಮೇಲೆ ಒಂದು ಉತ್ತಮ ಗ್ರಂಥ ಬರೆದರು.

ಆ ಮೇಲೆ ಮುಂಬೈ ಸರಕಾರವು ೧೯೩೧ರಲ್ಲಿ ಶಿಕ್ಷಣ ಖಾತೆಯಲ್ಲಿ ಖಾಲ್ಚಿತರ ಸ್ಥಾನವನ್ನು ಕೊಡವ ಮುಂಬೈ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರನ್ನಾಗಿ ನಿಯಮಿಸಿತು. ತಾಳಿದವನು ಬಾಳುವನು ಎಂಬ ನಾಣ್ಣುಡಿಯಂತೆ ೧೯೩೫ರವರೆಗೆ ಅದೇ ಸ್ಥಾನದಲ್ಲಿದ್ದು ಕಾರ್ಯ ಮಾಡಿ ತಮ್ಮ ಯೋಗ್ಯತೆಯನ್ನು ತೋರಿಸಿದ್ದರಿಂದ ಸರಕಾರವು ಇವರ ಕೆಲಸಕ್ಕೆ ಮೆಚ್ಚಿ ೧೯೩೫ರಲ್ಲಿ ಅಸಿಸ್ಟಂಟ ಡಾಯರೆಕ್ಟರರನ್ನಾಗಿ ನಿಯಮಿಸಿತು. ಅನಂತರ ಇವರು ೧೯೩೭ರಲ್ಲಿ ಆರು ತಿಂಗಳ ರಜೆ ತೆಗೆದುಕೊಂಡು ಮೊತ್ತೊಮ್ಮೆ ಇಂಗ್ಲಂಡಿಗೆ ಪ್ರಯಾಣ ಮಾಡಿಬಂದರು. ಇವರು ಮುಂಬಯಿ ಶಿಕ್ಷಣದ ಖಾತೆಯಲ್ಲಿ ಸೇರಿದಂದಿನಿಂದ ಮುಂಬಯಿ ವಿಶ್ವ ವಿದ್ಯಾಲಯದ 'ಸಾಮಿನೇಟಿಡ್ ಫೆಲೊ' ಆಗಿರುವರು. ಇವರು ಇಂಗ್ಲಂಡಿನಿಂದ ಮರಳಿದ ನಂತರ ಪುಣ್ಯ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ೨ವರ್ಷ ಕೆಲಸ ಮಾಡಿದರು. ಪುನಃ ಅಸಿಸ್ಟಂಟ ಡಾಯರೆಕ್ಟರರಾಗಿಯೂ ಅನಂತ ಡೆಪ್ಯೂಟಿ ಡಾಯರೆಕ್ಟರರಾಗಿಯೂ ಕಾರ್ಯ ಮಾಡಿ ತಮ್ಮ ಅತಳಿತೆಯ ಕೌಶಲ್ಯವನ್ನೂ ಯೋಗ್ಯತೆಯನ್ನೂ ತೋರಿಸಿದರು.

ಇವರ ಕಾರ್ಯದಿಂದ ಸಂತುಷ್ಟವಾಗಿ ಸರಕಾರವು ಇವರನ್ನು ಡೈರೆಕ್ಟರರನ್ನಾಗಿ ನಿಯಮಿಸಿತು. ಇವರು ೧೯೪೭ ಜನೇವರಿ ೨೪ನೆಯ ತಾರೀಖಿನ ದಿನ ಡೈರೆಕ್ಟರರ ಅಧಿಕಾರ ಸೂತ್ರವನ್ನು ವಹಿಸಿದರು. ಕನ್ನಡ ನಾಡಿನ ಒನ್ನಣೆ ಕೊಟ್ಟ ಸರಕಾರವನ್ನು ಹೃತ್ಪೂರ್ವಕ ಅಭಿನಂದಿಸುತ್ತೇವೆ.

ಶ್ರೀಮಾನ್ ಡಿ. ಸಿ. ಪಾವಟೆ ಅವರ ಮನೆತನವೇ ಮೇಧಾವಿಗಳದು. ಇವರ ಅಣ್ಣಂದಿರಾದ ವಿ. ಸಿ. ಪಾವಟೆ ಅವರು ದಕ್ಷಿಣ ಭಾಗದ ಒಕ್ಕಲತನ ಡೆ॥ ಡಾಯರೆಕ್ಟರರಾಗಿದ್ದಾರೆ.

ಅಪೂರ್ವ ಗತಿಯಿಂದ ಮಾಸ್ಕಾಟು ಹೊಂದುತ್ತಿದ್ದ ಮುಂದರಿಯುತ್ತಿರುವ ಶಿಕ್ಷಣ ಕ್ಷೇತ್ರವು ಇವರ ಆಳಿಕೆಯಲ್ಲಿ ಉತ್ತಮವಾಗಿ ಫಲಿಸಲೆಂದೂ ಇವರ ಮೂಲಕ ಕನ್ನಡ ನಾಡಿಗೆ ಕೀರ್ತಿ ಬರಲೆಂದೂ ಇನರಿಗೆ ಪರಮಾತ್ಮನು ದೀರ್ಘ ಆಯುರಾರೋಗ್ಯ ಕೊಡಲೆಂದೂ ಹಾರೈಸಿ ಪ್ರಾಥಮಿಕ ಶಿಕ್ಷಕರ ಪರವಾಗಿ ನಮ್ಮ ಹೊಸ ಡೈರೆಕ್ಟರರನ್ನು ಅಭಿನಂದಿಸುತ್ತೇವೆ.

———

ಗಂಡು ಮಕ್ಕಳ ಹಾಗೂ ಹೆಣ್ಣು ಮಕ್ಕಳ ಟ್ರೇನಿಂಗ ಸಂಸ್ಥೆಗಳ ನಿಯಮಗಳು

ಮುಂಬಯಿ ಖಾತೆಯ ಡೈರೆಕ್ಟರರ ನಂ. ೧೪೯/೨೩೪ ಡ. ೧೯೪೭ ಫ್ರೆಬ್ರುವರಿ ೨೦ನೆಯ ತಾರೀಖಿನ ಅಪ್ಪಣೆಯ ಮೇರೆಗೆ:—

೮ನೆಯ ಪುಟದ ಮೇಲಿರುವ ಕಾನೂನು ೧೨ (iii) ವಿದ್ಯಾಖಾತೆಯ ೨೨೪—(ಮಾಡಿದ ೭ನೆಯ ತಿದ್ದುಪಡೆಯನ್ನು ನೋಡಿರಿ)ಕ್ಕೆ ಬದಲಾಗಿ ಕೆಳಗಿನ ಕಾನೂನನ್ನು ಸೇರಿಸಿರಿ.

"(iii) ಒಟ್ಟು ಐದು ಸಲಕ್ಕಿಂತ ಹೆಚ್ಚು ಸಲ ಯಾವ ಉಮೇದವಾರನಿಗೂ ಪರೀಕ್ಷೆಗೆ ಕುಳಿತುಕೊಳ್ಳಲು ಪರವಾನಿಗೆ ಕೊಡಲ್ಪಡುವುದಿಲ್ಲ—ಅರ್ಥಾತ್ ಮೊದಲನೆಯ ಬಾರಿ ನವಾ ಸಾದ ಉಮೇದವಾರನಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ನಾಲ್ಕು ಸಲ ಅವಕಾಶ ಕೊಡಲಾಗು ವುದು. ನವಾಸಾವ ಉಮೇದವಾರನು ಪುನಃ ಪರೀಕ್ಷೆಗೆ ಕುಳಿತುಕೊಳ್ಳಲು ತನಗೆ ಸಂಬಂಧಿಸಿದ ಎಜ್ಯುಕೇಶನಲ್ ಇನಸ್ಪೆಕ್ಟರರಿಂದಾಗಲಿ, ಇನಸ್ಪೆಕ್ಟ್ರೆಸರರಿಂದಾಗಲಿ ಪರವಾನಿಗೆಯನ್ನು ಪಡೆಯ ಕ್ಕದ್ದು.

———

೧೯೪೭ನೆಯ ಇಸ್ವಿಯಲ್ಲಿ ನಡೆಯುವ ಗಂಟಾಮುಕ್ಕಳ ಉರ್ದು ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು	ಗುಣಗಳು	ಶರಾ
ಸೋಮವಾರ	೧೧	೧೨-೪೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.		
೬-೪-೧೯೪೭	೧೨	೨	ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು.		
ಸದರ	೩	೬	ಕನ್ನಡ-ಉರ್ದು ಅಥವಾ ಮರಾಠಿ-ಉರ್ದು ಉಮೇದವಾರರಿಗೆ ಕನ್ನಡದಲ್ಲಿ; ಅಥವಾ ಮರಾಠಿ-ಉರ್ದು. ಉರ್ದು-ಕನ್ನಡ ಅಥವಾ ಉರ್ದು-ಮರಾಠಿ ಉಮೇದವಾರರಿಗೆ ಉರ್ದುವಿನಲ್ಲಿ. ಆರೋಗ್ಯವಿಜ್ಞಾನ ಅಥವಾ ಪರಿಸರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಶಾಸ್ತ್ರೀಯ ವಿಷಯದ ಆರಂಭದ ಪಾಠಗಳು.	೧೦೦	
ಮಂಗಳವಾರ	೧೧	೨	(ಅ) ಅಂಕಗಣಿತ	೧೦೦	
೮-೪-೧೯೪೭ ಸದರ	೩	೬	(ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ	(ಅ) ೫೦ (ಬ) ೫೦	
ಬುಧವಾರ	೧	೨	(ಬ) ಮತ್ತು (ಕ) ಭೂಮಿತಿ ಮತ್ತು ಹಿಂದೀ ಜನಪದಸಾಹಿತ್ಯ	(ಬ) ೫೦ (ಕ) ೫೦	
೯-೪-೧೯೪೭ ಸದರ	೩	೬	(ಅ) ಮತ್ತು (ಬ) ಪ್ರಾಂತಿಕ ಭಾಷೆ, ಕನ್ನಡ, ಮರಾಠಿ ಅಥವಾ ಉರ್ದು	(ಅ) ೭೫ (ಬ) ೭೫	
ಗುರುವಾರ	೧೨	೨	(ಅ) ಪ್ರಾಂತಿಕ ಭಾಷೆ ಉರ್ದು ಅಥವಾ ಕನ್ನಡ ಅಥವಾ ಮರಾಠಿ	(ಅ) ೫೦	
೧೦-೪-೧೯೪೭ ಸದರ	೩	೬	(ಬ) ಪತ್ರ ಅಥವಾ ರಿಪೋರ್ಟು ಬರೆಹ ಪತ್ರಬರೆಹ ಮುಂ. (* ಕನ್ನಡ-ಉರ್ದು ಅಥವಾ ಮರಾಠಿ-ಉರ್ದು ಉಮೇದವಾರರಿಗೆ ಉರ್ದುವಿನಲ್ಲಿ ಉರ್ದು-ಕನ್ನಡ ಅಥವಾ-ಉರ್ದು ಮರಾಠಿ ಉಮೇದವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ	(ಬ) ೫೦	

ಸೂ. ಸ .— ಮೊದಲನೆಯ ದಿನ ಉಮೇದವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

೧೯೬೭ನೆಯ ಇಸವಿಯಲ್ಲಿ ನಡೆಯುವ ಅಗ್ರಿಕಲ್ಚರಲ್ ಟಾಯಿಸ್ ಕೋರ್ಸನ್ನು ಆರಿಸಿಕೊಂಡ ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ ಇಂದ	ವೇಳೆ ವರೆಗೆ	ವಿಷಯಗಳು	ಗುಣಗಳು	ಶರಾ
ಸೋಮವಾರ					
೭-೪-೧೯೬೭	೧೧	೧೧-೪೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧೨	೨	ನಿಬಂಧ ಅಥವಾ ರಿಪೋರ್ಟ್, ಪತ್ರಬರೆಹ ಮುಂತಾದವು.	೧೦೦	
ಸದರ	೩	೫	(ಬ) ಶಾಸ್ತ್ರೀಯ ವಿಷಯದ ಆರಂಭದ ವಾಕ್ಯಗಳು ಮತ್ತು (ಬ) ಆರೋಗ್ಯಶಾಸ್ತ್ರ	(ಅ) ೨೫ (ಬ) ೨೫	
ಮಂಗಳವಾರ					
೮-೪-೧೯೬೭	೧೧	೨	(ಅ) ಅಂಕಗಣಿತ (ಬ) ಮಹತ್ವಮಾಪನ ಮತ್ತು (ಕ) ಹಿಂದೀ ಜಮಾಖರ್ಚು.	(ಅ) ೫೦ (ಬ) ೨೫ (ಕ) ೨೫	
ಸದರ	೩	೬	(ಅ) ರಾಜ್ಯಕಾರಭಾರ (ಬ) ಸಹಕಾರ ಮತ್ತು (ಕ) ಭೂಗೋಲ	(ಅ) ೨೫ (ಬ) ೨೫ (ಕ) ೫೦	
ಬುಧವಾರ					
೯-೪-೧೯೬೭	೧೧	೨	(ಅ) ಒಕ್ಕಲುತನ ಮತ್ತು (ಬ) ಪ್ರಕೃತಿ ವಿಮರ್ಶೆ.	(ಅ) ೬೫ (ಬ) ೩೦	
ಸದರ	೩	೬	(ಅ) ಮತ್ತು (ಬ) ಪ್ರಾಂತಿಕ ಭಾಷೆ.	(ಅ) ೭೫ (ಬ) ೨೫	
ಗುರುವಾರ					
೧೦-೪-೧೯೬೭	*	*	ಏಳನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೫೦	
ಸದರ	*	*	ಆರನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೩೫	

* ವೇಳೆಯನ್ನು ಸ್ಥಾನಿಕ ಕಮಿಟಿಯ ಪ್ರಸಿಡೆಂಟರು ತಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಓವರಸಿಅರೊಡನೆ ವಿಚಾರವಿನಿಯಮು ಮಾಡಿಕೊಂಡು ಗೊತ್ತು ಪಡಿಸುವರು. ಮೊದಲನೆಯ ದಿನ ಉಮೇದವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವಷ್ಟಕ್ಕಿಂತಲೂ ಹಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ಹಾಜರ ಇರಲೇಬೇಕು.

೧೯೪೭ನೆಯ ಇಸ್ವಿಯ ಕನ್ನಡ ಮತ್ತು ಮರಾಠಿ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು

ವಾರ ಮತ್ತು ತಾರೀಖು	ವೇಳೆ ಇಂದ	ವರೆಗೆ	ವಿಷಯಗಳು	ಗುಣಗಳು	ಶರಾ.
ಸೋಮವಾರ ೭-೪-೧೯೪೭	೧೧	೧೧-೪೫	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧೨	೩	ನಿಬಂಧ ಅಥವಾ ರಿಪೋರ್ಟು ಪತ್ರ ಬರೆಹ ಮುಂತಾದವು.	೧೨೦	
ಸದರ	೪	೬	ಆರೋಗ್ಯವಿಜ್ಞಾನ ಅಥವಾ ಶಾರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಆರಂಭದ ಶಾಸ್ತ್ರೀಯ ವಿಷಯ.	೧೦೦	
ಮಂಗಳವಾರ ೮-೪-೧೯೪೭	೧೧	೨	(ಅ) ಅಂಕಗಣಿತ.	೧೦೦	
ಸದರ	೩	೬	(ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	(ಅ) ೫೦ (ಬ) ೫೦	
ಬುಧವಾರ ೯-೪-೧೯೪೭	೧೧	೨	(ಬ) ಮತ್ತು (ಕ) ಭೂಮಿತಿ ಮತ್ತು ಹಿಂದೀ ಜಮಾಖರ್ಚು.	(ಬ) ೫೦ (ಕ) ೫೦	
ಸದರ	೩	೬	(ಅ) ಮತ್ತು (ಬ) ಪ್ರಾದೇಶಿಕ ಭಾಷಾವಿಷಯಗಳು.	(ಅ) ೭೫ (ಬ) ೭೫	

ಸೂ:—ಪರೀಕ್ಷೆಯ ಮೊದಲನೆಯ ದಿನ ಉಮೇದುವಾರರು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಲೇಬೇಕು.

ಟ್ರೇನಿಂಗ ಕಾಲೇಜ್-ಸರ್ಟಿಫಿಕೇಟ್ ಪರೀಕ್ಷೆಯ ಕಾರ್ಯಕ್ರಮ ೧೯೪೭

ದಿನ	ತಾರೀಖು	ವೇಳೆ ಇಂದ	— ವರೆಗೆ	ವಿಷಯ
ಸೋಮವಾರ	೨೧-೪-೧೯೪೭	೧೧-೦	೧-೩೦	ಶಿಕ್ಷಣ-ಕಾಗದ ೧
	,,	೩-೦	೫-೩೦	ಶಾಸ್ತ್ರೀಯ ವಿಷಯ
ಮಂಗಳವಾರ	೨೨-೪-೧೯೪೭	೧೧-೦	೧-೩೦	ಅಂಕಗಣಿತ
	,,	೩-೦	೫-೩೦	ಭಾಷಾವಿಷಯ-ಕಾಗದ೧
ಬುಧವಾರ	೨೩-೪-೧೯೪೭	೧೧-೦	೧-೩೦	ಭೂಗೋಲ (ಭೂಗೋಲ ಮತ್ತು ಇತಿಹಾಸ ಬೇಸಿಕ್ ಟ್ರೇ. ಕಾ. ದ ಶಿ. ವಿ. ಗಳಿಗೆ)
	,,	೩-೦	೫-೩೦	ಭಾಷಾವಿಷಯ-ಕಾಗದ೨
ಗುರುವಾರ	೨೪-೪-೧೯೪೭	೧೧-೦	೧-೩೦	ಭೂಮಿತಿ ಮತ್ತು ಜಮಾ ಖರ್ಚು
	,,	೩-೦	೫-೩೦	ಇತಿಹಾಸ (ಬೇ. ಟ್ರೈ. ಕಾ. ದವರಿಗೆ ತಾತ್ತ್ವಿಕ)
ಶುಕ್ರವಾರ	೨೫-೪-೧೯೪೭ (ಮುಂಜಾನೆ)	೮-೦	೧೦-೩೦	ಶಿಕ್ಷಣ- ಕಾಗದ ೨
		೩-೦	೫-೩೦	ಐಚ್ಛಿಕ ಪ್ರಾದೇಶಿಕ ಭಾಷೆ (ಶಿಕ್ಷಕರಿಗಾಗಿ ಮಾತ್ರ.)
				ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು (ವೋಕೇಶನಲ್ ಟ್ರೇನಿಂಗ್ ಸೆಂಟರ್. ಅಂಕಲೇಶ್ವರದ ಶಿಕ್ಷಕ ವಿದ್ಯಾರ್ಥಿಗಳಿಗೆ)

ಟೀಪು:—ಕಾರ್ಯಕ್ರಮ ವಿ. ಶಿಕ್ಷಕರಿಗೂ ವಿ. ಶಿಕ್ಷಿಕೆಯರಿಗೂ ಒಂದೇ ಇರುತ್ತದೆ. ಮೊದಲನೆಯ ವರ್ಷದ ಸೀನಿಯರ್ ವಿ. ಶಿಕ್ಷಿಕೆಯರಿಗೆ ಶುಕ್ರವಾರ ೨೫-೪-೧೯೪೭ನೆಯ ದಿನ ಪರೀಕ್ಷೆ ಇಲ್ಲ.

ವರ್ಗಾವರ್ಗ

ಶ್ರೀ. ಜಿ. ಆಯ್. ಗುಂಜೀಕರ ಅವರು ಕಾರವಾರ ಸ್ಕೂಲ್ ಬೋರ್ಡಿನ ಏ. ಓ. ಆಗಿದ್ದಾರೆ. **ಶ್ರೀ. ಪಿ. ಯಂ. ಈಮದಿ** ಅವರು ಕಾರವಾರದ ಡಿ. ಇ. ಆಯ್ ಆಗಿದ್ದಾರೆ. ಧಾರವಾಡ ಸ್ಕೂಲ್ ಬೋರ್ಡಿನ ಏ. ಓ. ಆಗಿದ್ದ **ಶ್ರೀ. ವ್ಹಿ. ಎಸ್. ನಾಡಕರ್ಣಿ** ಅವರು ಸೇವಾನಿವೃತ್ತರಾದ್ದರಿಂದ ಅವರ ಸ್ಥಳಕ್ಕೆ **ಶ್ರೀ. ಎನ್. ಬಿ. ನಾಡಿಗೇರ** ಅವರು ವರ್ಗಾಯಿಸಲ್ಪಟ್ಟಿದ್ದಾರೆ. ಶ್ರೀ. ಭಂಡಿವಾಡ ಜೀವಣರಾಯರು ಸೇವಾನಿವೃತ್ತರಾದ್ದರಿಂದ ಅವರ ಸ್ಥಳಕ್ಕೆ **ಶ್ರೀ. ಪಿ ಬಿ. ಪೇಸಾಯಿ** ಅವರು ವಿಜಾಪುರ ಸ್ಕೂಲ್ ಬೋರ್ಡಿನ ಏ. ಓ. ಆವರಾಗಿ ನಿಯಮಿಸಲ್ಪಟ್ಟಿದ್ದಾರೆ. ಮತ್ತು ಶ್ರೀ. ಎ. ಡಿ. ಪತಾಣ ಅವರು ಬೆಳಗಾಂವಿ ಜಿಲ್ಲೆಯ ಸ್ಕೂಲ್ ಬೋರ್ಡಿನ ಏ. ಓ. ಆವರಾಗಿ ನಿಯಮಿಸಲ್ಪಟ್ಟಿದ್ದಾರೆ. **ಶ್ರೀ. ಬಿ. ಯಂ. ಶಿಂತ್ರೆಯವರು** ಇ. ಆಯ್. ಎಸ್. ಡಿ. ಅವರಿಗೆ ಪಿ ಎ. ಆಗಿದ್ದಾರೆ. ಶ್ರೀ. ಆರ್. ಕೆ. ಮೆಣಶಿ ಅವರು ಧಾರವಾಡ ಮುನಸಿಪಲ್ ಸ್ಕೂಲ್. ಬೋರ್ಡಿನ ಏ. ಓ. ಆವರಾಗಿದ್ದಾರೆ. **ಶ್ರೀ. ಎಸ್. ಆರ್.** ಜೋಶಿ ಅವರು ಧಾರವಾಡ ಗಂಡುಮಕ್ಕಳ ಟ್ರೇನಿಂಗ ಕಾಲೇಜಿನ ಆಫಿಸಿಯೇಟಿಂಗ ಪ್ರಿನ್ಸಿಪಾಲರಾಗಿ ನಿಯಮಿಸಲ್ಪಟ್ಟಿದ್ದಾರೆ.

ಶೃಂಖಲಾಮೂಲಕ ಅಲಂಕಾರಗಳು.

ಲೇಖಕರು:— ಪಂಡಿತ ಕೇಶವಶರ್ಮಾ ಗಲಗಲಿ

ಕೇವಲ ವಿದ್ಯಾರ್ಥಿಗಳಿಗೆ ಅಲಂಕಾರದ ತತ್ವಗಳು ಹೊಳೆದು ಅನೇಕ ಉದಾಹರಣೆಗಳಿಂದ ಇವರ ಮನದಲ್ಲಿ ಆ ತತ್ವಗಳನ್ನು ಬಿಂಬಿಸುವದಕ್ಕಾಗಿ ಈ ಲೇಖಮಾಲೆ ಪ್ರಾರಂಭಿಸಲ್ಪಟ್ಟಿದೆ. ಶಕ್ಯವಿದ್ದಮಟ್ಟಿಗೆ ಸುಲಭ ಶೈಲಿಯಲ್ಲಿ ಬರೆಯಲು ಯತ್ನಿಸುತ್ತೇನೆ. ವಿದ್ಯಾರ್ಥಿಗಳೂ ಅಲಂಕಾರಗಳನ್ನು ತಿಳಿಯಲು ಕುತುಕಿಗಳಾದ ಇತರರೂ ಈ ಲೇಖಮಾಲೆಯನ್ನು ಓದಿಕೊಳ್ಳಬಹುದು.

ಸರಪಳಿಯಂತೆ ಒಂದಕ್ಕೊಂದು ಹೊಂದಿಸಲ್ಪಟ್ಟು ಚೆಂದವಾಗಿ ತೋರುವ ಅಲಂಕಾರಗಳಿಗೆ ಶೃಂಖಲಾಮೂಲಕ ಅಲಂಕಾರಗಳೆನ್ನುವರು. ಸಾರ ವಿಕಾವಲೀ, ಮಾಲಾದೀಪಕ, ಕಾರಣಮಾಲಾ ಈ ಅಲಂಕಾರಗಳು ಈ ಗುಂಪಿನಲ್ಲಿ ಸೇರುವುವು.

ಸಾರಾಲಂಕಾರ.

ಉತ್ತರೋತ್ತರ ಉತ್ಕರ್ಷವನ್ನು ಹೊಂದುತ್ತ ಹೋದರೆ ಅದು ಸಾರಾಲಂಕಾರವಾಗುವದು. ಮುಂದೆ ಮುಂದೆ ಹೋದಂತೆ ಉತ್ಕೃಷ್ಟತೆ ಏರುತ್ತ ಹೋಗಿ ಶಿಖರಕ್ಕೆ ಮುಟ್ಟಬೇಕು ಕೊನೆಯಲ್ಲಿ ಹೀಗೆ ಬಣ್ಣಿಸಿದಲ್ಲಿ ಸಾರಾಲಂಕಾರ. ಉದಾ:— ರಾಜ್ಯದಲ್ಲಿ ಸಾರ-ಭೂಮಿ-ಭೂಮಿಯಲ್ಲಿ ಸಾರ (ಶ್ರೇಷ್ಠ) ಉಪ್ಪರಿಗೆ ಉಪ್ಪರಿಗೆಯಲ್ಲಿ ಶ್ರೇಷ್ಠವಾದದ್ದು ಕಲ್ಪ (ಹಾಸಿಗೆ) ತಲ್ಪದಲ್ಲಿ ವರಾಂಗನೆಯ ಅನಂಗಸರ್ವಸ್ವ ಪ್ರಿಯಮಡದಿ ಸ್ತ್ರೀಯಲ್ಲಿ ಉತ್ಕೃಷ್ಟತೆ ಪರಮ ಸೀಮೆಯನ್ನು ಮುಟ್ಟಿದೆ. ಇಲ್ಲಿ ಪೂರ್ವವಸ್ತುಗಿಂತ ಉತ್ತರವಸ್ತು ಉತ್ಕೃಷ್ಟವೆಂದು ಬಣ್ಣಿಸಲ್ಪಟ್ಟಿದೆ. ಕಡೆಗೆ ವರಾಂಗನೆಯ ರೂಪದಲ್ಲಿ ವಿಶ್ರಾಂತಿ ಹೊಂದಿದೆ. ಅಲ್ಲಿ ಉತ್ಕೃಷ್ಟತೆ ಚರಮ ಸೀಮೆಯನ್ನು ಮುಟ್ಟಿರುವದು. ಜಗನ್ನಾಥನು ಉತ್ಕರ್ಷ ಅಪಕರ್ಷ ಎರಡರಿಂದಲೂ, ಸಾರವನ್ನು ಸಾಧಿಸಬಹುದೆಂದು ಹೇಳುತ್ತಾನೆ. ತ್ಲಾಘ್ಯೆ ಗುಣೋತ್ಕರ್ಷ ಅಶ್ಲಾಘ್ಯೆಗುಣೋತ್ಕರ್ಷ ಎಂದು ಎರಡು ವಿಭಾಗಗಳನ್ನು ಅಪ್ಪಯ್ಯ ದೀಕ್ಷಿತರು ಮಾಡಿದ್ದಾರೆ. ಅಪ್ಪಯ್ಯ ದೀಕ್ಷಿತರು ಅಶ್ಲಾಘ್ಯೆ ಗುಣೋತ್ಕರ್ಷಕ್ಕೆ ಉದಾಹರಣವನ್ನು ಕೊಟ್ಟಿರುವರು.

ಹುಲ್ಲಿಗಿಂತ ಅರಳೆ ಹಗುರವಾದದ್ದು. ಅರಳೆಗಿಂತ ಯಾಚಕನು ಹಗುರಾದವನು ಹಾಗಾದರೆ, ಗಾಳಿಯು ಆ ಯಾಚಕನನ್ನೇಕೆ ಹಾರಿಸಿಕೊಂಡು ಹೋಗಲಿಲ್ಲ. ಯಾಕಂದರೆ ಯಾಚಕನಿಗೆ ಬೇಡುವ ಸ್ವಭಾವ. ಅವನು ತನಗೆಲ್ಲಿ ದೇಶಾವರಿ ಬೇಡುವನೋ ಎಂಬ ಭಯದಿಂದ ಬಿಟ್ಟನು.

ಇದು ಶ್ಲಾಘ್ಯೆ ಅಶ್ಲಾಘ್ಯೆ ಗುಣೋತ್ಕಟತೆಯಿಂದ ಉಭಯ ರೂಪವೂ ಆಗಿರುವದು. ಗಿರಿ ದೊಡ್ಡದು, ಅದಕ್ಕಿಂತ ಸಾಗರ, ಸಾಗರಕ್ಕಿಂತ ನಭೋಮಂಡಲ. ನಭೋಮಂಡಲಕ್ಕಿಂತ ಬ್ರಹ್ಮನು ದೊಡ್ಡದು. ಬ್ರಹ್ಮನಿಗಿಂತ ಆಸೆ ದೊಡ್ಡದು ನೋಡಪ್ಪಾ, ಇಲ್ಲಿ ಬ್ರಹ್ಮನವರೆಗೆ ಇರುವ ಮಹತ್ವ ಶ್ಲಾಘ್ಯೆ ಗುಣದಲ್ಲಿ, ಪ್ರಕೃತಾರ್ಥದಲ್ಲಿ ಅವಸರವನ್ನು ಹೊಂದುವ ಆಸೆಯಲ್ಲಿ ಅಶ್ಲಾಘ್ಯೆ ಗುಣವು.

ಜಗನ್ನಾಥನು ಸಾರಾಲಂಕಾರದಲ್ಲಿ ಪುನಶ್ಚ ದ್ವಿಭಾಗವನ್ನು ಮಾಡಿಸಿವನು. ಒಂದು ವಸ್ತು ವಿಗೆ ಸಂಬಂಧಪಟ್ಟದ್ದು; ಅನೇಕ ವಸ್ತುಗಳಿಗೆ ಸಂಬಂಧಪಟ್ಟದ್ದು. ಒಂದೇವಸ್ತು ಪ್ರತಿನಿಧಿಯಾಗಿ ಉತ್ಕೃಷ್ಟತೆಯಲ್ಲಿ ಏರುತ್ತ ಹೋಗುವದು. ಏರಿಕೆಯು ಭೂಮಿಕೆಗಳಿಂದ ವಿಭಿನ್ನಸ್ಥಿತಿಗಳ ಮುಖಾಂತರ "ನೀಲಫಲದ ಕಾಂತಿಯನ್ನು ಉಲ್ಲಂಘಿಸಿ, ಲೀಲೆಯಿಂದ ಕಮನೀಯವಾದ ಬಂಗಾರದ ಕೊಡಗಳ ಶೋಭೆಯನ್ನು ಅಧಃಕರಿಸಿ. ಈಗ ನಿನ್ನ ಕುಚಗಳು ಕನಕಾಚಲದಿಂದ ಸ್ಪರ್ಧೆಯನ್ನು ಕಾಳುತ್ತಲಿರುವವು." ಎರಡನೇ ಪ್ರಕಾರವು ಎಲ್ಲ ಹಲವು ವಸ್ತುಗಳನ್ನು ಉಲ್ಲೇಖಿಸಿ ಮುಂದು ಮುಂದಿನ ವಸ್ತುವು ಹಿಂದು ಹಿಂದಿನಕಿಂತ ಉತ್ಕೃಷ್ಟವಾಗಿರುವದು. ಉದಾಹರಣ 'ಪರ್ವತ ದೊಡ್ಡದು, ಅದಕ್ಕಿಂತ ಭೂಮಿ, ಅದಕ್ಕಿಂತ-ಅದಕ್ಕಿಂತ ಬ್ರಹ್ಮಾಂಡ ದೊಡ್ಡದು. ಬ್ರಹ್ಮಾಂಡಕ್ಕಿಂತ ಪ್ರಳಯಕಾಲದಲ್ಲಿ ಕೂಡ ಅಚಲರಾಗಿರುವ ಮಹಾಪುರುಷರು ದೊಡ್ಡವರು.

ಬರಬರುತ್ತ ಏರುತ್ತ ಹೋಗುವದು ಸಾರಾಲಂಕಾರದಲ್ಲಿ ಮುಖ್ಯವಾದದ್ದು. ಪದ್ಯದ ಕಡೆಗೆ ಅದು ಕೊನೆಗೆ ಮುಟ್ಟುವದು. ಆದ್ದರಿಂದ ಕೆಳಗಿನ ಉದಾಹರಣವು ಸಾರಾಲಂಕಾರಕ್ಕೆ ಉದಾಹರಣವಾಗದು. ನದಿಗಳಲ್ಲಿ ಗಂಗೆ, ನಗರಗಳಲ್ಲಿ ಕಾಂಚೀ, ಪುಷ್ಪಗಳಲ್ಲಿ ಜಾಜಿ ಸ್ತ್ರೀಯರಲ್ಲಿ ರಂಭೆ, ಪುರುಷರಲ್ಲಿ ವಿಷ್ಣು, ಅನಿಗಳಲ್ಲಿ ಐರಾವತ ಉತ್ಕೃಷ್ಟ. ಇಲ್ಲಿ ಉತ್ಕೃಷ್ಟತೆ ಉತ್ತರೋತ್ತರ ವಸ್ತುಗಳಲ್ಲಿ ಏರುತ್ತ ಹೋಗುವದಿಲ್ಲ. ರುದ್ರಟನು ಇದನ್ನು ಉದಾರಾಲಂಕಾರವೆಂದು ಕರೆಯುತ್ತಾನೆ. ಭಾಮಹ ದಂಡಿ ವಾಮನರು ಇದರ ಉಲ್ಲೇಖವನ್ನು ಮಾಡಿರುವದೇ ಇಲ್ಲ.

ಕಾರಣಮಾಲೆ

ಹಿಂದು ಹಿಂದಿನದು ಮುಂದು ಮುಂದಿನ ಪದಾರ್ಥಕ್ಕೆ ಕಾರಣವಾಗುತ್ತ ಹೋದಲ್ಲಿ ಕಾರಣ ಮೂಲಾಲಂಕಾರವಾಗುವದು. ಕಾರಣಗಳ ಮಾಲೆ ಕಾರಣಮಾಲೆ, ಉದಾಹರಣ ವಿನಯಕ್ಕೆ ಕಾರಣ ಇಂದ್ರಿಯ ನಿಗ್ರಹ. ವಿನಯದಿಂದ ಗುಣಸ್ಪರ್ಷ ಉಂಟಾಗುವದು. ಗುಣಸ್ಪರ್ಷದಿಂದ ಜನಪ್ರೀತಿ, ಜನಪ್ರೀತಿಯಿಂದ ಸಂಪತ್ತಿಯ ಪ್ರಾಪ್ತಿ ಇದಕ್ಕೆ. ಕಾರಣಮಾಲೆ ಎಂಬ ಹೆಸರು ಸಾರ್ಥಕವಾಗಿದೆ. ಅಂತಃ ಸಂಬಂಧದಿಂದ ಹೊಂದಿಕೊಂಡ ಕಾರಣಗಳ ಮಾಲೆ ಇಲ್ಲಿ ಇರುವದು. ಮಾಲೋಪಮಾ— ಮಾಲಾರೂಪಕಗಳಲ್ಲಿರುವ ಮಾಲಾ ಶಬ್ದಾರ್ಥವು ಇಲ್ಲಿ ವಿವಕ್ಷಿತವಲ್ಲ. ಇಲ್ಲಿ ಮಾಲೆಯೆಂದರೆ ರಕನೆ (ಡಾಬು) ಶೃಂಖಲೆ. ಶೃಂಖಲಾಶಬ್ದವು ಅಂತಃ ಸಂಬಂಧವನ್ನು ಶೋರಿಸುವದು. ಇಲ್ಲಿ ಕಾರ್ಯಕಾರಣ ಕ್ರಮವೇ ಜಾರುತ್ತ ಹೇಳುವಾಗುವದು. ಮೊದಲು ಮೊದಲಿನದು ಕಾರಣ. ಮುಂದು ಮುಂದಿನದು ಕಾರ್ಯವಾಗಿದ್ದರೆ ಒಂದು ವಿಧದ ಕಾರಣಮಾಲೆ, ಮೊದಲು ಮೊದಲಿನದು ಕಾರ್ಯವಾಗಿ ಮುಂದು ಮುಂದಿನದು ಕಾರಣವಾಗಿದ್ದರೆ ೨ನೇ ಪ್ರಕಾರದ ಕಾರಣಮಾಲೆಯೆಂದು ಜಗನ್ನಾಥನು ಹೇಳುತ್ತಾನೆ. ಸ್ವರ್ಗಾಪವರ್ಗಗಳು ದಾನಲಕ್ಷ್ಮಿಯ ಫಲಗಳು, ದಾನವು ವಿಪುಲ ಸಮೃದ್ಧಿಯ ಫಲ. ಸಮೃದ್ಧಿ ಭಾಗ್ಯದಿಂದ ದೊರಕುವದು. ಇಂತಹ ಭಾಗ್ಯ ದೊರಕುವದು ಶಂಭೋ ನಿನ್ನ ವಾದಭಕ್ತಿಯಿಂದ. ಪೂರ್ವವು ಪರಕ್ಕೆ ಕಾರಣವಾಗುವಲ್ಲಿಯೂ ಈ ಅಲಂಕಾರ ಉದಾ:—ನರಕವು ಪಾಪಗಳಿಂದ ಪ್ರಾಪ್ತವಾಗುವದು. ಪಾಪವು ದಾರಿದ್ರ್ಯದಿಂದ ಪುಟ್ಟುಗುಂ. ದಾರಿದ್ರ್ಯವು ಕೊಡದಿರುವದರಿಂದ. ಆದ್ದರಿಂದ ಮಾನವನು ದಾನಪರವಾಗಿರಬೇಕು.

ಕಾರ್ಯಕಾರಣಗಳಲ್ಲಿ ಅಭೇದವನ್ನು ಹೇಳುವಲ್ಲಿ, ಹೇತ್ವಲಂಕಾರವಾಗುವದೆಂದು ರುದ್ರಟನು ಹೇಳುತ್ತಾನೆ. ಆದರೆ ಇದನ್ನು ಮಮ್ಮಟನು ಒಪ್ಪುವದಿಲ್ಲ. ಆಯುಃಘೃತಂ ಕುಪ್ಪವ ಆಯುಷ್ಯ. ಯಾಕಂದರೆ ಕುಪ್ಪಸಿಂದರೆ ಆಯುಷ್ಯಬೆಳೆಯುತ್ತದೆ. ಇದೊಂದು ಲಕ್ಷಣಾವೃತ್ತಿಯ

ಬಗೆ, ಅಲಂಕಾರವಲ್ಲ. ಯಾವ ಚಮತ್ಕಾರವೂ ಇಲ್ಲಿ ಇಲ್ಲವೆಂದು ಹೇಳುವನು. ದಂಡಿಯು ಹೇತುವು ಒಂದು ಉತ್ಕೃಷ್ಟ ಅಲಂಕಾರವೆಂದು ಹೇಳುವನು. ಕೆಲವರು ಇದನ್ನು ಒಪ್ಪುವದಿಲ್ಲ. ನಾಗವರ್ಮನು ಕಾರಣಮಾಲೆಯನ್ನು ಪರಂಪರಿತ ಹೇತುವೆಂದು ಕರೆದು ಜಿತೇಂದ್ರಿಯಶ್ಚಂ ಎಂಬ ಪದ್ಯದ ಕನ್ನಡ ಅನುವಾದವನ್ನು ಇದಕ್ಕೆ ಉದಾಹರಿಸುವನು. ಹೇತ್ವಲಂಕಾರವನ್ನು ಒಪ್ಪುವವರು, 'ಈ ಚಂದ್ರನು ಸ್ತ್ರೀಯರ ಗರ್ವಹರಣಕ್ಕಾಗಿ ಉದಯಿಸುತ್ತಾನೆ' ಉದಾಹರಿಸಿದ್ದರೆ ವಿದ್ವಾಂಸರ ಲಕ್ಷ್ಮೀವಿಲಾಸಗಳು ವೆಂಕಟಪ್ರಭುವಿನ ಕೃಪಾಕಟಾಕ್ಷಗಳು.'

ಕಾರ್ಯಕಾರಣ ಭಾವದ ಮೇಲೆ ಕಾರಣಮಾಲೆ ಪ್ರತಿಷ್ಠಾಪಿಸಲಾಗದೆ ಮಾಲಾದೀಪಿಕೆ ವಿಶೇಷ್ಯ ವಿಶೇಷಣಭಾವವನ್ನು ಅವಲಂಬಿಸಿರುವದು. ಇದುವೆ ಇವೆರಡರ ಭೇದವನ್ನು ತೋರಿಸುವದು. ಹಿಂದಿನ ಮುಂದಿನ ಪದಾರ್ಥಗಳಲ್ಲಿರುವ ಕಾರಣತೆಯು ಸಂಬಂಧದಲ್ಲಿ ಸೌಂದರ್ಯವಿರುವದು. ಕಾರಣಮಾಲೆಯಲ್ಲಿ ಅದರೆ ಮಾಲಾದೀಪಕದಲ್ಲಿ, ಹಿಂದಿನ ವಸ್ತುಗಿಂತ ಮುಂದು ಮುಂದಿನದು ಮುಖ್ಯವಾಗಿರುವದೆಂದು ಹೇಳುವ ಸಂಬಂಧದಲ್ಲಿ ಮನೋಹರತೆ ಇದೆ. ಅಲಂಕಾರ ಸರ್ವಸ್ವಕಾರನಾದ ರಾಜಾನಕರುಯ್ಯಕನು ಪೂರ್ವ ಪೂರ್ವಕ್ಕೆ ಉತ್ತರೋತ್ತರ ಹೇತುವು ತೋರಿದರೆ ಕಾರಣಮಾಲೆಯನ್ನುವನು. ಉತ್ತರೋತ್ತರ ಪದಾರ್ಥವು ಪೂರ್ವ ಪೂರ್ವಕ್ಕೆ ಕಾರಣವಾದರೆ ಕಾರಣಮಾಲೆಯೆಂದು ಸಾಹಿತ್ಯದರ್ಪಣಕಾರನಾದ ವಿಶ್ವನಾಥನು ಹೇಳುವನು ಮೊದಲು ಮೊದಲಿನದಕ್ಕೆ ಉತ್ತರೋತ್ತರವು ಕಾರಣವಾದರೆ ಕಾರಣಮಾಲೆಯೆಂದು ಪ್ರತಾಪರುದ್ರೀಯವು ಹೇಳುತ್ತದೆ. ಇತರ ಉದಾಹರಣೆಗಳು:— ವಿಷಯ ಸುಖಗಳನ್ನು ಧ್ಯಾನಮಾಡುತ್ತ ಕುಳ್ಳಿರುವದರಿಂದ ಅವುಗಳಲ್ಲಿ ಆ ಶಕ್ತಿ ಹುಟ್ಟುವದು. ಆ ಶಕ್ತಿಯಿಂದ ಕಾಮ (ಆಸೆ) ಹುಟ್ಟುತ್ತದೆ. ಕಾಮದಿಂದ ಕ್ರೋಧ ಹುಟ್ಟುವದು. ಕ್ರೋಧದಿಂದ ಮೋಹ ಹುಟ್ಟುವದು. ಮೋಹದಿಂದ ಸ್ಮೃತಿಭ್ರಂಶ, ಸ್ಮೃತಿ ಭ್ರಂಶದಿಂದ ಬುದ್ಧಿನಾಶ, ಹೀಗೆ ಅನರ್ಥ ಪರಂಪರೆ. (ಭಗವದ್ಗೀತೆ)

ಭಾರತೀಯ ರಾಜ್ಯಶಾಸನ:

ಲೇಖಕರು:

ಶ್ರೀ. ಕೆ. ಎಫ್. ಪಾಟೀಲ, ಬಿ. ಎ.

ಪ್ರಕಾಶಕರು ಸರಸ್ವತಿ ಪುಸ್ತಕ ಭಾಂಡಾರ, ಗದಗ

ಬೆಲೆ ೧—೮—೦.

ಇದು ಟ್ರೇನಿಂಗ ಸಂಸ್ಥೆಗಳಿಗೆ ಪಠ್ಯ ಪುಸ್ತಕವೆಂದು ಮಂಜೂರಾಗಿದೆ.

ಅಂಕಗಣಿತ

ಶ್ರೀ. ಎಚ್. ಬಿ. ಉಮಡಿ ಎಂ. ಎ.

ಅವರು ಬರೆದುದು:

ಕನ್ನಡ ೫, ೬, ೭ನೆಯ ಇಯತ್ತೆಯವರಿಗೂ

ಟ್ರೇನಿಂಗ್ ಪಡೆಯುತ್ತಿರುವವರಿಗೂ ಅತ್ಯುಪಯುಕ್ತ,

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿಯೂ ದೊರೆಯುತ್ತವೆ.

ಸರಕಾರದಿಂದ ಮಂಜೂರಾಗಿವೆ.

ಹೊಸ ಅಭ್ಯಾಸ ಪದ್ಧತಿಗೆ ಅನುಸಾರವಾಗಿ ಶ್ರೀ. ಎಲ್. ಆಯ್. ಆಕಳವಾಡಿ, ಬಿ. ಎ. ಬಿ. ಕಾಮ್. ಇವರಿಂದ ಪ್ರಾಥಮಿಕ ಶಾಲೆಯ ಕೆಳಗಿನ ಇಯತ್ತೆಗಳ ಸಲುವಾಗಿ ಬರೆಯಲ್ಪಟ್ಟ ಸಚಿತ್ರ ಪುಸ್ತಕ ಮಾಲೆಗಳು.

೧. ಸಚಿತ್ರ ಸಾಮಾನ್ಯ ವಿಜ್ಞಾನಮಾಲೆ (೧ರಿಂದ ೪ನೆಯ ಇಯತ್ತೆಯ ವರೆಗೆ)

(ಬೆಲೆ: ೧ನೇ ಇಯತ್ತೆ, ೦—೪—೬; ೨ನೇ ಇಯತ್ತೆ ೦—೫—೬; ೩ನೇ ಇಯತ್ತೆ ೦—೬—೬; ೪ನೇ ಇಯತ್ತೆ ೦—೮—೦.)

೨. ಸಚಿತ್ರ ನೀತಿಮಾಲೆ (೧ರಿಂದ ೪ನೆಯ ಇಯತ್ತೆಯ ವರೆಗೆ)
(ಬೆಲೆ: ೧ನೇ ಇಯತ್ತೆ ೦—೪—೦; ೨ನೇ ಇಯತ್ತೆ ೦—೫—೦; ೩ನೇ ಇಯತ್ತೆ ೦—೬—೦; ೪ನೇ ಇಯತ್ತೆ ೦—೭—೦)

೩. ಭೌಗೋಲಿಕ ನಕಾಶ ಪುಸ್ತಕ ಮಾಲೆ (೨ರಿಂದ ೪ನೇ ಇಯತ್ತೆಯ ವರೆಗೆ) ಬೆಲೆ: ೨ನೇ ಇಯತ್ತೆ ೦—೩—೦; ೩ನೇ ಇಯತ್ತೆ ೦—೪—೦; ೪ನೇ ಇಯತ್ತೆ ೦—೬—೦

ಇವಲ್ಲದೆ

೧.	೫ನೇ ಇಯತ್ತೆಯ ಭೌಗೋಲಿಕ ನಕಾಶ ಪುಸ್ತಕ	೦—೭—೦
೨.	೭ನೇ ಇಯತ್ತೆಯ ಭೌಗೋಲಿಕ ನಕಾಶ ಪುಸ್ತಕ	೦—೮—೦
೩.	೫ನೇ ಇಯತ್ತೆಯ ಸಾಮಾನ್ಯ ವಿಜ್ಞಾನ	ಅಚ್ಚಿನಲ್ಲಿ
೪.	ಆರೋಗ್ಯ ಸಾರ ಹಾಗೂ ಪ್ರಥಮ ಚಿಕಿತ್ಸೆ	೦—೭—೦
೫.	ಭೂಮಿಯ ಬಾಳಿನ ಕಥೆಗಳು (೩ನೇ ಇಯತ್ತೆಯ ಇತಿಹಾಸ)	೦—೮—೬
೬.	ಧಾರವಾಡ ಜಿಲ್ಲೆಯ ಭೂಗೋಲ	೦—೯—೦
೭.	ಪ್ರತಿಯೊಂದು ತಾಲೂಕಿನ ಭೂಗೋಲು	೦—೫—೦

ಮತ್ತು ಶಾಲೆ ಕಾಲೇಜುಗಳಿಗೆ ಹಾಗೂ ಲಾಯಬ್ರರಿಗಳಿಗೆ ಅವಶ್ಯವಿರುವ ಎಲ್ಲ ಬಗೆಯ ಕನ್ನಡ, ಇಂಗ್ಲೀಷ ಹಾಗೂ ಹಿಂದೀ ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ದೊರೆಯುತ್ತವೆ.

ಇಂದೇ ಆರ್ಡರ ಕೊಟ್ಟು ತರಿಸಿಕೊಳ್ಳಿರಿ

ಪ್ರಕಾಶಕರು

ರಾಮಾಶ್ರಯ ಬುಕ್‌ಡಿಪೋ, ಧಾರವಾಡ

ಎಷ್ಟೋ ವರುಷಗಳ ಅನುಭವದಿಂದ ಬರೆದ

ಚಿ. ಶ್ರೀ. ಕುಲಕರ್ಣಿಯವರ ಶಾಲೋಪಯೋಗಿ ಪುಸ್ತಕಗಳು

ಕೆಳಗಿನ ವರ್ಗಗಳಿಗಾಗಿ

೧	ಸಾಮಾನ್ಯವಿಜ್ಞಾನ (ಸಚಿತ್ರ) ೧ನೆಯ ಇಯತ್ತೆಯಿಂದ ೫ನೆಯ ಇಯತ್ತೆಯವರೆಗೆ	
೨	ಪೌರನೀತಿ ೧ನೆಯ ಇಯತ್ತೆಯಿಂದ ೬ನೆಯ ಇಯತ್ತೆಯವರೆಗೆ	
೩	ಪ್ರಪಂಚ ಪರಿಚಯ ೨ನೆಯ ಇಯತ್ತೆಯಿಂದ ೬ನೆಯ ಇಯತ್ತೆಯವರೆಗೆ	
೪	೩ನೆಯ ವರ್ಗದ ನಿಬಂಧ ಮತ್ತು ವ್ಯಾಕರಣ	೦ ೫ ೦
೫	೪ನೆಯ ವರ್ಗದ ನಿಬಂಧ ಮತ್ತು ವ್ಯಾಕರಣ	೦ ೮ ೦
೬	ಕರ್ನಾಟಕ ಪ್ರಶ್ನೋತ್ತರ ಇತಿಹಾಸ	೦ ೬ ೦
೭	ಮಿಡಲ್‌ಸ್ಕೂಲು ಸ್ಕಾಲರಷಿಪ್ ಪರೀಕ್ಷೆಯ ಮಾರ್ಗದರ್ಶಿಕೆ	೧ ೦ ೦

ಮುಲ್ಕೀಪರೀಕ್ಷೆಗಾಗಿ

೧	ಗಣಿತ ಸಂಗ್ರಹ	೧ ೦ ೦
೨	ಇತಿಹಾಸ ಪ್ರಶ್ನೋತ್ತರ ಮಾಲೆ	೦ ೯ ೦
೩	ಭೂಗೋಲ ಪ್ರಶ್ನೋತ್ತರ ಮಾಲೆ	೧ ೦ ೦
೪	ಭೂಮಿತಿ ಪ್ರಶ್ನೋತ್ತರ ಮಾಲೆ	೦ ೮ ೦
೫	ಜಮಾಖರ್ಚು ,,	೦ ೧೧ ೦
೬	ಶಾಸ್ತ್ರೀಯ ವಿಷಯ ,,	೦ ೬ ೦
೭	ಆರೋಗ್ಯ ವಿಜ್ಞಾನ	೦ ೯ ೦
೮	ಭಾಷಾಭ್ಯಾಸ	೧ ೦ ೦
೯	ವಾಕ್ಯರಚನೆ	೧ ೦ ೦
೧೦	ಮಾದರಿಯ ನಿಬಂಧಗಳು	೦ ೬ ೦
೧೧	ಗುಣವಿವೇಚನೆ	೦ ೮ ೦
೧೨	ಶಾಸ್ತ್ರೀಯ ವಿಷಯಸಾರ	೦ ೧೦ ೦
೧೩	ಶಾಸ್ತ್ರೀಯ ಕಾರಣಗಳ ಸಂಗ್ರಹ	೦ ೧೦ ೦
೧೪	ಭಾರತ ಸ್ವರಾಜ್ಯ ಸಾಧನೆ	೦ ೧೫ ೦
೧೫	ಪ್ರಶ್ನೋತ್ತರ ಸಂಗ್ರಹ	೧ ೦ ೦

ಕಥೆಯ ಪುಸ್ತಕಗಳು

	ಧ್ರುವ	೦ ೨ ೦
೨	ರನಿವಮಹಾತ್ಮೆ	೦ ೨ ೦
೩	ಗಜೇಂದ್ರ ಮೋಕ್ಷ	೦ ೨ ೬
೪	ಕುಮಾರ ಕಿಟ್ಟಣ್ಣ.	೦ ೩ ೦
೫	ಪೌರಾಣಿಕ ಕಥೆಗಳು	೦ ೩ ೦
೬	ಮಹಾತ್ಮಾ ಗಾಂಧಿ	೦ ೩ ೦
೭	ಜವಹರಲಾಲ ನೆಹರು	೦ ೪ ೦
೮	ಸುದಾಮು ಚರಿತ್ರ	೦ ೪ ೦
೯	ಭಕ್ತ ಹನುಮಾನ	೦ ೬ ೦
೧೦	ರಾಮಕೃಷ್ಣ ನೀತಿಯ ಕಥೆ	೦ ೬ ೦
೧೧	ಕುಮಾರ ರಾಮಣ್ಣ	೦ ೬ ೦
೧೨	ಶ್ರೀಕೃಷ್ಣ ಚರಿತ್ರೆ	೦ ೮ ೦
೧೩	ಪುರಂದರದಾಸರ ಪರಿಚಯ	೦ ೮ ೦
೧೪	ಮಕ್ಕಳ ಪುಸ್ತಕ	೦ ೪ ೦

ಶಿಕ್ಷಕರೂ, ಬಾಲಕರೂ ಎಂದಿನಂತೆ ಚಿ. ಶ್ರೀ. ಯವರ ಪುಸ್ತಕಗಳನ್ನೇ. ಉಪಯೋಗಿಸಿ ಅವರ ಶ್ರಮದ ಲಾಭ ಪಡೆಯಬೇಕಾಗಿ ವಿನಂತಿ ಅದೆ.

ಈ ಎಲ್ಲ ಪುಸ್ತಕ ಸಿಗುವ ಒಂದೇ ಸ್ಥಳ.

ಎಸ್. ಎಸ್. ಕುಲಕರ್ಣಿ ಬುಕ್ ಡಿಪೋ,
ಸ್ಟೇಶನ್‌ರೋಡ, ಹುಬ್ಬಳ್ಳಿ

ಮನೆಮನೆಯಲ್ಲಿಯೂ ಇರಬೇಕಾದ ಸ್ಫೂರ್ತಿದಾಯಕ ಗ್ರಂಥಗಳು!

೧. ಸುಭಾಸ-ಸೀವೋಲ್ಲಂಘನ

ಬೆಲೆ ೧—೮—೦ (ಅಂಚೆವೆಚ್ಚ ಸೇರಿ ೧—೧೨—೦)

ವಿವಿಧಯುಕ್ತಿ-ಸಾಹಸ-ವೇಷಗಳಿಂದ ಸರಕಾರಿ ಗೂಢಚಾರರ ಕಣ್ಣಿಗೆ ಅಂಜನಹಚ್ಚಿ ಸುಭಾಸರು ಪರದೇಶಗಳನ್ನು ಸಂಚರಿಸಿದ ರೋಮಾಂಚಕಾರಿ ಇತಿಹಾಸವನ್ನು ಶ್ರೀ. ಉತ್ತಮಚಂದರು ಸರಸವಾದ ಶೈಲಿಯಲ್ಲಿ ಪತ್ತೇದಾರಿ ಕಾದಂಬರಿಯಂತೆ ಬರೆದಿದ್ದಾರೆ.

೨. ಆಜಾದ ಹಿಂದ

ಬೆಲೆ ೧—೦—೦ (ಅಂಚೆವೆಚ್ಚ ಸೇರಿ ೧—೪—೦)

ನೇತಾಜಿ ಸುಭಾಸರು ಕಟ್ಟಿದ ಆಜಾದಹಿಂದ ಫೌಜಿನ ಹೋರಾಟದ ಸಮಗ್ರ ಇತಿಹಾಸ ಕ್ಯಾ. ಲಕ್ಷ್ಮಿ, ಶಹಾಜಹಾನ, ಸೈಗಲ, ಧಿಲನ, ಭೋಸಲೆ, ರಾಸಬಿಹಾರಿ ಮೊದಲಾದ ಸೇನಾನಿಗಳ ಕಥೆ ಇದರಲ್ಲಿವೆ.

೩. ನೇತಾಜಿ

ಬೆಲೆ ೧—೮—೦ (ಅಂಚೆವೆಚ್ಚ ಸೇರಿ ೧—೧೨—೦)

ನೇತಾಜಿ ಸುಭಾಸರ ಜೀವನ-ವಿಚಾರ-ಕಾರ್ಯಗಳ ಸಂಪೂರ್ಣ ದರ್ಶನ. ಅಲ್ಲಲ್ಲಿ ಮಾಡಿದ ಆಕಾಶವಾಣಿಯ ಭಾಷಣಗಳು. ಇತ್ಯಾದಿ.....

ಈ ಮೂರು ಪುಸ್ತಕಗಳನ್ನೂ ಬಯಸುವವರು ೪—೬—೦ ಮನಿಯಾರ್ಡರ ಕಳಿಸಿರಿ.

ಸಮಾಜ ಪುಸ್ತಕಾಲಯ, ಧಾರವಾಡ.

ಹೊಸ ಪುಸ್ತಕಗಳಿಗೆ ತ್ವರೆ ಮಾಡಿರಿ! ಲಾಭಪಡೆಯಿರಿ!

ಹೊಸ ಪದ್ಧತಿಯ
ಹಿಂದೀ ಜಮಾಖರ್ಚು ಭಾಗ ೨
(ವ್ಯಾಪಾರಿ ಜಮಾಖರ್ಚು)

ಇದರಲ್ಲಿ ಹುಂಡಿ, ಚೆಕ್ಕು, ಮನಿಯಾರ್ಡರ, ಬಡ್ತಿ ಮೊದಲಾದ ಜಮಾಖರ್ಚಿನ ಇತರ ವಹಿಗಳು ಯಾವುದಿಗಳ ನಮೂನೆಗಳು, ಪ್ರಶ್ನೆಗಳು, ಪ್ರಶ್ನೆಕಾಗದಗಳು ಇರುವದಲ್ಲದೆ, ಒಕ್ಕಲತನದ ಒಬ್ಬಿನ ಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಜಮಾಖರ್ಚು ಅಂದರೆ ಡೇಲಿ ಲೇಬರ ಶೀಟ, ಪೀಕಲಿ ಬುಸ್ಟರ ರೋಲ್, ಕಲ್ಟಿವೇಶನ್ ಶೀಟ, ಮುಂತಾದವುಗಳ ಪತ್ರಿಕೆಗಳೂ ಕಬೂಲಾಯತ್ತು, ಬಾಡಿಗೆಯ ಪತ್ರಗಳ ನಮೂನೆಗಳು ಇರುವದರಿಂದ ಇದು ಒಕ್ಕಲತನೆಯ ಇಯತ್ತೆಯವರಿಗೂ ಅಗ್ರಿಕಲ್ಚರಲ್ ಡಾಯಸ್ ಕ್ಲಾಸಿನವರಿಗೂ ಉಪಯುಕ್ತವಿದೆ. ಸ್ವಲ್ಪ ಪ್ರತಿಗಳಿರುವದರಿಂದ ನಮೂನೆಗಾಗಿ ಇಂದಿನ ಸ್ಟಾಂಪುಗಳನ್ನೂ ಎಲ್ಲರೂ ತರಿಸಿಕೊಳ್ಳಿರಿ. ಬೆಲೆ: ೪ ಆಣೆ.

ಹೊಸ ಪದ್ಧತಿಯ
(೧) ಹಿಂದೀ ಜಮಾಖರ್ಚು ಭಾಗ ೧
(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಪಠ್ಯಪುಸ್ತಕವೆಂದು ಮಂಜೂರ ಮಾಡಿರುವರು. ಇದು ೫-೬ನೆಯ ಇಯತ್ತೆಯವರಿಗೂ ಹೆಣ್ಣು ಮಕ್ಕಳ ಮುಲ್ಕೀ ಪರೀಕ್ಷೆಗೂ ಉಪಯುಕ್ತವಿದೆ.

ಬೆಲೆ: ೪ ಆಣೆ

೨. ಆರಂಭದ ಜಮಾಖರ್ಚು: ೬ನೆಯ ಇಯತ್ತೆಯನವರಿಗೆ ಉಪಯೋಗವದೆ. ಬೆಲೆ: ೩ ಆಣೆ.

೩. ಅಂಗಸಾಧನ ಶಿಕ್ಷಕ : ಬೆಲೆ: ೪ ಆಣೆ

೪. ಗಣೇತಪಾಠ ಸಂಗ್ರಹ: ಇದು ಈಗಿನ ಪರೀಕ್ಷೆಯ ಪದ್ಧತಿಯಂತಿರುವದರಿಂದ ಸ್ಕಾಲರ ಮಾತ್ರ ಮುಲ್ಕೀಪರೀಕ್ಷೆಯವರಿಗೆ ಉಪಯುಕ್ತವಿದೆ. ಬೆಲೆ: ೪ ಆಣೆ

ವಿಳಾಸ:— ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟ, ವಿಜಾಪುರ.

Printed by F. Y. Mindgudli at Ravindra Press, Dharwar and Published by S. R. Joshi Esqr., B. A., B. T. Principal Training College For- Men Dharwar at his Office 7403—46—1375.

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಣಕೆಯೂ ಸಮುಾವೇಶವಾಗಿವೆ)

ಪರಿವಿಡಿ.

★

೧. ಸಂಪಾದಕೀಯ

೨. ಪ್ರಾಥಮಿಕ ಶಿಕ್ಷಕರ ಸಂಬಳದ ಸ್ಕೇಲುಗಳ ಸುಧಾರಣೆ

೩. ವಿದ್ಯಾಖಾತೆಯಿಂದ ಮಂಜೂರಾದ
ಪಠ್ಯ ಪುಸ್ತಕಗಳು.

ಸಂಪಾದಕರು:

ರಂಗೋ ಕೃಷ್ಣ ಲಕ್ಕುಂಡಿ, ಬಿ ಎ, (ಆನರ್ಸ) ಬಿ. ಟಿ. (ಫರ್ಸ್ಟ್ ಕ್ಲಾಸ).

ಎಪ್ರಿಲ, ನೇ, ಜೂನ ೧೯೪೭

ಮನೆಯಲ್ಲಿಯೂ–ಪ್ರತಿವಾಚನಾಲಯಗಳಲ್ಲಿಯೂ ಸಂಗ್ರಹಿಸಬೇಕಾದ

ಸಮಾಜ ಪುಸ್ತಕಾಲಯದ ಸುಂದರ ಪ್ರಕಟನೆಗಳು

ಕಾಲಯವನ (ಭಾರತೀಸುತ)	೧	೧೮	೦
ಎರಡು ಸೆಳೆತ (ಮಲ್ಲಾರಿ)	೧	೧೨	೦
ಅನ್ನಪೂರ್ಣಾಮಂದಿರ (ಶೆಟ್ಟಿ)	೨	೦	೦
ಸಾವಿನ ಉಡಿಯಲ್ಲಿ (ಏನ್ಕೆ)	೩	೦	೦
ಗಂಡುಹೆಣ್ಣಿನ ಸಮಸ್ಯೆ	೩	೮	೦
ಬಿರುಗಾಳಿ (ಪ್ರೊ. ಫಡಕೆ)	೩	೮	೦
ರಮಾನಾಥ (ಪ್ರೇಮಚಂದ)	೩	೦	೦
ಧರ್ಮಸಂಕಟ (ವಾಡೇದ)	೨	೦	೦
ಸಮ್ರಾಟ ಹರ್ಷವರ್ಧನ	೨	೦	೦
ಬೆಳನಲದ ಭಾಗ್ಯಲಕ್ಷ್ಮಿ	೨	೮	೦
ಮಾಧವ ಲೀಲೆ	೧	೮	೦
ರಾಜಯೋಗಿ (ಆನಂದಕಂದ)	೨	೦	೦
ಸುದರ್ಶನ (,,)	೧	೮	೦
ಹೊಸಹೆಜ್ಜೆ (ಭಾರ್ಗವ)	೦	೧೦	೦
ಮನೆಯ ಸುಖಶಾಂತಿ	೦	೧೨	೦
ಡಾಕ್ಟರ್ ಗಿರೀಶ (ಪತ್ತೆದಾರಿ)	೦	೬	೦
ದೇವದಾಸ (ಶರತ್ಕಾದಂಬರಿ)	೧	೮	೦
ವೈಕುಂಠನ ಮೃತ್ಯುಪತ್ರ(,,)	೧	೮	೦
ಷೋಡಶಿ ,,	೨	೦	೦
ವಿಜಯ ,,	೧	೮	೦
ಶ್ರೀಕಾಂತ (೮ ಭಾಗ ಪೂರ್ಣ)	೧೦	೦	೦
ರಾಜಲಕ್ಷ್ಮಿ ,,	೧	೮	೦
ಭೂಮಾತೆ ಮತ್ತು ಮಂದಿರ	೧	೦	೦
ಚಿತ್ರ ,,	೦	೧೨	೦
ಪ್ರೇಮಪಥ ,,	೦	೫	೦
ಹೇಮಾಂಗಿನಿ ,,	೦	೪	೦
ಮಂಗಲಸೂತ್ರ ,,	೦	೩	೦
ಮಹೇಶ ,,	೦	೩	೦
ಅಭಾಗಿನಿಯ ಸ್ವರ್ಗ ,,	೦	೨	೦
ಗೃಹದಾಹ(ಪ್ರೇಮಚಂದ)	೧	೮	೦
ಪ್ರತಿಬಿಂಬ (ಕಾಣೇಕಲ)	೦	೬	೦
ಚಕಮಕಿ (ಬೇಂದ್ರೆ)	೨	೦	೦
ಮಾತ್ರೆಗಳು (ಬೀಚಿ)	೦	೧೨	೦
ಘಾಟೇಮುಮಕ (ದೇವುಡು)	೧	೮	೦
ಉರ್ದೂಕಥಾವಳಿ(ಜೋಶಿ)	೦	೮	೦
ನಮ್ಮ ಬದುಕು	೦	೧೪	೦
ಸನ್ಯಾಸಿನಿ(ಹೆ.ಪಿ ಯವರನಾಟಕ)	೦	೧೦	೦
ರೇಡಿಯೋ ನಾಟಕಗಳು	೦	೮	೦
ಮಕ್ಕಳ ಒಡಪು (ಶಂ. ಬಾ.)	೦	೪	೦
ಕ್ರಾಂತಿಯ ನೂರು ವರ್ಷ	೦	೧೨	೦
ಆಗಸ್ಟ ವೀರರು	೦	೮	೦
ಅಜಾದ ಹಿಂದ	೧	೦	೦
ಸುಭಾಸ ಸೀಮೋಲ್ಲಂಘನ	೧	೮	೦
ನೇತಾಜಿ	೧	೮	೦
ಕೈಗನ್ನಡಿ(ಸಾಮುದ್ರಿಕ ಶಾಸ್ತ್ರ)	೧	೮	೦
ಕನ್ನಡಿಯ ಹೆಟ್ಟುವ(ಶಂ. ಬಾ.)	೧	೧೨	೦
ಕಾಮಕುಂಜ (ಕಾಮಶಾಸ್ತ್ರ)	೧	೮	೦
ರತಿರಹಸ್ಯ ,,	೧	೮	೦
ಅನಂಗರಂಗ ,,	೧	೮	೦
ಕಾಮಶಾಸ್ತ್ರ ,,	೧	೮	೦
ವಿಕೃತಕಾಮ ,,	೧	೮	೦
ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ	೧	೮	೦

ಎರಡಾಣೆ ಮಾಲೆ

ಗಾಂಧಿ ಟೋಪಿ ಗಾಂಧೀಹುಚ್ಚು, ವಿಧವಾ ಕುಮಾರಿ, ನೌಕರಿ, ನಾನೇ ಹೊಲೆಯ, ನಾರೀರತ್ನ, ಕಲಿತಹೆಂಡತಿ, ಸೌಭಾಗ್ಯವತಿ, ಬಂಗಾರದ ಹೊಗೆ, ಬಡವರ ರೊಟ್ಟಿ, ರಾವ ಬಹಾದ್ದೂರ.

ಲೇಖನಕಲೆ ವಿ.ಜ್ಞಾನಣ್ಣರಾಯ	೨	೪	೦
ಬಾಳ್ವೆಯೇ ಬೆಳಕು(ಕಾರಂತ)	೧	೮	೦
ನಗೆ (ಶ್ರೀರಂಗ)	೦	೮	೦
ಆಹ್ವಾನ (,,)	೧	೦	೦
ಗೀತಾಗಾಂಭೀರ್ಯ (,,)	೩	೮	೦
ಶ್ರೀರಂಗ (ನೆರಂಗ)	೧	೮	೦
ನಾರಿ (ಅಮೀನ್)	೦	೯	೦
ಕನ್ನಡಿ (ಅನಿರುದ್ಧ)	೦	೬	೦
ತಾಪತ್ರಯ (ಜೋಕೆ)	೦	೬	೦
ಬಹಿಷ್ಕಾರ (ನೆರಂಗ)	೦	೬	೦

ಸಮಾಜ ಪುಸ್ತಕಾಲಯ, ಗಾಂಧೀ ಚೌಕು, ಧಾರವಾಡ.



ಸಂಪಾದಕರು :

ರಂಗೋ ಕೃಷ್ಣ ಲಕ್ಕುಂಡಿ ಬಿ. ಎ. (ಆನರ್ಸ್)., ಬಿ. ಟಿ. (ಫರ್ಸ್ಟ್‌ಕ್ಲಾಸ್)

ಕೂಗುವೊಂದಾಗಿ । ಕರುಳೊಂದಾಗಿ । ಹೃದಯದನುರಾಗವೊಂದಾಗಿ
ಸಂಘಟಿತ ಬಲಯುತರಾಗಿ । ರಾಗ ವಿದ್ವೇಷ ಮತ್ಸರ
ಮುದಗಳ ನೀಗಿ । ಸಾಗಲನುವಾಗಿರೈ ॥ ಭೋಗಬಿಟ್ಟೇಳಿರೈ ।
ಕನ್ನಡಮ್ಮನ ಕುವರರೇ ॥

— ಋಗ್ವೇದ.

ಸಂಪುಟ ೬೬ } ಏಪ್ರಿಲ್, ಮೇ, ಜೂನ್ ೧೯೪೭ { ವರ್ಷ ೨೦ ಸಂ. ೧, ೨, ೩.

ಸಂಪಾದಕೀಯ

★

ಜಗತ್ತಿನಲ್ಲಿ ಈಗ ಅತ್ಯಂತ ಬದಲಾವಣೆಯಾಗತೊಡಗಿದೆ. ಹಿಂಸುಸ್ತಾನವು ಇಂದು ಸಂಧಿಕಾಲದೊಳಗಿಂದ ಪಾಯ್ದು ಸ್ವರಾಜ್ಯದ ಕಡೆಗೆ ಹೆಜ್ಜೆಯಿಕ್ಕುತ್ತಿದೆ. ಭಾರತದ ರಾಜಕೀಯ ಸ್ಥಿತ್ಯಂತರಗಳ ಪರಿಣಾಮವು ನಮ್ಮ ಜೀವನದ ಪ್ರತಿಯೊಂದು ಸಂಗತಿಯಮೇಲಾಗುತ್ತಿದೆ. ಶಿಕ್ಷಣ ಕ್ಷೇತ್ರವ ಮೇಲಂತೂ ವಿಶೇಷ ಪರಿಣಾಮವಾಗುತ್ತಿದೆ. ಶಿಕ್ಷಣದ ಉದ್ದೇಶವು ಮುಂಬರುವ ಮತ್ತು ರೂಪುಗೊಳ್ಳುತ್ತಿರುವ ಸ್ವತಂತ್ರ ಭಾರತಕ್ಕೆ ತಕ್ಕಂತಹ ರೀತಿಯಲ್ಲಿ ಮಾರ್ಪಡುವುದು. ಅದರಂತೆ ನಾವೂ—ಶಿಕ್ಷಣ ಕ್ಷೇತ್ರದಲ್ಲಿ ದುಡಿಯತಕ್ಕವರು—ನಮ್ಮಲ್ಲಿ ಮಾರ್ಪಾಡನ್ನು ಮಾಡಿಕೊಂಡು ನಮ್ಮ ದೇಶದ ಪ್ರಗತಿಗೆ ನೆರವಾಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ದೇಶದ ಸರ್ವೋನ್ನತಿಯು ಬಹುಮಟ್ಟಿಗೆ ಪ್ರಾಥಮಿಕ ಶಿಕ್ಷಕರನ್ನವಲಂಬಿಸಿದೆ. ಈ ಮಾತಿನ ಸತ್ಯತೆಯನ್ನು ಅರಿತುಕೊಂಡು ಪ್ರಾಥಮಿಕ ಶಿಕ್ಷಕರು ತಮ್ಮ ಹೊಸದಾಗಿ ಬರುವ ಹೊಣೆಯನ್ನು ಅರಿತು ಯೋಗ್ಯ ರೀತಿಯಲ್ಲಿ ಅದನ್ನು ನಿರ್ವಹಿಸುವರೆಂದು ನಾವು ನಂಬಿದ್ದೇವೆ.

ನಮ್ಮ ಯೋಜನೆ :

'ಪ್ರಾಥಮಿಕ ಶಿಕ್ಷಣ' ಪತ್ರಿಕೆಯನ್ನು ಮಾಸಿಕ ಪತ್ರಿಕೆಯನ್ನಾಗಿ ಮಾಡಿ, ದಿನದಿನಕ್ಕೆ ಶಿಕ್ಷಣ ಕ್ಷೇತ್ರದದಲ್ಲಿ ಆಗುತ್ತಿರುವ ಮಾರ್ಪಾಡುಗಳನ್ನು ಶಿಕ್ಷಕರ ಮುಂದಿಟ್ಟು, ಅವರಿಗೆ ತಮ್ಮ ಕರ್ತವ್ಯವನ್ನು ಈಡೇರಿಸಲು ನೆರವಾಗಬೇಕೆಂದು ನಮ್ಮ ಬಯಕೆ ಇದೆ. ಇದಕ್ಕೆ ಸ್ವಲ್ಪ ಕಾಲವು ಬೇಕಾಗಬಹುದು. ಅಲ್ಲಿಯವರೆಗೆ ಇದುವರೆಗೆ ನಮಗೆ ಸಹಾಯ ನೀಡುತ್ತ ಬಂದಂತೆ ಎಲ್ಲ ಶಿಕ್ಷಕರೂ ವಾಚಕರೂ ಜಾಹೀರಾತು ದಾರರೂ ವಿದ್ಯಾರ್ಥಿಕಾರಿಗಳೂ ಇದನ್ನು ಮಾಸಿಕ ಪತ್ರಿಕೆಯನ್ನಾಗಿ ಮಾರ್ಪಡಿಸಿದ ನಂತರ ಈಗಿನಕಿಂತಲೂ ಹೆಚ್ಚು ಹೆಚ್ಚಾಗಿ ಪ್ರೋತ್ಸಾಹಿಸಿ ಸಹಾಯವನ್ನು ನೀಡಬೇಕೆಂದು ವಿನ್ನವಿಸಿಕೊಳ್ಳುತ್ತೇವೆ.

RIVISION OF THE PAY-SCALES OF PRIMARY SCHOOL TEACHERS IN THE EMPLOY OF THE LOCAL AUTHORITIES.

ಸ್ಥಾನಿಕ ಅಧಿಕಾರೀ ಸಂಘಗಳ ನೌಕರಿಯಲ್ಲಿರುವ ಪ್ರಾಥಮಿಕ ಶಾಲೆಯ ಶಿಕ್ಷಕರ ಸಂಬಳದ ಸ್ಕೇಲುಗಳ ಸುಧಾರಣೆ.

ಮುಂಬಯಿ ಸರಕಾರ

ಎಜ್ಯುಕೇಶನಲ್ ಡಿಪಾರ್ಟಮೆಂಟ್

ಠರಾವು ನಂಬರು ಎಸ್. ೭೨.

ಮುಂಬಯಿ ಕೋಟೆ, ತಾರೀಖು ೧೯ನೇ ಅಕ್ಟೋಬರ ಸನ್ ೧೯೪೬ನೇ ಇಸವಿ

ಸರಕಾರದವರ ಠರಾವು.

ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಲುವಾಗಿ ಯೋಗ್ಯವಾದ ಹಾಗೂ ಸಮಾಧಾನಕರವಾದ ಸಂಬಳದ ಸ್ಕೇಲುಗಳನ್ನು ಠರಾಯಿಸುವ ಸಂಬಂಧದ ಪ್ರಶ್ನೆಯನ್ನು ಕುರಿತು ಸರಕಾರದವರು ಕೆಲವು ತಿಂಗಳಿಂದ ವಿಚಾರ ಮಾಡುತ್ತಿದ್ದರು. ಅನೇಕ ಕಾರಣಗಳ ಮೂಲಕ, ಉದಾಹರಣಾರ್ಥವಾಗಿ, ಈ ಶಿಕ್ಷಕರ ಶೈಕ್ಷಣಿಕ ಲಾಯಖಿಗಳು, ಸಮಾನವಾದ ಲಾಯಖಿಗಳಿರುವ ಮನುಷ್ಯರು ಇತರ ಕಡೆಗಳಲ್ಲಿ ಪಡೆಯುತ್ತಿರುವ ಸಂಬಳವು, ಶಿಕ್ಷಕ ವರ್ಗದಲ್ಲಿ ಯೋಗ್ಯ ಪ್ರತಿಯ ಮನುಷ್ಯರು ಸೇರುವಂತೆ ಮಾಡುವ ಅವಶ್ಯಕತೆ, ಮುಂತಾದ ಕಾರಣಗಳ ಮೂಲಕ ಸದರಿ ಪ್ರಶ್ನೆಯು ಯಾವಾಗಲೂ ಗಡಚಾಗಿ ಕಂಡುಬಂದಿದೆ. ಪ್ರಾಥಮಿಕ ಶಿಕ್ಷಕರ ಸಂಬಳದ ಸ್ಕೇಲುಗಳು ಕಾಲಕಾಲಕ್ಕೆ ಸುಧಾರಿಸಲ್ಪಟ್ಟಿರುವದರಿಂದ ಅವರ ಬೇರೆ ಬೇರೆ ವರ್ಗಗಳ ಸಲುವಾಗಿ ಸಂಬಳದ ಅನೇಕ ಸ್ಕೇಲುಗಳು ಅಮಲಿನಲ್ಲಿರುತ್ತವೆ. ಮತ್ತು ಸರಕಾರದವರು ಸಂಬಳದ ಸ್ಕೇಲುಗಳ ಈ ಗೊಂದಲವನ್ನು ನಿಲ್ಲಿಸಿ ಬಿಟ್ಟು ಪ್ರಾಥಮಿಕ ಯಾವತ್ತು ವರ್ಗಗಳ ಸಲುವಾಗಿ ಒಂದು ಸರ್ವಸಾಮಾನ್ಯ ಸಂಬಳದ ಸ್ಕೇಲನ್ನು ಗೊತ್ತುಪಡಿಸತಕ್ಕದ್ದೆಂಬ ಬಗ್ಗೆ ಸತತವಾಗಿ ಮಾಗಣಿಗಳನ್ನು ಮಾಡಲಾಗಿದೆ. ಸರಕಾರದವರು ಈ ಯಾವತ್ತು ಸಂಗತಿಗಳ ಬಗ್ಗೆ ಕಾಳಜಿಪೂರ್ವಕವಾಗಿ ವಿಚಾರ ಮಾಡಿದ್ದಾರೆ ಮತ್ತು ಈ ವಿಷಯದಲ್ಲಿ ತಜ್ಞರ ಸಲಹೆಯನ್ನು ಪಡೆದು ಈ ಕೆಳಗಿನ ಹೊಕುಮುಗಳನ್ನು ಮಾಡಿದ್ದಾರೆ:—

(ಅ) ಸ್ಥಾನಿಕ ಅಧಿಕಾರೀ ಸಂಘಗಳ ನೌಕರಿಯಲ್ಲಿರುವ ಯಾವತ್ತು ಪ್ರಾಥಮಿಕ ಶಿಕ್ಷಕರನ್ನು ತರಬೇತಿ ಹೊಂದಿದವರು ಮತ್ತು ತರಬೇತಿ ಹೊಂದದವರು ಎಂಬ ಎರಡು ವರ್ಗಗಳಲ್ಲಿ ವಿಭಾಗಿಸತಕ್ಕದ್ದು.

ಟೀಪು ೧.—"ತರಬೇತಿ ಹೊಂದಿದ ಶಿಕ್ಷಕನು" ಎಂಬದರ ಅರ್ಥವು—

(೧) ಸನ್ ೧೯೩೫ನೇ ಇಸವಿಯ ಎಪ್ರಿಲ ತಿಂಗಳ ೧ನೇ ತಾರೀಖಿನ ಮುಂಚೆ ಕೆಲಸದ ಮೇಲೆ ತೆಗೆದುಕೊಳ್ಳಲಾದ ಅಥವಾ ತರಬೇತಿಯನ್ನು ಹೊಂದಿದಂಥ ಯಾವನೊಬ್ಬ

ಮೊದಲನೇ ವರ್ಷದ ತರಬೇತಿಯನ್ನು ಹೊಂದಿದ ಶಿಕ್ಷಕನು ಅಥವಾ ಸನ್ ೧೯೩೫ನೇ ಇಸವಿಯಲ್ಲಿ ಮೊದಲನೇ ವರ್ಷದ ತರಬೇತಿಯನ್ನು ಹೊಂದಿದ ವಿಷಯದ ದಾಖಲೆಯ ಪರೀಕ್ಷೆಗೆ ಕುಳಿತಿದ್ದು ಅನಂತರ ಪಾಸಾದ ಯಾವನೊಬ್ಬ ಶಿಕ್ಷಕನು ಎಂದಾಗತಕ್ಕದ್ದು.

(೨) ಎರಡನೇ ಅಥವಾ ಮೂರನೇ ವರ್ಷದ ತರಬೇತಿಯನ್ನು ಹೊಂದಿದ ಶಿಕ್ಷಕನು ಎಂದಾಗತಕ್ಕದ್ದು; ಮತ್ತು

(೩) ಇದರಲ್ಲಿ ಮುಂದೆ ತರಾಯಿಸಿದಂತೆ ತರಬೇತಿ ಹೊಂದಿದವನೆಂದು "ತಿಳಿಯಲ್ಪಡತಕ್ಕ" ಯಾವನೊಬ್ಬ ಶಿಕ್ಷಕನು ಎಂದಾಗತಕ್ಕದ್ದು..

ಟೀಪು ೨.—"ತರಬೇತಿ ಹೊಂದಿದ ಶಿಕ್ಷಕನು" ಎಂಬ ಸಂಜ್ಞೆಯ ಅರ್ಥವು, ತರಬೇತಿ ಹೊಂದಿದ ಶಿಕ್ಷಕನಲ್ಲದ ಯಾವನೊಬ್ಬ ಶಿಕ್ಷಕನು ಎಂದಾಗತಕ್ಕದ್ದು.

ಟೀಪು ೩.—ವಾಡಿಕೆಯಾಗಿ, ಲಾಯಖಿಯಿಲ್ಲದ ಶಿಕ್ಷಕರನ್ನು ಇನ್ನು ಮುಂದೆ ನೇಮಿಸತಕ್ಕದ್ದಲ್ಲ. ತೀರ ವಿಶೇಷ ಕಾರಣಗಳ ಸಲುವಾಗಿ ಅವರನ್ನು ನೇಮಿಸಬೇಕಾಗಿದ್ದರೆ, ಅವರನ್ನು ಹಂಗಾಮಿಯಾಗಿ ನೇಮಿಸತಕ್ಕದ್ದು.

(ಬ) (೧) ತರಬೇತಿ ಹೊಂದಿದ ಯಾವತ್ತು ಶಿಕ್ಷಕರಿಗೆ,—ಅವರು ಕಾಯಮಾವಾಗಲಿ ಅಥವಾ ಹಂಗಾಮಿಯಾಗಿರಲಿ, ಲಾಯಖಿರಲಿ ಅಥವಾ ಲಾಯಖಿರದಿರಲಿ—, ರೂ. ೨೫-೧—೩೦ ಎಂಬ ಸ್ಕೇಲಿನಂತೆ ಸಂಬಳವನ್ನು ಕೊಡತಕ್ಕದ್ದು ಮತ್ತು ಅವರು ಪ್ರಾರಂಭದ ೨೫ ರೂಪಾಯಿಯ ಸಂಬಳದ ಮೇಲೆ ಎರಡು ವರ್ಷಗಳ ವರೆಗಿನ ಪ್ರೊಬೇಶನಿಗೆ ಒಳಪಡತಕ್ಕದ್ದು. ಲಾಯಖಿರಿದ್ದ ತರಬೇತಿ ಹೊಂದದ ಯಾವತ್ತು ಶಿಕ್ಷಕರಿಗೆ ತರಬೇತಿಯನ್ನು ಹೊಂದಲಿಕ್ಕೆ ಆದಷ್ಟು ಬೇಗನೆ ಅವಕಾಶವನ್ನು ಕೊಡತಕ್ಕದ್ದು. ಪ್ರಾಂತದೊಳಗಿನ ಪ್ರಾಥಮಿಕ ಟ್ರೇನಿಂಗ್ ಕಾಲೇಜಗಳಿಂದ ಹೊರಬೀಳುವ ಶಿಕ್ಷಕರ ಸಂಖ್ಯೆಯು ಬಹಳ ದೊಡ್ಡದಿರುವದಿಲ್ಲೆಂದು ಸರಕಾರದವರು ಮನಗಂಡಿದ್ದಾರೆ. ತರಬೇತಿಯನ್ನು ಹೊಂದುವ ವಿಷಯದ ಅನುಕೂಲತೆಗಳು ಅವರಿಗೆ ಆದಷ್ಟು ಬೇಗನೆ ದೊರೆಯುವಂತೆ ಮಾಡುವ ಬಗ್ಗೆ ಸರಕಾರದವರು ಈಗಾಗಲೇ ಮೂರು ಹೊಸ ಪ್ರಾಥಮಿಕ ಟ್ರೇನಿಂಗ್ ಕಾಲೇಜುಗಳನ್ನು ತೆರೆದಿದ್ದಾರೆ. ಹೆಚ್ಚಿನ ಪ್ರಾಥಮಿಕ ಟ್ರೇನಿಂಗ್ ಕಾಲೇಜುಗಳನ್ನು ತೆರೆಯಬೇಕೆಂತಲೂ, ಸದ್ಯದ ಕಾಲೇಜುಗಳನ್ನು ಬೆಳಿಸಬೇಕೆಂತಲೂ, ತಮ್ಮ ಖಾಸಗಿ ಟ್ರೇನಿಂಗ್ ಕಾಲೇಜುಗಳನ್ನು ಬೆಳಿಸಲು ಹಾಗೂ ಹೊಸ ಖಾಸಗಿ ಟ್ರೇನಿಂಗ್ ಕಾಲೇಜುಗಳನ್ನು ಸ್ಥಾಪಿಸಲು ಪ್ರೋತ್ಸಾಹ ಕೊಡಬೇಕೆಂತಲೂ ಸರಕಾರದವರು ಯೋಜನೆ ಮಾಡಲಿದ್ದಾರೆ.

ಆದರೆ ಸದ್ಯಕ್ಕಿರುವ ಅನೇಕ ಶಿಕ್ಷಕರಿಗೆ ತರಬೇತಿಯನ್ನು ಹೊಂದಲಿಕ್ಕೆ ಅನುಕೂಲತೆಗಳು ಇದ್ದಿಲ್ಲವೆಂಬ ಮತ್ತು ಅನೇಕ ಹೊಸತಾಗಿ ಸೇರಿದ ಶಿಕ್ಷಕರಿಗೆ ಇಂಥ ಅನುಕೂಲತೆಗಳು ಅವರ ನೌಕರಿಯ ಕಾಲದ ಪ್ರಾರಂಭಾವಸ್ಥೆಯಲ್ಲಿ ದೊರೆಯದಿರಬಹುದು ಎಂಬ ಸಂಗತಿಯ ಬಗ್ಗೆ ತಜವೀಜು ಮಾಡುವದು ಅವಶ್ಯವಿರುತ್ತದೆ ಆದಕಾರಣ, ಲಾಯಖಿನಿದ್ದ ತರಬೇತಿ ಹೊಂದಿದ ಯಾವನೊಬ್ಬ ಶಿಕ್ಷಕನು ೧೦ ವರ್ಷಗಳ ಅವಿಚ್ಛಿನ್ನವಾದ ನೌಕರಿಯನ್ನು ಮಾಡಿದ ಬಳಿಕ, ಅವನು ತರಬೇತಿಹೊಂದಿದವನೆಂದು "ತಿಳಿಯಲ್ಪಡತಕ್ಕದೆಂದು" ಸರಕಾರದವರು ತರಾಯಿಸಿದ್ದಾರೆ, ಆದರೆ ೪೫ ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಲ್ಲದ ಇಂಥ ಶಿಕ್ಷಕನು ತರಬೇತಿಯ ಅಭ್ಯಾಸಕ್ರಮವನ್ನು ಅಥವಾ ತರಬೇತಿಯ ರಿಫ್ರೆಶರ್ ಕೋರ್ಸನ್ನು ಪಡೆಯುವಂತೆ ಫರ್ಮಾಯಿಸಲ್ಪಡಬಹುದು.

ಟೀಪು.—ಯಾವನಾದರೂ ಶಿಕ್ಷಕನು, ಯೋಗ್ಯ ಕಾರಣಗಳಿಲ್ಲದೆ, ತರಬೇತಿಯನ್ನು ಹೊಂದಲಿಕ್ಕೆ ಅಥವಾ ಯಾವದೊಂದು ರಿಫ್ರೆಶರ್ ಕೋರ್ಸಿಗೆ ಹಾಜರಾಗಲಿಕ್ಕೆ ಅವಕಾಶವು ಕೊಡಲ್ಪಟ್ಟ ತರುವಾಯ, ಹಾಗೆ ಮಾಡಲು ತಪ್ಪಿದರೆ, ಅವನನ್ನು ಮುಂದೆ ಶಿಕ್ಷಕನೆಂದು ನೌಕರಿಯಲ್ಲಿಟ್ಟುಕೊಳ್ಳಬಾರದು.

(೨) ೧೦ ವರ್ಷಗಳ ನೌಕರಿಯ ನಂತರ ತರಬೇತಿಯನ್ನು ಹೊಂದಿದಂಥ ಯಾವ ನೊಬ್ಬ ತರಬೇತಿ ಹೊಂದಿದ ಶಿಕ್ಷಕನು,ಅವನ ಸಂಬಳವನ್ನು ನಿರ್ಣಯಿಸುವ ಬಗ್ಗೆ ಇದು ಹೆಚ್ಚು ಲಾಭಕರವೆಂದು ಕಂಡುಬಂದರೆ, ೧೦ ವರ್ಷಗಳ ಸತತವಾದ ನೌಕರಿಯನ್ನು ಮುಗಿಸಿದ ಬಳಿಕ ತರಬೇತಿ ಹೊಂದಿದವನೆಂದು ತಿಳಿಯಲ್ಪಡುವದು.

(ಕ) ತರಬೇತಿ ಹೊಂದಿದ ಶಿಕ್ಷಕರಿಗೆ ರೂ. ೩೦—೧—೪೦ ಎಂಬ ಸ್ಕೇಲನ್ನು ಕೊಡ ತಕ್ಕದ್ದು. ತರಬೇತಿ ಹೊಂದಿದ ಶಿಕ್ಷಕರ ಕೇಡರಿನ ಪೈಕಿ ನೂರಕ್ಕೆ ೧೫ರಷ್ಟು ಶಿಕ್ಷಕರಿಗೆ ೪೦—೨!!—೭೪ ಎಂಬ ಸಿಲೆಕ್ಷನ್ ಗ್ರೇಡನ್ನು ಕೊಡತಕ್ಕದ್ದು. ಲಾಯಖರಾದ ಶಿಕ್ಷಕರು ಸಾಮಾನ್ಯ ಗ್ರೇಡಿನ ಪರಮಾವಧಿಯನ್ನು ಮುಟ್ಟಲಿಲ್ಲವೆಂಬ ಕಾರಣದಿಂದ ಸಿಲೆಕ್ಷನ್ ಗ್ರೇಡಿನ ಯಾವನೇ ಜಾಗೆಗಳು ತುಂಬಲ್ಪಡದೆ ಉಳಿಯಲಿಕ್ಕೆಲ್ಲ.

(ಡ) ಪ್ರಾಥಮಿಕ ಶಿಕ್ಷಕರಿಗೆ, ಅವರ ವಾಡಿಕೆಯ ಸಂಬಳದ ಮೇಲಾಗಿ, ಸರಕಾರದವ ರಿಂದ ತಮ್ಮ ನೌಕರರ ಸಲುವಾಗಿ ಮಂಜೂರು ಮಾಡಲ್ಪಟ್ಟ ದರಗಳಿಂದ ತುಟ್ಟಿಯ ಭತ್ತೆ ಯನ್ನು ,ಮತ್ತು ಸನ್ ೧೯೪೬ನೇ ಇಸವಿಯ ಸಪ್ಟೆಂಬರ್ ತಿಂಗಳ ೧೬ನೇ ತಾರೀಖಿನ ಫಿನ್ಯಾನ್ಸ ಡಿಪಾರ್ಟಮೆಂಟಿನೊಳಗಿನ ಸರಕಾರೀ ಠರಾವು ನಂಬರು ೬೨೬೧/೩೬ ಇದರಲ್ಲಿ ಮಂಜೂರು ಮಾಡಲ್ಪಟ್ಟ ದರದಿಂದ ಹಾಗೂ ಶರ್ತುಗಳ ಮೇಲೆ "ತಾತ್ಪೂರ್ತಿಕ ಹೆಚ್ಚಿನ ಸಂಬಳವನ್ನು" ಕೊಡತಕ್ಕದ್ದು.

(೫) ಮನೆಯ ಬಾಡಿಗೆಗಳು ಅಥವಾ ಜೀವನದ ವೆಚ್ಚವು ಬಹಳ ಹೆಚ್ಚಿಗೆ ಇರುವಂಥ ಅಥವಾ ಹವಾಮಾನವು ಕೆಟ್ಟದಿರುವಂಥ ಸ್ಥಳಗಳಲ್ಲಿ ಕೆಲಸ ಮಾಡಬೇಕಾದ ಪ್ರಾಥಮಿಕ ಶಿಕ್ಷಕ ರಿಗೆ, ಅವರ ವಾಡಿಕೆಯ ಸಂಬಳದ ಮೇಲಾಗಿ, ಪೆನ್ಶನಿನಲ್ಲಿ ಹಿಡಿಯಲ್ಪಡಬಾರದಾದ ಸ್ಥಾನಿಕ ಭತ್ತೆಯ ರೂಪದ ಹೆಚ್ಚಿನ ಮೊಬದಲೆಯನ್ನು ಕೊಡತಕ್ಕದ್ದು. ಈ ವಿಷಯದಲ್ಲಿ ಸರಕಾರ ದವರು ಈ ಕೆಳಗಿನ ತತ್ವಗಳನ್ನು ಪಸಂತು ಮಾಡಿದ್ದಾರೆ :—

(೧) ಯಾವತ್ತು ಸ್ಥಾನಿಕ ಅಧಿಕಾರೀ ಮ್ಯುನಸಿಪಾಲಿಟಿಯ ಕ್ಷೇತ್ರಗಳು, ಪ್ರಥಮ ದರ್ಶನದಲ್ಲಿ, ಹೆಚ್ಚಿನ ವೆಚ್ಚದ ಕ್ಷೇತ್ರಗಳೆಂದು ತಿಳಿಯಲ್ಪಡತಕ್ಕದ್ದು. ಇಂಥ ಕ್ಷೇತ್ರಗಳಲ್ಲಿ ಕೆಲಸಮಾಡುವ ಪ್ರತಿಯೊಬ್ಬ ಶಿಕ್ಷಕನಿಗೆ ಪ್ರತಿ ತಿಂಗಳಿಗೆ ೫ರೂಪಾಯಿಗೆ ಮಿಾರದ,ಪೆನ್ಶನಿನಲ್ಲಿ ಹಿಡಿಯಲ್ಪಡಬಾರದಾದ ಸ್ಥಾನಿಕ ಭತ್ತೆಯನ್ನು ಕೊಡಲಿಕ್ಕೆ ಸ್ಥಾನಿಕ ಅಧಿಕಾರೀ ಸಂಘಗಳಿಗೆ ಪರವಾನಗಿ ಕೊಡತಕ್ಕದ್ದು. ಈ ಮರ್ಯಾದೆಗಿಂತ ಹೆಚ್ಚಿಗಿರುವ ಯಾವದೇ ವೆಚ್ಚವನ್ನು ,ಅದರ ಸಮಂಜಸತೆಯ ಬಗ್ಗೆ ಯೋಗ್ಯ ಕಾರಣವು ತೋರಿಸಲ್ಪಟ್ಟರೆ ಮಾತ್ರ ಹಾಗೂ ಸದರಿ ಇಡೀ ಹೆಚ್ಚಿನ ವೆಚ್ಚವನ್ನು ಸಂಬಂಧಪಟ್ಟ ಸ್ಥಾನಿಕ ಅಧಿಕಾರೀ ಸಂಘವು ಸಹಿಸುವದೆಂದು ಸ್ಪಷ್ಟವಾಗಿ ಹೇಳಲ್ಪಟ್ಟರೆ ಮಾತ್ರ, ಮಂಜೂರು ಮಾಡತಕ್ಕದ್ದು.

(೨) ಸ್ಥಾನಿಕ ಅಧಿಕಾರೀ ಮ್ಯುನಿಸಿಪಾಲಿಟಿಯ ಕ್ಷೇತ್ರಗಳಲ್ಲದ ಕ್ಷೇತ್ರಗಳಲ್ಲಿ ಮತ್ತು ಇತರ ಜಿಲ್ಲಾ ಲೋಕಲ್ ಬೋರ್ಡಿನ ಕ್ಷೇತ್ರಗಳಲ್ಲಿ ನೌಕರಿ ಮಾಡುವ ಶಿಕ್ಷಕರಿಗೆ, ಸದರಿ ಕ್ಷೇತ್ರಗಳಲ್ಲಿ ಜೀವನದ ವೆಚ್ಚವು ಬಹಳ ಇರುತ್ತದೆಂದು ಅವರು ಸಮಾಧಾನಕರವಾದ ಪುರಾವೆಯನ್ನು ಹಾಜರು ಮಾಡಿದರೆ, ಪ್ರತ್ಯೇಯೊಬ್ಬ ಶಿಕ್ಷಕನಿಗೆ ೫ ರೂಪಾಯಿ ವರೆಗೆ ಸ್ಥಾನಿಕ ಭತ್ತೆಯನ್ನು ಕೊಡಲಿಕ್ಕೆ ಸ್ಥಾನಿಕ ಅಧಿಕಾರೀ ಸಂಘಗಳಿಗೆ ಪರವಾನಗಿ ಕೊಡತಕ್ಕದ್ದು.

(ಫ) ಹೊಸ ಸಂಬಳದ ಸ್ಕೇಲುಗಳು ಸನ್ ೧೯೪೬ನೇ ಇಸವಿಯ ಆಗಸ್ಟ ತಿಂಗಳ ೧ನೇ ತಾರೀಖಿನಿಂದ (ಅಂದರೆ, ಸನ್ ೧೯೪೬ನೇ ಇಸವಿಯ ಸಪ್ಟೆಂಬರ ತಿಂಗಳಲ್ಲಿ ಕೊಡಲಾಗುವ ಸನ್ ೧೯೪೬ನೇ ಇಸವಿಯ ಆಗಸ್ಟ ತಿಂಗಳ ಸಂಬಳಕ್ಕೆ ಲಾಗೂ ಮಾಡತಕ್ಕದ್ದು).

೨. ಯಾವ ವಿಧಾನಗಳ ಮೇರೆಗೆ ಸದ್ಯಕ್ಕೆ ಕೆಲಸ ಮಾಡುವ ಶಿಕ್ಷಕರ ಸಂಬಳವನ್ನು ಹೊಸ ಸ್ಕೇಲಿನಲ್ಲಿ ಸರಿಗೊಳಿಸತಕ್ಕದ್ದೋ ಅಂಥ ವಿಧಾನಗಳನ್ನು ಕೆಳಗೆ ಕೊಡಲಾಗಿದೆ: —

(೧) **ತರಬೇತಿ ಹೊಂದಿದ ಶಿಕ್ಷಕರು** :—ಮೇಲೆ ಹೇಳಿದ ೧ (ಬ) ಪ್ಯಾರಾಗ್ರಾಫಿನಲ್ಲಿ ತರಾಯಿಸಿದ ಹೊಸ ಸ್ಕೇಲಿನಲ್ಲಿ ತರಬೇತಿ ಹೊಂದಿದ ಶಿಕ್ಷಕರ ಸಂಬಳವನ್ನು ಗೊತ್ತು ಪಡಿಸುವಾಗ್ಗೆ, ಅವರ ಹಿಂದಿನ ಅವಿಚ್ಛಿನ್ನ ನೌಕರಿಯನ್ನು ಲಕ್ಷ್ಯದಲ್ಲಿ ತೆಗೆದುಕೊಳ್ಳಬೇಕಾಗುವದು.

(೨) **ಮೊದಲನೇ ವರ್ಷದ ತರಬೇತಿಯನ್ನು ಹೊಂದಿದ ಶಿಕ್ಷಕರು** :—

(ಅ) ಹೊಸಬರ (ಅಂದರೆ, ಸನ್ ೧೯೩೫ನೇ ಇಸವಿಯ ಎಪ್ರಿಲ ತಿಂಗಳ ೧ನೇ ತಾರೀಖಿನ ದಿವಸ ಅಥವಾ ಅದರ ನಂತರ ಕೆಲಸಕ್ಕೆಟ್ಟುಕೊಳ್ಳಲ್ಪಟ್ಟವರ ಅಥವಾ ತರಬೇತಿ ಹೊಂದಿದವರ) ಸಂಬಳವನ್ನಾದರೂ ಮೇಲೆ (೧)ರಲ್ಲಿ ಹೇಳಿದ ತರಬೇತಿ ಹೊಂದಿದ ಶಿಕ್ಷಕರ ಬಗ್ಗೆ ಹೇಳಿದ ರೀತಿಯಿಂದಲೇ ಗೊತ್ತುಮಾಡತಕ್ಕದ್ದು. ಅವರಿಗೆ ತಮ್ಮ ತರಬೇತಿಯ ಕ್ರಮವನ್ನು ಶಕ್ಯವಿದ್ದಷ್ಟು ಬೇಗನೆ ಮುಗಿಸಲಿಕ್ಕೆ ಅವಕಾಶವನ್ನು ಕೊಡತಕ್ಕದ್ದು.

(ಬ) ಹೆಳಬರು (ಅಂದರೆ, ಸನ್ ೧೯೩೫ನೇ ಇಸ್ವಿಯ ಎಪ್ರಿಲ ತಿಂಗಳ ೧ನೇ ತಾರೀಖಿನಿಂದ ಮುಂಚೆ ಕೆಲಸಕ್ಕೆಟ್ಟುಕೊಳ್ಳಲ್ಪಟ್ಟ ಅಥವಾ ತರಬೇತಿ ಹೊಂದಿದ ಶಿಕ್ಷಕರು) ತರಬೇತಿ ಹೊಂದಿದ ಶಿಕ್ಷಕರೆಂದು ತಿಳಿಯಲ್ಪಡತಕ್ಕದ್ದು ಮತ್ತು ಅವರನ್ನು ೩೦-೧-೫೦ ಎಂಬ ಹೊಸ ಸ್ಕೇಲಿನ ಮೇಲೆ ತರತಕ್ಕದ್ದು.

(೩) **ಎರಡನೇ ವರ್ಗದ ತರಬೇತಿಯನ್ನು ಹೊಂದಿದ ಶಿಕ್ಷಕರು** :—

(ಅ) ಹೊಸಬರನ್ನು (ಅಂದರೆ, ೧೯೩೫ನೇ ಇಸವಿಯ ಎಪ್ರಿಲ ತಿಂಗಳ ೧ನೇ ತಾರೀಖಿನ ದಿವಸ ಅಥವಾ ಅದರ ನಂತರ ಕೆಲಸಕ್ಕೆಟ್ಟುಕೊಳ್ಳಲ್ಪಟ್ಟ ಅಥವಾ ತರಬೇತಿ ಹೊಂದಿದ ಶಿಕ್ಷಕರನ್ನು) ರೂ. ೩೦—೧—೫೦ ಎಂಬ ಸ್ಕೇಲಿನಲ್ಲಿ ಅವರ ಸದ್ಯದ ಸಂಬಳದ ಜೊತೆಗೆ ೫ ರೂಪಾಯಿಯನ್ನು ಹೆಚ್ಚಿಗೆ ಕೊಟ್ಟು ಇಡತಕ್ಕದ್ದು.

(ಬ) ಹೆಳಬರನ್ನು (ಅಂದರೆ, ಸನ್ ೧೯೩೫ನೇ ಇಸವಿಯ ಎಪ್ರಿಲ ತಿಂಗಳ ೧ನೆ ತಾರೀಖಿನಿಂದ ಮುಂಚೆ ಕೆಲಸಕ್ಕೆಟ್ಟುಕೊಳ್ಳಲ್ಪಟ್ಟವರನ್ನು ಅಥವಾ ತರಬೇತಿ ಹೊಂದಿದವರದನ್ನು) ರೂ. ೩೦—೧—೫೦ ಎಂಬ ಸ್ಕೇಲಿನಲ್ಲಿ ತರತಕ್ಕದ್ದು.

(೪) **ಮೂರನೇ ವರ್ಷದ ತರಬೇತಿಯನ್ನು ಹೊಂದಿದ ಶಿಕ್ಷಕರು :—**

(ಅ) ಹೊಸಬರನ್ನು (ಅಂದರೆ, ಸನ್ ೧೯೩೫ನೇ ಇಸವಿಗಳ ನಡುವಿನ ಕಾಲದಲ್ಲಿ ಮೂರನೇ ವರ್ಷದ ತರಬೇತಿಯ ದಾಖಲೆಯನ್ನು ಪಡೆದ ಶಿಕ್ಷಕರನ್ನು)ರೂ. ೩೦—೧—೫೦ ಎಂಬ ಸ್ಕೇಲಿನಲ್ಲಿ ಅವರ ಸದ್ಯದ ಸಂಬಳದ ಜೊತೆಗೆ ೫ ರೂ. ರೂಪಾಯಿ ಹೆಚ್ಚಿಗೆ ಕೊಟ್ಟು ಇಡತಕ್ಕದ್ದು.

(ಬ) ಹೆಳಬರನ್ನು (ಅಂದರೆ, ಸನ್ ೧೯೩೫ನೇ ಇಸವಿಯ ಎಪ್ರಿಲ ೧ನೇ ತಾರೀಖಿನಿಂದ ಮುಂಚೆ ಕೆಲಸಕ್ಕೆಟ್ಟುಕೊಳ್ಳಲ್ಪಟ್ಟ ಅಥವಾ ತರಬೇತಿ ಹೊಂದಿದ ಶಿಕ್ಷಕರನ್ನು) ರೂ. ೩೦—೧—೫೦ ಎಂಬ ಸ್ಕೇಲಿನ ಮೇಲೆ ತರತಕ್ಕದ್ದು. ಇವರ ಪೈಕಿ ಸದ್ಯಕ್ಕೆ ತಿಂಗಳಿಗೆ ೫೦ ರೂಪಾಯಿಗಿಂತ ಹೆಚ್ಚಿನ ಸಂಬಳ ಪಡೆಯುತ್ತಿರುವ ಶಿಕ್ಷಕರಿಗೆ ರೂ. ೫೦-೩೪—೨೫ ಎಂಬ ಸಿಲೆಕ್ಷನ್ ಗ್ರೇಡನ್ನು ಕೊಡತಕ್ಕದ್ದು. ಸದ್ಯಕ್ಕೆ ೭೫ ರೂಪಾಯಿಗಿಂತ ಹೆಚ್ಚಿನ ಸಂಬಳ ಪಡೆಯುತ್ತಿರುವ ಶಿಕ್ಷಕನಿಗೆ ಅದೇ ಸಂಬಳವನ್ನು ಕೊಡತಕ್ಕದ್ದು.

(೫) **ಸಿಲೆಕ್ಷನ್ ಗ್ರೇಡು** :—ಉಳಿದವರಿಗಿಂತ ಹೆಚ್ಚು ವರ್ಷಗಳ ನೌಕರಿಯನ್ನು ಮಾಡಿದ ಕಾರಣದ ಮೇಲಿಂದಲೇ ಸಿಲೆಕ್ಷನ್ ಗ್ರೇಡನ್ನು ಕೊಡತಕ್ಕದ್ದಲ್ಲ. ಆದರೆ ಸದ್ಯಕ್ಕೆ ೫೦ ರೂಪಾಯಿಯ ಅಥವಾ ಅದಕ್ಕಿಂತ ಹೆಚ್ಚಿನ ಸಂಬಳ ಪಡೆಯುತ್ತಿರುವ ತರಬೇತಿ ಹೊಂದಿದ ಶಿಕ್ಷಕರು ವಾಡಿಕೆಯಾಗಿ ಸಿಲೆಕ್ಷನ್ ಗ್ರೇಡನ್ನು ಪಡೆಯಲಿಕ್ಕೆ ಲಾಯಖರಿರುತ್ತಾರೆಂದು ತಿಳಿಯಲ್ಪಡತಕ್ಕದ್ದು.

(೬) ಸದ್ಯದ ಯಾವತ್ತು ತರಬೇತಿ ಹೊಂದಿದ ಶಿಕ್ಷಕರಿಗೆ ಹಾಗೂ ತರಬೇತಿ ಹೊಂದಿದವರೆಂದು ತಿಳಿಯಲ್ಪಡತಕ್ಕ ಸದ್ಯದ ಶಿಕ್ಷಕರಿಗೆ, ತರಬೇತಿ ಹೊಂದಿದ ಅಥವಾ " ತರಬೇತಿ ಹೊಂದಿದವನೆಂದು ತಿಳಿಯಲ್ಪಡತಕ್ಕ " ಶಿಕ್ಷಕನೆಂದು, ಪ್ರತಿ ಐದು ವರ್ಷಗಳ ನೌಕರಿಯ ಬಗ್ಗೆ ಹೊಸ ಸ್ಕೇಲಿನಲ್ಲಿ ಒಂದು ಬಡತಿಯು ಕೊಡಲ್ಪಡುವದು.; ಈ ಸವಲತನ್ನು ಮೇಲೆ ತರಾಯಿಸಲಾದ ಹೊಸ ಸ್ಕೆಲಿನಲ್ಲಿ ೫ ರೂಪಾಯಿಯ ಬಡತಿಯ ಬದಲಾಗಿ ಒಂದು ಐಚ್ಛಿಕ ಉಪಾಯವೆಂದು, " ಹೊಸಬನಿಗೆ " ಎರಡನೇ ಅಥವಾ ಮೂರನೇ ವರ್ಷದ ತರಬೇತಿಯನ್ನು ಹೊಂದಿದ ಶಿಕ್ಷಕರಿಗೆ [ಈ ಪ್ಯಾರಾಗ್ರಾಫಿನಲ್ಲಿಯ ಮೇಲಿನ (೩) (ಅ) ಹಾಗೂ (೪) (ಬ) ಇವುಗಳನ್ನು ನೋಡಿರಿ.] ಕೊಡಲಾಗುವದು.

೩. ಸುಧಾರಿಸಿದ ಸ್ಕೇಲುಗಳನ್ನು ಕೂಡಲೆ ಅಮಲಿನಲ್ಲಿ ತರಬೇಕೆಂದು ಹಾಗೂ ಅವುಗಳನ್ನು ಸನ್ ೧೯೩೫ನೇ ಇಸವಿಯ ಮುಂಬಯಿಯ ಪ್ರಾಥಮಿಕ ಶಿಕ್ಷಣದ ವಿಷಯದ ಅಕ್ಟಿನ ೨೭ (೩) (ಡ) ಕಲಮಿನನ್ವಯ ಸರಕಾರದವರ ಮಂಜೂರಿಗಾಗಿ ಸಾದರ ಮಾಡಬೇಕೆಂದು ಯಾವತ್ತು ಸ್ಥಾನಿಕ ಅಧಿಕಾರೀ ಸಂಘಗಳಿಗೆ ಸಲಹೆ ಕೊಡಲಿಕ್ಕೆ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರಿಗೆ ವಿನಂತಿಯು ಮಾಡಿಕೊಳ್ಳಲ್ಪಡತಕ್ಕದ್ದು. ಅನೇಕ ಸ್ಥಾನಿಕ ಅಧಿಕಾರೀ ಸಂಘಗಳ ಆರ್ಥಿಕ ಪರಿಸ್ಥಿತಿಯು ಕೆಟ್ಟಿದ್ದು, ಸದರಿ ಸುಧಾರಿಸಿದ ಸ್ಕೇಲುಗಳನ್ನು ಅಮಲಿನಲ್ಲಿ ತರುವ ಬಗ್ಗೆ ತಮ್ಮ ಪಾಲಿಗೆ ಬರುವ ಹೆಚ್ಚಿನ ಖರ್ಚನ್ನು ವಹಿಸಲಿಕ್ಕೆ ಅವರು ಸಮರ್ಥರಾಗ

ಲಕ್ಕೆಲ್ಲವಂಬ ಸಂಗತಿಯು ಸರಕಾರದವರಿಗೆ ಗೊತ್ತಿದೆ. ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಸರಕಾರದವರ ಹಾಗೂ ಸ್ಥಾನಿಕ ಅಧಿಕಾರೀ ಸಂಘಗಳ ಆಡಳಿತೆಯ ಸಂಬಂಧದ ಜವಾಬದಾರಿಗಳ ವಿಷಯದ ಸಾಮಾನ್ಯ ಪ್ರಶ್ನೆಯನ್ನು ಕುರಿತು ಸರಕಾರದವರು ವಿಚಾರ ಮಾಡುತ್ತಲಿದ್ದಾರೆ. ಈ ಮಧ್ಯಂತರದಲ್ಲಿ, ಇಂಥ ಸ್ಥಾನಿಕ ಅಧಿಕಾರೀ ಸಂಘಗಳಿಗೆ ಅವುಗಳ ಪಾಲಿನ ಹೆಚ್ಚಿನ ಖರ್ಚನ್ನು ವಹಿಸಲಿಕ್ಕೆ ಅವುಗಳನ್ನು ಸಮರ್ಥವನ್ನಾಗಿ ಮಾಡುವದಕ್ಕಾಗಿ ವಿಶಿಷ್ಟ ಗ್ರಾಂಟುಗಳನ್ನು ಕೊಡುವ ವಿಷಯದ ಯೋಜನೆಗಳು ಬಂದು ಮುಟ್ಟಿದ ಕೂಡಲೆ ಅವುಗಳನ್ನು ಕುರಿತು ಸರಕಾರದವರು ವಿಚಾರ ಮಾಡುವರು.

೪. ಚಾಲೂ ನಗದಿ ವರ್ಷದಲ್ಲಿ ಈ ಹೆಚ್ಚಿನ ವೆಚ್ಚವನ್ನು ಯಾವ ಉತ್ಪನ್ನದೊಳಗಿಂದ ಮಾಡಬಹುದೆಂಬ ಬಗ್ಗೆ ಯೋಗ್ಯ ವೇಳೆಯಲ್ಲಿ ತಿಳಿಸಲಿಕ್ಕೆ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಇವರಿಗೆ ವಿನಂತಿಯನ್ನು ಮಾಡಿಕೊಳ್ಳತಕ್ಕದ್ದು.

೫. ಸನ್ ೧೯೨೪ನೇ ಇಸವಿಯ ಮುಂಬಯಿ ಪ್ರಾಥಮಿಕ ಶಿಕ್ಷಕರ ವಿಷಯದ ಕಾನೂನುಗಳ ಅವಶ್ಯವಿದ್ದ ಸುಧಾರಣೆಗಳನ್ನು ಶಕ್ಯವಿದ್ದಷ್ಟು ಬೇಗನೆ ಜಾಹೀರಮಾಡಲಾಗುವದು.

ಮುಂಬಯಿಯ ಗವರ್ನರರ ಹುಕುಮಿನ ಮೇರೆಗೆ,
ಎಮ್. ಡಿ. ಭನಸಾಲಿ,
ಸರಕಾರದವರ ಸೆಕ್ರೆಟರಿ

(True translation)
J. H. DAVE,
Oriental Translator to Government.

ಸ್ಥಾನಿಕ ಅಧಿಕಾರಿ ಸಂಘಗಳ ನೌಕರಿಯಲ್ಲಿರುವ ಪ್ರಾಥಮಿಕ ಶಾಲೆಯ ಶಿಕ್ಷಕರ ಸಂಬಳದ ಸ್ಕೇಲುಗಳ ಸುಧಾರಣೆ

ಸನ್ ೧೯೨೬ ಅಕ್ಟೋಬರ ೧೯ನೆಯ ತಾರೀಖಿನ ವಿದ್ಯಾಖಾತೆಯ ಸರಕಾರಿ ಠರಾವು ನಂಬರು ಎಸ್ ೭೨೮ ಪ್ರಕಾರ ಮುಂಜೂರಾದ ಸಂಬಳದ ಸ್ಕೇಲುಗಳ ಸುಧಾರಣೆಯಂತೆ ಪ್ರಾಥಮಿಕ ಶಿಕ್ಷಕರ ಸಂಬಳವನ್ನು ಗೊತ್ತುಪಡಿಸುವದರಲ್ಲಿ ಆ ಠರಾವಿನಲ್ಲಿರುವ ಕೆಲವು ಮುದ್ದಿಗಳ ಸ್ಪಷ್ಟೀಕರಣದ ಅಭಾವದ ಮೂಲಕ ಅಧಿಕಾರಿಗಳಿಗೆ ಬಹಳ ತೊಂದರೆಯಾಗುತ್ತದೆಯೆಂಬ ಸಂಗತಿಯನ್ನು ಈ ಆಫೀಸಿನ ದೃಷ್ಟಿಗೆ ತರಲಾಗಿದೆ. ಆದುದರಿಂದ ಈ ಸಂಬಂಧವಾಗಿ ಅ್ಯಡ್ಮಿನಿಸ್ಟ್ರೇಟಿವ್ ಆಫೀಸರರಿಗೆ ಮಾರ್ಗದರ್ಶಕವಾಗಿ ಕೆಳಗೆ ಕಾಣಿಸಿದ ಹುಕುಮುಗಳು ಕೊಡಲ್ಪಟ್ಟಿವೆ:—

೨. ತರಬೇತಿ ಹೊಂದಿದ ಶಿಕ್ಷಕರು

" ತರಬೇತಿ ಹೊಂದಿದ ಶಿಕ್ಷಕನು " ಯಾರೆಂಬುದರ ವ್ಯಾಖ್ಯೆಯು ಸನ್ ೧೯೨೬ ಅಕ್ಟೋಬರ ೧೯ನೆಯ ತಾರೀಖಿನ ವಿದ್ಯಾಖಾತೆಯ ಸರಕಾರಿ ಠರಾವು ನಂಬರು ಎಸ್ ೭೨೮ರಲ್ಲಿ ಕೊಡಲ್ಪಟ್ಟಿದೆ. ತರಬೇತಿ ಹೊಂದಿದವನೆಂದು. " ತಿಳಿಯಲ್ಪಡತಕ್ಕ " ಶಿಕ್ಷಕರನ್ನು ಹೊರತು

ಪಡಿಸಿ, ಉಳಿದ ಎಲ್ಲ ತರಬೇತಿ ಹೊಂದಿದ ಶಿಕ್ಷಕರ ಸಂಬಂಧದಲ್ಲಿ ಈ ವ್ಯಾಖ್ಯೆಯು ಸಂಪೂರ್ಣ ಅಸಂದಿಗ್ಧವಾಗಿದೆಯೆಂದು ತೋರುವುದು. ಮೇಲೆ ಕಾಣಿಸಿದ ಸರಕಾರಿ ಠರಾವಿನಲ್ಲಿ ಕೊಟ್ಟ ವ್ಯಾಖ್ಯೆಗೆ ಅನುಸಾರವಾಗಿ ಲಾಯಖ್ಖಿನಿದ್ದ ತರಬೇತಿ ಹೊಂದದ ಯಾವನೊಬ್ಬ ಶಿಕ್ಷಕನು (ಯಾವದಾದರೂ ಸಂಬಳ ರಹಿತ ರಜೆಯ ಅವಧಿಗಳು ಇದ್ದರೆ ಅವನ್ನು ಹೊರತುಪಡಿಸಿ) ೧೦ ವರುಷಗಳ ವರೆಗೆ ಅವಿಚ್ಛಿನ್ನವಾಗಿ ನೌಕರಿಯನ್ನು ಮಾಡಿದ ಬಳಿಕ, ಅವನು ತರಬೇತಿ ಹೊಂದಿದವನು ಎಂದು ತಿಳಿಯಲ್ಪಡತಕ್ಕದ್ದು, ಆದರೆ ೪೫ ವರ್ಷಗಳಿಗಿಂತ ಹೆಚ್ಚು ವಯಸ್ಸಿಲ್ಲದಂಥ ಶಿಕ್ಷಕನು ತರಬೇತಿಯ ಅಭ್ಯಾಸ ಕ್ರಮವನ್ನು ಅಥವಾ ತರಬೇತಿಯ ರಿಫ್ರೆಶರ ಕೋರ್ಸನ್ನು ಪಡೆಯಬೇಕಾಗುವುದು. ಅದುದರಿಂದ ಎಲ್ಲ ಲಾಯಖಿ ತರಬೇತಿ ಹೊಂದದ ಶಿಕ್ಷಕರು ೪೫ ವಯಸ್ಸಿಗಿಂತ ಮೇಲಿನವರೇ ಇರಲಿ ಅಥವಾ ಇಲ್ಲದಿರಲಿ ಸತತವಾಗಿ ೧೦ ವರ್ಷಗಳ ನೌಕರಿಯನ್ನು ಮಾಡಿ ಮುಗಿಸಿದ ಬಳಿಕ ತರಬೇತಿ ಹೊಂದಿದವರೆಂದು "ತಿಳಿಯಲ್ಪಡುವರು" ಎಂಬುದು ಕಂಡು ಬರುತ್ತದೆ. ಈ ಎರಡು ಬಗೆಯ ಶಿಕ್ಷಕರ ವರ್ಗಗಳಲ್ಲಿ ಅಂತರವು ಇಷ್ಟೇ ಇರುವುದು:— ೪೫ ವರ್ಷಕಿಂತ ಮೇಲಿನ ವಯಸ್ಸಿನ ಶಿಕ್ಷಕರು ತರಬೇತಿಯ ಅಭ್ಯಾಸಕ್ರಮವನ್ನು ಪಡೆಯಬೇಕಾಗುವದಿಲ್ಲ. ೪೫ ವರ್ಷ ವಯಸ್ಸಿನ ಅಥವಾ ಅದಕ್ಕೂ ಕಡಿಮೆ ವಯಸ್ಸಿನ ಶಿಕ್ಷಕರಿಗೆ ತರಬೇತಿಯ ಅಭ್ಯಾಸಕ್ರಮವನ್ನು ಪಡೆಯಲು ಅಪ್ಪಣೆವಿಧಿಸಬಹುದು. ೧೯೪೬ ಅಗಸ್ಟ ೧೯ನೆಯ ತಾರೀಖಿನ ದಿನಪ್ರತ್ಯಕ್ಷವಾಗಿ ತರಬೇತಿಯನ್ನು ಹೊಂದುತ್ತಿದ್ದ ಶಿಕ್ಷಕರು ಯಾವದೇ ವಯಸ್ಸಿನವರು ಇದ್ದರೂ ತರಬೇತಿಯ ಅಭ್ಯಾಸಕ್ರಮವನ್ನು ಮುಗಿಸಲೇಬೇಕು.

ಇದಕ್ಕೂ ಮೊದಲು ತರಬೇತಿಯನ್ನು ಹೊಂದಲು ಅವಕಾಶ-ಅನುಕೂಲತೆಗಳನ್ನು ಹೊಂದಿ ಟ್ರೇನಿಂಗ ಕಾಲೇಜ ಸರ್ಟಿಫಿಕೇಟ (T. C. C.) ಪರೀಕ್ಷೆಯಲ್ಲಿ ನಪಾಸಾದ ಶಿಕ್ಷಕರು ೧೦ ವರ್ಷಗಳ ಅವಿಚ್ಛಿನ್ನ ನೌಕರಿಯನ್ನು ಮಾಡಿ ಮುಗಿಸಿದವರು ಇದ್ದರೆ, ಅವರು ಸಹ ಸಂಬಳದ ದೃಷ್ಟಿಯಿಂದ ತರಬೇತಿ ಹೊಂದಿದ ಶಿಕ್ಷಕರೆಂದು "ತಿಳಿಯಲ್ಪಡುವರು."

೩. ಸಿಲೆಕ್ಶನ್ ಗ್ರೇಡುಗಳು

ಮೇಲೆ ೨ನೆಯ ಪ್ಯಾರಾದಲ್ಲಿ ಹೇಳಿದಂತೆ ತರಬೇತಿಯನ್ನು ಹೊಂದಿದವರೆಂದು "ತಿಳಿಯಲ್ಪಡತಕ್ಕ" ಶಿಕ್ಷಕರನ್ನೊಳಗೊಂಡು ತರಬೇತಿ ಹೊಂದಿದ ಎಲ್ಲ ಶಿಕ್ಷರ ಒಟ್ಟು ಸಂಖ್ಯೆಯಲ್ಲಿ ನೂರಕ್ಕೆ ೧೫ ರಷ್ಟು, ತರಬೇತಿ ಹೊಂದಿದ ಶಿಕ್ಷಕರಿಗೆ ಅವರ ನೌಕರಿಯ ಅವಧಿ, ಸಂಬಳ ಹಾಗೂ ಯೋಗ್ಯತೆಯನ್ನು ಲಕ್ಷದಲ್ಲಿಟ್ಟುಕೊಂಡು, ಈ ಸಿಲೆಕ್ಶನ್ ಗ್ರೇಡುಗಳು ಕೊಡಲ್ಪಡತಕ್ಕದ್ದು. ನೂರಕ್ಕೆ ೧೫ರ ಪ್ರಮಾಣವು (ಮಿತಿಯು) ಯಾವುದೇ ಕಾರಣದಿಂದ ಮೀರಲ್ಪಡತಕ್ಕದ್ದಲ್ಲ. ಸದ್ಯಕ್ಕೆ ೫೦ ರೂಪಾಯಿ ಅಥವಾ ಇದಕ್ಕೂ ಹೆಚ್ಚಿಗೆ ಸಂಬಳ ಪಡೆಯತಕ್ಕ ಶಿಕ್ಷಕರು ಇದನ್ನು ಪಡೆಯಲು ಇತರ ರೀತಿಯಿಂದ ಯೋಗ್ಯರಿದ್ದಲ್ಲಿ ಮಾತ್ರ ಸರ್ವ ಸಾಮಾನ್ಯವಾಗಿ ಸಿಲೆಕ್ಶನ್ ಗ್ರೇಡನ್ನು ಪಡೆಯುವರು. ಆದರೆ, ಸಿಲೆಕ್ಶನ್ ಗ್ರೇಡುಗಳ ಸ್ಥಳಗಳನ್ನು ತುಂಬಲು ಅರ್ಹರಾದ ಶಿಕ್ಷಕರ ಸಂಖ್ಯೆಯು ಸಾಕಷ್ಟು ಇಲ್ಲದ ಪ್ರಸಂಗದಲ್ಲಿ ಅ್ಯಡ್ಜ್ಯುನಿ ಸ್ಟ್ರೇಟಿವ್ಹ ಆಫೀಸರರು ೧೯೪೬ ಅಗಸ್ಟ ೧೯ನೆಯ ತಾರೀಖಿನ ದಿನ ಪ್ರತಿತಿಂಗಳು ೫೦ರೂಪಾಯಿಗಳಿಗಿಂತ ಕಡಿಮೆ ಸಂಬಳವಿದ್ದ ಶಿಕ್ಷಕರನ್ನು-ಅವರು ಹೆಳಿಯ ರೂಢಿಯ ಪ್ರಕಾರ ೩, ೨, ೧ನೆಯ ವರ್ಷದ ತರಬೇತಿ ಹೊಂದಿದವರಿರಲಿ ಅಥವಾ ಇರದಿರಲಿ—ಆರಿಸಲು ಅಡ್ಡಿ ಏನೂ ಇಲ್ಲ; ಏಕೆಂದರೆ ಲಾಯಖ್ಖಾದ ಶಿಕ್ಷಕರು ಸಾಮಾನ್ಯ ಗ್ರೇಡಿನ ಪರಮಾವಧಿಯನ್ನು ಮುಟ್ಟಲಿಲ್ಲವೆಂಬ ಕಾರಣದಿಂದ ಸಿಲೆಕ್ಶನ್ ಗ್ರೇಡಿನ ಸ್ಥಳಗಳನ್ನು ತುಂಬದೆ ಉಳಿಸಲಾಗುವದಿಲ್ಲ.

೪. ಪ್ರತಿತಿಂಗಳು ೫೦ ರೂಪಾಯಿ ಅಥವಾ ಹೆಚ್ಚು ಸಂಬಳವಿದ್ದ ಮತ್ತು ಸಿಲೆಕ್ಷನ್ ಗ್ರೇಡಿಗೆ ಅರ್ಹರಿದ್ದ ತರಬೇತಿ ಹೊಂದಿದ ಶಿಕ್ಷಕರ ಸಂಬಳವನ್ನು ಗೊತ್ತುಪಡಿಸುವಿಕೆ :—

ಕೆಳಗಿನ ಉದಾಹರಣೆಗಳು ಪ್ರಾಥಮಿಕ ಶಿಕ್ಷಕರ ಸಂಬಳವನ್ನು ೫೦—೩೫—೭೫ ರೂಪಾಯಿಯ ಸಿಲೆಕ್ಷನ್ ಗ್ರೇಡಿನಲ್ಲಿ ಹೇಗೆ ಗೊತ್ತುಮಾಡಬೇಕೆಂಬುದನ್ನು ವಿಶದ ಮಾಡುತ್ತವೆ:—

ಉದಾಹರಣೆ ೧.

(೧) ಸದ್ಯದ ಸಂಬಳ ರೂಪಾಯಿ ೬೦, ಪ್ರತಿತಿಂಗಳಿಗೆ.

(೨) ತರಬೇತಿ ಹೊಂದಿದ ಶಿಕ್ಷಕನೆಂದು ಒಟ್ಟು ೩೦ ವರ್ಷಗಳ ನೌಕರಿ.

ಹೊಸ ಸಂಬಳದ ಸ್ಕೇಲಿನ ಪ್ರಕಾರವಾಗಿ ಈ ತರಬೇತಿ ಹೊಂದಿದ ಶಿಕ್ಷಕನೆಂದು ಇವನಿಗೆ ಪ್ರತಿ ಐದು ವರ್ಷಗಳ ನೌಕರಿಯ ಬಗ್ಗೆ ಒಂದು ಬಡತಿ (increment) ಯು ಕೊಡಲ್ಪಡುವುದು. ಇವನು ಸಿಲೆಕ್ಷನ್ ಗ್ರೇಡಿಗೆ ಅರ್ಹನಾಗುವುದರಿಂದ ಯಾವ ಹೊಸ ಸ್ಕೇಲಿನಲ್ಲಿ ಇಡಲ್ಪಡುವನೊ ಅದೇ ಇವನ ಸಿಲೆಕ್ಷನ್ ಗ್ರೇಡಾಗುವುದು. ಅಂದರೆ ೫೦—೩೫—೭೫ ರೂಪಾಯಿಯ ಗ್ರೇಡಾಗುವುದು. ಇವನ ವಿಷಯವಾಗಿ ಸಿಲೆಕ್ಷನ್ ಗ್ರೇಡಿನಲ್ಲಿ ನಿಶ್ಚಿತಗೊಳಿಸಬೇಕಾದ ಸಂಬಳವು ೬೦ ರೂಪಾಯಿ + ೧೫ ರೂಪಾಯಿ (ಈ ಹದಿನೈದು ರೂಪಾಯಿಗಳು ಹೊಸ ಸ್ಕೇಲಿನಲ್ಲಿ ೩೫ ರೂಪಾಯಿಗಳಂತೆ ೩೦ ವರ್ಷಗಳ ನೌಕರಿಯಲ್ಲಿ ಅವನ ೬ ಬಡತಿಗಳ ಪರವಾಗಿ ಇರುವವು.) ಎಂದರೆ ಒಟ್ಟು ೭೫ ರೂಪಾಯಿ ಪ್ರತಿತಿಂಗಳ ಸಂಬಳವಾಗುವುದು.

ಉದಾಹರಣೆ ೨.

(೧) ಸದ್ಯದ ಸಂಬಳ ರೂಪಾಯಿ ೫೪, ಪ್ರತಿತಿಂಗಳಿಗೆ.

(೨) ತರಬೇತಿ ಹೊಂದಿದ ಶಿಕ್ಷಕನೆಂದು ಒಟ್ಟು ೨೫ ವರ್ಷಗಳ ನೌಕರಿ.

ಸಿಲೆಕ್ಷನ್ ಗ್ರೇಡಿಗೆ ನಿಜವಾಗಿಯೂ ಅರ್ಹನೆಂದು ಗಣಿಸಲ್ಪಡುವ ಕಾರಣ ಈ ಶಿಕ್ಷಕನು ೫೦—೩೫—೭೫ ರೂಪಾಯಿಯ ಸಿಲೆಕ್ಷನ್ ಗೇಡಿನಲ್ಲಿ ತಂತಾನಾಗಿಯೆ ತನ್ನ ಸದ್ಯದ ಪ್ರತಿ ತಿಂಗಳಿಗೆ ೫೪ ರೂಪಾಯಿಯ ಸಂಬಳದೊಡನೆ ಪ್ರವೇಶಿಸುವನು. ಆದರೆ ಈ ಸ್ಕೇಲಿನಲ್ಲಿ ಪ್ರತಿ ತಿಂಗಳಿಗೆ ೫೪ ರೂಪಾಯಿ ಸಂಬಳದ ದರ್ಜೆಯು ಇರುವದಿಲ್ಲ. ಆದ್ದರಿಂದ ಇವನು ೫೦+೩೫ ವೈಯಕ್ತಿಕ ಸಂಬಳ ೧೩ ಸ್ಕೇಲಿನಲ್ಲಿ ಸೇರುವನು, ಈ ವೈಯಕ್ತಿಕ ಸಂಬಳವು (೧೩) ಅವನ ಮುಂದಿನ ಬಡತಿಯಲ್ಲಿ ಸಮಾವೇಶವಾಗುವುದು. ಇವನು ತರಬೇತಿ ಹೊಂದಿದ ಶಿಕ್ಷಕನೆಂದು ೨೫ ವರ್ಷಗಳ ನೌಕರಿಯನ್ನು ಮಾಡಿರುವದರಿಂದ ಪ್ರತಿವರ್ಷಕ್ಕೆ ೩೫ ರೂಪಾಯಿಗಳಂತೆ ೫ ಬಡತಿಗಳಿಗೆ ಅರ್ಹನೂ ಆಗವನು, ಅಂದರೆ ೧೭೫ ರೂ. ಬಡತಿಗೆ ಅರ್ಹನಾಗುವನು.

ಉದಾಹರಣೆ ೩.

(೧) ಸದ್ಯದ ಸಂಬಳ ರೂಪಾಯಿ ೫೫, ಪ್ರತಿತಿಂಗಳಿಗೆ.

(೨) ತರಬೇತಿ ಹೊಂದಿದ ಶಿಕ್ಷಕನೆಂದು ೨೩ ವರ್ಷಗಳ ನೌಕರಿ.

ಮೇಲೆ ೨ರಲ್ಲಿ ಹೇಳಿದಂತೆ ಇವನು ತನ್ನ ಸದ್ಯದ ಪ್ರತಿತಿಂಗಳ ೫೫ ರೂಪಾಯಿ ಸಂಬಳ ದೊಡನೆ ಸಿಲೆಕ್ಷನ್ ಗ್ರೇಡನ್ನು ಪ್ರವೇಶಿಸುವನು. ಇದರ ಜೊತೆಗೆ ಪ್ರತಿಬಡತಿಗೆ ೨೪ ರೂಪಾಯಿ ಪ್ರಕಾರ ನಾಲ್ಕು ಬಡತಿಗಳಿಗೆ ಅರ್ಹನೆಂದು ಎಣಿಸಲ್ಪಡುವನು. ಇಲ್ಲಿ ಮೂರು ವರುಷಗಳ ಬಾಕಿಯನ್ನು ಗಣನೆಗೆ ತಾರದೆ ಬಿಡಬೇಕೇ ಹೇಗೆಂಬ ಪ್ರಶ್ನೆ ಹುಟ್ಟುತ್ತದೆ. ಬಾಕಿಯುಳಿದ ಅವಧಿಯು ೨೪ ವರ್ಷಕ್ಕಿಂತ ಹೆಚ್ಚು ಇರುವುದರಿಂದ ೫ ವರ್ಷಗಳದ್ದೆಂದು ಎಣಿಸಲ್ಪಡುತ್ತದೆ. (೨೪ ಕ್ಕಿಂತ ಹೆಚ್ಚು ಅಂಶವಿದ್ದರೆ ಅದನ್ನು ೧ ಎಂತಲೂ, ೨೪ ಕ್ಕಿಂತ ಕಡಿಮೆ ಇದ್ದರೆ ೦ ಎಂತಲೂ ತಿಳಿಯುವ ಸಾಮಾನ್ಯ ವಾಡಿಕೆಯಂತೆ.) ಆದುದರಿಂದ ಇವನು ಪ್ರತಿ ಒಂದು ಬಡತಿಗೆ ೨೪ ರೂಪಾಯಿಯಂತೆ ೫ ಬಡತಿಗಳಿಗೆ ಅರ್ಹನೆಂದು ಎಣಿಸಲ್ಪಡಬೇಕು. ಈ ಮೇರೆಗೆ ಇವನ ಸಂಬಳವು (ಎಂದರೆ ರೂ. ೫೫+೧೨೦) ಸಿಲೆಕ್ಷನ್ ಗ್ರೇಡ ಸ್ಕೇಲಿನಲ್ಲಿ ೬೭೦ ರೂಪಾಯಿ ಎಂದು ಗೊತ್ತು ಮಾಡಲ್ಪಡುವುದು. ೨೪ ವರ್ಷ ಅಥವಾ ಇದಕ್ಕೂ ಕಡಿಮೆ ಬಾಕಿ ನೌಕರಿ ಇರುವ ಪ್ರಸಂಗಗಳಲ್ಲಿ ಅದು ಅಲಕ್ಷಿಸಲ್ಪಡಬೇಕು.

ಈ ವರ್ಗದಲ್ಲಿ (ಗಣದಲ್ಲಿ) ತಮ್ಮ ಸ್ಕೇಲಿನ ಪ್ರಕಾರ ಸಂಬಳ ಪಡೆಯುವುದರ ಜೊತೆಗೆ ವೈಯಕ್ತಿಕ ಸಂಬಳ ಪಡೆಯತಕ್ಕಂಥ ಕೆಲವರು ಶಿಕ್ಷಕರು ಇರಬಹುದು. ಇಂಥ ಶಿಕ್ಷಕರ ಸಂಬಳವನ್ನು ಸಿಲೆಕ್ಷನ್ ಗ್ರೇಡಿನಲ್ಲಿ ಹೇಗೆ ಗೊತ್ತು ಪಡಿಸಬೇಕೆಂಬುದನ್ನು ಕೆಳಗಿನ ಉದಾಹರಣೆಗಳು ತೋರಿಸುವವು.

ಉದಾಹರಣೆ ೪.

(೧) ಸದ್ಯದ ಸಂಬಳಗಳು ರೂಪಾಯಿ ೬೦+೨೦ ವೈಯಕ್ತಿಕ ಸಂಬಳ (ಒಟ್ಟು ೮೦ ರೂಪಾಯಿ)

(೨) ತರಬೇತಿ ಹೊಂದಿದ ಶಿಕ್ಷಕನೆಂದು ೩೩ ವರ್ಷಗಳ ನೌಕರಿ.

ಇವನು ಪ್ರತಿತಿಂಗಳಿಗೆ ೬೦ ರೂಪಾಯಿಯ ಸಿಲೆಕ್ಷನ್ ಗ್ರೇಡ ಸಂಬಳದ ಸ್ಕೇಲಿನಲ್ಲಿರುವನು. ಇದರ ಜೊತೆಗೆ ಪ್ರತಿಯೊಂದು ಬಡತಿಗೆ ೨೪ ರೂಪಾಯಿಯಂತೆ ೩೩ ವರ್ಷಗಳ ನೌಕರಿಯಲ್ಲಿ ೩೦ ವರ್ಷಗಳ ನೌಕರಿಗಾಗಿ ೫ ಬಡತಿಗಳನ್ನು ಎಂದರೆ ೧೫೫ ರೂಪಾಯಿಗಳನ್ನು ಪಡೆಯುವನು. ಈ ಪ್ರಕಾರ ಇವನ ವಿಷಯದಲ್ಲಿ, ಸಿಲೆಕ್ಷನ್ ಗ್ರೇಡಿನಲ್ಲಿ ಇವನ ಸಂಬಳವು ೬೫ ರೂಪಾಯಿ ಎಂದು ನಿಶ್ಚಯಿಸಲ್ಪಡುವುದು, ಇದು ಸ್ಕೇಲಿನ ಪರಮಾವಧಿ ಸಂಬಳವೂ ಸಹ ಆಗಿರುವುದು. ಇವನ ೩೩ ವರ್ಷಗಳ ನೌಕರಿಯ ಸಲುವಾಗಿ ೨೪ ರೂಪಾಯಿಯಂತೆ ೭ ಬಡತಿ ಎಂದರೆ ಒಟ್ಟು ೧೬೮ ರೂಪಾಯಿಗಳನ್ನು ಮೂಲ ಸಂಬಳ ೬೦ ರೂಪಾಯಿಯ ಜೊತೆಗೆ ಸೇರಿಸಿ ಒಟ್ಟು ೭೬೮ ರೂಪಾಯಿಗೆ ಅರ್ಹನೆಂದು ಎಣಿಸಲ್ಪಡಬೇಕಾಗಿತ್ತು. ಆದರೆ, ಇದು ಸರಕಾರದ ನಿಯಮದ ಪರಮಾವಧಿ ೬೫ ರೂಪಾಯಿ ಸಂಬಳವನ್ನು ಮಿಕ್ಕುವುದರಿಂದ, ಇದು

ಗ್ರಾಹ್ಯವಿರುವದಿಲ್ಲ. ಹೀಗಿದ್ದರೂ ಸಹ ಇವನು ಈ ಮೊದಲೇ ಪ್ರತಿ ತಿಂಗಳಿಗೆ ಒಟ್ಟು ೮೦ ರೂಪಾಯಿ ಸಂಬಳ ಪಡೆಯುತ್ತಿರುವುದರಿಂದ ಇವನು ಪ್ರತಿ ತಿಂಗಳು ೭೫ ರೂಪಾಯಿ ಸಂಬಳ ಮತ್ತು ೫ ರೂಪಾಯಿ ವೈಯಕ್ತಿಕ ಸಂಬಳವನ್ನು ಪಡೆಯುತ್ತ ಹೋಗುವನು.

ಉದಾಹರಣೆ ೫

(೧) ಸದ್ಯದ ಸಂಬಳ ರೂಪಾಯಿ ೫೨, ಪ್ರತಿ ತಿಂಗಳಿಗೆ
ಮತ್ತು ವೈಯಕ್ತಿಕ ಸಂಬಳ ,, ೧೮, ,,

(೨) ತರಬೇತಿ ಹೊಂದಿದ ಶಿಕ್ಷಕನೆಂದು ೨೨ ವರ್ಷಗಳ ನೌಕರಿ.

ಸಿಲೆಕ್ಟನ್ ಗ್ರೇಡಿನಲ್ಲಿ ೫೨ ರೂಪಾಯಿಗೆ ಸಮಾನವಾದ ಸ್ಥಾನವು ಇಲ್ಲದಿರುವುದರಿಂದ ಇವನು ಮುಂದಿನ ಬಡತಿಯಲ್ಲಿ ಸಮಾವೇಶವಾಗುವ ೨ ರೂಪಾಯಿ ವೈಯಕ್ತಿಕ ಸಂಬಳ ದೊಡನೆ ೫೦+೨ ರೂಪಾಯಿಯ ಸ್ಕೇಲಿಗೆ ತರಲ್ಪಡುವನು. ಇದರ ಜೊತೆ ೨೨ ವರ್ಷಗಳ ನೌಕರಿಗಾಗಿ ಇವನು ಪ್ರತಿ ಒಂದು ಬಡತಿಗೆ ೨½ ರೂಪಾಯಿ ಪ್ರಕಾರ ೪ ಬಡತಿಗಳಿಗೆ ಎಂದರೆ ೧೦ ರೂಪಾಯಿಗಳಿಗೆ ಅರ್ಹನಾಗುವನು. ಆದ್ದರಿಂದ ೬೦ ರೂಪಾಯಿ ಇವನ ಸಂಬಳವು (೫೦+೧೦) + ಮುಂದಿನ ಬಡತಿಯಲ್ಲಿ ಸಮಾವೇಶವಾಗುವ ೨ ರೂಪಾಯಿ ವೈಯುಕ್ತಿಕ ಸಂಬಳವಾಗುವುದು. ಮತ್ತು ಇದರೊಡನೆ ಇವನು ತಿಂಗಳಿಗೆ ೮ ರೂಪಾಯಿಯಂತೆ ವೈಯಕ್ತಿಕ ಸಂಬಳವನ್ನು ಪಡೆಯುವನು. ಮರುವರ್ಷ ಇವನ ಸಂಬಳವು ೬೨½ ರೂಪಾಯಿ ಆಗುವದು. ಮತ್ತು ಇವನ ವೈಯಕ್ತಿಕ ಸಂಬಳವು ಮೇಲೆ ಹೇಳಿದನ್ನಯ ೭½ ರೂಪಾಯಿಗೆ ಇಳಿಸಲ್ಪಡುವದು ಮತ್ತು ಈ ರೀತಿಯಲ್ಲಿ ಮುಂದುವರಿಯುವದು.

೫. ಸದ್ಯಕ್ಕೆ ಪ್ರತಿತಿಂಗಳು ೫೦ ರೂಪಾಯಿಗಿಂತ ಕಡಿಮೆ ಸಂಬಳವಿರುವ ಮತ್ತು ಸಿಲೆಕ್ಟನ್ ಗ್ರೇಡಿಗೆ ಅರ್ಹರೆಂದು ಎಣಿಸಲ್ಪಡುವ ತರಬೇತಿ ಹೊಂದಿದ ಶಿಕ್ಷಕರ ಸಂಬಳವನ್ನು ಗೊತ್ತುಪಡಿಸುವಿಕೆ:-

ಕೆಳಗಿನ ಉದಾಹರಣೆಗಳು ರೂಪಾಯಿ ೫೦—೨½—೭೫ ರ ಸಿಲೆಕ್ಟನ್ ಗ್ರೇಡಿನಲ್ಲಿ ಇಂಥ ಶಿಕ್ಷಕರ ಸಂಬಳವನ್ನು ಹೇಗೆ ಗೊತ್ತುಪಡಿಸಬೇಕೆಂಬುದನ್ನು ಸ್ಪಷ್ಟಪಡಿಸುವವು.

ಉದಾಹರಣೆ ೬

(೧) ಸದ್ಯದ ಸಂಬಳ ರೂಪಾಯಿ ೪೫.

(೨) ತರಬೇತಿ ಹೊಂದಿದ ಶಿಕ್ಷಕನೆಂದು ೨೦ ವರ್ಷಗಳ ನೌಕರಿ.

ಇವನಿಗೆ ಸಿಲೆಕ್ಟನ್ ಗ್ರೇಡು ಕೊಟ್ಟಿರುವದರಿಂದ ಇವನು ತಂತಾನಾಗಿಯೇ ರೂಪಾಯಿ ೫೦—೨½—೭೫ ರ ಸ್ಕೇಲಿನಲ್ಲಿ ಪ್ರತಿ ತಿಂಗಳ ೫೦ ರೂಪಾಯಿಯ ಪ್ರಾರಂಭದ ಸಂಬಳಕ್ಕೆ

ಅರ್ಹನಾಗುವನು. ಇವನ ಈ ಪ್ರತಿಶಿಂಗಳದ ೫೦ ರೂಪಾಯಿಯು ಪ್ರಾರಂಭಿಕ ಸಂಬಳಕ್ಕೆ ತರಬೇತಿ ಹೊಂದಿದ ಶಿಕ್ಷಕನೆಂದು ೨೦ ವರ್ಷಗಳ ನೌಕರಿಗಾಗಿ ಪ್ರತಿಯೊಂದು ಬಡತಿಗೆ ೨೯ ರೂಪಾಯಿಯಂತೆ ೪ ಬಡತಿಗಳು ಸೇರಿಸಲ್ಪಡುವವು. ಆದ್ದರಿಂದ ಇವನಿಗೆ ಸಿಲೆಕ್ಷನ್ ಗ್ರೇಡಿನಲ್ಲಿ ರೂಪಾಯಿ ೫೦+೧೦=೬೦ ಎಂದು ಸಂಬಳವನ್ನು ಗೊತ್ತುಮಾಡಲಾಗುವದು.

ಉದಾಹರಣೆ ೭

(೧) ಸದ್ಯದ ಸಂಬಳ ಮತ್ತು ವೈಯಕ್ತಿಕ ಸಂಬಳ } ರೂಪಾಯಿ ೪೫ + ರೂಪಾಯಿ ೧೫.

(೨) ತರಬೇತಿ ಹೊಂದಿದ ಶಿಕ್ಷಕನೆಂದು ೨೦ ವರ್ಷಗಳ ನೌಕರಿ.

ಮೇಲೆ VI ರಲ್ಲಿ ಹೇಳಿದ ಪ್ರಕಾರ ೫೦—೨೯—೨೫ ರೂಪಾಯಿಯು ಸಿಲೆಕ್ಷನ್ ಗ್ರೇಡಿನಲ್ಲಿ ಇವನ ಸಂಬಳವನ್ನು ಪ್ರತಿಶಿಂಗಳಿಗೆ ೫೦ ರೂಪಾಯಿಯಂತೆ ಪ್ರಾರಂಭಿಕ ಸಂಬಳವನ್ನಾಗಿ ಮಾಡಲಾಗುವದು. ಇದಕ್ಕೆ ಇವನ ೨೦ ವರ್ಷಗಳ ನೌಕರಿಯು ಸಲುವಾಗಿ ಪ್ರತಿ ಒಂದು ಬಡತಿಗೆ ೩॥ ರೂಪಾಯಿಯಂತೆ ನಾಲ್ಕು ಬಡತಿಗಳು ಎಂದರೆ ೧೦ ರೂಪಾಯಿಗಳು ಸೇರಿಸಲ್ಪಡುವವು. ಆದ್ದರಿಂದ ಇವನ ಸಂಬಳವು ಸಿಲೆಕ್ಷನ್ ಗ್ರೇಡದಲ್ಲಿ ೫೦+೧೦=೬೦ ಎಂದು ಗೊತ್ತುಪಡಿಸಲ್ಪಡುವದು. ಆದ್ದರಿಂದ ಇವನ ಇಡೀ ವೈಯಕ್ತಿಕ ಸಂಬಳವು, ಎಂದರೆ ೧೫ ರೂ. ಇವನು ಗಳಿಸಿದ ೧೫ ರೂಪಾಯಿಗಳ ಬಡತಿಯು ಸಂಬಳದಲ್ಲಿ ಸೇರಿಹೋಗುವುದು ಮತ್ತು ಮುರು ವರ್ಷ ೧೯೪೬ ಅಗಸ್ಟ ೧ರಿಂದ ಇವನ ಸಂಬಳವು ೬೩॥ ರೂಪಾಯಿ ಆಗುವುದು.

೬. ಸಿಲೆಕ್ಷನ್ ಗ್ರೇಡಿಗೆ ಅರ್ಹರೆಂದು ಎಣಿಸಲ್ಪಡದಿರುವ ತರಬೇತಿ ಹೊಂದಿದ ಶಿಕ್ಷಕರ ಸಂಬಳವನ್ನು ಗೊತ್ತುಪಡಿಸುವಿಕೆ:—

ಕೆಳಗಿನ ಕೆಲವು ಉದಾಹರಣೆಗಳು ೩೦—೧—೫೦ ರೂಪಾಯಿಯ ಸ್ಕೇಲಿನಲ್ಲಿ ಇಂಥ ಶಿಕ್ಷಕರ ಸಂಬಳವನ್ನು ಹೇಗೆ ಗೊತ್ತು ಪಡಿಸಬೇಕೆಂಬುದನ್ನು ತೋರಿಸುವವು:—

ಉದಾಹರಣೆ ೮

(೧) ಸದ್ಯದ ಸಂಬಳ ರೂಪಾಯಿ ೪೮, ಪ್ರತಿ ತಿಂಗಳಿಗೆ.

(೨) ತರಬೇತಿ ಹೊಂದಿದ ಶಿಕ್ಷಕನೆಂದು ೨೩ ವರ್ಷಗಳ ನೌಕರಿ.

ಈ ಶಿಕ್ಷಕನು ತನ್ನ ಸದ್ಯದ ೪೮ ರೂಪಾಯಿ ಸಂಬಳದ ಮೇಲೆ ೩೦-೧ ೫೦ರೂಪಾಯಿಯ ಹೊಸ ಸ್ಕೇಲಿನಲ್ಲಿ ತರಲ್ಪಡುವನು. ತರಬೇತಿ ಹೊಂದಿದ ಶಿಕ್ಷಕನೆಂದು ೩ ವರ್ಷಗಳ ನೌಕರಿಗಾಗಿ ಇವನು ಪ್ರತಿ ಬಡತಿಗೆ ಒಂದು ರೂಪಾಯಿಯಂತೆ ೩ ಬಡತಿಗಳಿಗೆ ೩ ರೂಪಾಯಿಗಳಿಗೆ ಅರ್ಹನಿರುವನು. (ಇದು ಹೇಗೆಂದರೆ, ೨೦ ವರ್ಷಗಳಿಗೆ ೪ ಬಡತಿಗಳು + ಮೂರು

ವರುಷಗಳಿಗೆ ೧ ಬಡತಿ ಏಕೆಂದರೆ ೨೨ ವರ್ಷಕ್ಕಿಂತ ಅವಧಿಯು ಹೆಚ್ಚಾಗಿರುವದು.) ಇವನು ೫೩ ರೂಪಾಯಿ (೪೮+೫) ಸಂಬಳಕ್ಕೆ ಅರ್ಹನೆಂದು ತೋರಬಹುದು. ಆದರೆ ಸ್ಕೇಲಿನ ಪರಮಾವಧಿ ಸಂಬಳವು ೫೦ ರೂಪಾಯಿ ಇರುವದು. ಆದ್ದರಿಂದ ಇವನ ಸಂಬಳವು ಪ್ರತಿ ತಿಂಗಳಿಗೆ ೫೦ ರೂಪಾಯಿ ಮಾತ್ರ ಎಂದು ನಿಯಮಿಸಬೇಕಾಗುವದು.

ಉದಾಹರಣೆ ೯

(೧) ಸದ್ಯದ ಸಂಬಳ ಮತ್ತು ವೈಯಕ್ತಿಕ ಸಂಬಳ ರೂಪಾಯಿ ೪೦+೧೦.

(೨) ತರಬೇತಿ ಹೊಂದಿದ ಶಿಕ್ಷಕನೆಂದು ೧೫ ವರ್ಷಗಳ ನೌಕರಿ..

ಇವನು ತರಬೇತಿ ಹೊಂದಿದ ಶಿಕ್ಷಕನೆಂದು ೧೫ ವರ್ಷ ಮಾಡಿದ ನೌಕರಿಗಾಗಿ ಪ್ರತಿಯೊಂದು ಬಡತಿಗೆ ೧ ರೂಪಾಯಿಯಂತೆ ಮೂರು ಬಡತಿಗಳಿಗೆ ೪೦ ರೂಪಾಯಿ + ಮೂರು ರೂಪಾಯಿ ಸಂಬಳ, ಒಟ್ಟು ೪೩ ರೂಪಾಯಿ ಇವನ ಸಂಬಳವೆಂದು ೩೦—೧—೫೦ ರೂಪಾಯಿಯ ಗ್ರೇಡಿನಲ್ಲಿ ಗೊತ್ತು ಮಾಡಲ್ಪಡುವುದು ಮತ್ತು ಇದರ ಜೊತೆಗೆ ಪ್ರತಿ ತಿಂಗಳಿಗೆ ೭ ರೂಪಾಯಿಯಂತೆ ವೈಯ್ಯಕ್ತಿಕ ಸಂಬಳವೂ ಇವನಿಗೆ ದೊರಕುವುದು ಮೂರು ವರ್ಷ ಇವನ ಸಂಬಳ ಪ್ರತಿ ತಿಂಗಳಿಗೆ ೪೪ ರೂಪಾಯಿ+ಪ್ರತಿ ತಿಂಗಳಿಗೆ ವೈಯ್ಯಕ್ತಿಕ ಸಂಬಳ ೭ ರೂಪಾಯಿ ಆಗುವುದು. ಮತ್ತು ಇದೇ ರೀತಿಯಲ್ಲಿ ಮುಂದೆ ಸಾಗುವುದು.

ಉದಾಹರಣೆ ೧೦

೧೯೩೬ರ ಎರಡನೆಯ ವರ್ಷದ ತರಬೇತಿಯನ್ನು ಹೊಂದಿದ ಹೊಸದಾಗಿ ಪ್ರವೇಶ ಪಡೆದ ಶಿಕ್ಷಕನ ಸಂಬಳವು ತರಬೇತಿಯನ್ನು ಹೊಂದಿದವನೆಂದು ೧೦ ವರ್ಷ ನೌಕರಿ ಮಾಡಿದ ಶಿಕ್ಷಕನ ಸದ್ಯದ ಸಂಬಳವು ಪ್ರತಿ ತಿಂಗಳಿಗೆ ೩೦ ರೂಪಾಯಿ ಇರುತ್ತದೆ. ೩೦—೧—೫೦ ರೂಪಾಯಿಯ ಹೊಸ ಸ್ಕೇಲಿನಲ್ಲಿ ಇವನ ಸಂಬಳವು ಕೆಳಗೆ ಕಾಣಿಸಿದಂತೆ ಗೊತ್ತು ಮಾಡಲ್ಪಡುವುದು :—

ಸದ್ಯಕ್ಕೆ ತನಗೆ ಪ್ರತಿ ತಿಂಗಳಿಗೆ ಸಿಗುವ ೩೦ ರೂಪಾಯಿ ಸಂಬಳದೊಡನೆ ತರಬೇತಿ ಹೊಂದಿದ ಶಿಕ್ಷಕನೆಂದು ಮಾಡಿದ ಹತ್ತು ವರ್ಷಗಳ ನೌಕರಿಯ ಬಗ್ಗೆ ಪ್ರತಿಯೊಂದು ಬಡತಿಗೆ ಒಂದು ರೂಪಾಯಿಯಂತೆ ೨ ಬಡತಿಗಳಿಗೆ ಇವನು ಅರ್ಹನಾಗುವನು, ಇದರಿಂದ ಒಟ್ಟಿಗೆ ಇವನ ಸಂಬಳವು ೩೨ ರೂಪಾಯಿ ಆಗುವದು. ೧೯೪೬ ಅಕ್ಟೋಬರ ೧ನೆಯ ತಾರೀಖಿನ ವಿದ್ಯಾಖಾತೆಯ ಸರಕಾರಿ ಠರಾವು ನಂಬರು ಎಸ್. ೭೨ ಪ್ಯಾರಾ ೨(iii) (ಅ) ದ ಪ್ರಕಾರ ಇವನು ತನಗೆ ಲಾಭದಾಯಕವಾಗುವದರಿಂದ ಇದನ್ನು ೫ ರೂಪಾಯಿಯ ಒಟ್ಟು ಬಡತಿಗೆ ಬದಲಾಯಿಸಿಕೊಳ್ಳಬಲ್ಲನು. ಇವನು ಹೀಗೆ ಹೊಸ ಸ್ಕೇಲಿನಲ್ಲಿ ೩೫ ರೂಪಾಯಿ ಸಂಬಳಕ್ಕೆ ಅರ್ಹನಾಗುವನು.

ಸಾಮಾನ್ಯ ಸೂಚನೆಗಳು

೬. ತಾತ್ಪೂರ್ತಿಕ ಹೆಚ್ಚಿನ ೫ ರೂಪಾಯಿ ಸಂಬಳ ಮತ್ತು ೧೯೪೬ ಸಪ್ಟಂಬರ ೧೬ನೆಯ ತಾರೀಖಿನ ವಿದ್ಯಾಖಾತೆಯ ಸರಕಾರಿ ಠರಾವು ನಂಬರು ೬೨೬೧/೩೩ ರಲ್ಲಿ ಮಂಜೂರ ಆಗಿರುವ ಪ್ರಕಾರ ಪ್ರತಿ ತಿಂಗಳಿಗೆ ಹೆತ್ತು ರೂಪಾಯಿ ಸಂಬಳವು ಸುಧಾರಿಸಿದ ಸಂಬಳದ ಸ್ಕೇಲಿನಲ್ಲಿರುವ ಪ್ರಾಥಮಿಕ ಶಿಕ್ಷಕರೆಲ್ಲರಿಗೂ ಕೆಲಸದ ಮೇಲೆ ಹಾಜರು ಇರುವ ಅವಧಿಗಾಗಿ ಮಾತ್ರ ಕೊಡಲ್ಪಡಬೇಕು. ರಜೆಯ ಮೇಲಿನ ಅವಧಿಯ ಸಲುವಾಗಿ ರಜೆಯ ಅವಧಿಯ ಸಂಬಳದ ಪ್ರಮಾಣವು ಗೊತ್ತುಮಾಡಲ್ಪಡುವಾಗ ಸರಾಸರಿ ಸಂಬಳದ ಲೆಕ್ಕಾಚಾರದ ಅವಧಿಯಲ್ಲಿ ಸಮಾವೇಶವಾಗಿರುವ ಅವಧಿಗೆ ಸಲ್ಲಬಹುದಾದ ಯಾವುದೇ ತಾತ್ಪೂರ್ತಿಕ ಹೆಚ್ಚಿನ ಸಂಬಳವು ಲಕ್ಷಿಸಲ್ಪಡತಕ್ಕದ್ದು. ಇದು ಪೆನ್ಶನಕ್ಕೆ ಯೋಗ್ಯವಾದ ಸಂಬಳದ ವ್ಯಾಖ್ಯೆಯ ಸಲುವಾಗಿ ಸಮಾವೇಶವಾಗತಕ್ಕದ್ದು. ಆದ್ದರಿಂದ ಪೆನ್ಶನ್ ಮತ್ತು ರಜೆಯ ಸಂಬಳದ ವಂತಿಕೆಗಳು ಅದರ ಮೇಲೆ ಕೊಡಲ್ಪಡಬೇಕಾಗುವುವು ಮತ್ತು ಅದರಿಂದಲೇ ಪ್ರಾವಿಡೆಂಟ ಫಂಡಿನ ಕಳೆತಗಳು ಸಹ ಮಾಡಲ್ಪಡುವುವು. ಇದು ಪೂರ್ಣಾವಧಿಯ ಅಥವಾ ಅಲ್ಪಾವಧಿಯ 'ಸ್ಪೇಶಲ್' ಶಿಕ್ಷಕರಿಗೆ ಅನ್ವಯಿಸುವುದಿಲ್ಲ. ಆದಾಗ್ಯೂ ಈ ವಿಷಯವು ಪ್ರತ್ಯೇಕವಾಗಿ ವಿಚಾರಿಸಲ್ಪಡುತ್ತಿರುವುದು.

೮. ೧೯೪೬ ಆಕ್ಟೋಬರ ೧ನೆಯ ತಾರೀಖಿನ ವಿದ್ಯಾಖಾತೆಯ ಸರಕಾರಿ ಠರಾವು ನಂಬರು ಎಸ್. ೭೨ ಪ್ಯಾರಾ ೧ (ಬ) (i)ರಲ್ಲಿ ಸೂಚಿಸಲಾದ ೧೦ ವರ್ಷಗಳ ಅವಿಚ್ಛಿನ್ನ ನೌಕರಿಯನ್ನು ನಿಶ್ಚಿತಗೊಳಿಸುವಾಗ ಸಂಬಳರಹಿತವಾದ ರಜೆಯ ಅವಧಿಗಳನ್ನು ಕಡಿಯಲಾಗುವದು.

೯. ಸಂಬಳದ ಸುಧಾರಿಸಿದ ಸ್ಕೇಲುಗಳನ್ನು ೧೯೪೬ ಅಗಸ್ಟ ೧ ನೆಯ ತಾರೀಖಿನಿಂದ ಅಮಲಿಗೆ ತರುವದಿರುವ ಕಾರಣ ೧೯೪೬ ಅಗಸ್ಟ ೧ನೆಯ ತಾರೀಖಿಗಿಂತ ಮೊದಲು ನೌಕರಿಯಲ್ಲಿ ಇದ್ದ ಎಲ್ಲ ಶಿಕ್ಷಕರ ಬಡತಿಯ ತಾರೀಖು ೧೯೪೬ ಅಗಸ್ಟ ೧ನೆಯ ತಾರೀಖು ಆಗುವುದು; ಆದರೆ ಆ ತಾರೀಖಿನ ನಂತರ ನೌಕರಿಗೆ ಸೇರಿದವರ ಬಡತಿಯ ತಾರೀಖು ಸಾಮಾನ್ಯವಾಗಿ ಅವರು ನೌಕರಿಗೆ ಸೇರಿದ ತಾರೀಖು ಆಗುವದು.

೧೦. ತರಬೇತಿಯನ್ನು ಪಡೆಯಲು ತೆಗೆದುಕೂಳ್ಳಲ್ಪಟ್ಟ ಶಿಕ್ಷಕನ ಸಂಬಳ ರಹಿತ ರಜೆಯ ಅವಧಿಯು, ೧೯೪೬ ಅಗಸ್ಟ ೧ನೆಯ ತಾರೀಖಿನ ದಿನದ ಸುಧಾರಣೆಯ ಸ್ಕೇಲಿನಲ್ಲಿ ಹಿಂದಿನ ತರಬೇತಿಯ ನೌಕರಿಗಾಗಿ ಸಲ್ಲಬಹುದಾದ ಬಡತಿಗಳನ್ನು ಗೊತ್ತುಪಡಿಸುವಾಗ 'ಡ್ಯೂಟಿ' (ಕೆಲಸದ ಮೇಲೆ ಹಾಜರಿದ್ದ ಅವಧಿ) ಯೆಂದು ಗಣಿಸಲ್ಪಡತಕ್ಕದ್ದು. ಆದರೆ ವಿಶೇಷ ಕಾರಣಗಳಿಗಾಗಿ ತೆಗೆದುಕೊಳ್ಳಲಾಗುವ ಸಂಬಳರಹಿತವಾದ (ಬಿನ್ ಪಗಾರಿ) ರಜೆಯ ಅವಧಿಯನ್ನು ಈ ಸಂಬಂಧದಲ್ಲಿ 'ಡ್ಯೂಟಿ' ಎಂದು ಗಣಿಸಲಾಗುವುದಿಲ್ಲ.

೧೧. ತರಬೇತಿ ಹೊಂದಿದ ಎಲ್ಲ ಶಿಕ್ಷಕರಿಗೆ ಅವರ ಎರಡು ವರ್ಷಗಳ ಉಮೇದವಾರಿಕೆಯ ಅವಧಿಯಲ್ಲಿ ಪ್ರತಿ ತಿಂಗಳಿಗೆ ೨೫ ರೂಪಾಯಿಯಂತೆ ಸಂಬಳವನ್ನು ಕೊಡತಕ್ಕದ್ದು ಮತ್ತು ಮೊದಲಿನ ಬಡತಿಯು ಅವರು ಮೂರು ವರ್ಷಗಳ ನೌಕರಿಯನ್ನು ಮುಗಿಸಿದ ಬಳಿಕ

ಅವರಿಗೆ ಕೊಡಲ್ಪಡತಕ್ಕದ್ದು. ಹೆಂಗಾಮಿ ನೌಕರಿಯ ಅವಧಿಯು ಸಹ, (ಬದಲಿ ಕೆಲಸ ಮಾಡುತ್ತಿರುವ ಅವಧಿಯು ಸಹ) ಅದು ಅಖಂಡವಿದ್ದರೆ, 'ಬಡತಿ'ಗಳಿಗೆ ಪಾತ್ರವಾಗುವದು. ಹೆಂಗಾಮಿ ನೌಕರಿಯ ಅವಧಿಗೂ ಸಹ ಅದು ಅಖಂಡವಿದ್ದುದಾದರೆ ಬಡತಿಗಳು ದೊರೆಯುವವು. ನಿಚ್ಚಳವಾದ 'ಖಾಲಿ' ಜಾಗೆಯು ಇದ್ದಾಗ್ಗೆ ಯಾವನೊಬ್ಬ ಶಿಕ್ಷಕನನ್ನು 'ಕಾಯಂ' ಮಾಡಿ 'ಬೋರ್ಡ'ದ ಪ್ರಾವಿಡಂಟ ಫಂಡಿನ ಯೋಜನೆಯಲ್ಲಿ ಅವನನ್ನು ಸೇರಿಸಿಕೊಳ್ಳುವ (ಅವನಿಗೆ ಪ್ರವೇಶ ಕೊಡುವ) ಪ್ರಶ್ನೆಯು ಏ. ಓ. ರವರಿಂದಲೇ ನಿರ್ಧರಿಸಲ್ಪಡತಕ್ಕದ್ದು.

೧೨. ಬಡತಿಗಳನ್ನು ಠರಾಯಿಸುವ ವಿಷಯದಲ್ಲಿ— ಯಾವನೊಬ್ಬ ತರಬೇತಿ ಹೊಂದಿದ ಶಿಕ್ಷಕನ ೧೯೪೬ನೆ ಇಸವಿಯ ಆಗಸ್ಟ ೧ನೆಯ ತಾರೀಖಿನ ವರೆಗಿನ ನೌಕರಿಯನ್ನು ಮಾತ್ರ ಲಕ್ಷ್ಯದಲ್ಲಿ ತೆಗೆದುಕೊಳ್ಳತಕ್ಕದ್ದು. ಸುಧಾರಿಸಿದ ಸ್ಕೇಲದಲ್ಲಿ ಇವನ ಸಂಬಳವನ್ನು ಗೊತ್ತುಪಡಿಸಿದ ನಂತರ ಇವನಿಗೆ ಈ ಸವಲತ್ತನ್ನು ಕೊಡುವ ಪ್ರಶ್ನೆಯು ಏಳುವದಿಲ್ಲ.

೧೩. ೧೯೩೬ ಏಪ್ರಿಲ ೧ನೆಯ ತಾರೀಖಿನ ದಿನ ಅಥವಾ ಅದರ ನಂತರ ನೌಕರಿಯಲ್ಲಿ ಭರ್ತಿ ಮಾಡಿಕೊಳ್ಳಲ್ಪಟ್ಟಿರುವ ಅಥವಾ ತರಬೇತಿಕೊಡಲ್ಪಟ್ಟಿರುವ ಮೊದಲನೆಯ ವರ್ಷದ ತರಬೇತಿಯುಕ್ತರಾದ ಸ್ತ್ರೀ ಶಿಕ್ಷಿಕೆಯರು, ಸಂಬಳದ ವಿಷಯದಲ್ಲಿ, ತರಬೇತಿ ಹೊಂದದ ಶಿಕ್ಷಿಕೆಯರೆಂದು ಗಣಿಸಲ್ಪಟ್ಟು ಅದರಂತೆಯೇ ಅವರಿಗೆ ಸಂಬಳ ಕೊಡತಕ್ಕದ್ದು.

೧೪. ೧೯೪೬ ಅಕ್ಟೋಬರ ೧ನೆಯ ತಾರೀಖಿನ ವಿದ್ಯಾಖಾತೆಯ ಸರಕಾರಿ ಠರಾವು ನಂಬರು ಎಸ್ಸ. ೭೨೮ರಲ್ಲಿಯ ಸುಧಾರಣೆ ಹೊಂದಿದ ಸಂಬಳದ ಸ್ಕೇಲುಗಳು ಹಿಂದುಸ್ತಾನಿ, ಡ್ರಾಯಿಂಗ, ಸಂಗೀತ ಮುಂತಾದ ವಿಷಯಗಳ ಸ್ಪೆಶಲ್ ಶಿಕ್ಷಕರಿಗೆ ಅನ್ವಯಿಸುವದಿಲ್ಲ.

೧೫. ರಜೆಯ ಅವಧಿಯೊಳಗಿನ ಸ್ಥಾನಿಕ ಭತ್ತೆಯ ದೇಣಿಗೆಯನ್ನು ಬಿ. ಸಿ. ಎಸ್. ರೂಲ್ಸ ಪ್ರಕಾರ ನಿಯಮಿತಗೊಳಿಸತಕ್ಕದ್ದು.

೧೬. ಸುಧಾರಣೆ ಹೊಂದಿದ ಸಂಬಳದ ಸ್ಕೇಲುಗಳ ಪ್ರಕಾರ ಕೊಡಬೇಕಾಗುವ ಪೆನ್ಶನ್ನದ ವಂತಿಗೆಯ ದರ ಅಥವಾ ದರಗಳನ್ನು ಮುಂಬಯಿಯ ಅಕೌಂಟೆಂಟ ಜನರಲ್ಲರಿಂದ ಬೋರ್ಡು ತಿಳಿದುಕೊಳ್ಳಬಹುದು.

೧೭. ಸಿಲೆಕ್ಶನ್ ಗ್ರೇಡುಗಳ ಜಾಗೆಗಳು ಹೆಚ್ಚಿನ ಹೊಣೆಗಾರಿಕೆಯುಳ್ಳವುಗಳಲ್ಲ. ಹಿಗಿರುವದರಿಂದ, ಬಿ. ಸಿ. ಎಸ್. ನಿಯಮಗಳ ಳಗ (೨) (i) ನಿಯಮದ ಪ್ರಕಾರ ಈ ಗ್ರೇಡಿಗೆ ಅರ್ಹರಾದ ಶಿಕ್ಷಕರ ಸಂಬಳವನ್ನು ನಿಶ್ಚಿತಗೊಳಿಸಬೇಕೆಂಬ ಪ್ರಶ್ನೆಯು ಉದ್ಭೂತವಾಗುವುದಿಲ್ಲ.

೧೮. ಮೇಲ್ಕಾಣಿಸಿದ ಪ್ಯಾರಾಗ್ರಾಫ್‌ಗಳಲ್ಲಿ ಕೊಟ್ಟಿರುವ ಸೂಚನೆಗಳು ಇರುತ್ತಿರಲು ಸಹ, ಸುಧಾರಿಸಿದ ಸ್ಕೇಲಿನಲ್ಲಿ ಯಾವನೊಬ್ಬ ವಿಶಿಷ್ಟ ಶಿಕ್ಷಕನ ಸಂಬಳವನ್ನು ಗೊತ್ತುಪಡಿಸುವ ವಿಷಯದಲ್ಲಿ ನಿಮಗೆ ಯಾವದಾದರೂ ಅಡಚಣಿಯು ಕಂಡುಬಂದರೆ, ನೀವು ನಿಮ್ಮ ಅಭಿಪ್ರಾಯಾನುಸಾರವಾಗಿ ಅವನ ಸಂಬಳವನ್ನು ತಾತ್ಪೂರ್ತಿಕವಾಗಿ ಗೊತ್ತುಪಡಿಸಿ, ಕೊನೆಯ ನಿರ್ಣಯದ ಸಲುವಾಗಿ ಆ ವಿಷಯವನ್ನು ಈ ಕಚೇರಿಗೆ ಒಪ್ಪಿಸತಕ್ಕದ್ದು.

D. P. I's Office,
Poona, 15-2-1947.

(ಸಹಿ) ಜಿ. ಎನ್. ಅಯ್ಯರ್.
ಡಿ. ಪಿ. ಅಯ್ಸ. ಅವರ ಪರವಾಗಿ.

ಸಂಬಳ ಮತ್ತು ಭತ್ತೆಗಳು

೧. ಸ್ಥಾನಿಕ ಅಧಿಕಾರಿಗಳ ನೌಕರಿಯಲ್ಲಿಯ ಪ್ರಾಥಮಿಕ ಶಾಲಾ ಶಿಕ್ಷಕರ ಸಿಲೆಕ್ಷನ್ ಗ್ರೇಡು 'ಸೀನಿಯಾರಿಟಿ' (ಹೆಚ್ಚು ನೌಕರಿ) ಇದೊಂದೇ ಆಧಾರದ ಮೇಲೆ ಕೊಡಲ್ಪಡ ಕೂಡದು.

ಅರ್ಹತೆಯುಳ್ಳ ಶಿಕ್ಷಕರು ಸಾಮಾನ್ಯ ಗ್ರೇಡಿನ ಪರಮಾವಧಿ ಸಂಬಳವನ್ನು —ಅಂದರೆ ೫೦ ರೂ. ಸಂಬಳವನ್ನು ಮುಟ್ಟಿರುವದಿಲ್ಲವೆಂಬ ಕಾರಣಕ್ಕಾಗಿ (ನೆವದಿಂದ) ಯಾವ ಸಿಲೆಕ್ಷನ್ ಗ್ರೇಡ ಜಾಗೆಗಳೂ ಗತಿಸಿ ಹೋಗುವದಿಲ್ಲ. (ತುಂಬಲ್ಪಡದೆ ಉಳಿಯುವದಿಲ್ಲ). ಮತ್ತು

ಸದ್ಯ ೫೦ ರೂ. ಅಥವಾ ಅದಕ್ಕೂ ಹೆಚ್ಚಿನ ಸಂಬಳವನ್ನು ಪಡೆಯುತ್ತಿರುವ ತರಬೇತಿ ಹೊಂದಿದ ಶಿಕ್ಷಕರು ಸಾಮಾನ್ಯವಾಗಿ ಸಿಲೆಕ್ಷನ್ ಗ್ರೇಡಿಗೆ ಅರ್ಹರೆಂದು ಎಣಿಸಲ್ಪಡಬೇಕು.

೨. ಮೇಲೆ ಹೇಳಿದ ಸರಕಾರಿ ಹುಕುಮುಗಳ ಅನ್ವಯ, ಈ ಕಚೇರಿಯ ೧೫—೭—೪೭ರ ಪ್ರಸಿದ್ಧ ಪತ್ರಿಕೆ (ಸರ್ಕ್ಯುಲರ ಪತ್ರ ನಂಬರ ಎಸ್. ಆಳ (ಇ) ೩೪೧-ವ್ಹಿ. ಡಿ, ಇದರ ೩ನೆಯ ಪ್ಯಾರಾದಲ್ಲಿ ಸಿಲೆಕ್ಷನ್ ಗ್ರೇಡುಗಳು ತರಬೇತಿ ಹೊಂದಿದ ಶಿಕ್ಷಕರಿಗೆ ಅವರ ನವಕರಿಯ ಕಾಲಾವಧಿ, ಸಂಬಳ ಮತ್ತು ಯೋಗ್ಯತೆಗಳನ್ನು ಮುಂದಿಟ್ಟುಕೊಂಡು ಕೊಡಲ್ಪಡಬೇಕಾದವುಗಳೆಂಬ ವಿಷಯವನ್ನು ಸಂಪೂರ್ಣ ವಿಶದಮಾಡಲಾಗಿದೆ. ಆದರೆ ಈ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ೧-೮-೪೬ನೆಯ ದಿನ ರೂ. ೪೦—೬೦ ಅಥವಾ ರೂ. ೩೫-೬೦ ಗಳ ಹೆಳೆಯ ಸ್ಕೇಲುಗಳಲ್ಲಿ ಸಂಬಳ ಹೊಂದುತ್ತಿದ್ದ ಹೆಳೆಯ ಮೂರನೆಯ ವರ್ಷದ ತರಬೇತಿ ಹೊಂದಿದ ಶಿಕ್ಷಕರು, ಅವರ ಸಂಬಳವು ೧-೮-೪೬ ನೆಯ ದಿನ ರೂ. ೫೦ ಅಥವಾ ಅದಕ್ಕೂ ಹೆಚ್ಚು ಇದ್ದರೆ, ತಮಗಾಗಿ ಸಿಲೆಕ್ಷನ ಗ್ರೇಡಜಾಗೆಗಳು ತೆರವಿದ್ದರೆ, ತಂತಾವಾಗಿಯೇ ಸಿಲೆಕ್ಷನ ಗ್ರೇಡ ಜಾಗೆಗಳಲ್ಲಿ ಪ್ರವೇಶ ಹೊಂದುವರು. ಒಂದು ವೇಳೆ ಇಂಥ ಯಾವನೊಬ್ಬ ಶಿಕ್ಷಕನ ಕೆಲಸವು ಸಮಾಧಾನಕರವೆಂದು ಕಂಡುಬರದಿದ್ದರೆ, ಅಂಥವನಿಗೆ ಅವನು ತನ್ನ ಕೆಲಸದಲ್ಲಿ ನಿಶ್ಚಿತ ಸುಧಾರಣೆಯನ್ನು ತೋರಿಸದ ವಿನಹ ಅವನ ಮುಂದಿನ ಬಡತಿಯನ್ನು ಮುಂಜೂರು ಮಾಡಲಾಗುವದಿಲ್ಲವೆಂಬ ಎಚ್ಚರಿಕೆಯನ್ನು ಕೊಟ್ಟು ಸಿಲೆಕ್ಷನ ಗ್ರೇಡದಲ್ಲಿ ಪ್ರವೇಶ ಕೊಡ ತಕ್ಕದ್ದು. ರೂ. ೪೦-೬೦ ಅಥವಾ ರೂ. ೩೫-೬೦ ಗಳ ಹೆಳೆಯ ಸ್ಕೇಲುಗಳಲ್ಲಿ (ಸುಧಾರಿಸಿದ ಸ್ಕೇಲಿಗಿಂತ ಮುಂಚೆ) ಸದ್ಯ ರೂ. ೫೦ ಅಥವಾ ಅದಕ್ಕೂ ಹೆಚ್ಚು ಸಂಬಳ ದೊರಕಿಸುತ್ತಿರುವ ಎಲ್ಲ ಹೆಳೆಯ ಮೂರನೆಯ ವರ್ಷದ ತರಬೇತಿ ಹೊಂದಿದ ಶಿಕ್ಷಕರ ವಿಷಯದಲ್ಲಿ ಈ ಕ್ರಮವನ್ನು ಅನುಸರಿಸತಕ್ಕದ್ದು.

೩. ೩ನೆಯ ಪ್ಯಾರಾದಲ್ಲಿ ಸೂಚಿಸಲ್ಪಟ್ಟಿರುವ ಶಿಕ್ಷಕರ ಹೊರತಾಗಿ, ಇತರ ಎಲ್ಲ ತರಬೇತಿ ಹೊಂದಿದ ಶಿಕ್ಷಕರ ವಿಷಯದಲ್ಲಿ ಈ ೧೫—೭—೪೭ರ ಈ ಕಚೇರಿಯ ಪ್ರಸಿದ್ಧ ಪತ್ರಿಕೆ ನಂಬರ ಎಸ್ ಆಳ—(ಇ)೩೪೧-ವ್ಹಿ-ಡಿ—ಯಲ್ಲಿಯ ೩ನೆಯ ಪ್ಯಾರಾದಲ್ಲಿ ವಿಧಿಸಲ್ಪಟ್ಟಿರುವ ಪ್ರಕಾರ, ನೌಕರಿಯ ಅವಧಿ, ಸಂಬಳ ಮತ್ತು ಯೋಗ್ಯತೆಗಳನ್ನು ಗಮನಿಸಿ ಸಿಲೆಕ್ಷನ್ ಗ್ರೇಡುಗಳು ಕೊಡಲ್ಪಡಬೇಕು. ಆ ಶಿಕ್ಷಕರಿಗೆ ಸಿಲೆಕ್ಷನ್ ಗ್ರೇಡುಗಳು ಕೊಡಲ್ಪಡುವ ಪೂರ್ವದಲ್ಲಿ ಈ ಮೂರು ಕರಾರುಗಳು ಅವರಿಂದ ಏಕಕಾಲಕ್ಕೆ ಅವಶ್ಯವಾಗಿ, ಪೂರ್ಣಗೊಳಿಸಲ್ಪಡಬೇಕು.

೪. ಸುಧಾರಿಸಿದ ಸ್ಕೇಲುಗಳಲ್ಲಿ ಸಿಲೆಕ್ಷನ್ ಗ್ರೇಡುಗಳನ್ನು ಕೊಡುವಾಗ, ಸಾಮಾನ್ಯವಾಗಿ ಮೇಲೆ ಹೇಳಿದ ಹುಕುಮುಗಳಂತೆ ವರ್ತಿಸಬೇಕು.

ಪುಣೆ
೧೪-೪-೧೯೪೭

ಜಿ. ಎನ್. ಅಯ್ಯರ್.
ಡಾಯರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಷನ್ಸ್ ರವರಾಗಿ

ಸಂಬಳ ಮತ್ತು ಭತ್ತೆಗಳು

೧. ೧೯೪೬ ಆಗಸ್ಟ ೧ನೆಯ ತಾರೀಖಿನ ನಂತರ ೧೦ ವರ್ಷಗಳ ಅವಿಚ್ಛಿನ್ನ ನೌಕರಿಯನ್ನು ಮುಗಿಸುವ ಅರ್ಹತೆಯುಳ್ಳ ಆದರೆ ತರಬೇತಿ ಹೊಂದದಿರುವ ಶಿಕ್ಷಕರು ೧೯೪೬ ಆಗಷ್ಟ ೧ನೆಯ ತಾರಿಖಿನಿಂದ ಅಥವಾ ಅವರು ೧೦ ವರ್ಷಗಳ ಅವಿಚ್ಛಿನ್ನ ನೌಕರಿಯನ್ನು ಸಂಪೂರ್ಣಗೊಳಿಸುವ ತಾರೀಖಿನಿಂದ, "ತರಬೇತಿ ಹೊಂದಿದವರೆಂದು ತಿಳಿಯಲ್ಪಡುವ" ಶಿಕ್ಷಕರೆಂದು ಎಣಿಸಲ್ಪಡತಕ್ಕದ್ದು.

ಈ ಶಿಕ್ಷಕರು ೧೯೪೬ ಆಗಷ್ಟ ೧ನೆಯ ತಾರೀಖಿನ ನಂತರ ಯಾವ ತಾರೀಖಿಗೆ ತಮ್ಮ ೧೦ ವರ್ಷಗಳ ಅವಿಚ್ಛಿನ್ನ ನವಕರಿಯನ್ನು ಸಂಪೂರ್ಣಗೊಳಿಸುವರೋ, ಆ ತಾರೀಖಿನಿಂದ "ತರಬೇತಿ ಹೊಂದಿದವರೆಂದು ತಿಳಿಯಲಾಗಿರುವ" ಶಿಕ್ಷಕರೆಂದು ಎಣಿಸಲ್ಪಡಬೇಕೇ ಹೊರ್ತು, ಅವಶ್ಯವಾಗಿ ಪ್ರತಿವರ್ಷ ಆಗಸ್ಟ ೧ನೆಯ ತಾರಿಖಿನಿಂದ ಅಲ್ಲ. ಈ ಶಿಕ್ಷಕರು ೧೯೪೬ ಆಗಸ್ಟ ೧ನೆಯ ತಾರೀಖಿನ ನಂತರ ತಮ್ಮ ವಯಸ್ಸಿನ ೪೫ನೆಯ ವರ್ಷವನ್ನು ಮುಗಿಸುವ ಮುಂಚಿತವಾಗಿ ಈ ಮಧ್ಯದ ಅವಧಿಯಲ್ಲಿ ತರಬೇತಿ ಹೊಂದಲು ಕರೆಯಲ್ಪಟ್ಟಿರದಿದ್ದರೆ, ಅಂಥ ಶಿಕ್ಷಕರನ್ನು ತರಬೇತಿ ಹೊಂದಲು ಕರೆಯಲಾಗಲಿಕ್ಕಿಲ್ಲ.

೨. ೧೯೪೬ ಆಗಷ್ಟ ೧ನೆಯ ತಾರೀಖಿನ ನಂತರ ತೆರವು ಬೀಳುವ ಸಿಲೆಕ್ಶನ್ ಗ್ರೇಡ ಜಾಗೆಗಳು ಯಾವಾಗ ತುಂಬಲ್ಪಡಬೇಕು:—

ಅಡಳಿತೆಯ ಅನುಕೂಲತೆಗಾಗಿ, ಪ್ರತಿವರ್ಷ ಜಾನೆವರಿ ೧ನೇ ತಾರೀಖಿಗೆ ಮತ್ತು ಜುಲೈ ೧ನೆಯ ತಾರೀಖಿಗೆ ಹೀಗೆ ಪ್ರತಿವರ್ಷ ಎರಡು ಸಲ, ತೆರವು ಬಿದ್ದಿರುವ ಸಿಲೆಕ್ಶನ ಗ್ರೇಡ ಜಾಗೆಗಳಿಗೆ ಸಂಬಂಧಿಸಿದ ಪರಿಸ್ಥಿತಿಯನ್ನು ಪರಿಶೀಲಿಸುವದು ಇಷ್ಟವಾದುವೆಂದು ತೋರುವದು. ಎಲ್ಲ ಹೊಸದಾಗಿ ತರಬೇತಿಹೊಂದಿದ ಶಿಕ್ಷಕರು ತಮ್ಮ ನೌಕರಿಗಳನ್ನು ಸಾಮಾನ್ಯವಾಗಿ ಜುಲೈ ೧ನೆಯ ತಾರೀಖಿನ ವರೆಗೆ ಸೇರಿರುವದರಿಂದಲೆ, ಆ ತಾರೀಖನ್ನು (ಜುಲೈ ೧ನೆಯ ತಾರೀಖನ್ನು) ತೆಗೆದುಕೊಳ್ಳಲಾಗಿದೆ.

ವರ್ಗಾವರ್ಗಿ, ರಾಜೀನಾಮೆ, ಸೇವಾನಿವೃತ್ತಿ, ನಿಧನ ಮೊದಲಾದ ಕಾರಣಗಳಿಂದ ಜಾನೆವರಿಯಿಂದ ಜೂನ ತಿಂಗಳ ವರೆಗಿನ ಮಧ್ಯಾವಧಿಯಲ್ಲಿ ಮತ್ತು ಜುಲೈ ತಿಂಗಳಿಂದ ಡಿಸೆಂಬರ ತಿಂಗಳ ವರೆಗಿನ ಮಧ್ಯಾವಧಿಯಲ್ಲಿ ತೆರವು ಬಿದ್ದ ಸಿಲೆಕ್ಶನ್ ಗ್ರೇಡ ಜಾಗೆಗಳನ್ನು ಅವು ತೆರವು ಬಿದ್ದ ತಾರೀಖಿನಿಂದ, ತುಂಬಬಹುದು. ಆದರೆ ಹೀಗೆ ಮಾಡುವ ಮುಂಚಿತವಾಗಿ ಇಂಥ ತೆರವು ಬಿದ್ದ ಜಾಗೆಯನ್ನು ತುಂಬುವ ಪ್ರತಿಲಸವೂ ತುಂಬುವದರ ಸಲುವಾಗಿ ತೆರವಾದ ಸಿಲೆಕ್ಶನ್ ಗ್ರೇಡ ಜಾಗೆಗಳು ಪ್ರಾಸ್ಯವಿರುವವೇನೆಂಬುದನ್ನು ಗೊತ್ತುಪಡಿಸಲು ಇಡೀ ಪರಿಸ್ಥಿತಿಯನ್ನು ಪರಿಸೀಲಿಸಿರತಕ್ಕದ್ದು.

೩. ಮೇಲ್ಕಾಣಿಸಿದ (೨)ರಲ್ಲಿ ನಿರ್ದಿಷ್ಟಗೊಳಿಸಿದಂತೆ, ಟ್ರೇನಿಂಗ ಕಾಲೇಜ ಸರ್ಟಿಫಿಕೇಟ ಪರೀಕ್ಷೆಗಳ ಪರಿಣಾಮಗಳನ್ನು ಘೋಷಿಸುವ ತಾರೀಖನ್ನು ಜೂನ ೧ನೆಯ ತಾರೀಖಿನಿಂದ ಆಗಸ್ಟ ೧ನೆಯ ತಾರೀಖಿಗೆ ಬದಲಾಯಿಸುವ ಅವಶ್ಯಕತೆ ಇಲ್ಲ. ಹೊಸದಾಗಿ ತರಬೇತಿ ಹೊಂದಿದ ಶಿಕ್ಷಕರಿಗೆ, ಅವರಿಗೆ ಅನ್ವಯಿಸುವ ಸ್ಕೇಲದಲ್ಲಿ ಅವರ ಸಂಬಳವು ಈಗಿನಂತೆ ಜೂನ ೧ನೆಯ ತಾರೀಖಿನಿಂದಲೇ ಕೊಡಲ್ಪಡತಕ್ಕದ್ದು

ಪುಣೆ
೧೮-೪-೧೯೪೭

(ಸಹಿ) ಜಿ. ಎನ್. ಅಯ್ಯರ್.
ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನರ ಪರವಾಗಿ

ಸಂಬಳ ಮುಕ್ತ ಭತ್ತೆ

ನಿಮ್ಮ ಪತ್ರದಲ್ಲಿ ಸೂಚಿಸಿರುವ ಶಿಕ್ಷಕರ ಹೆಕ್ಕುಗಳನ್ನು ತಾತ್ಪೂರ್ತಿಕವಾಗಿ ಬದಿಗಿಡಲು ಸ್ಥಾನಿಕ ಸಂಸ್ಥೆಯು ಹಾಗೆ ಬಯಸಿದರೆ, ಅದು ಅದರಂತೆ ಮಾಡಲು ಅಡ್ಡಿಯಿಲ್ಲ. ಇತರ ಜಾಗೆಗಳಲ್ಲಿ ನೌಕರಿ ಮಾಡಲು ಕಳುಹಿಲ್ಪಟ್ಟ ಶಿಕ್ಷಕರ ಹೆಕ್ಕುಗಳನ್ನು ಆಯಾ ಶಿಕ್ಷಕರು ತಮ್ಮ ಹೊಸ ಜಾಗೆಗಳಿಂದ ಮರಳಿ ತಮ್ಮ ಮುಂಚಿನ ಜಾಗೆಗಳಿಗೆ ಬಂದನಂತರ ತಮ್ಮ ಮೊದಲಿನ ಜಾಗೆಗಳಿಗೆ ಹೋಗುವ ಕರಾರಿನ ಮೇಲಿಂದ ತಾತ್ಪೂರ್ತಿಕವಾಗಿ ಆ ಸ್ಥಳಗಳನ್ನು ತುಂಬಲು ಸಹ ಅಡ್ಡಿಯಿಲ್ಲ. (ಈ ಬಗ್ಗೆ, ಪ್ರಾಥಮಿಕ ಶಿಕ್ಷಣದ ಖರ್ಚನ್ನು ಕ್ರಮಪಡಿಸುವ ಸರಕಾರಿ ಅಪ್ಪಣೆಗಳನ್ನುಳ್ಳ 'ಕೋಡ' ದ ೧೫೨ನೆಯ ಪ್ಯಾರಾಗ್ರಾಫನ್ನು(ಕಲಮನ್ನು) ನೋಡತಕ್ಕದ್ದು.)

೧—೮—೪೬ ನಂತರ ಪ್ರಾಪ್ಯವಾಗುವ ಸಿಲೆಕ್ಷನ್ ಗ್ರೇಡ ಜಾಗೆಗಳನ್ನು ತುಂಬುವ ಸಂಬಂಧದಲ್ಲಿ ಈ ಕಚೇರಿಯ ೧೪—೪—೪೭ರ ಪರಿಪತ್ರಿಕೆ (ಸರ್ಕ್ಯೂಲರ ಲೆಟರ) ನಂ. ಎಸ್—84—(ಈ)—341—ಪ್ಲಿ—ಡಿ. ಕಡೆಗೆ ಲಕ್ಷ್ಯವನ್ನು ಎಳೆಯಲಾಗಿದೆ. ಅಲ್ಲಿ ನಿರ್ದೇಶಿಸಿರುವ ಅಪ್ಪಣೆಗಳು ಖಂಡಿತವಾಗಿ ಅನುಸರಿಸಲ್ಪಡಬೇಕು.

ಪುಣೆ
೨೫—೪—೧೯೪೮.

(ಸಹಿ) **ಜಿ. ಎನ್. ಅಯ್ಯರ್.**
ಡಾಯರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಷನ್ ಪರವಾಗಿ.

ಅರಿಕೆ

★

ಮೊದಲಾಂ ಕತ್ತಿನದೆಲ್ಲಿಯೋದೆ ಬರೆಯಲ್ ಪ್ರಾರಂಭಿಕಂ ಪಾಠಮಂ ।
ತುದಿಗಾಂ ಮುಟ್ಟಿದೆನೆಲ್ಲ ಲಭ್ಯದ ಸುವಿದ್ಯಾಶಿಕ್ಷೆಯಾ ದೈವದಿಂ ॥
ಆದು ಶಾಲಾಗೃಹಮೈಸೆ ಮಾತೃಪದವತ್ಪೂಜ್ಯಂ ಸಮಂತಲ್ಲಿನಾ ।
ಮುದದಿಂ ಬೋಧಿಪ ಶಿಕ್ಷಕಪ್ರತತಿ ಮಾತೃಪ್ರಾಯಮಯ್ ವಂದ್ಯಮಯ್ ॥ ೨ ॥

ಸ್ರಗ್ಧರೆ

ಕರ್ನಾಟಾಖ್ಯಂ ಸುನಾಮಂ ಸಮನಿಸಿದುದು ದೇಶಕ್ಕೆ ಭಾಷಾಜನಕ್ಕಂ ।
ನಿರ್ದೀತಂ ಶ್ರೇಷ್ಠಭಾಗಂ ಜನಪದಮದು ಮಜ್ಜನ್ಮದಾಸ್ಥಾನಮಕ್ಕುಂ ॥
ತೂರ್ಣಂ ಸಾಮರ್ಥ್ಯವಂತಂ ನುಡಿಯುವದು ಮನೋಹಾರಿ ಕೀರ್ತ್ಯಾಸ್ಪದಂ ಮೇಣ್ ।
ಪೂರ್ಣಂ ಮನ್ಮಾತೃರೂಪಂ ತದುಭಯಮನಿಶಂ ಪೂಜನೀಯಂ ಪುರಾಣಂ ॥ ೩ ॥

ಚಂಪಕಮಾಲೆ

ಆಮರ ಮಯಂ ಶರೀರಮದು ಸಾಧುಸುಹೃತ್ತ್ವದ ಮೂರ್ತಿ ಸಗ್ಗದಾ ।
ಅಮೃತಸಮಂ ಸಖಪ್ರದಮದೇತರದಿರ್ಪುದು ದುಗ್ಧಧಾರೆ ತಾಂ ॥
ಅಮಿತಸುಗೌರವಾನ್ವಿತಮದಾವುದು ಧೇನ್ವಭಿಧಂ ಪಶೂತ್ತಮಂ ।
ನಮಿಪೆನದರ್ಕೆ ಮಾತೃಸದೃಶಕ್ಕೆ ಸುಭಕ್ತಿಯುತಾಂತರಂಗದಿಂ ॥ ೪ ॥

ಶಾರ್ದೂಲವಿಕ್ರೀಡಿತ

ದಾಸೀಭಾವದಿನೆಮ್ಮ ನಾಡು ಸುಖಸಂತೋಷಾಗರಂ ಕಾಮದಂ ।
ದೇಶೀಯರ್ಕಳ ಹೈನ್ಯದಿಂದೆ ಚಿರಮಿರ್ದತ್ತಾರ್ತತಾ ಭಾಧೆಯೊಳ್ ॥
ಸಾಸಂಬಟ್ಟಿದೆ ಈಗಳಾ ಕಳೆದ ಸ್ವಾತಂತ್ರ್ಯಾಪ್ತಿಯಂ ಪೊರ್ದಿದಾ ।
ದೇಶಂ ಭಾರತವರ್ಷಮೆನ್ನ ಜನನೀಸದೃಶಂ ಸುಪೂಜ್ಯಂ ಕರಂ ॥ ೫ ॥

ವೈಧರ್ಮ್ಯಮೂಲಕ ಅಲಂಕಾರಗಳು

ಲೇಖಕ–ಪಂಡಿತ ಕೇಶವಶರ್ಮಾ ಗಲಗಲಿ

ಅಸಂಗತಿ ಅಲಂಕಾರ

ಅಸಂಗತಿ–ಕಾರ್ಯಕಾರಣಗಳು ಒಂದು ಪ್ರದೇಶದಲ್ಲಿರುವದು ಸಹಜ. ಅವುಗಳಿಗೆ ಭಿನ್ನಪ್ರದೇಶತ್ವವು ವರ್ಣಿಸಲ್ಪಟ್ಟಲ್ಲಿ ಈ ಅಲಂಕಾರವಾಗುವದು. ಮೇಘಗಳು ವಿಷವನ್ನು (ಜಲವನ್ನು ಕುಡಿದವು.) ಮೂರ್ಛಿತರಾದವರು ಪ್ರವಾಸಕ್ಕೆ ಹೋದವರ ಹೆಂಡಂದಿರು. ಇಲ್ಲಿ ಯಾರು ವಿಷವನ್ನು ಕುಡಿವರೋ ಅವರೇ ಮೂರ್ಛಿತರಾಗಬೇಕು. ಆದರೆ ವಿಷ (ಜಲ) ವನ್ನು ಕುಡಿದವು ಮೇಘಗಳು. ಮೇಘೋದಯವಾದಕೂಡಲೆ ವಿರಹತಾಪವು ಹೆಚ್ಚಾಗಿ ಪಥಿಕ–ಸ್ತ್ರೀಯರು ಮೂರ್ಛಿತರಾದರು ಎಂದು ವರ್ಣಿಸಲ್ಪಟ್ಟಿದೆ. ವಿಷಪಾನ ಕಾರಣ, ಮೂರ್ಛಾ ಕಾರ್ಯ. ಇವೆರಡೂ ಭಿನ್ನದೇಶದಲ್ಲಿ ಸಂಭವಿಸಿದವೆಂದು ಹೇಳಿದಂತಾಯಿತು.

ಕಾರ್ಯಕಾರಣತ್ವೇನ ಸಂಬಂಧಪಟ್ಟ ಎರಡು ವಸ್ತುಗಳು ಅತ್ಯಂತ ಭಿನ್ನ ದೇಶದಲ್ಲಿ ಇರುವವೆಂದು ವರ್ಣಿಸುವಲ್ಲಿ, ಆ ಎರಡು ವಸ್ತುಗಳು ಸ್ವಭಾವೋತ್ಪನ್ನವಾದ ಪರಸ್ಪರ ಸಂಗತಿಯನ್ನು ತ್ಯಾಗಮಾಡುವದರಿಂದ ಅಸಂಗತ್ಯಲಂಕಾರವುಂಟಾಗುವದು. ಕಾರಣವಿರುವಲ್ಲಿಯೇ ಕಾರ್ಯವುಂಟಾಗುವದು ಲೋಕದಲ್ಲಿ ಕಂಡುಬಂದಿದೆ. ಹೇಗಂದರೆ ಹೊಗೆಯಿರುವಲ್ಲಿ ಅಗ್ನಿ.

ಹೀರೆ ಉದಾಹರಣೆ— ಜನರು ಕುಡಿಯುತ್ತಾರೆ. ಯಾವನಿಗೆ ಗಾಯವಾಗುವದೋ ಅವನು ಬಳಲುವನು ವೇದನೆಯಿಂದ., ಇದು ಸುಳ್ಳು. ಈಕೆಯ ಕಪೋಲದಲ್ಲಿ ದಂತಕ್ಷತ. ಬಳಲುವವರು ಸವತಿಯರು. (ಮಾತ್ಸರ್ಯದಿಂದ.)

ವಾಸ್ತವಿಕವಾಗಿ ಕಾರ್ಯಕಾರಣಗಳು ಒಂದೆಡೆಯಲ್ಲಿ ಸಹಜವಾಗಿ ಇರತಕ್ಕವುಗಳನ್ನು ಭಿನ್ನದೇಶದಲ್ಲಿ ಇರುವವೆಂದು ವರ್ಣಿಸುವಲ್ಲಿಯೇ ಈ ಅಲಂಕಾರವಾಗುವದು. ಕಾರ್ಯಕಾರಣಗಳು ಭಿನ್ನಪ್ರದೇಶದಲ್ಲಿ ಇರುವದೇ ಅವಶ್ಯಕವಾಗಿರುವಲ್ಲಿ ಈ ಅಲಂಕಾರವಾಗದು. ಉದಾ:–ಸುಮುಖಿಯು ಹುಬ್ಬು ಎಂಬ ಬಿಲ್ಲಿನ ಬಳ್ಳಿಯನ್ನು ಕುಟಿಲವಾಗಿ ಮಾಡುವಷ್ಟರಲ್ಲಿಯೇ ಆಕೆಯ ಕಡೆಗಣ್ಣಿನ ಬಾಣಗಳಿಂದ ನನ್ನ ಎದೆ ಗಾಯಗೊಂಡಿತು. ಇಲ್ಲಿ ಚಾಪವಕ್ರೀಕರಣವೂ, ಹೃದಯ ಭೇದವೂ ಕಾರ್ಯಕಾರಣಗಳು. ಇವು ನಿಜವಾಗಿ ಭಿನ್ನಪ್ರದೇಶದಲ್ಲಿಯೇ ಇರತಕ್ಕವು. ಆದ್ದರಿಂದ ಇಲ್ಲಿ ಅಸಂಗತಿ ಅಲಂಕಾರವಾಗದು. ಇದರಂತೆ ಹಾವಿನ ಕಡಿತ ಕಾಲಿನಲ್ಲಿ. ತಿರಗುವವು. ಕಣ್ಣುಗಳು ಇವುಗಳಿಗೆ ಭಿನ್ನದೇಶತ್ವವಿರುವದು ಸಹಜ. ಭುಜಂಗದಂಶನ ಕಾರಣ ಅಕ್ಷ್ಣೋಘೂರ್ಣನ ಕಾರ್ಯ. ಇಲ್ಲಿಯೂ ಅಸಂಗತಿ ಅಲಂಕಾರನಾಗುವದಿಲ್ಲ. ಒಂದು ಪ್ರದೇಶದಲ್ಲಿ ಸ್ವಾಭಾವಿಕವಾಗಿ ಸಂಭವಿಸತಕ್ಕ ಕಾರ್ಯಕಾರಣಗಳೇ ಭಿನ್ನ ಪ್ರದೇಶದಲ್ಲಿ ಸಂಭವಿಸಿದವೆಂದು ಬಣ್ಣಿಸುವಲ್ಲಿಯೇ ಅಸಂಗತಿ ಅಲಂಕಾರವಾಗುವದು.

ಸಮಕಾಲವಾಗಿ ಕಾರ್ಯಕಾರಣಗಳು ಅನ್ಯತ್ರ ಇರುವವೆಂದು ಬಣ್ಣಿಸಲ್ಪಟ್ಟಲ್ಲಿ ಅಸಂಗತ್ಯಲಂಕಾರ. ನವಯೌವನದಿಂದ ಚಂದ್ರಕಾಂತಿ ಅಂಗನೆಯ ಅವಯವಗಳಲ್ಲಿ ಸಂಚಾರಿತವಾಗುವದು. ಅಸಂಗತವಾದ ತರುಣರ ಹೃದಯದಲ್ಲಿ ಕಾಮೋದ್ದೀಪನವಾಗುವದು. ಅರಸರು ಪ್ರಾಯಃ ಪಥ್ಯ ಪರಾಙ್ಮುಖರಾಗುವರು. ಅವರ ಮಂತ್ರಿಗಳಿಗೆ ಲೋಕಾಪವಾದ ಭಯಜ್ವರವುಂಟಾಗುವದು. ಆಕೆ ಬಾಲೆ. ನಾವು ಅಪ್ರಗಲ್ಭ ಮನಸ್ಕರು. ಆಕೆ ಸ್ತ್ರೀ ನಾವು ಕಾತರರು. ಆಕೆ

ಪುಷ್ಟವಾದ ಭಾರವಾದ ಸ್ತನಗಳನ್ನು ಹೊತ್ತಿರುವಳು ನಾವು ಖಿನ್ನರು. ಆಕೆ ಗುರುವಾದ ಜಘನ ಗಳನ್ನು ಹೊತ್ತಿರುವಳು. ನಾವು ನಡೆಯಲು ಅಶಕ್ತರು. ಅನ್ಯರ ದೋಷಗಳಿಂದ ನಾವು ಪಟುತ್ವ ಕಳೆದುಕೊಂಡಿದ್ದೇವೆ. ಇದು ಅದ್ಭುತ. ದುಷ್ಟನೆಂಬ ಸರ್ಪದ ಕಡಿತ ವಿಚಿತ್ರವಾದದ್ದು. ಅವನು ಒಬ್ಬರ ಕಿವಿಯನ್ನು ಕಡಿಯುತ್ತಾನೆ. (ಚಾಡಿ ಹೇಳುವದು) ಮತ್ತೊಬ್ಬರು ಪ್ರಾಣ ಗಳಿಂದ ಮುಕ್ತರಾಗುತ್ತಾರೆ. ದಮಯಂತಿಯೇ ನೀನು ಅವನ (ನಲನ) ಸಂಕಲ್ಪಸೋಪಾನ ಗಳನ್ನು ಅನವರತ ಏರುತ್ತೀ, ಅವನು ನಿನ್ನ ಧ್ಯಾನದಿಂದ ಉಸಿರು ಬಿಡುತ್ತಿರುವನು. ವರ್ಷಾ ಕಾಲದಲ್ಲಿ ನವತಾರುಣ್ಯದ ಸೊಬಗುಂಟಾಯಿತು. ದಿಗ್ಮುಖಗಳು ಪ್ರೌಢ ಪಯೋಧರ (ಕುಚ. ಮೇಘ) ಗಳುಳ್ಳವಾದವು. ಕೇತಕಿಗಳಲ್ಲಿ ಮುಷ್ಕ (ಮುಟ್ಟು, ಹೂ) ಗಳ ಉದ್ಗಮವಾಯಿತು. ನದಿಗಳು ಅಸ್ಪೃಶ್ಯವಾದವು. ಮುಟ್ಟಾದವರು ಅಸ್ಪರ್ಶರಾಗಬೇಕು. ಇಲ್ಲಿ ನದಿಗಳುಂಟಾದವು. ಮಳೆಗಾಲದಲ್ಲಿ ರಾಡಿಯಿಂದ ನದಿಗಳು ಮುಟ್ಟಿದಂತಾಗುವವು. ಈ ಬೇರೆ ಉದಾಹರಣೆಗಳಲ್ಲಿ ಅಸಂಗತ್ಯಲಂಕಾರದ ಮನೋಹರತೆಯನ್ನು ಕಾಣಬಹುದು.

ಅಸಂಗತಿಯಲ್ಲಿ ವಿರೋಧವಿರುವದು. ಆದ್ದರಿಂದ ನಾವು ಇದನ್ನು ವಿರೋಧಭಾವವೆಂದು ಏಕೆ ಹೇಳಬಾರದು ? ಯಾಕಂದರೆ ಅಸಂಗತಿ ವಿರೋಧ ಅಥವಾ ವಿರೋಧಾಭಾಸದಲ್ಲಿ ಸಾಮ್ಯ ವಿರುವದು. ಎಲ್ಲಿ ದಂತಕ್ಷತವೋ ಅಲ್ಲಿಯೇ ವೇದನೆಯುಂಟಾಗಬೇಕು. ಆಗಲಿಲ್ಲ. ವಿರೋಧ ಬಂದಿತು. ಆದರೆ ಮಾತ್ಸರ್ಯದಿಂದ ವೇದನೆ. ಬೇರೆ ಕಡೆಗೆ ವೇದನೆಯುಂಟಾಯಿತು, ಎಂಬದ ರಿಂದ ಬಂದ ವಿರೋಧಪರಿಹಾರವಾಗುವದು. ಅದರಿಂದ ಇದೂ ವಿರೋಧಾಭಾಸಾಲಂಕಾರ ವೇಕಾಗಬಾರದು ? ವ್ಯಧಿಕರಣತ್ವದಿಂದ ಪ್ರಸಿದ್ಧವಾದ ಎರಡು ವಸ್ತುಗಳಲ್ಲಿ ಸಮಾನಾಧಿ ಕರಣತ್ವದಿಂದ ಉಪನಿಬಂಧನೆಯನ್ನು ಮಾಡಿದಲ್ಲಿ ವಿರೋಧಾಭಾಸಾಲಂಕಾರ. ಸಮಾನಾಧಿ ಕರಣತ್ವದಿಂದ ಪ್ರಸಿದ್ಧವಾದ ಎರಡು ವಸ್ತುಗಳಲ್ಲಿ ವ್ಯಧಿಕರಣತ್ವದಿಂದ ನಿಬಂಧನೆಯನ್ನುಂಟು ಮಾಡುವಲ್ಲಿ ಅಸಂಗತಿ ಅಲಂಕಾರವು. ಇದು ಇವೆರಡರಲ್ಲಿಯ ಸೂಕ್ಷ್ಮಭೇದ. ವಿರೋಧಕ್ಕೆ ವಿಶಾಲಕ್ಷೇತ್ರವಿರುವದು. ಅಸಂಗತಿಗೆ ಮರ್ಯಾದಿತ ಕ್ಷೇತ್ರವಿರುವದು.

ಅಸಂಗತಿ, ವಿಭಾವನಾ ಎರಡೂ ಅಲಂಕಾರಗಳಲ್ಲಿ ತೋರಿಕೆಯ ವಿರೋಧವಿರುತ್ತದೆ. ಆ ವಿರೋಧವನ್ನು ಪರಿಹರಿಸಬೇಕಾಗಿರುವದು. ವಿಭಾವನೆಯಲ್ಲಿ ಪ್ರಸಿದ್ಧವಾದ ಕಾರಣವಿಲ್ಲ ದಿದ್ದರೂ ಕಾರ್ಯೋತ್ಪತ್ತಿಯಾಗುವದು (ಲಾಕ್ಷಾರಸವನ್ನು ಹೆಚ್ಚದಿದ್ದರೂ ಆಕೆಯ ಕಾಲು ಗಳು ಕಿರುಣವಾಗಿರುವವು.) ಆದರೆ ಅಸಂಗತಿಯಲ್ಲಿ ಕಾರ್ಯಕಾರಣಗಳು ಎರಡೂ ಇರು ವವು. ಆದರೆ ಅವು ಒತ್ತಟ್ಟಿಗೆ ಇರದೆ ಭಿನ್ನ ಪ್ರದೇಶದಲ್ಲಿ ಹೇಳಲ್ಪಟ್ಟಿರುತ್ತವೆ. ಪ್ರಸಿದ್ಧ ಕಾರಣ ವಿಲ್ಲದೆ ಕಾರ್ಯೋತ್ಪತ್ತಿಯಾಗುವಲ್ಲಿ ವಿಭಾವನೆಯ ಸೊಗಸು ಇರುವದು. ಕಾರ್ಯ ಕಾರಣ ಗಳು ಭಿನ್ನ ಪ್ರದೇಶಗಳಲ್ಲಿ ಇರುವವೆಂದು ಹೇಳುವಲ್ಲಿ ಅಸಂಗತಿಯ ಸೌಂದರ್ಯವಿರುವದು.

ಅತಿಶಯೋಕ್ತಿ ಅಸಂಗತಿಗಳಲ್ಲಿ ಭೇದ–ಕಾರಣಕ್ಕಿಂತ ಮೊದಲೇ ಕಾರ್ಯವು ಹುಟ್ಟು ವದು ಅಥವಾ ಕಾರ್ಯಕಾರಣಗಳು ಏಕಸಮಯಾವಚ್ಛೇದ ಹುಟ್ಟುವದು. ಅತಿಶಯೋಕ್ತ್ಯ ಲಂಕಾರದ ಒಂದು ಪ್ರಕಾರವು. ಕಾರ್ಯಕಾರಣಗಳು ಒಮ್ಮೆಲೆ ಜನಿಸುವದು ಇಲ್ಲಿ ಅತಿಶ ಯೋಕ್ತಿ ಅಸಂಗತಿಗಳಲ್ಲಿ ಸಾಮ್ಯವಿರುವದು. ಆದರೆ ಅಲ್ಲಿ ವ್ಯಧಿಕರಣತ್ವೇನ ಬಣ್ಣಿಸಲ್ಪಟ್ಟಿಲ್ಲ. ಇಲ್ಲಿ ಸಮಾನಾಧಿಕರಣವಾಗಿರುವವು. ವ್ಯಧಿಕರಣತ್ವೇನ ಬಣ್ಣಿಸಲ್ಪಟ್ಟಿರುವವು.

ಶಿಕ್ಷಣಕಲಾ ಮತ್ತು ಶಾಸ್ತ್ರ

ಶ್ರೀ. ಕುಲಕರಣಿ ಶ್ರೀಪಾದ, ಕನ್ನಡಜಾಣ

ಕೆ. ಇ. ಬೋರ್ಡಿನ ಟ್ರೇನಿಂಗ ಕಾಲೇಜ, ಧಾರವಾಡ.]

ಸಂಗೀತ, ನೃತ್ಯ, ನಾಟ್ಯ ಮೊದಲಾದವು ಕಲೆಗಳಿರುವಂತೆ ಶಿಕ್ಷಣವೂ ಒಂದು ಕಲೆಯೆಂದಮೇಲೆ ಮೊದಲು ಕಲೆಯೆಂದರೇನೆಂಬುದನ್ನು ವಿಚಾರಿಸುವದು ಯೋಗ್ಯ. ಆಮೇಲೆ ಶಾಸ್ತ್ರದ ಕಡೆಗೆ ಹೊರಳಿ ಅದರ ವಿಷಯವಾಗಿ ಚರ್ಚಿಸುವದು ವಿಹಿತ. ಅದುದರಿಂದ ಜೀವನೋಪಯೋಗಕ್ಕೆ ಶಿಕ್ಷಣಕಲೆಯು ಅವಶ್ಯಕತೆ; ಅದನ್ನು ಸಂಪಾದಿಸುವ ಬಗೆ, ಸಂಪಾದಿಸಿ ಅನುಭವ ಪಡೆದು ನೂತನ ಸಿದ್ಧಾಂತಗಳನ್ನು ಸಾಮಾನ್ಯಜನಕ್ಕೆ ತಿಳುಹಿಸಿಕೊಟ್ಟ ಅನುಭವಿಕ ಮಹನೀಯರ ಅಮೌಲ್ಯ ಜ್ಞಾನದ ಉಗಯೋಗ, ಶಿಕ್ಷಣಕ್ಕೆ ಶಿಕ್ಷಕರ ಬೇಡಿಕೆ; ಅವನ ತರಬೇತಿ; ಈ ಮುಂತಾದ ಸಂಗತಿಗಳನ್ನು ವಿವರವಾಗಿ ಚರ್ಚಿಸುವದೇ ಈ ಲೇಖನದ ಉದ್ದೇಶ.

ಕಲೆಯೆಂಬುದಕ್ಕೆ ಇಂಗ್ಲೀಷಿನಲ್ಲಿ 'ಆರ್ಟ್' ಎಂದು ಹೇಳುವರು. ಕಲೆಗಳಲ್ಲಿ ಎರಡು ವಿಧ. ಲಲಿತಕಲೆಗಳು ಮತ್ತು ಜೀವನೋಪಯೋಗೀಕಲೆಗಳು. ಲಲಿತಕಲೆಗಳಿಂದ ಮನವು ಆನಂದಿಸುವದು. ಜೀವನೋಪಯೋಗಿಕಲೆಗಳಿಂದ ಜೀವನವು ಬೆಳಗುವದು. ಜೀವನದ ಗಹನಸಿದ್ಧಾಂತಗಳು ಈ ಕಲೆಯಿಂದ ಬಿಡಿಸಲ್ಪಡುವವು. ಇಂಥ ಕಲೆಯ ವಿಕಾಸಕ್ಕಾಗಿಯೇ ಅವಿರತ ಹೆಣಗಿದ ವಿಶ್ವಕವಿ ಸಮ್ರಾಟ ರವೀಂದ್ರರು ಶಾಂತಿನಿಕೇತನವನ್ನು ಸ್ಥಾಪಿಸಿದರು. ಅವರು ಹೀಗೆ ಹೇಳುತ್ತಿದ್ದರು— " ಇಂಗ್ರೇಜೀಭಾಷಾಪರದೆಯಲ್ಲಿ ಅಡಗಿದ ವಿದ್ಯೆಯು ನಮ್ಮ ಮನಸಿಗೆ ಸಹವರ್ತಿಯಾಗಿ ಸಾಗಲಾರದು. ನಮಗೆ ಸದ್ಯಕ್ಕೆ ದೊರೆಯುತ್ತಿರುವ ಶಿಕ್ಷಣದಷ್ಟು ವಿದ್ಯೆಯು ದೊರೆಯುತ್ತಿರುವದಿಲ್ಲ. " ಈ ಮಾತಿನ ವಿಮರ್ಶೆಮಾಡಿದರೆ ಇದರ ಸತ್ಯತೆಯು ಒಡೆದು ಕಾಣುವದು.

ಸದ್ಯದ ಶಿಕ್ಷಣದಿಂದ ನಮಗೆ ಸಾಕಷ್ಟು ವಿದ್ಯೆದೊರೆಯುತ್ತಿರುವದಿಲ್ಲ. ವಿದ್ಯೆಯಿಲ್ಲದಿದ್ದರೆ ಜೀವನವು ಬೆಳಗಲಾರದು. ಇಂಥ ವಿದ್ಯೆಯಿಂದ ಜೀವನಾವಶ್ಯಕತೆಗಳು ಮಾಯವಾಗವು. ಆದ್ದರಿಂದ ವಿದ್ಯೆಯನ್ನು ವರ್ಧಿಸುವ ಶಿಕ್ಷಣವು ನಮಗೆ ದೊರೆಯುತ್ತಿರುವದಿಲ್ಲ. ಶಿಕ್ಷಣವಿಲ್ಲದಿದ್ದರೆ ಪ್ರಗತಿಯಿಲ್ಲ. ಪ್ರಗತಿಗೆ ಕ್ರಮಬದ್ಧವಾದ ರೂಢಿಬೇಕು. ರೂಢಿಯನ್ನು ಮಾಡಲಿಕ್ಕೆ ವಿಧಾನವು ಬೇಕು. ಸರಿಯಾದ ವಿಧಾನದ ರೂಢಿಯಿಂದ ಸಾಧನೆಯು ಸಾಗಿದರೆ ಸಿದ್ಧಿಯು ಹಸ್ತಗತ. ಅಂದಮೇಲೆ ಸಿದ್ಧಿಯೂ ಸಾಧನೆಯು ಒಂದಕ್ಕೊಂದು ಪೂರಕವಾಗಿವೆಯೇ ಹೊರ್ತು ವಿರೋಧಿಗಳಲ್ಲ. ಈ ಮಾತು ಶಿಕ್ಷಣಶಾಸ್ತ್ರಕ್ಕೂ ಅನ್ವಯಿಸುವದು. ಶಿಕ್ಷಣವು ಸಾಧ್ಯವಾದರೆ ಶಾಸ್ತ್ರವು ಸಾಧನೆಯು. ಶಿಕ್ಷಣ, ಶಾಸ್ತ್ರಗಳೆರಡೂ ಒಂದಕ್ಕೊಂದು ಪೂರಕಗಳಾಗಿ ಕಲೆಯನ್ನು ಬೇರೂರಿಸಲು ಪ್ರಯತ್ನಿಸಿದಾಗ ನಮಗೆ ಬೇಕಾದ ವಿದ್ಯೆ ದೊರೆಯುವದು. ಇನ್ನು ಕಲೆಗೂ ವಿದ್ಯೆಗೂ ಭೇದವೆಣಿಸದೆಯೇ ಕಲೆಯೆಂಬ ಶಬ್ದಕ್ಕೆ ಅಂಟುವದುಲೇಸು. ಮೇಲಿನ ವಿವರಣೆಯನ್ನು ಒಂದೇ ಮಾತಿನಲ್ಲಿ ಹೇಳಲು ಬಯಸುವೆ. ಕಲೆಯೇ ಪರಮಧ್ಯೇಯ. ಶಿಕ್ಷಣವೇ ಆವಲಂಬನ ಹಾಗೂ ಶಾಸ್ತ್ರವೇ ಆಚಾರವೆಂದು ಅರ್ಥಹಚ್ಚಬಹುದು. ಆದ್ದರಿಂದ ಶಾಸ್ತ್ರದಂತೆ ಆಚರಿಸಿ ಶಿಕ್ಷಣವನ್ನವಲಂಬಿಸಿ ಕಲೆಯ ಗುರಿಯನ್ನು ಮುಟ್ಟುವದೇ ಶಿಕ್ಷಣಕಲೆಯ

ಹಾಗೂ ಶಾಸ್ತ್ರದಗುಟ್ಟು. ಈ ಗುಟ್ಟನ್ನರಿತು ಅನೇಕ ಮಹನೀಯರು ತಮ್ಮ ಅನುಭವ ಗಳಿಂದ ಶಿಕ್ಷಣಕಲೆಯ ಮತ್ತು ಶಾಸ್ತ್ರದ ಸಿದ್ಧಾಂತಗಳನ್ನು ಕಾಲಕಾಲಕ್ಕೆ ಪ್ರಯೋಗದಲ್ಲಿ ತರುತ್ತ ಬಂದಿದ್ದಾರೆ. ಈ ಶಿಕ್ಷಣ ಕಲೆಯನ್ನಳವಡಿಸಿಕೊಂಡು ಶಾಸ್ತ್ರದಂತೆ ಆಚರಿಸಿ ತಮ್ಮ ಅನುಭವಜನ್ಯಜ್ಞಾನದ ಉಪಯೋಗವನ್ನು ಜನತೆಗೆ ನೀಡಿದ ಮಹನೀಯರನ್ನು ಸ್ಮರಿಸುವದು. ಎಲ್ಲಕ್ಕಿಂತ ಮೊದಲಿನ ಕೆಲಸ.

ಕಳೆದ ನೂರಾರು ವರ್ಷಗಳಿಂದ ಯುರೋಪ, ಅಮೇರಿಕಾ ದೇಶಗಳ ಶಿಕ್ಷಣಕಲಾವಿದರೂ ಶಿಕ್ಷಣಶಾಸ್ತ್ರವೇತ್ತರೂ ಆದ ರೂಸೊ, ಪೆಸ್ಟಾಲಜಿ, ಹೆರ್ಬಾರ್ಟ, ಫ್ರೊಬೆಲ್, ಸ್ಪೆನ್ಸರ ಮ್ಯಾಡ್ಯಾಮಮಾಂಟೇಸರಿ ಮುಂತಾದವರು ಶಿಕ್ಷಣಕ್ಷೇತ್ರದಲ್ಲಿ ಮಾಡಿದುಪಕಾರವನ್ನು ಎಷ್ಟು ಹೇಳಿದರೂ ಕಡಿಮೆಯೇಸರಿ. ಇವರೆಲ್ಲ ಶಿಕ್ಷಣಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿದರು. ಇದಕ್ಕಿಂತಲೂ ಕ್ರಾಂತಿಕಾರಿಯಾದ ವರ್ಧಾಯೋಜನೆಯು ಶಿಕ್ಷಣತಜ್ಞರಿಲ್ಲರ ಮನವನ್ನು ಸೆಳೆದಿದೆ. ಇದರ ಉತ್ಪಾದಕರು ಜಗದ್ವಂದ್ಯ ಮಹಾತ್ಮಾ ಗಾಂಧಿಯವರು. ಪ್ರಾಚೀನ ಭಾರತವು ಜ್ಞಾನದ ಖನಿಯಾಗಿದ್ದಂತೆ ಅರ್ವಾಚೀನ ಭಾರತವು ಸಹ ಮಹಾತ್ಮಾಜಿಯವರ ಅಮೌಲ್ಯ ಜ್ಞಾನದಿಂದ ಜಗದ ಕಣ್ಣಾಗಬೇಕಾಗಿದೆ. ಇಂಥ ಶಿಕ್ಷಣಪ್ರಸಾರಕ್ಕೆ ಸಾಧನಗಳು ಅತ್ಯವಶ್ಯ. ಶಿಕ್ಷಕನೇ ಇದಕ್ಕೊಂದು ದೊಡ್ಡ ಸಾಧನೆಯು. ಶಿಕ್ಷಕನಿಲ್ಲದಿದ್ದರೆ ಶಿಕ್ಷಣವಿಲ್ಲ. ಶಿಕ್ಷಣವಿಲ್ಲದಿದ್ದರೆ ಪ್ರಗತಿಯಿಲ್ಲ. ಪ್ರಗತಿಯಿಲ್ಲದಾದರೆ ಅವನತಿಯು ಅರಾಧ್ಯವಾಗುವದು. ಆದ್ದರಿಂದ ಶಿಕ್ಷಕನ ಅವಶ್ಯಕತೆ, ಅವನ ತರಬೇತಿ, ಈ ವಿಷಯವಾಗಿ ಚರ್ಚಿಸುವದು ಯೋಗ್ಯ.

ಕಾರ್ಯಸಿದ್ಧಿಗೆ ಸಾಧನಗಳು ಅತ್ಯವಶ್ಯ. ಹೀಗೆ ಹೇಳಿದೊಡನೆ ನಮ್ಮೆದುರು 'ಕ್ರಿಯಾಸಿದ್ಧಿಃ ಸತ್ವೇ, ಭವತಿಮಹತಾಂ ನೋಪಕರಣೆ' ಎಂಬ ವಾಕ್ಯವು ನಿಲ್ಲುವದು. ಹೀಗೆಂದಮಾತ್ರಕೆ ಸಾಧನೆಗಳ ಅವಶ್ಯಕತೆಯೇ ಇಲ್ಲವೆಂದು ಯಾರೂ ಗ್ರಹಿಸಕೂಡದು. ಈ ಮಾತು ಎಂಥವರಿಗೆ ಅನ್ವಯಿಸುವದೆಂಬದು 'ಮಹತಾಂ' ಎಂಬ ಶಬ್ದದಿಂದಲೇ ವ್ಯಕ್ತವಾಗುವದು. ಇದನ್ನು ದೃಷ್ಟಾಂತದಿಂದ ಮನಗಾಣಬಹುದು. ಸಿದ್ಧಪುರುಷರು ಎರಡು ಬಗೆಯವರು. ಸಹೆಜಸಿದ್ಧ ಪುರುಷರು. ಹಾಗೂ ಸಾಧನೆಗೈದು ಸಿದ್ಧಿಯನ್ನೈದುವ ಸಿದ್ಧಪುರುಷರು. ಮೊದಲನೆಯ ವರ್ಗದ ಸಿದ್ಧಪುರುಷರು ದೊರೆಯುವದು ಅತಿವಿರಳ. ಎರಡನೆಯವರ್ಗದ ಸಿದ್ಧಪುರುಷರು ದೊರೆಯವರು. ಇದೇ ಮಾತನ್ನು ಕಲೆಗೂ ಅನ್ವಯಿಸಬಹುದು. ಸಹೆಜ ಕಲಾವಿದ ಸಾಧ ನಾಂತ್ಯದಿಂದ ಕಲೆಯನ್ನು ಗಳಿಸಿದ ಶಿಲ್ಪಿ. ಸಹೆಜಕಲಾವಿದರು ಅಪರೂಪ. ಕಲಾಗಾರರು ವಿಶೇಷ.

ಉದಾರಣೆಗೆ ವಿಶ್ವಕವಿ ರವೀಂದ್ರರನ್ನೇ ತೆಗೆದುಕೊಳ್ಳರಿ. ಅವರಂತಹ ಜನ ಸಿಗುವ ದೆಷ್ಟು? ಕೈಬೆರಳಿನ ಮೇಲೆ ಎಣಿಸುವಷ್ಟು? ಇದೂ ಸಂಶಯ. ಅವರು ಯಾವ ಪದವೀ ಧರರೂ ಅಲ್ಲ. ಮ್ಯಾಟ್ರಿಕ್ ಪರೀಕ್ಷೆಸಹ ಪಾಸಾಗಿಲ್ಲ. ಅಂತಹೆರು ವಿಶ್ವಕವಿಗಳಾಗಿ ಜಗ ತ್ತಿನ ಕಣ್ಣಾಗಿದ್ದಾರೆ. ಆದ್ದರಿಂದ ಸಾಧನಾಬಲದಿಂದ ಶಿಕ್ಷಣಕಲೆಯನ್ನು ಶಿಕ್ಷಕರಲ್ಲಿ ಬೇರೂರಿಸ ಬಹುದು. ಆದರೆ ಅವನನ್ನು ಕಲಾಗಾರನನ್ನಾಗಿ ಮಾಡಬಹುದೇ ಹೊರತು ಕಲಾವಿದನನ್ನು ಮಾಡುವದು ಅಸಂಭವ. ಇನ್ನು ಕೆಲವರು (Born teachers) ಸಹೆಜ ಶಿಕ್ಷಕರಾಗಿಯೇ ಇರುವರು. ಅವರು ಸ್ವಲ್ಪ ಸಾಧನೆಯಿಂದಲೇ ಬೆಳಕಿಗೆ ಬರುತ್ತಾರೆ. ಅವರೂ ಸಹ ಸಾಧನೆ ಮಾಡುವದು ಅವಶ್ಯ. ಎರಡನೇ ವರ್ಗದ ಶಿಕ್ಷಕರು ಸಾಧನಾಬಲದಿಂದ ಮುಂದರಿಯುವರು. ಇವರೇ ವಿಶೇಷ. ಆದ್ದರಿಂದ ಇಂಗ್ಲೀಷಿನಲ್ಲೊಂದು ಗಾದೆಯಿದೆ. '' ಅನುಭವವು ಜ್ಞಾನದ ತಾಯಿಯು. '' ಇದರಂತೆ ಶಿಕ್ಷಕರು ಸಾಧನೆಯಿಂದ ತಮ್ಮ ಕಲೆಯನ್ನು ವರ್ಧಿಸಿಕೊಳ್ಳಬೇಕು.

ಈ ಸಾಧನೆಗೆ ಮಾರ್ಗದರ್ಶಿಯು ಬೇಕೇಬೇಕು. ಯಾವದೊಂದು ಉದ್ಯೋಗವು ಸರಿಯಾದ ಮಾರ್ಗದರ್ಶಿತ್ವವಿಲ್ಲದಿದ್ದರೆ ಬೆಳವಣಿಗೆ ಹೊಂದಲಾರದು. ಆದ್ದರಿಂದ ಉದ್ಯೋಗದಲ್ಲಿ ನಿಷ್ಣಾತನಿದ್ದ ಅನುಭವಿಕ ಮಾರ್ಗದರ್ಶಿಯ ಬಳಿಯಲ್ಲಿ ಕೆಲವು ದಿನ ಉಮೇದವಾರಿಕೆಯನ್ನು ಮಾಡಬೇಕಾಗುತ್ತದೆ. ಕಾಲೇಜದಿಂದ ತರಬೇತಿ ಹೊಂದಿ ಬಂದೊಡನೆ ಆ ಶಿಕ್ಷಕನು ಒಳ್ಳೇ ಶಿಕ್ಷಕನೆನಿಸನು. ಅವನು ಕೆಲವು ದಿವಸ ಸ್ವತಃ ದುಡಿದು ಅನುಭವಿಕ ಹಾಗೂ ಜಾಣ ಶಿಕ್ಷಕನ ಮಾರ್ಗದರ್ಶಿತ್ವದಲ್ಲಿದ್ದರೆ ಆದರ್ಶ ಶಿಕ್ಷಕನಾಗಬಹುದು. ಎಂಜಿನಿಯರ ಹಾಗೂ ಡಾಕ್ಟರರ ಮಾತನ್ನೇ ತೆಗೆದುಕೊಳ್ಳಿರಿ ಇಲ್ಲವೆ, ಹೆಳ್ಳಿಗಳ ಉದ್ಯೋಗಗಳ ಮಾತನ್ನೇ ಗಮನಿಸಿರಿ. ಪರೀಕ್ಷೆಯಲ್ಲಿ ತೇರ್ಗಡೆಯಾದ ಎಂಜಿನಿಯರನು ಅನುಭವಿಕ ಎಂಜಿನಿಯರನೊಬ್ಬನ ಹತ್ತಿರ ಕೆಲವು ದಿನ ತನ್ನ ಉದ್ಯೋಗದ ಮಾಹಿತಿಯನ್ನು ಪಡೆಯಬೇಕಾಗುವದು. ಎಮ್. ಬಿ. ಬಿ. ಎಸ್‌ದಲ್ಲಿ ಉತ್ತೀರ್ಣನಾದ ಡಾಕ್ಟರನು ರೋಗಿಯನ್ನು ಚನ್ನಾಗಿ ಕೂಡಲೇ ಗುಣಪಡಿಸಲಾರನು. ಅವನು ಅನುಭವಿಕ ಡಾಕ್ಟರನ ಸಲಹೆಯನ್ನು ಕೆಲವು ದಿನ ಪಡೆಯಲೇಬೇಕಾಗುತ್ತದೆ. ಇದರಿಂದ ಮನುಷ್ಯನಿಗೆ ಪ್ರಾಯೋಗಿಕ ಜ್ಞಾನದ ಅವಶ್ಯಕತೆಯೆಷ್ಟಿದೆಯೆಂಬದು ಗೊತ್ತಾಗುವದು. ಹೆಳ್ಳಿಯ ಪರಂಪರಾಗತ ಉದ್ಯೋಗಗಳನ್ನು ಅಂದರೆ ಬಡಿಗತನ, ಕಮ್ಮಾರಿಕೆ, ಒಕ್ಕಲುತನ ಮುಂತಾದವುಗಳನ್ನು ಕಲಿಯಬೇಕಾದರೆ ಕೆಲವು ದಿನ ಪ್ರತ್ಯಕ್ಷ ಪ್ರಯೋಗದಿಂದ ಅದರ ಜ್ಞಾನ ಸಂಪಾದಿಸಬೇಕಾಗುತ್ತದೆ. ಇಂಗ್ಲೀಷದಲ್ಲಿ ಇಂಥಕ್ಕೆ 'ಪ್ರ್ಯಾಕ್ಟಿಕಲ್ ನಾಲೇಜ್' ಎಂದು ಕರೆಯುವರು. ಶಿಕ್ಷಕನು ಈ ಪ್ರಾಯೋಗಿಕ ಜ್ಞಾನದ ಸಂಪಾದನೆಯ ಕಲೆಯನ್ನು ಒಳ್ಳೇ ಅನುಭವಿಕ, ನುರಿತ, ಶಾಸ್ತ್ರೋಕ್ತ ಶಿಕ್ಷಕನಿಂದ ಸಂಪಾದಿಸುವ ಸಾಧನೆಯನ್ನು ಮಾಡಬೇಕು. ಹೀಗೆಂದಮಾತ್ರಕ್ಕೆ ಅವರನ್ನೇ ಅವಲಂಬಿಸಿ ಕೆಲಸಮಾಡಬೇಕೆಂದಲ್ಲ. ಸ್ವತಃ ಪ್ರಯೋಗದಲ್ಲಿ ಧುಮುಕಿ ಬಂದ ಅಡಚಣೆಗಳನ್ನು ನಿವಾರಿಸಿಕೊಳ್ಳಲಿಕ್ಕೆ ಶಿಕ್ಷಣ ಶಾಸ್ತ್ರಜ್ಞರ ಸಲಹೆ ಪಡೆಯಬೇಕು. ಈ ರೀತಿಯಾಗಿ ಶಿಕ್ಷಣ ಕಲೆಯನ್ನು ಶಾಸ್ತ್ರೋಕ್ತವಾಗಿ ಪ್ರಾಯೋಗಿಕ ಜ್ಞಾನದಿಂದ ಪಡೆಯುವದು ಯೋಗ್ಯವಾದ ಮಾರ್ಗ. ಇದನ್ನು ಎಲ್ಲ ಶಿಕ್ಷಣಜ್ಞರೂ ಒಪ್ಪುತ್ತಾರೆ. ವರ್ಧಾಯೋಜನೆಯು ಶಿಕ್ಷಣ ಶಾಸ್ತ್ರವನ್ನು ಸಮಾಧಾನಗೊಳಿಸಿ ಜೀವನೋಪಯೋಗಿಯಾದ ಕಲೆಯನ್ನು ಬೇರೂರಿಸುತ್ತದೆ. ಇಂಥ ಕಲೆಯನ್ನು ಸಂಪಾದಿಸಿದ ಶಿಕ್ಷಕನೇ ದೇಶದ ಮುಂದಾಳುಗಳನ್ನು ತಯಾರಿಸುವನು. ಅವನಿಂದ ತರಬೇತಾದ ಮುಂದಿನ ಪೀಳಿಗೆಯ ಭವಿಷ್ಯ ಉಜ್ವಲವಾಗುವದು. ಈ ರೀತಿ ರಾಷ್ಟ್ರನಿರ್ಮಾಣಕಾರ್ಯದಲ್ಲಿ ಪ್ರಮುಖ ಸ್ಥಾನಗಳಿಸಿದ ಶಿಕ್ಷಕನ ಗೌರವವು ಆಗ ತಾನೇ ಹೆಚ್ಚುವದು. ಈ ಗೌರವವು ಅವನಲ್ಲಿದ್ದ ಕಾರ್ಯಕ್ಷಮತೆಯಿಂದ ದೊರೆಯುವದು. ಕಾರ್ಯಕ್ಷಮತೆಯು ಅವನ ತರಬೇತಿಯನ್ನವಲಂಬಿಸಿದೆ. ಆದರೆ ಸಂಪೂರ್ಣವಾಗಿ ಮಾತ್ರ ಅಲ್ಲ, ಕೆಲವೊಂದು ದೃಷ್ಟಿಯಿಂದ ಇರುವದು. ಕೇವಲ ತರಬೇತಿಯ ಮೇಲೆ ದೋಷವಿಡದಲೇ ಶಿಕ್ಷಕನು ತನ್ನ ಕಾರ್ಯಕ್ಷೇತ್ರವನ್ನು ಫಲವತ್ತಾಗಿ ಮಾಡಬಲ್ಲನು.

ಇದೇ ತತ್ವವನ್ನು ಅನುಸರಿಸಿಯೇ ವರ್ಧಾಯೋಜನೆಯು ಜನ್ಮತಳೆದಿದೆ. ಶಿಕ್ಷಕನು ಈ ಶಿಕ್ಷಣಕ್ಷೇತ್ರದ ತೋಟಗಾರ. ತನ್ನ ನಿತ್ಯದ ಪ್ರಯೋಗಗಳನ್ನೇ ಸಾಧನವನ್ನಾಗಿಟ್ಟುಕೊಂಡು ಕ್ಷೇತ್ರವನ್ನು ಉತ್ತಿ ಬಿತ್ತುತ್ತಾನೆ. ಇದರೊಂದಿಗೆ ಶಿಕ್ಷಕನು ಕಾರ್ಯಮಾಡತಕ್ಕ ಸರಿಯಾದ ಜ್ಞಾನವನ್ನೂ ಅನುಭವಜ್ಞಾನವನ್ನೂ ಸಂಪಾದಿಸುತ್ತಾನೆ. ಆನಂತರ ಅವನು ವರ್ಧಾಶಿಕ್ಷಕನು ಶಾಸ್ತ್ರದ ಮಹತ್ವವನ್ನು ತಿಳಿದುಕೊಂಡು ಅದರಂತೆ ಆಚರಿಸಲು ತೊಡಗುವನು. ಆಗ ಅವನಿಗೆ ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಹೇಳಿದ 'ತಸ್ಮಾತ್ ಶಾಸ್ತ್ರಂ ಪ್ರಮಾಣಂತೆ ಕಾರ್ಯಾಕಾರ್ಯವ್ಯವಸ್ಥಿತೌ' ಎಂಬ ಮಾತಿನ ಮರ್ಮವು ಹೊಳೆಯುವದು.

ಶಾಸ್ತ್ರೋಕ್ತವಾಗಿ ಆಚರಿಸಿ ತನ್ನ ಗುರಿಯನ್ನು ಮುಟ್ಟಿದಾಗ ಅವನಿಗೆ ಆನಂದವಾಗುವದು. ಒಂದು ವೇಳೆ ಗುರಿಯು ನೆರವೇರದಿದ್ದಾಗ ತನ್ನ ಕಾರ್ಯಗಳತ್ತ ನೋಡತೊಡಗುವನು. ಆಗ ಅವನಿಗೆ ತಾನು ಮಾಡತಕ್ಕಂತೆ ಮಾಡಲಿಲ್ಲ, ಕಾರಣ ಮುಂದೆ ದೋಷವಾಗದಂತೆ ಕೆಲಸಮಾಡಿ ಸಿದ್ಧಿಯನ್ನು ಪಡೆಯಲು ಹೆಣಗಬೇಕು, ಎಂದು ಅನಿಸುವದು. ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಶಾಸ್ತ್ರದ ಮಹತ್ವವನ್ನು ಈ ರೀತಿಯಾಗಿ ಉಪದೇಶಿಸಿದ್ದಾನೆ. "ಯಾರು ಶಾಸ್ತ್ರವನ್ನುಲ್ಲಂಘಿಸಿ ಕಾರ್ಯಮಾಡುವರೋ ಅವರಿಗೆ ಸಿದ್ಧಿಯು ದೊರೆಯುವದಿಲ್ಲ. ಇಷ್ಟೇ ಅಲ್ಲ. ಸುಖವೂ ಸಿಗಲಾರದು. ಇಲ್ಲಿ ಮತ್ತೆ ಶಾಸ್ತ್ರದ ವಿಷಯ ಸ್ವಲ್ಪ ಚರ್ಚಿಸುವದು ಯೋಗ್ಯವೆನಿಸುತ್ತದೆ ಮತ್ತು ಶಾಸ್ತ್ರದಿಂದ ಕಲೆಯು ಸಿದ್ಧಿಸುವದೋ ಎಂಬ ಪ್ರಶ್ನೆಯೂ ಬರುತ್ತದೆ. ಶಾಸ್ತ್ರವೆಂದರೆ ಕಾರ್ಯಾಕಾರ್ಯಗಳನ್ನು ಮಾಡತಕ್ಕ ವಿಧಾನ. ಕಲೆಯು ಶಾಸ್ತ್ರದಿಂದ ಪೋಷಿತವಾಗುವದು. ಕಲೆಯು ಸಸ್ಯವಾದರೆ ಶಾಸ್ತ್ರವು ಜಲ. ಶಾಸ್ತ್ರಜಲ ದೊರೆಯದಿದ್ದರೆ ಕಲಾಸಸ್ಯ ಒಣಗುವದು. ಹಾಗಾದರೆ ಶಿಕ್ಷಕನಿಗೆ ಶಿಕ್ಷಣಶಾಸ್ತ್ರದ ಜ್ಞಾನದ ಅವಶ್ಯಕತೆಯನ್ನು ಪರ್ಯಾಲೋಚಿಸುವದು ಯುಕ್ತ.

ಶಿಕ್ಷಕನ ಮುಖ್ಯ ಕೆಲಸ ಕಲಿಸುವದು. ಅಂದರೆ ಅಧ್ಯಾಪನವು. ಈ ಅಧ್ಯಾಪನ ಕಲೆಯೋ ಶಾಸ್ತ್ರವೋ ಎಂಬದನ್ನು ತಿಳಿದುಕೊಳ್ಳಬೇಕು. ಇದು ಕಲೆಯೂ ಹೌದು, ಶಾಸ್ತ್ರವೂ ಹೌದು. ಕಲೆಯು ಜನ್ಮಜಾತ ವರದಾನವು. ಇದರ ವಿಕಾಸವು ಅಭ್ಯಾಸದಿಂದ ಆಗುತ್ತದೆ. ಸಂಗೀತ ಕಲೆಯು ತಾಳಸ್ವರಗಳ ಅಭ್ಯಾಸ ಮಾಡದೆ ವಿಕಸಿತವಾಗದು. ಆದ್ದರಿಂದ ಶಿಕ್ಷಕನು ಅಧ್ಯಾಪನ ಕಲೆಯನ್ನು ಸಂಪಾದಿಸಬೇಕಾದರೆ ಅವನಿಗೆ ಶಾಸ್ತ್ರದ ಸಹಾಯವು ಬೇಕೇ ಬೇಕು. ಅಧ್ಯಾಪನ ಕಾರ್ಯದಲ್ಲಿ ಶಿಕ್ಷಕನ ಕಾರ್ಯವೇನೂ ಅಷ್ಟು ದೊಡ್ಡದಲ್ಲ. ತಾನುಯಾರಿಗೆ ಓದಿಸುತ್ತಾನೆ? ಏನನ್ನು ಓದಿಸುತ್ತಾನೆ? ಯಾಕೆ ಓದಿಸುತ್ತಾನೆ. ಎಷ್ಟು ಓದಿಸಬೇಕಾಗಿದೆ? ಯಾವಾಗ ಓದಿಸಬೇಕು? ಮತ್ತು ಹೇಗೆ ಓದಿಸಬೇಕು? ಈ ಮುಂತಾದ ಸಂಗತಿಗಳನ್ನು ಮನದಲ್ಲಿ ವಿಚಾರಿಸುತ್ತ ಅಧ್ಯಾಪಕನು ಕಾರ್ಯವೆಸಗಿದರೆ ಶಿಕ್ಷಣಕಲೆಯನ್ನು ಶಾಸ್ತ್ರದೊಂದಿಗೆ ಸಂಪಾದಿಸಬಹುದು. ಈ ಎಲ್ಲ ಸಂಗತಿಗಳನ್ನು ಪ್ರಯೋಗಶಾಲೆಯಲ್ಲಿದ್ದ ವರ್ಧಾಶಿಕ್ಷಕನು ಗಳಿಸುವಂತೆ ವರ್ಧಾಯೋಜನೆಯಿದೆ. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕನೂ ಶಿಕ್ಷಣಕಲೆಯನ್ನು ಶಾಸ್ತ್ರದೊಂದಿಗೆ ಸಂಪಾದಿಸಿ ರಾಷ್ಟ್ರದ ಪುನರ್ರಚನೆಯ ಕಾರ್ಯದಲ್ಲಿ ತನ್ನ ಕೌಶಲ್ಯವನ್ನು ತೋರಲೆಂದು ಹಾರೈಕೆ.

ಇತಿಹಾಸ ಸಾಠದ ಟಿಪ್ಪಣಿ

ಶ್ರೀ. ಆರ್. ಕೆ. ಲಕ್ಕುಂಡಿ

ಇಯತ್ತೆ:— ೭

ವಿಷಯ:— ಹಿಂದುಸ್ತಾನದ ಇತಿಹಾಸ

ಉದ್ದೇಶ:— ಹಿಂದುಸ್ತಾನದ ಇತಿಹಾಸದಲ್ಲಿ, ಪೇಶವೆ ಬಾಜೀರಾಯನ ಐತಿಹಾಸಿಕ ಮಹತ್ವವನ್ನು ಗುರುತಿಸಲು ವಿದ್ಯಾರ್ಥಿಗಳಿಗೆ ನೆರವಾಗುವದು.

ಪೂರ್ವಜ್ಞಾನ:— ಪೇಶವೆ ಬಾಳಾಜಿ ವಿಶ್ವನಾಥನ ಕಾಲಕಿರ್ದಿಯಲ್ಲಿಯ ಕೆಲವು ಮುಖ್ಯ ಸಂಗತಿಗಳನ್ನು ಕುರಿತು

ಉಪಕರಣಗಳು :— ೧. ವಂಶವೃಕ್ಷ (ಬಾಳಾಜಿವಿಶ್ವನಾಥ, ಬಾಜೀರಾಯ ಮತ್ತು ಚಿಮಾಜಿ ಇವರ ಸಂಬಂಧವನ್ನು ಸೂಚಿಸುವ—)
೨. ಬಾಜೀರಾಯ (ಕುದುರೆಯ ಸವಾರಿಯಲ್ಲಿರುವ—)
೩. ಬಾಜೀರಾಯ (ತನ್ನ ಸಹಾಯಕರಾದ ಮರಾಠಾ ಸರದಾರರ ಮಧ್ಯದಲ್ಲಿ—
೪. ಬಾಜೀರಾಯನ ಮುಖ್ಯ ವೈರಿಗಳು (ಹಿಂದುಸ್ಥಾನ ನಕಾಶೆಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಸೂಚಿಸಲ್ಪಟ್ಟಿರುವ—)
೫. ಬಾಜೀರಾಯ, ಮತ್ತು ಶ್ರೀಪತರಾವ-ಪಂತ ಪ್ರತಿನಿಧಿ-(ಶಾಹೂನ ದರಬಾರದಲ್ಲಿ—)
೬. ಬಾಜೀರಾಯ ಮತ್ತು ಪಂತಪ್ರತಿನಿಧಿ (ಶಾಹೂನ ಎದುರಿನಲ್ಲಿ ತಮ್ಮ ತಮ್ಮ ಭೋರಣೆಯನ್ನು ವ್ಯಕ್ತಪಡಿಸುತ್ತಿರುವ—)
೭. ಹಿಂದುಸ್ತಾನದ ನಕಾಶ (ಬಾಜೀರಾಯನ ಯುದ್ಧಭೂಮಿಗಳನ್ನು ಸೂಚಿಸುವ—)
೮. ಬಾಜೀರಾಯನಿಂದ ಜರುಗಿದ ಮಹತ್ಕಾರ್ಯಗಳ ಪಟ್ಟಿ (ಬಾಲಕರಿಗೆ ಹೆಂಚುವದರ ಸಲುವಾಗಿ—)
೯. ಕಾಲರೇಖೆ (ಬಾಜೀರಾಯನ ಪೇಶವೆಪದದಲ್ಲಿಯ ಐತಿಹಾಸಿಕ ಘಟನೆಗಳನ್ನು ಕುರಿತು—)

ವೇಳೆ:— ೫೦ ನಿಮಿಷಗಳು. (ದಿನಾಂಕ ೨೧-೭-೧೯೪೭)

[ಮುಂದೆ ಸಾಗಿದೆ.

ಮೆಟ್ಟುಗಳು	ವಿಷಯ	ವಿಧಾನ
೧. ಪೂರ್ವಸಿದ್ಧತೆ	**ಹಳೆಯ ವಿಷಯ**– ಮೊದಲನೆಯ ಪೇಶವೆ, ಬಾಳಾಜಿ ವಿಶ್ವನಾಥ ಬಾಳಾಜಿ, ಸೇನಾಪತಿ ಬಾಳಾಜಿ ಪೇಶವೆ ಬಾಳಾಜಿಯ ಮಹತ್ವದ ಕಾರ್ಯಗಳು ಬಾಳಾಜಿಯ ಮರಣ ೧೭೨೦ರಲ್ಲಿ.	**ಉಜಳಣಿಯ ಪ್ರಶ್ನೆಗಳು :—** ೧) ಬಾಳಾಜಿಯು ಶಾಹೂನ ಸೇನಾಪತಿ ಆದುದು ಹೇಗೆ ? ೨) ಮುಂದೆ, ಅವನಿಗೆ ಪೇಶವೆಪದವು ಹೇಗೆ ದೊರೆಯಿತು ? ೩) ಪೇಶವೆಯಾದಬಳಿಕ, ಮರಾಠಾರಾಜ್ಯದ ಬೆಳೆವಣಿಗೆಗಾಗಿ ಅವನು ಮಾಡಿದ ಮಹತ್ವದ ಕಾರ್ಯಗಳು ಯಾವವು ? ೪) ಬಾಳಾಜಿಯು ಯಾವ ವರ್ಷ ಮರಣ ಹೊಂದಿದನು ?
ಉದ್ದೇಶ ಕಥನ	ಈ ದಿನ ನಾವು ಬಾಳಾಜಿಯು ಮರಣದ ನಂತರ ಮುಂದಿನ ೨೦ ವರ್ಷಗಳ ಅವಧಿಯಲ್ಲಿ ಮರಾಠಾ ರಾಜ್ಯವ್ಯವಸ್ಥೆಯಲ್ಲಿ ಅತ್ಯಂತ ಪ್ರಸಿದ್ಧ ಪೇಶವೆ ಆಗಿಹೋದ. ಅವನ ಬಗ್ಗೆ ತುಸುಮಟ್ಟಿಗೆ ತಿಳಿದುಕೊಳ್ಳುವಾ:–	
೨. ವಿಷಯವಿವೇಚನೆ	**ಹೊಸ ವಿಷಯ :–** ೧೭೨೦ರಿಂದ ೧೭೪೦ರ ವರೆಗೆ ೧) **ಈ ಅವಧಿಯಲ್ಲಿ ಪೇಶವೆಯು ಬಾಜೀರಾಯನು.** ಬಾಳಾಜಿ ವಿಶ್ವನಾಥ ಬಾಜೀ ಚಿಮಾಜಿ	ಹೇಳುವದು. **ಉಪಕರಣ:–೧** ಪ್ರ:–ಬಾಜೀರಾಯನು ಬಾಳಾಜಿಗೆ ಹೇಗೆ ಸಂಬಂಧಿಸಿದ್ದನು ? ,, –(ಬಾಜೀರಾಯನ ತಮ್ಮನು ಯಾರು ?)

ಮೆಟ್ಟುಗಳು	ವಿಷಯ	ವಿಧಾನ
	ಜನ್ಮ—ಗರ್ಲಗರಲ್ಲಿ— ಪೇಶವೆಯಾದಾಗ ೨೨ ವರ್ಷದವ	ಹೇಳವದು. ಪ್ರ:– ಪೇಶವೆಪದ ದೊರೆತಾಗ, ಅವನು ಎಷ್ಟು ವಯಸ್ಸಿನವ ?
	೨) **ಬಾಜೀರಾಯನಿಗೆ ಪೇಶವೆಪದ ದೊರೆಯಲು ಕಾರಣಗಳು:–** ೧. ಆಗಿಹೋದ ಪೇಶವೆಯ ಹಿರಿಯಮಗ.	ಪ್ರ:–ಇವನು ಇವನ ಮುಂಚಿನ ಪೇಶವೆಯ ಎಷ್ಟನೆಯ ಮಗ ?
	೨. ಶಾಹೂನಿಗೆ, ಬಾಳಾಜಿಯು ಮರಾಠಾ ರಾಜ್ಯದ ಬೆಳವಣಿಗೆಗಾಗಿ ಮಾಡಿದ ಸಾಹಸದ ನೆನಪು.	,,—ಇವನ ತಂದೆಯು ಮರಾಠಾರಾಜ್ಯದ ಬೆಳವಣಿಗೆ ಏನು ಮಾಡಿದ್ದನು ?
	೩. ಚಿಕ್ಕವನಿರುವಾಗಲೆ, ಬಾಜೀರಾಯನಿಗೆ ರಾಜಕಾರ್ಯ–ರಣರಂಗಗಳ ಪರಿಚಯ. –ತಂದೆಯ ಸಹವಾಸದಲ್ಲಿ.	ಹೇಳುವದು ಪ್ರ:–ಇದು ಬಾಜೀರಾಯನಿಗೆ ಯಾರಿಂದ ಸಿಕ್ಕಿರಬಹುದು ?
	೪. ಇತರ ವಿಧದ ಯೋಗ್ಯತೆಗಳು :– (ಅ) ಎತ್ತರವಾದ ಮೈಕಟ್ಟು; ತಿಳಿಬಿಳಿಯಾದ ಮೈಬಣ್ಣ; ಚೆಲುವಾದ ಚಹರೆ.	**ಉಪಕರಣ :–೨ (ಅ)** ಪ್ರ:–ಈಚಿತ್ರದ ಸಹಾಯದಿಂದ, ಬಾಜೀರಾಯನ ಮೈಕಟ್ಟು, ಮೈಬಣ್ಣ ಮತ್ತು ಚಹರೆಗಳನ್ನು ಕುರಿತು ನೀವು ಏನುಹೇಳಬಲ್ಲಿರಿ ?
	(ನಿಜಾಮನ ಅಂತಃಪುರದ ಮಹಿಳೆಯರು ಬಾಜೀರಾಯನನ್ನು ಒಮ್ಮೆಯಾದರೂ ನೋಡಬೇಕೆಂದುಬಯಕೆ)	ಹೇಳುವದು
	(ಬ) ಧಿಟ್ಟಸವಾರ; ಚತುರ ಬರ್ಚಿಗಾರ; ನುರಿತಕತ್ತಿಯ ಬಂಟ	ಪ್ರ:–ಇವನ ಕುದುರೆಯ ಸವಾರಿ ಶೈಲಿಯನ್ನು ನಿರೀಕ್ಷಿಸಿ, ಇವನು ಎಂಥ ಶೂರನೆಂದು ಹೇಳಿರಿ.

ನೆಟ್ಟಿಗಳು	ವಿಷಯ	ವಿಧಾನ
		ಇವನ ವೈಯುಲ್ಲಯ ಆಯುಧ ಯಾವದು ? ಇವನ ನಡ (ಟೊಂಕ) ದಿಂದ ಯಾವ ಆಯುದ ಇಳಿಬಿದ್ದಿರುವದು ಕಂಡುಬರುವದು ? ಇದ್ದರಿಂದ, ಇವನು ಎಂಥ ಬರ್ಜಿಗಾರ, ಕತ್ತಿಯು ಬಂಟನೆಂದು ಹೇಳುವಿರಿ ?
	(ಕ) ಸಾದಾ ಉಡುಗೆ ತೊಡುಗೆ; ಬಡತರದ (ಮಿತ) ಆಹಾರ.	**ಉಪಕರಣ :– ೨ (ಬ)** ಪ್ರ:–ಈ ಚಿತ್ರನೋಡಿ, ಇವನ ಉಡುಗೆ ತೊಡುಗೆ ಗಳನ್ನು ಕುರಿತು ಹೇಳಿರಿ; ಈಗ ಏನು ಮಾಡುತ್ತಿರುವನು ?
	(ಇವನ ಇಂಥ ಚಿತ್ರವನ್ನು ನೋಡಿ, ಮಹೆಮ್ಮದ ಶಹನು ತೆಗೆಸಿದ ಉದ್ದಾರ)	ಹೇಳುವದು.
	೩) **ಬಾಜೀರಾಯನ ಕಾಲದ (ಹಿಂದುಸ್ಥಾನದಲ್ಲಿಯ) ರಾಜಕೀಯ ಪರಿಸ್ಥಿತಿ** :–	**ಉಪಕರಣ:– ೩**
	(ಅ) ಬಾಜೀರಾಯನ ಸಹಾಯಕರು –ಮುಖ್ಯ ಮರಾಠಾ ಸರದಾರರು :– ೧ ರಾಣೋಜಿ ಸಿಂದೆ ೨. ಮಲ್ಹಾರರಾವ ಹೋಳಕರ. ೩ ಉದಾಜಿ ಪವಾರ. ೪. ದಾವಾಜಿ ಗಾಯಕವಾಡ	ಪ್ರ:–ಈಚಿತ್ರಗಳ ಸಹಾಯದಿಂದ, ಬಾಜೀರಾಯನಿಗೆ ನೆರವಾಗಲು, ಮುಖ್ಯ ಮರಾಠಾ ಸರದಾರರು ಯಾರು ಯಾರು ಇದ್ದರು ?
	(ಬ) ಬಾಜೀರಾಯನ (ಮರಾಠಾ ರಾಜ್ಯದ) ಮುಖ್ಯ ವೈರಿಗಳು – ೧. ನಿಜಾಮು–ಉಲ್–ಮುಲ್ಕ (ಹೈದರಾಬಾದದಲ್ಲಿ) ೨. ಮಹೆಮ್ಮದ ಶಹ (ದಿಲ್ಲಿಯಲ್ಲಿ)	**ಉಪಕರಣ:– ೪** ಪ್ರ:–(ಈ-ಹಿಂದುಸ್ಥಾನದ ನಕಾಶದಲ್ಲಿಯ **ಚಿತ್ರಗಳ** ಸಹಾಯದಿಂದ,) **ಬಾಜೀರಾಯನ ಮುಖ್ಯ**

ಮೆಟ್ಟುಗಳು	ವಿಷಯ	ವಿಧಾನ
	೩. ಸಿದ್ದೀಜನರು (ಕೊಂಕಣದಲ್ಲಿ) ೪. ಪೋರ್ತುಗೀಸರು ( ) ೫ ಮಾಳವೆಯ ರಾಜಾಗಿರಿಧರ ಬಹಾದ್ದೂರ.	ವೈರಿಗಳು ಯಾರು ಯಾರು ಇದ್ದರು? ಅವರು ಪ್ರತ್ಯೇಕವಾಗಿ ಹಿಂದುಸ್ಥಾನದ ಯಾವ ಯಾವ ಭಾಗದಲ್ಲಿ ಇದ್ದರು?
ವಿಷಯವಿವೇಚನೆ (ಮುಂದೆಸಾಗಿದ್ದು)	೪) **ಬಾಜೀರಾಯನ ಹಿರಿಯಾಶೆ :-** ಮರಾಠಾ ರಾಜ್ಯದ ಬೆಳವಣಿಗೆ ಸ್ವರಾಜ್ಯವನ್ನು ಸಾಮ್ರಾಜ್ಯವನ್ನಾಗಿ ಮಾಡುವದು.	ಹೇಳುವದು. ಪ್ರ:-ಇದಕ್ಕಾಗಿ, ಯಾರ ಯಾರೊಂದಿಗೆ ಕಾದಬೇಕಾಗುತ್ತಿತ್ತು?
	೫) **ಧೋರಣೆ :-** ದಖ್ಖನದ ಇಕ್ಕಟ್ಟಾದ ಮೇರೆಗಳನ್ನು ಬಿಟ್ಟುಕೊಟ್ಟು ನೇರವಾಗಿ ಪೊಗಲ ಸಾಮ್ರಾಜ್ಯದ ತೀರ ಮಧ್ಯಪ್ರದೇಶದಲ್ಲಿ (ಉತ್ತರ ಹಿಂದುಸ್ಥಾನದಲ್ಲಿ) ಮರಾಠಾ ಸೈನ್ಯಗಳನ್ನು ಒಳನುಗ್ಗಿಸುವದು. ಇದರ ಬಗ್ಗೆ ಶಾಹೂನ ದರಬಾರದಲ್ಲಿ ಚರ್ಚೆ. ಶಾಹೂ, ಬಾಜೀರಾಯ, ಶ್ರೀಪತರಾವ ಪಂತಪ್ರತಿನಿಧಿ ಬಾಜಿರಾಯನೂ, ಪಂತಪ್ರತಿನಿಧಿಯೂ ತಮ್ಮ ತಮ್ಮ ಧೋರಣೆಯನ್ನು ಶಾಹೂನ ಎದುರಿನಲ್ಲಿ ನಿದರ್ಶಿಸಿದರು.	ಪ್ರ:-ಹೀಗೆ ಮಾಡಲು, ಮರಾಠಾ ಸೈನಿಕರು ಮುಖ್ಯವಾಗಿ ಹಿಂದುಸ್ಥಾನದ ಯಾವ ಭಾಗದಲ್ಲಿ ದಾಳಿಗಳನ್ನು ಮಾಡಬೇಕಾಗುತ್ತಿತ್ತು? **ಉಪಕರಣ :- ೫** **ಉಪಕರಣ :- ೬**
	ನಂತರ ಬಾಜೀರಾಯನಿಂದ ಜರುಗಿದ ಮಹತ್ವದ ಕಾರ್ಯಗಳು.	**ಉಪಕರಣ :- ೭ ಮತ್ತು ೮.**

ಮೆಟ್ಟುಗಳು	ವಿಷಯ	ವಿಧಾನ
	೬) **ಬಾಜೀರಾಯನ ಮರಣ :-** ರಾವೇರಹಲ್ಲಿ; ೧೭೪೦ ರಲ್ಲಿ.	ಹೇಳುವದು. ಪ್ರ:-ರಾವೇರವನ್ನು ನಕಾಶದಲ್ಲಿ ತೋರಿಸಿರಿ.
೩. ಪುನರವಲೋಕನ	**ಎರಡನೆಯ ಪೇಶವೆ :-** ಬಾಜೀರಾಯ, ೧೭೨೦-೪೦	೧. ಬಾಜೀರಾಯನು ಎಲ್ಲಿಂದ ಎಲ್ಲಿಯವರೆಗೆ ಪೇಶವೆ ಆಗಿಹೋದನು ?
	ಪೇಶವೆಪದ ದೊರೆತ ಕಾರಣಗಳು :- ೧) ಬಾಳಾಜಿಯ ಹಿರಿಯ ಮಗ. ೨) ಶಾಹೂನಿಗೆ ಬಾಳಾಜಿಯ ಸಾಹಸದ ನೆನಪು. ೩) ಚಿಕ್ಕವನಿರುವಾಗಲೆ, ಬಾಜೀರಾಯನಿಗೆ ರಾಜ ಕಾರ್ಯ ರಣರಂಗಗಳ ಪರಿಚಯ. ೪) ಮತ್ತೂ ಕೆಲವು ಇತರ ಯೋಗ್ಯತೆಗಳು.	೨. ಅವನಿಗೆ ಪೇಶವೆಪದ ದೊರೆತ ಕಾರಣಗಳು ಯಾವವು ?
	ಬಾಜೀರಾಯನ ಹಿರಿಯಾಶೆ :- ಮರಾಠಾ ರಾಜ್ಯವನ್ನು ಬೆಳೆಯಿಸುದು(ಸ್ವರಾಜ್ಯವನ್ನು ಸಾಮ್ರಾಜ್ಯವಾಗಿ ಮಾಡುವದು.)	೩. ಬಾಜೀರಾಯನ ಹಿರಿಯಾಶೆ ಏನು ಇತ್ತು ?

ಮೆಟ್ಟುಗಳು	ವಿಷಯ	ವಿಧಾನ
	ಬಾಜೀರಾಯನ ಧೋರಣೆ:- ಉತ್ತರ ಹಿಂದುಸ್ಥಾನದಲ್ಲಿ ನೇರವಾಗಿ ದಾಳಿಗಳು.	೪. ಅದಕ್ಕಾಗಿ ಅವನು ಅನುಸರಿಸಿದ ಧೋರಣೆ (ಸ್ವಲ್ಪದರಲ್ಲಿ) ವರ್ಣಿಸಿರಿ.
	ಬಾಜೀರಾಯನಿಗೆ ಸಹಾಯಕರು :- ರಾಣೋಜಿ ಸಿಂದೆ, ಮಲ್ಹಾರರಾವ ಹೋಳಕರ ಉದಾಜಿ ಪವಾರ	೫. ಬಾಜೀರಾಯನಿಗೆ ನೆರವಾದವರು ಯಾರು ಯಾರು ?
	ಬಾಜೀರಾಯನು ಜರುಗಿಸಿದ ಕಾರ್ಯ:-	೬. ಬಾಜೀರಾಯನು ನೆರವೇರಿಸಿದ ಕಾರ್ಯವನ್ನು ಕುರಿತು ಹೇಳಿರಿ :-
೪. ಅಭ್ಯಸನ	**ಕಾಲರೇಖೆ** (೧೭೨೮-೧೭೪೦ ವರೆಗಿನ ಮುಖ್ಯ ಇಸವಿಗಳನ್ನೊಳಗೊಂಡ)	ಇಸವಿಗಳಿಗೆ ಸರಿಯಾದ ಸಂಗತಿಗಳನ್ನು ಬರೆಯಿರಿ.
೫. ಗೃಹಪಾಠ	ಬಾಜೀರಾಯನು ಜರುಗಿಸಿದ ಮಹತ್ಕಾರ್ಯಗಳ ಪಟ್ಟಿಯನ್ನು ಅಭ್ಯಸಿಸಿ, ಯಾರ ಧೋರಣೆಯಂತೆ ಕಾರ್ಯ ಜರುಗಿತು- ಬಾಜೀರಾಯನದೋ ಅಥವಾ ಶ್ರೀಪತರಾಯನದೋ ಎಂಬುದನ್ನು ಸಕಾರಣವಾಗಿ ಬರೆದು ತನ್ನಿರಿ.	

ಪೇಶವೆ ಬಾಜೀರಾಯನು ಮರಾಠಾ ಸಾಮ್ರಾಜ್ಯದ ಬೆಳವಣಿಗೆಗಾಗಿ ಮಾಡಿದ ಮಹತ್ಕಾರ್ಯಗಳು

(೧ ೨೦-೪೦ ವರೆಗೆ)

ನಂ.	ನಡೆದ (ಮಹತ್ವದ) ಸಂಗತಿಗಳು	ಇಸವಿ	ಮರಾಠಾ ಸಾಮ್ರಾಜ್ಯಕ್ಕೆ ಆದ ಲಾಭ
೧	ನಿಜಾಮ ಉಲ್‌ಮುಲ್ಕನಿಗೆ ಸಹಾಯ (ಸಯ್ಯದ ಬಂಧುಗಳ ಯುದ್ಧ)	ಬಾಳಾಪುರದ ಯುದ್ಧ ೧೭೨೩	ನಿಜಾಮನು ಮರಾಠರಿಗೆ ಚೌಥಾಯಿ, ಸರದೇಶಮುಖಿಗಳನ್ನು ಕೊಡಲು ಒಪ್ಪಿದನು.
೨	ಕರ್ನಾಟಕದ ದಾಳಿ (ನಿಜಾಮನ ಸ್ವಾಧೀನದಲ್ಲಿಯ ಪ್ರದೇಶ)	೧೭೨೬	ಬೇರೆ ಬೇರೆ ನಾಯಕರಿಂದ ಕಪ್ಪುಕಾಣಿಕೆಗಳು, ಶ್ರೀರಂಗ ಪಟ್ಟಣದ ದೊಡ್ಡ ಕೃಷ್ಣರಾಜ ಒಡೆಯರ ಸೋಲು, ಧಾರವಾಡದ ವರೆಗಿನ ಕರ್ನಾಟಕವು ಮರಾಠಾ ರಾಜ್ಯಕ್ಕೆ ಸೇರಿತು.
೩	ನಿಜಾಮನೊಡನೆ ಯುದ್ಧ (ಚೌಥಾಯಿ) ಸರದೇಶ ಮುಖಿ ಕೊಡಲು ಒಪ್ಪದ್ದರಿಂದ)	ಪಾಲಖೇಡ ಯುದ್ಧ ೧೭೨೮	ಮೊಗಲಾಯಿಯೊಳಗಿನ ಆರು ಸುಭೆಗಳನ್ನೂ ಕೆಲವು ಕೋಟಿಗಳನ್ನೂ ಮರಾಠರಿಗೆ ಕೊಡಲು ನಿಜಾಮನ ಒಪ್ಪಿಗೆ.
೪	ಮಾಳವೆಯ ರಾಜಾ ಗಿರಿಧರನ ಮೇಲೆ ದಾಳಿ	೧೭೨೮	ಮಾಳವಾ ಪ್ರಾಂತದ ಕೈವಶ. (ದಿಲ್ಲಿಯ ರಾಜ್ಯದ ಮೇಲೆ ಕಣ್ಣಿಡಲು ಅನುವು ದೊರೆಯಿತು.)
೫	ಬುಂದೇಲ ಖಂಡದ ಛತ್ರಸಾಲನಿಗೆ (ಮಹಮ್ಮದ ಬಂಗಷನ ವಿರುದ್ಧ) ಸಹಾಯ	೧೭೨೯	ಬಾಜೀರಾಯನಿಗೆ ೫೦ ಲಕ್ಷದ ಸೀಮೆ (ಝಾಂಸಿ ಪ್ರಾಂತ) ಸಿಕ್ಕಿತು.
೬	ಸಿದ್ದೀ ಜನರ ಮೇಲೆ ದಾಳಿಗಳು	೧೭೩೩—೧೭೩೬	ಸಿದ್ದೀ ಜನರು ಮರಾಠರ ಮಾಂಡಲಿಕರಾದರು.
೭	ದಿಲ್ಲಿಯ ಮೇಲೆ ದಾಳಿ	ಭೋಪಾಳದ ಯುದ್ಧ ೧೭೩೭	ಬಾಜೀರಾಯನಿಗೆ ನರ್ಮದಾ ಚಂಬಳಾ ನದಿಗಳ ನಡುವಿನ ಸೀಮೆಯೆಲ್ಲವೂ ಸಿಕ್ಕಿತು.
೮	ಪೋರ್ತುಗೀಜರ ಮೇಲೆ ದಾಳಿ	೧೭೩೯	ವಸಯಿ ಮುಂತಾದ ಕೋಟೆಗಳು ಮರಾಠರ ಕೈವಶವಾದವು.

ಬಾಜೀರಾಯನ ಪೇಶವೆಪದವನ್ನು ಕುರಿತು ಕಾಲರೇಖೆ

೧೬೯೫	೧೬೯೫	....	... ಬಾಜೀರಾಯನ ಜನ್ಮ
	೧೭೦೪	....	
	೧೭೧೦	....	
	೧೭೧೬	....	
೧೭೩೦		...	.... ಬಾಜೀರಾಯನಿಗೆ ಪೇಶವೆಪದ ಪ್ರಾಪ್ತಿ
	೧೭೩೨		
೧೭೩೩		....	....ಬಾಳಾಪುರದ ಯುದ್ಧ (ನಿಜಾಮನಿಗೆ ಸೋಲು)
		....	.... ಕರ್ನಾಟಕದ ದಾಳಿ
೧೭೩೫	೧೭೩೫	....	.... ಪಾಲಖೇಡದ ಯುದ್ಧ (ನಿಜಾಮನಿಗೆ ಸೋಲು)
೧೭೩೬			.... ಬುಂದೇಲಖಂಡದ ಛತ್ರಸಾಲನಿಗೆ ಸಹಾಯ(ಮಹಮ್ಮದ ಬಂಗಷನಿಗೆ ಸೋಲು)
ರಿಂದ	೧೭೩೬	....	.... ಸಿದ್ದೀಜನರ ಮೇಲೆ ದಾಳಿಗಳು
೧೭೩೬		....	ಭೋಪಾಳದ ಯುದ್ಧ (ಮಹಮ್ಮದಶಹನ
೧೭೩೭			ಪಕ್ಷವಾಗಿ ನಿಜಾಮನಿಗೆ ಸೋಲು)
೧೭೩೯		....	.... ಪೋರ್ಚುಗೀಜರ ಮೇಲೆ ಚಿಮಾಜಿಯ ದಾಳಿ (ವಸಯಿಯ ಕೈವಶ)
೧೭೪೦	೧೭೪೦	....	.... ಬಾಜೀರಾಯನ ಮರಣ

ಸೂಚನೆ

ಈ ಸಲ ಎಷ್ಟು ಪುಟಗಳು ಹೆಚ್ಚಾಗಿರುವವೊ ಅಷ್ಟು ಪುಟಗಳು ಮುಂದಿನ ಸಂಚಿಕೆಯಲ್ಲಿ ಕಡಿಮೆಯಾಗಿರುವವು. ಏಕೆಂದರೆ ಪೇಪರ ಕಂಟ್ರೋಲ ಆರ್ಡರದ ಪ್ರಕಾರ ಹೆಚ್ಚಿಗೆ ಪುಟಗಳನ್ನು ಸೇರಿಸಲು ಬರುವದಿಲ್ಲ.

ಸರಕಾರದಿಂದ ಮಂಜೂರಾದ ಪಠ್ಯ ಪುಸ್ತಕಗಳ ಪಟ್ಟಿ.

ನಮ್ಮ ಆಫೀಸಿನಲ್ಲಿ ಹೊಸದಾಗಿ, ಮುಂಬಯಿ ಸರಕಾರದ ಟೆಕ್ಸ್ಟ ಬುಕ್ ಕಮೀಟಿಯಿಂದ ಮಂಜೂರಾದ ಪುಸ್ತಕಗಳ ಪಟ್ಟಿಯು ದೊರೆಯುತ್ತದೆ. ಬೆಲೆ ೦—೪—೦. ಅಂಚೆ ವೆಚ್ಚ ಬೇರೆ—೧॥ ಆಣೆ. ಬೇಕಾದವರು ತರಿಸಿಕೊಳ್ಳಬೇಕು.

—ಸಂಪಾದಕರು..

ಪ್ರಾಥಮಿಕ ಶಿಕ್ಷಣ, ಕಾರ್ಯಾಲಯ, ಗಂ, ಟ್ರೇ, ಕಾ, ಧಾರವಾಡ.

ಉಪಕರಣ ನಂ. ೩



ಉಪಕರಣ ನಂ. ೪

ಕನ್ನಡ ಟೆಕ್ಸ್ಟ ಬುಕ್ ಕಮಿಟಿ, ಧಾರವಾಡ, ಅವರಿಂದ ಮಂಜೂರಾದ ಪುಸ್ತಕಗಳು.

ಅ. ನಂ.	ಪುಸ್ತಕದ ಹೆಸರು	ಲೇಖಕರು ಮತ್ತು ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ.
೧	ಭೂಮಂಡಲ ಪರಿಚಯ ಭಾಗ ೩., ಪ್ರಥಮ ಆವೃತ್ತಿ.	ಲೇಖಕರು ! ಪ್ರಕಾಶಕರು :– ರಾಮಾಶ್ರಯ ಬುಕ್ ಡಿಪೋ ಧಾರವಾಡ.	೨–೦–೦	ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಿಗೆ ಮತ್ತು ಟ್ರೇನಿಂಗ ಕಾಲೇಜುಗಳಿಗೆ ಪಠ್ಯಪುಸ್ತಕ.
೨	ಆಧುನಿಕ ರೈತ	ಲೇಖಕರು, ಪ್ರಕಾಶಕರು —ಸದರ—	೧–೨–೦	ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಗೆ ಪಠ್ಯ ಪುಸ್ತಕ.
೩	ನಕಾಶ ಪುಸ್ತಕ ಭಾಗ ೫.	ಲೇಖಕರು: ಶ್ರೀ. ಎಲ್. ಆಯ್. ಆಕಳವಾಡಿ ಪ್ರಕಾಶಕರು —ಸದರ—	೦–೭–೦	ಪ್ರಾಥಮಿಕ ಶಾಲೆಗಳ ೬ನೆಯ ಇಯತ್ತೆಗೆ ಪುರವಣಿ ಪುಸ್ತಕ ಮತ್ತು ವಿದ್ಯಾರ್ಥಿ ವಾಚನಾಲಯ.
೪	ನೆಜಿಟೇಬಲ್ ಆ್ಯಂಡ ಇಟ್ಸ ಕಲ್ಟಿವೇಶನ್. ಪ್ರಥಮ, ಆವೃತ್ತಿ	ಲೇಖಕರು: ಶ್ರೀ. ಸಿ. ವಿ. ರಾವ್. ಪ್ರಕಾಶಕರು : ಆತ್ರೇಯ ಜನರಲ್ ಏಜನ್ಸಿ, ಶ್ರೀ. ನರಸಿಂಹರಾಯ ರೋಡ, ಬೆಂಗಳೂರು.	೧–೮–೦	ಪ್ರಾಥಮಿಕ ಶಾಲೆಗಳ ಮತ್ತು ಟ್ರೇನಿಂಗ ಸಂಸ್ಥೆಗಳ ವಾಚನಾಲಯ.
೫	ಭಾರತೀಯ ಘಟನಾ ಸಮಿತಿ ಅಥವಾ ಭಾರತೀಯ ರಾಜಕೀಯ ಮುನ್ನಡೆ.	ಲೇಖಕರು : ಶ್ರೀ. ಎನ್. ಶರ್ಮಾ. ಪ್ರಕಾಶಕರು : ಸಾಹಿತ್ಯ ಭಾಂಡಾರ ಹುಬ್ಬಳ್ಳಿ	೧–೦–೦	ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಮತ್ತು ಟ್ರೇನಿಂಗ ಸಂಸ್ಥೆಗಳ ವಾಚನಾಲಯ
೬	ಸ್ತ್ರೀಯರ ಸಮಸ್ಯೆಗಳು	ಲೇಖಕರು : ಶ್ರೀ. ಎಸ್. ಪಿ. ನದೀಗಲ್ಲ ಮತ್ತು ಶ್ರೀ. ವ್ಹಿ. ಮುಳಿಗೆ. ಪ್ರಕಾಶಕರು : ಶ್ರೀ. ಎಸ್. ಪಾಂಡೇಶ್ವರ, ಸಾಹಿತ್ಯ ಭಾಂಡಾರ ಹುಬ್ಬಳ್ಳಿ,	೧–೪–೦	ಪ್ರಾಥಮಿಕ, ಮಾಧ್ಯಮಿಕ ಹಾಗೂ ಟ್ರೇನಿಂಗ ಸಂಸ್ಥೆಗಳ ಶಿಕ್ಷಕ ವಾಚನಾಲಯ.
೭	ಮಕ್ಕಳ ಮಹಾತ್ಮಾ ಗಾಂಧಿ, ಮೂರನೆಯ ಆವೃತ್ತಿ	ಲೇಖಕರು : ಶ್ರೀ. ಎನ್. ಶರ್ಮಾ, ಪ್ರಕಾಶಕರು : ಶ್ರೀ. ಹುಕ್ಕೇರಿಕರ ಧಾರವಾಡ. ಸಾಹಿತ್ಯ ಭಂಡಾರ ಹುಬ್ಬಳ್ಳಿ.	೦–೪–೦	ಪ್ರಾಥಮಿಕ ಶಾಲೆಗಳ ವಾಚನಾಲಯ.

(ಮುಂದೆಸಾಗಿದೆ-)

ಹಿಂದಿನಿಂದ ಬಂದದ್ದು—

೮	ಕರ್ನಾಟಕ ಬಾಲವ್ಯಾಕರಣಮ್. ೧೦ನೆಯ ಆವೃತ್ತಿ	ಲೇಖಕರು : ಪಂಡಿತ ಕೆ. ಆರ್. ನರಸಿಂಹಯ್ಯ. ಪ್ರಕಾಶಕರು: ಶ್ರೀ. ಎಸ್. ರಾಘವ ಶಾಸ್ತ್ರಿ, ರೆವಿನ್ಯೂ ಇನಸ್ಪೆಕ್ಟರ, ಶೀನಿವಾಸಪುರ (ಕೋಲಾರ ಜಿಲ್ಲೆ)	೧-೮-೦	ಮಾಧ್ಯಮಿಕ ಶಾಲೆಗಳಿಗೆ ಪಠ್ಯಪುಸ್ತಕ
೯	ನೀತಿಮಂಜರಿ. ೧೦ನೆಯ ಆವೃತ್ತಿ.	ಲೇಖಕರು : ಶ್ರೀ. ಜಿ. ಎಚ್ ಹಿರೇಮಠ. ಪ್ರಕಾಶಕರು : ವಾಗ್ದೇವಿ ಗ್ರಂಥಮಾಲಾ, ಧಾರವಾಡ	೧-೦-೦	ಪ್ರಾಥಮಿಕ ಶಾಲೆಗಳಿಗೆ ಪಠ್ಯ ಪುಸ್ತಕ ಮತ್ತು ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಹಾಗೂ ಟ್ರೇನಿಂಗ ಸಂಸ್ಥೆಗಳ ವಾಚನಾಲಯ.
೧೦	ಭಾಲಭಾರತ. ೭ನೆಯ ಆವೃತ್ತಿ	—ಸದರ—	೦-೧೦-೦	ಪ್ರಾಥಮಿಕ ಶಾಲೆಗಳಿಗೆ ಪುರವಣಿ ವಾಚನ ಪುಸ್ತಕ ಮತ್ತು ಪ್ರಾಥಮಿಕ, ಮಾಧ್ಯಮಿಕ ಶಾಲೆಗಳ ಹಾಗೂ ಟ್ರೇನಿಂಗ ಸಂಸ್ಥೆಗಳ ವಾಚನಾಲಯ.
೧೧	ಆರು ಕಥೆಗಳು ೩ನೆಯ ಆವೃತ್ತಿ	ಲೇಖಕರು : ಪ್ಯಾಟಿ ಶಾಮರಾಯರು. ಪ್ರಕಾಶಕರು : ಕಥಾಕುಂಜ ಗ್ರಂಥಭಾಂಡಾರ, ಗಣಪತಿಗಲ್ಲಿ ಬೆಳಗಾವಿ	೧-೪-೦	ಪ್ರಾಥಮಿಕ ಶಾಲೆಗಳ ಮೇಲಿನ ತರಗತಿಗಳಿಗೆ ಮತ್ತು ಮಿಡಲ್ ಸ್ಕೂಲುಗಳಿಗೆ ಪಠ್ಯಪುಸ್ತಕ ಮತ್ತು ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಹಾಗೂ ಟ್ರೇನಿಂಗ ಸಂಸ್ಥೆಗಳ ವಾಚನಾಲಯ.
೧೨	ದಾಸರ ಹುಡಿಗೆ. ೭ನೆಯ ಆವೃತ್ತಿ	—ಸದರ—	೧-೪-೦	ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಹಾಗೂ ಟ್ರೇನಿಂಗ ಸಂಸ್ಥೆಗಳ ವಾಚನಾಲಯ.
೧೩	ಹಾಲಾಹಲ	ಲೇಖಕರು: ಶ್ರೀ. ಹಿರೇಮಲ್ಲೂರ. ಈಶರನ್. ಪ್ರಕಾಶಕರು: ಶ್ರೀ. ಎಸ್. ಎ. ಸಾವಂತ (ಬೆಳಗಾವಿ) ಕಲ್ಪನಾ ಪಬ್ಲಿಸಿಂಗ್ ಹೌಸ, ಧಾರವಾಡ.	೧-೧೨-೦	ಮಾಧ್ಯಮಿಕ ಹಾಗೂ ಟ್ರೇನಿಂಗ ಸಂಸ್ಥೆಗಳ ವಾಚನಾಲಯ.

(ಮುಂದೆ ಸಾಗಿದೆ.)

೫೪	ಸಚಿತ್ರ ಆರೋಗ್ಯಶಾಸ್ತ್ರ ಸಾರ. ೩ನೆಯ ಆವೃತ್ತಿ.	ಲೇಖಕರು : ಶ್ರೀ. ಆರ್. ಎಲ್. ಪಾಟ್ಕೀಲ, ಅಧ್ಯಾಪಕರು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ ಪ್ರಕಾಶಕರು: ಶ್ರೀ. ಎಚ್. ಬಿ. ನವಲೂರ, ಧಾರವಾಡ	೦–೧೨–೦	ಪ್ರಾಥಮಿಕ ಶಾಲೆಗಳ ಮತ್ತು ಟ್ರೇನಿಂಗ ಸಂಸ್ಥೆಗಳ ವಾಚನಾಲಯ.
೫೫	ಸಾಮಾನ್ಯ ವಿಜ್ಞಾನ ೫, ೬, ೭ನೆಯ ಇಯತ್ತೆಗಳಿಗೆ, ಪ್ರಥಮ ಆವೃತ್ತಿ.	ಲೇಖಕರು ಮತ್ತು ಪ್ರಕಾಶಕರು : ಶ್ರೀ. ಎಮ್. ಆರ್. ಮುಲ್ಯ. ಅಧ್ಯಾಪಕರು ಜಿ ಎ. ಹೈಸ್ಕೂಲ, ಬೆಳಗಾವಿ	೧–೪–೦	ಪ್ರಾಥಮಿಕ ಶಾಲೆಗಳ ೫, ೬, ೭ನೆಯ ಇಯತ್ತೆಗಳಿಗೆ ಶಾಸ್ತ್ರೀಯ ವಿಷಯಕ್ಕಾಗಿ ಪಠ್ಯಪುಸ್ತಕ.
೫೬	ಸಾಮಾನ್ಯ ವಿಜ್ಞಾನ ೫ನೆಯ ಇಯತ್ತೆಗೆ ಪ್ರಥಮಾವೃತ್ತಿ.	—ಸದರ—	೦–೧೦–೦	ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಗೆ ಪಠ್ಯಪುಸ್ತಕ
೫೭	ಪ್ರಾಥಮಿಕ ಭೂಮಿತಿ. ೪ನೆಯ ಇಯತ್ತೆಗೆ, ಪ್ರಥಮಾವೃತ್ತಿ	ಲೇಖಕರು : ಶ್ರೀ. ಆರ್. ಆರ್. ಶೇಲಾರ ಪ್ರಕಾಶಕರು : ಶ್ರೀ ಎಂ ಆರ್. ಶೆಟ್ಟರ, ಕರ್ನಾಟಕ ಪಬ್ಲಿಶಿಟಿ ಕಂಪನಿ, ಲಿಮಿಟೆಡ್. ಹುಬ್ಬಳ್ಳಿ	೦–೮–೦	ಪ್ರಾಥಮಿಕ ಶಾಲೆಗಳ ೪ನೆಯ ಇಯತ್ತೆಗೆ ಪಠ್ಯಪುಸ್ತಕ
೫೮	ಪ್ರಾಥಮಿಕ ಭೂಮಿತಿ ೫ನೆಯ ಇಯತ್ತೆಗೆ ಪ್ರಥಮಾವೃತ್ತಿ,	—ಸದರ—	೦–೧೪–೦	ಪ್ರಾಥಮಿಕ ಶಾಲೆಗಳ ೫ನೆಯ ಇಯತ್ತೆಗೆ ಪಠ್ಯಪುಸ್ತಕ
೫೯	ಸದ್ಗುಣಾದರ್ಶ	ಲೇಖಕರು ಮತ್ತು ಪ್ರಕಾಶಕರು : ಶ್ರೀ. ಎಂ. ಪಿ. ಪೂಜಾರ, ಹುಬ್ಬಳ್ಳಿ ಜಕಾತಕಟ್ಟಿ ಹತ್ತರ, ಧಾರವಾಡ	೦-೧೦-೦	ಪ್ರಾಥಮಿಕ ಮತ್ತು ಮಿಡಲ್ ಸ್ಕೂಲುಗಳ ಹಾಗೂ ಟ್ರೇನಿಂಗ ಸಂಸ್ಥೆಗಳ ವಾಚನಾಲಯ ಮತ್ತು ಪಾರಿತೋಷಕ ಪುಸ್ತಕ.

(ಮುಂದೆ ಸಾಗಿದೆ–)

ಹಿಂದಿನಿಂದ ಬಂದದ್ದು—

ತಿದ್ದುಪಡೆಗಳು

೧	ಕನ್ನಡ ನುಡಿಗನ್ನಡಿ, ಭಾಗ ೨.	ಲೇಖಕರು ಮತ್ತು ಪ್ರಕಾಶಕರು : ಶ್ರೀ. ಎಂ. ಪಿ. ಪೂಜಾರ. ಹುಬ್ಬಳ್ಳಿ ಜಕಾತ ಕಟ್ಟೆಯ ಹತ್ತಿರ ಧಾರವಾಡ.	೦-೬-೬	ಪ್ರಾಥಮಿಕ ಶಾಲೆಗಳಿಗೆ ಪಠ್ಯಪುಸ್ತಕವೆಂದು ಮಂಜೂರಾದ ಈ ಪುಸ್ತಕವು ಮಾಧ್ಯಮಿಕ ಮತ್ತು ಮಿಡಲ್ ಸ್ಕೂಲುಗಳಿಗೂ ವ್ಯಾಕರಣ ವಿಷಯಕ್ಕೆ ಪಠ್ಯ ಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿದೆ.
೨	ಕನ್ನಡ ಬಾಲಬೋಧೆ	ಲೇಖಕರು ಮತ್ತು ಪ್ರಕಾಶಕರು: ಶ್ರೀ. ಎಸ್. ಎಫ್. ಕಟ್ಟೀಮನಿ, ನಂದನಿವಾಸ ಜವಳ, ಹುಬ್ಬಳ್ಳಿ.	೦-೩-೬	ಪ್ರಾಥಮಿಕ ಶಾಲೆಗಳ ಬಾಲಕ ವರ್ಗಕ್ಕೆ ಪುರವಣಿ ವಾಚನ ಪುಸ್ತಕವೆಂದು ಮಂಜೂರ ಮಾಡಲ್ಪಟ್ಟಿದೆ.
೩	ಬಾಲವ್ಯವಸಾಯ. ಭಾಗ ೧, ೨.	ಲೇಖಕರು ಮತ್ತು ಪ್ರಕಾಶಕರು : ಶ್ರೀ. ವಾಯ್. ಹಿ. ಜಾಗೀರದಾರ ಮತ್ತು ಸರಸ್ವತಿ ಬುಕ್‌ಡಿಪೋ, ಗದಗ.	೦-೩-೦ ೦-೩-೦	ಪ್ರಾಥಮಿಕ ಶಾಲೆಗಳ ಬಾಲಕ ವರ್ಗಕ್ಕೆ ಪುರವಣಿ ವಾಚನ ಪುಸ್ತಕಗಳೆಂದು ಮಂಜೂರ ಮಾಡಲ್ಪಟ್ಟಿದೆ.
೪	ಲಘುವ್ಯಾಕರಣ	ಪ್ರಕಾಶಕರು : ಶ್ರೀ. ಎಸ್. ಎ ಸಾವಂತ. ಪುಸ್ತಕ ವಾ ಪಾರಿಗಳು ಮತ್ತು ಪ್ರಕಾಶಕರು, ಬೆಳಗಾಂವಿ.		೧೯-೧೧-೧೯೩೭ನೆಯ ದಿನಸೇರಿದ ಪಠ್ಯಪುಸ್ತಕ ಸಮಿತಿಯ ಸಭೆಯಲ್ಲಿ ಪ್ರಾಥಮಿಕ ಶಾಲೆಗಳಿಗೆ ಪಠ್ಯಪುಸ್ತಕವೆಂದು ಮಾತ್ರ ಮಂಜೂರಾಗಿದೆ. ಆದ್ದರಿಂದ ನಂ. 47/p-12034 ತಾ. ೨೫-೮-೪೭ ಪ್ರಕಾರ ಮಾಧ್ಯಮಿಕ, ಮಿಡಲ್ ಸ್ಕೂಲ್ ಕ್ಲಾಸುಗಳ ಉಪಯೋಗಕ್ಕೆಂದು ಕೊಡಲ್ಪಟ್ಟ ಮಂಜೂರಿಯು ರದ್ದುಗೊಳಿಸಲ್ಪಟ್ಟಿದೆ.
೫	ಹಿಂದಿ ಜಮಾಖರ್ಚು. ಭಾಗ ೧	ಲೇಖಕರು : ಶ್ರೀ. ಎಚ್. ಬಿ. ಉಮಡಿಕರ ಪ್ರಕಾಶಕರು : ಶ್ರೀ. ಆರ್. ಕೆ. ಕುಲಕರಣಿ		
೬	ಹೊಸ ಅಂಕಗಣಿತ	ಲೇಖಕರು : ಶ್ರೀ. ಎಚ್. ಬಿ. ಉಮಡಿಕರ ಪ್ರಕಾಶಕರು : ಬಿ. ಪಿ. ಕಾಳೆ.		

ಸಿ. ಭಾ. ಎಜ್ಯುಕೇಶನಲ್ ಇನಸ್ಪೆಕ್ಟರ
೩-೧೨-೪೭ ಕಚೇರಿ, ಧಾರವಾಡ.

(ಸಹಿ) ಬಿ. ಯಂ. ಶಿಂತ್ರಿ
ಎಜ್ಯುಕೇಶನಲ್ ಇನಸ್ಪೆಕ್ಟರರ ಪರವಾಗಿ.

ಮಿಡಲ್ ಸ್ಕೂಲ್ ಸ್ಕಾಲರಶಿಪ್

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶೇ
ಷಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ
ಪರೀಕ್ಷೆಯು ೧೯೪೯ನೇ ಇಸ್ವಿಯ
ದಿವಸ ದಕ್ಷಿಣ ಭಾಗದೊಳಗಿನ
ಗೊತ್ತಾಗಿದೆ.

ಈ ಕೆಳಗೆ ಬರೆದಷ್ಟು ಸ್ಕಾಲರಶಿಪ್ಪುಗಳು ಆಯಾ ಜಿಲ್ಲೆಗಳಲ್ಲಿ ಆಯಾ ವರ್ಗಗಳ ವಿದ್ಯಾರ್ಥಿಗಳಿಗೆ ದೊರೆಯುವವು.

ಜಿಲ್ಲೆಯ ಕೇಂದ್ರದ ಹೆಸರು	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿವೇತನಗಳು			
		ಮಾಧ್ಯಮಿಕ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ. ಗಳ ಬಗ್ಗೆ	ಒಟ್ಟು
ಧಾರವಾಡ	೨	೧೩	೫	೧೧	೩೧
ಬೆಳಗಾವಿ	೨	೧೩	೫	೬	೨೬
ವಿಜಾಪುರ	೨	೧೦	೫	೭	೨೪
ಕಾರವಾರ	೨	೫	೧	೩	೧೧
ಒಟ್ಟು	೮	೪೧	೧೬	೨೭	೭೨

ಹಿಂದುಳಿದ ವರ್ಗಗಳ ಸ್ಕಾಲರಶಿಪ್ಪುಗಳ ಪೈಕಿ ನೂರಕ್ಕೆ ೨೦ರಷ್ಟು ಸ್ಕಾಲರಶಿಪ್ಪುಗಳು ಹೆಣ್ಣುಮಕ್ಕಳಿಗಾಗಿ ಕಾಯ್ದಿರಿಸಲ್ಪಟ್ಟಿವೆ. ಕಾರವಾರ ಜಿಲ್ಲೆಯ ಹಿಂದುಳಿದ ವರ್ಗಗಳ ಸ್ಕಾಲರಶಿಪ್ಪು ಒಂದು ವರ್ಷ ಒಬ್ಬ ಹುಡುಗಿಗೂ ಒಂದು ವರ್ಷ ಒಬ್ಬ ಹುಡುಗನಿಗೂ ಕೊಡಲ್ಪಡುವುದು. ೧೯೪೯ನೆಯ ವರ್ಷದ ಸ್ಕಾಲರಶಿಪ್ಪು ಹುಡುಗಿಗೆ ಕಾಯ್ದಿಡಲ್ಪಟ್ಟಿದೆ. ಮುಸಲ್ಮಾನ ವಿದ್ಯಾರ್ಥಿಗಳ ಸ್ಕಾಲರಶಿಪ್ಪಿನಲ್ಲಿ ಒಂದನ್ನು ಹೆಣ್ಣುಮಕ್ಕಳಿಗಾಗಿ ಕಾಯ್ದಿರಿಸಲಾಗಿದೆ.

೨. ಬೆಳಗಾಂವಿಯ ಕೇಂದ್ರದ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡವೊಂದೇ ಎಂದೂ ಗೊತ್ತಾಗಿದೆ. ಆದರೆ ಮುಸಲ್ಮಾನ ಉಮೇದವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು ಮತ್ತು ಉರ್ದು ಭಾಷೆಯು ಅವರ ಪ್ರಾಂತಿಕ ಭಾಷೆಯೆಂದು ತಿಳಿಯಲಾಗಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಸೈಸಿಡೆಂಟರಾಗಿರುವ ಒಂದು ಕಮಿಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ನಡೆ

ಯುವದು. ಎ. ಕೆ. ಗರ್ಲ್ಸ್ ಹೈಸ್ಕೂಲಿನ ಹೆಡ್ ಮಿಸ್ಟ್ರೆಸರು ಧಾರವಾಡ ಜಿಲ್ಲಾ ಕೇಂದ್ರದ ಅಧ್ಯಕ್ಷರು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಮ್ಮ ಅರ್ಜಿಗಳನ್ನು ಮುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೮ನೆಯ ಇಸ್ವಿಯ ಜನೆವರಿ ತಿಂಗಳ ೫ನೆಯ ತಾರೀಖಿನ ಒಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಈ ಅರ್ಜಿಯ ನಮೂನೆಗಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮಿಟಿಯ ಅಧ್ಯಕ್ಷರಿಗೆ ಅರ್ಜಿ ಮಾಡಿಕೊಂಡು ಅವರಿಂದ ತರಿಸಿಕೊಳ್ಳಬಹುದು. ಅರ್ಜಿಯ ಸಂಗಡಲೇ ೧ ರೂ. ಫೀಯನ್ನು ಕಳುಹಿಸಲೇಬೇಕು. ಅರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಅಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀಯ ಹೆಣವೂ ಅಧ್ಯಕ್ಷರಿಗೆ ಮುಟ್ಟಲೇಬೇಕು. ಆ ತಾರೀಖನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯ ಹಣವನ್ನು ಸ್ವೀಕರಿಸಲಿಕ್ಕಿಲ್ಲ. ಹಿಂದುಳಿದ ವರ್ಗಗಳ ಉಮೇದವಾರರು ಫೀ ಕೊಡುವ ಕಾರಣವಿಲ್ಲ. ಉಳಿದ ನಿಯಮಗಳು ಮೊದಲಿನಂತೆ ಇವೆ.

ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ (೧೯೪೮)

ಕಾರ್ಯಕ್ರಮ

ಗುರುವಾರ ತಾ. ೧೩-೨-೧೯೪೮—೧೧ ರಿಂದ ೧೧-೧೫ರ ವರೆಗೆ ಹಾಜರಿ. ೧೧॥ಯಿಂದ ೧೨॥ ಯ ವರೆಗೆ ಅಂಕಗಣಿತ; ೧॥ಯಿಂದ ೨-೧೫ರ ವರೆಗೆ ಸಾಮಾನ್ಯಜ್ಞಾನ (೧ನೆಯ ಕಾಗದ); ೩ ರಿಂದ೩-೪೫ರ ವರೆಗೆ ಸಾಮಾನ್ಯ ಜ್ಞಾನ (೨ನೆಯ ಕಾಗದ). ಶುಕ್ರವಾರ ತಾ. ೧೩-೨-೧೯೪೮ನೆಯ ದಿನ ೨ರಿಂದ ೨-೪೫ರ ವರೆಗೆ ಪ್ರಾಂತಿಕ ಭಾಷೆ (೧ನೆಯ ಕಾಗದ); ೪ರಿಂದ ೪-೪೫ರ ವರೆಗೆ ಪ್ರಾಂತಿಕಭಾಷೆ (೨ನೆಯ ಕಾಗದ).

ಹೈಸ್ಕೂಲು ಸ್ಕಾಲರಶಿಪ್ ಪರೀಕ್ಷೆಯು ಸೋಮವಾರ ೯-೨-೧೯೪೮ರಿಂದ ಬುಧವಾರ ೧೧-೨-೧೯೪೮, ೨॥ ಗಂಟೆಯ ವರೆಗೆ ನಡೆಯುವುದು.

ದಕ್ಷಿಣಭಾಗದ
ಎಜ್ಯುಕೇಶನಲ್ ಇನೆಸ್ಪೆಕ್ಟರರ ಕಚೇರಿ,
ಧಾರವಾಡ. ೮ನೆಯ ಡಿಸೆಂಬರ ೧೯೪೭

(ಸಹಿ) B. M. Shintri
ದಕ್ಷಿಣ ಭಾಗದ ಎಜ್ಯುಕೇಶನಲ್ ಇನೆಸ್ಪೆಕ್ಟರ್
ಅವರ ಪರವಾಗಿ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ

ಪೂರ್ವ ಪರೀಕ್ಷೆಯ ಪ್ರಶ್ನಿಕಾಗದಗಳು

ಪ್ರ್ಯಾಕ್ಟಿಸಿಂಗ್ ಸ್ಕೂಲ್ ಟ್ರೇನಿಂಗ್ ಕಾಲೇಜ ಧಾರವಾಡ.

೧ರಿಂದ ೫ ಸೆಟ್ಟುಗಳು ಪ್ರತಿಯೊಂದಕ್ಕೆ ಬೆಲೆ ೦—೮—೦
೬ರಿಂದ ೧೫ ,, ,, ,, ೦—೬—೦
೧೫ಕ್ಕಿಂತ ಹೆಚ್ಚು ಸೆಟ್ಟುಗಳು ,, ,, ೦—೬—೦

ಟಪಾಲ ಖರ್ಚು ಪುಕ್ಕಟೆ.

ಅಪೇಕ್ಷಿಸುವವರು ಕೂಡಲೆ ಹಣ ಕಳಿಸಬೇಕು. ಮತ್ತು ತಮ್ಮ ವಿಳಾಸವನ್ನು ಸ್ಪಷ್ಟವಾಗಿ ತಿಳಿಸಬೇಕು.

ಹೆಡ್ ಮಾಸ್ತರ
ಪ್ರ್ಯಾಕ್ಟಿಸಿಂಗ್ ಸ್ಕೂಲ್, ಟ್ರೇನಿಂಗ್ ಕಾಲೇಜ, ಧಾರವಾಡ.

ಟ್ರೇನಿಂಗ್ ಕಾಲೇಜುಗಳಲ್ಲಿ ಸಾಮಾಜಿಕ ಜೀವನ

ಗಂಡುಮಕ್ಕಳ ಟ್ರೇನಿಂಗ್ ಕಾಲೇಜ್, ಧಾರವಾಡ.

೧. **ಸಾಮೂಹಿಕ ಪ್ರಾರ್ಥನೆ** : ಶಿಕ್ಷಕ ವಿದ್ಯಾರ್ಥಿಗಳು ಪ್ರತಿದಿನ ಮುಂಜಾನೆ ಕಾಲೇಜು ಪ್ರಾರಂಭವಾಗುವ ಮೊದಲು ೫ ನಿಮಿಷ ಸಾಮೂಹಿಕ ಪ್ರಾರ್ಥನೆ ಮಾಡುತ್ತಾರೆ.

೨. **ಚಟುವಟಿಕೆಯ ಅವಧಿಗಳು** : (೧) ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ವಿಷಯಗಳನ್ನು ಕುರಿತು ವ್ಯಾಖ್ಯಾನ; (೨) ವಿವಿಧ ವಿನೋದಾವಳಿಗಳು, (೩) ಸ್ವಚ್ಛತೆ, (೪) ಶಾರೀರಿಕ ಚಟುವಟಿಕೆ ಮುಂತಾದವುಗಳ ಬಗ್ಗೆ ಕಾಲೇಜಿನ ಶಿಕ್ಷಣದ ಹೊರತಾಗಿ ವಾರದಲ್ಲಿ ಮೂರು ವಿಶೇಷ ಅವಧಿಗಳನ್ನು ಕೊಡಲಾಗಿದೆ.

೩. **ಶಿಕ್ಷಕ ವಿದ್ಯಾರ್ಥಿಗಳ ವ್ಯವಸ್ಥಾಪಕ ಸಮಿತಿ** : ಪ್ರತಿವರ್ಷ ಕಾಲೇಜಿನ ಹೊಸ ವರ್ಷವು ಪ್ರಾರಂಭವಾದ ನಂತರ ಅಲ್ಪಾವಧಿಯಲ್ಲಿ ಶಿಕ್ಷಕ ವಿದ್ಯಾರ್ಥಿಗಳು ಸಾಧಾರಣ ಚುನಾವಣೆಯನ್ನು ನಡೆಯಿಸಿ ಆರಿಸಿದ ಶಿಕ್ಷಕ ವಿದ್ಯಾರ್ಥಿಗಳ ಪ್ರತಿನಿಧಿಗಳು ಈ ಸಮಿತಿಯಲ್ಲಿರುವರು. ಕಾಲೇಜಿನ ಬೇರೆ ಬೇರೆ ಸಂಘಗಳ ಕಾರ್ಯಕವು ಸಮಿತಿಯ ಪರವಾಗಿ ನಡೆಯುತ್ತದೆ. ಈ ಸಮಿತಿಯೇ ಕಾಲೇಜದ ಚಟುವಟಿಕೆಗಳ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಮತ್ತು ಅದನ್ನು ಯಶಶ್ವಿಯಾಗಿ ಜರುಗಿಸುತ್ತದೆ.

೪. **ವಾದವಿವಾದ ಮಂಡಳ** : ಕಾಲೇಜದ ಶಿಕ್ಷಕರೊಬ್ಬರ ಅಧ್ಯಕ್ಷತೆ ಹಾಗೂ ಮಾರ್ಗದರ್ಶಕತ್ವದಲ್ಲಿ ಇದು ಶಿಕ್ಷಕವಿದ್ಯಾರ್ಥಿಗಳಿಂದಲೇ ನಡೆಸಲ್ಪಡುತ್ತದೆ. ಚರ್ಚೆಯ ವಿವಿಧ ವಿಷಯಗಳನ್ನು ಕಾಲೇಜದ ಉಧ್ಯಾಪಕರು ಕೊಡುತ್ತಾರೆ. ಆಗಾಗ್ಗೆ ನಾಡಿನ ಗಣ್ಯ ಮಹನೀಯರನ್ನು ಸಹ ವ್ಯಾಖ್ಯಾನಗಳಿಗೆ ಆಮಂತ್ರಿಸಲಾಗುತ್ತದೆ.

೫. **ವಿಶಿಷ್ಟ ದಿನಾಚರಣೆಗಳು** : ಈ ವರ್ಷದಲ್ಲಿ ಮೂರು ಮುಖ್ಯ ದಿನಾಚರಣೆಗಳು ವಿದ್ಯಾರ್ಥಿ ಹಾಗೂ ಅಧ್ಯಾಪಕರಿಂದ ಆಚರಿಸಲ್ಪಟ್ಟವು. ಒಂದನೆಯದಾಗಿ ಡಾ|| ರವೀಂದ್ರನಾಥ ಟಾಗೋರ ಅವರ ಜಯಂತಿಯು ೮-೫-೧೯೬೬ನೆಯ ದಿನ ಆಚರಿಸಲ್ಪಟ್ಟಿತು. ಶಿಕ್ಷಕವಿದ್ಯಾರ್ಥಿಗಳೂ ಶಿಕ್ಷಕರೂ ಡಾ|| ಟಾಗೋರರ ಸಾಮಾಜಿಕ, ರಾಜಕೀಯ, ಸಾಹಿತ್ಯಿಕ ಹಾಗೂ ಶೈಕ್ಷಣಿಕ ಜೀವನ ಹಾಗೂ ಕಾರ್ಯವನ್ನು ಕುರಿತು ಮಾತಾಡಿದರು. ಎರಡನೆಯದಾಗಿ ೧೫-೮-೧೯೬೬ನೆಯ ದಿನ ಸ್ವಾತಂತ್ರ್ಯೋತ್ಸವನ್ನು ಆಚರಿಸಲಾಯಿತು. ಅಂದು ಬೆಳಿಗ್ಗೆ ಸ್ವಚ್ಛತೆಯ ಕಾರ್ಯದ ನಂತರ, ಹಿಂದುಸ್ತಾನದ ಹೊಸ ಸ್ವಾತಂತ್ರ್ಯಧ್ವಜವು ವರ್ಧಾದ ಶ್ರೀ ಕವಲೇಶ ಭಾರತೀಯ ಅವರಿಂದ ಹಾರಿಸಲ್ಪಟ್ಟಿತು. ಆಗ ಸಾಹಿತ್ಯ ಸೂರ್ಯ ಉದಯಿಸುತ್ತಿದ್ದ. ನಂತರ ಕಾಲೇಜದ ಕಟ್ಟಡದ ಮೇಲೆ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಿಂದ ರಾಷ್ಟ್ರೀಯ ಧ್ವಜವು ಏರಿಸಲ್ಪಟ್ಟಿತು. ಪಟ್ಟಣದ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮಗಳಲ್ಲಿ ಶಿಕ್ಷಕರೂ, ಶಿಕ್ಷಕ ವಿದ್ಯಾರ್ಥಿಗಳೂ ಭಾಗ ವಹಿಸಿದರು. ಸಾಯಂಕಾಲ ಇಡೀ ಕಾಲೇಜದ ವಿದ್ಯಾರ್ಥಿಗಳೂ ಶಿಕ್ಷಕರೂ ಅರ್ಧ ತಾಸು ನಡೆಯಿಸಿದ ಸೂತ್ರಯಜ್ಞವು ಅದ್ಭುತವಾಗಿತ್ತು. ನಂತರ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ ಜರುಗಿ ಶಿಕ್ಷಕರೂ, ಶಿಕ್ಷಕ ವಿದ್ಯಾರ್ಥಿಗಳೂ ವ್ಯಾಖ್ಯಾನಗಳನ್ನು ಕೊಟ್ಟರು. ಸ್ವಾತಂತ್ರ್ಯಗೀತ ಗಾಯನವಾಯಿತು, ಲಾವಣಿಗಳಾದವು. ಸಸ್ಯರೋಪಣ ವಿಧಿಯೂ ಜರುಗಿತು. ಪ್ರಾಕ್ಟೀಸಿಂಗ ಸ್ಕೂಲಿನ ಅಧ್ಯಾಪಕರಾದ ಶ್ರೀ. ರಂ. ರಾ. ಶೇಲಾರ ಅವರು ಚಿತ್ರಿಸಿದ ಮಹಾತ್ಮಾಜಿಯವರ

ಭವ್ಯ ಚಿತ್ರವನ್ನು ಡ್ರಾಯಿಂಗ ಹಾಲಿನಲ್ಲಿ ತೂಗುಹಾಕಲಾಯಿತು. ರಾತ್ರಿ ಕಟ್ಟಡದ ಮೇಲೆ ಕಲಾಪೂರ್ಣವಾಗಿ ಸಾಲುದೀಪಗಳನ್ನು ಹೆಚ್ಚಲಾಯಿತು. ಮೂರನೆಯದಾಗಿ ೨-೧೦-೧೯೪೭ನೆಯ ದಿನ ಗಾಂಧಿ ಜಯಂತಿಯ ನಿಮಿತ್ತವಾಗಿ ರಾಷ್ಟ್ರ ಧ್ವಜಾರೋಹಣದ ನಂತರ ಕಾಲೇಜಿನ ಅಂಗಳವು ಸ್ವಚ್ಛಮಾಡಲ್ಪಟ್ಟಿತು. ಮಧ್ಯಾಹ್ನದಲ್ಲಿ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಮತ್ತು ಮಹಾತ್ಮಾಜಿಯವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ವಿದ್ಯಾರ್ಥಿಗಳೂ ಶಿಕ್ಷಕರೂ ಗಾಂಧೀಜಿಯವರ ತತ್ವಜ್ಞಾನವನ್ನು ಕುರಿತು ಭಾಷಣ ಮಾಡಿದರು. ಸಭೆಯು ರಾಷ್ಟ್ರಗೀತೆಯೊಂದಿಗೆ ಮುಕ್ತಾಯವಾಯಿತು.

೬. **ಕಾಲೇಜಿನ ಹಾಸ್ಟೆಲುಗಳು :** ಕಾಲೇಜಿನ ಹಾಸ್ಟೆಲುಗಳಲ್ಲಿ ಸಾಮಾಜಿಕ ಜೀವನವು ವಿಶೇಷವಾಗಿ ಕಂಡುಬರುವದು. ಹಾಸ್ಟೆಲುಗಳಲ್ಲಿ ಕೆಲವೊಂದು ವಿಶಿಷ್ಟ ಬಗೆಯ ಶಿಸ್ತಿನ ಜೀವನವು ಕಾಣುತ್ತದೆ. ಅದರ ವೈಶಿಷ್ಟ್ಯಗಳಲ್ಲಿ ಮುಖ್ಯವಾದುವು—(೧) ಸಾಮಾನ್ಯ ಸಲಹಾ ಸಮಿತಿ, (೨) ಪ್ರತಿಯೊಂದು ಕ್ಲಬ್ಬಿನ ವ್ಯವಸ್ಥಾಪಕ ಸಮಿತಿ, (೩) ಮಾಸಿಕ ಕಾರ್ಯದರ್ಶಿಗಳು.

ಕಾಲೇಜಿನಲ್ಲಿ ಶಿಕ್ಷಕವಿದ್ಯಾರ್ಥಿಗಳ ಕ್ಲಬ್ಬುಗಳು ಮೂರು ಇವೆ. ಇವುಗಳನ್ನು ನಡೆಸುವುದರ ಸಲುವಾಗಿ ಚುನಾವಣೆಯು ನಡೆಯುತ್ತದೆ. ಅದರಲ್ಲಿ ಆರಿಸಿಬಂದವರು ಸಲಹಾ ಸಮಿತಿಯ ಸದಸ್ಯರಾಗುತ್ತಾರೆ. ಈ ಸದಸ್ಯರು ಎಲ್ಲ ಕ್ಲಬ್ಬುಗಳ–ಸಾಧಾರಣವಾಗಿ ಕಲ್ಯಾಣದ-ವಿಷಯಗಳನ್ನೂ ಕ್ಲಬ್ಬು ನಡೆಸುವ ರೀತಿಗಳನ್ನೂ ಕ್ಲಬ್ಬುಗಳಿಗೆ ಸಂಬಂಧಪಟ್ಟ ಇತರ ವಿಷಯಗಳನ್ನೂ ನೋಡಿಕೊಳ್ಳುತ್ತಾರೆ. (೨) ಪ್ರತಿಯೊಂದು ಕ್ಲಬ್ಬಿಗೂ ಒಂದು ವ್ಯವಸ್ಥಾಪಕ ಸಮಿತಿಯಿದೆ. ಈ ಸಮಿತಿಯ ಸದಸ್ಯರು ಆಯಾ ಕ್ಲಬ್ಬಿನ ಸಾಮಾನ್ಯ ಸದಸ್ಯರಿಂದ ಆರಿಸಲ್ಪಟ್ಟವರು ಇರುತ್ತಾರೆ. (೩) ಪ್ರತಿಯೊಂದು ಕ್ಲಬ್ಬೂ ಪ್ರತಿ ತಿಂಗಳ ಒಬ್ಬನನ್ನು ತನ್ನ ಕಾರ್ಯದರ್ಶಿಗಳನ್ನು ಆರಿಸುತ್ತದೆ. ಇವರು ಕೂಡ ಪ್ರತಿ ತಿಂಗಳು ಆರಿಸಲ್ಪಡುತ್ತಾರೆ. ಇವರು ಕ್ಲಬ್ಬಿನ ಸ್ವಚ್ಛತೆ, ಕ್ಲಬ್ಬಿಗೆ ಬೇಕಾಗುವ ಆಹಾರ ಪದಾರ್ಥಗಳ ಪೂರೈಕೆ, ಕ್ಲಬ್ಬಿನ ತಂಟೆ ತಗಾದಿ ಬಗೆಹರಿಸುವಿಕೆ ಮುಂತಾದ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ ಮತ್ತು ಎಲ್ಲರೂ ತಮ್ಮ ತಮ್ಮ ಹೊಣೆಯನ್ನು ಅರಿತುಕೊಂಡು ಕೆಲಸ ಮಾಡುತ್ತಾರೆ. ಇದು ಸಂತೋಷದ ಸಂಗತಿ.

ಎಲ್ಲರೂ ಒಂದೇ ಮನೆತಕ್ಕೆ ಒಳಪಟ್ಟವರಂತೆ ನಡೆದುಕೊಳ್ಳುವಂತೆ ಮಾಡಲು ಪ್ರಯತ್ನ ಸಲಾಗುತ್ತಿದೆ ಹಾಸ್ಟೆಲುಗಳಲ್ಲಿರತಕ್ಕವರು ತಮ್ಮ ತಮ್ಮ ಕೋಣೆ ಮತ್ತು ಅದರ ಮುಂದಿನ ಭಾಗದ ಕಸವನ್ನು ತೆಗೆದುಕೊಳುತ್ತಾರೆ. ತಮ್ಮ ತಟ್ಟೆ ತಾವೇ ತೊಳೆದುಕೊಳ್ಳುತ್ತಾರೆ. ಭೋಜನವು ಜಾತಿ ಮತ ಪಂಥದ ಭೇದವಿಲ್ಲದೆ ಒಟ್ಟಾಗಿ ನಡೆಯುತ್ತದೆ.

೭. **ಕೆಲಗೇರಿ ಪ್ರವಾಸ :** ೧೫-೧೨-೪೭ನೆಯ ದಿನ ಒಂದನೆಯ ವರ್ಷದ ಎಲ್ಲ ಶಿಕ್ಷಕ ವಿದ್ಯಾರ್ಥಿಗಳು ಕಾಲೇಜಿನ ಅಧ್ಯಾಪಕರೊಡನೆ ಕೆಲಗೇರಿ ಎಂಬ ಹಳ್ಳಿಗೆ ಹೋಗಿ, ಅಲ್ಲಿಯ ಬೀದಿಗಳನ್ನು ಸ್ವಚ್ಛ ಮಾಡಿದರು. ಗುಂಪುಗಳನ್ನು ಮಾಡಿಕೊಂಡು ಅಶಿಕ್ಷಿತ ಪ್ರೌಢರ ಹೆಸರುಗಳನ್ನು ಬರೆದುಕೊಂಡರು. ವಿವಿಧ ವಿನೋದಾವಳಿಗಳ ಕಾರ್ಯವನ್ನು ಹಳ್ಳಿಗರೊಡಗೂಡಿಕೊಂಡು ನಡೆಸಿದರು. ಸಾಕ್ಷರತೆ, ಸಹಕಾರಗಳ ಬಗ್ಗೆ ಶಿಕ್ಷಕರೂ ಶಿಕ್ಷಕವಿದ್ಯಾರ್ಥಿಗಳೂ ಚಿಕ್ಕ ಭಾಷಣಗಳನ್ನು ಮಾಡಿದರು. ಮತ್ತು ಹಳ್ಳಿಗರು ನೆರವಾದ ಬಗ್ಗೆ ಧನ್ಯವಾದಗಳನ್ನು ಅರ್ಪಿಸಿದರು.

೪. ೫–೧೨–೪೭ನೆಯ ದಿನ ಟ್ರೇನಿಂಗ ಕಾಲೇಜಿನಲ್ಲಿ ಮೆಹೆರ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಅವರ ಅಧ್ಯಕ್ಷತೆಯಲ್ಲಿ ಪ್ರೌಢ ಶಿಕ್ಷಣ ವರ್ಗವು ಪ್ರಾರಂಭವಾಯಿತು. ವರ್ಗವನ್ನು ಕೆ. ಇ ಬೋರ್ಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಉದ್ಘಾಟಿಸಿದರು. ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ಮೊದಲನೆಯ ಅಸಿಸ್ಟಂಟರೂ ಮಾತಾಡಿದರು. ವರ್ಗವನ್ನು ಪ್ರ್ಯಾಕ್ಟೆಸಿಂಗ ಸ್ಕೂಲಿನ ಶಿಕ್ಷಕರಾದ ಶ್ರೀ ಚೆನ್ನಪ್ಪ ಪಾವಟಿಯವರು ನಡೆಸುತ್ತಿದ್ದಾರೆ. ಶ್ರೀ. ಎ. ಇನ್ಸಪೆಕ್ಟರರು ಉಪದೇಶಪರ ಭಾಷಣ ಮಾಡಿ ವರ್ಗಕ್ಕೆ ಯಶಸ್ಸು ಕೋರಿದರು.

೯. **ಶಾರೀರಕ ಶಿಕ್ಷಣ ವಿಚಾರಣೆ :** ೨೦–೧೨–೪೭ನೆಯ ದಿನ ಶಾರೀರಕ ಶಿಕ್ಷಣ ದಿನಾಚರಣೆಯೂ ಆಚರಿಸಲ್ಪಟ್ಟಿತು. ಶಿಕ್ಷಕರೂ ವಿದ್ಯಾರ್ಥಿಗಳೂ ಶ್ರೀ. ಎ. ಇನಸ್ಪೆಕ್ಟರ ಅವರ ಅಧ್ಯಕ್ಷತೆಯಲ್ಲಿ ನಡೆದ ನಗರದ ಸಾಮೂಹಿಕ ಶಿಕ್ಷಣದ ದಿನಾಚರಣೆಯಲ್ಲಿ ಭಾಗವಹಿಸಿದ್ದರು.

ಕಾರವಾರ ಟ್ರೇನಿಂಗ ಕಾಲೇಟದ ಚಟುವಟಿಕೆಗಳು

ಕಾರವಾರ ಟ್ರೇನಿಂಗ ಕಾಲೇಜದ ಶಿಕ್ಷಕ ವಿದ್ಯಾರ್ಥಿ ಶ್ರೀ. ರಾಜಾರಾಮ ಚಿತ್ರಿಗೆಮಠ ಅವರು ಬರೆದ ಕಾರವಾರ ಟ್ರೇನಿಂಗ ಕಾಲೇಜದ ಚಟುವಟಿಕೆಯ ವಿಸ್ತೃತ ವರದಿಯು ಕಾರವಾರ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ಶ್ರೀ. ಎಸ್. ಆರ್. ಜೋಶಿ ಅವರಿಂದ ಅಧಿಕೃತವಾಗಿ ಬಂದಿದೆ. ಸ್ಥಳಾಭಾವದ ಮೂಲಕ ಅದನ್ನು ಸಂಕ್ಷಿಪ್ತಗೊಳಿಸಿ ಇಲ್ಲಿ ಕೊಡಲಾಗಿದೆ:—

೧. **ಕಾವ್ಯಗಾನ :** ಕಾಲೇಜದ ಅಧ್ಯಾಪಕರಾದ ಶ್ರೀ. ಟಿ. ಕೆ. ಪಾಟೀಲ ಮತ್ತು ಶಿಕ್ಷಕ ವಿದ್ಯಾರ್ಥಿಗಳ ಕಾವ್ಯಗಾಯನವು ಕಾರವಾರದ ಕರ್ನಾಟಕ ಸಂಘದಲ್ಲಿ ಶ್ರೀ. ಎಸ್. ಆರ್. ಜೋಶಿ ಅವರ ಅಧ್ಯಕ್ಷತೆಯಲ್ಲಿ., ಹೈಸ್ಕೂಲಿನ ಹೆಡ್‌ಮಾಸ್ತರರ ಅಧ್ಯಕ್ಷತೆಯಲ್ಲಿ ಶ್ರೀ. ಟಿ. ಕೆ. ಪಾಟೀಲರದು ಮಾತ್ರ ಕಾವ್ಯಗಾಯನವು ನಡೆಯಿತು. ಶ್ರೀ. ಪಾಟೀಲರು ಶಿರ್ಶಿಯ ಪ್ರೌಢ ಶಿಕ್ಷಣಕೇಂದ್ರದ ಸಂಚಾಲಕರಾಗಿ ವರ್ಗಾಯಿಸಲ್ಪಟ್ಟಿದ್ದರಿಂದ ಶಿಕ್ಷಕ ವಿದ್ಯಾರ್ಥಿಗಳು ಅವರನ್ನು ಬೀಳ್ಕೊಂಡರು. ಕೋಡೀಬಾಗದ ಥಿಯೇಟರದಲ್ಲಿ ಶ್ರೀ. ಪಾಟೀಲರ ಕಾವ್ಯಗಾಯನ, ವಿದ್ಯಾರ್ಥಿಗಳ ಯಕ್ಷಗಾನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

೨. **ಸ್ವಾತಂತ್ರ್ಯೋತ್ಸವ :** ೧೪-೮-೧೯೪೭ನೆಯ ದಿನ ಮಧ್ಯ ರಾತ್ರಿಯಲ್ಲಿ ೧೨ ಬಾರಿಸಿ ಒಂದು ನಿಮಿಷದ ನಂತರ ಕಾಲೇಜದ ಮುಂದೆ ಶ್ರೀ ಪ್ರಿನ್ಸಿಪಾಲರು ಹೊಸ ರಾಷ್ಟ್ರ ಧ್ವಜವನ್ನು ಹಾರಿಸಿದರು. ಮತ್ತು ಸ್ವಾತಂತ್ರ್ಯ ಸಮರದಲ್ಲಿ ಹುತಾತ್ಮರಾದವರನ್ನು ಸ್ಮರಿಸಲಾಯಿತು. ಧ್ವಜದ ಬಗ್ಗೆ ಪ್ರಿನ್ಸಿಪಾಲರು ಮಾತನಾಡಿ ಶೈಕ್ಷಣಿಕ ಕಾರ್ಯಕ್ಷೇತ್ರದಲ್ಲಿ ದುಡಿಯುವವರ ಇನ್ನು ಮುಂದಿನ ಕರ್ತವ್ಯದ ಬಗ್ಗೆ ಮಾತಾಡಿದರು. ಊರಿನ ಸ್ವಾತಂತ್ರ್ಯೋತ್ಸವದಲ್ಲಿ ಕಾಲೇಜಿನವರೆಲ್ಲರೂ ಭಾಗವಹಿಸಿದರು.

೩. **ಕೈಬರೆಹದ ಪತ್ರಿಕೆ :** ಜಾಲ್ಲಿ ತಿಂಗಳಿಂದ ಶಿಕ್ಷಕವಿದ್ಯಾರ್ಥಿಗಳು ಕೈಬರೆಹದ ದ್ವಿಮಾಸ ಪತ್ರಿಕೆಯನ್ನು ಹೊರಡಿಸಿದ್ದಾರೆ, ೨ ಸಂಚಿಕೆಗಳು ಹೊರಬಿದ್ದಿವೆ. ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಸಾಹಿತ್ಯ ಕೃತಿಗಳನ್ನು ಇದಕ್ಕೆ ಕೊಟ್ಟು ನೆರವಾಗುತ್ತಿದ್ದಾರೆ.

೪. **ಪ್ರೌಢ ಶಿಕ್ಷಣ ವರ್ಗ :** ಬಾಡದ ಕನ್ನಡ ಶಾಲೆಯಲ್ಲಿ ೪೭ ಸಪ್ಟಂಬರ ೪೮ರಿಂದ ಕಾಲೇಜದ ಪರವಾಗಿ ಪ್ರೌಢ ಶಿಕ್ಷಣ ವರ್ಗವು ರಾ. ಸಾ. ತೇಲಂಗರವರ ಅಧ್ಯಕ್ಷತೆಯಲ್ಲಿ

ಪ್ರಾರಂಭಿಸಲ್ಪಟ್ಟಿತು. ಬಾಡ ಶಾಲೆಯ ಹೆಡ್‌ಮಾಸ್ತರರಾದ ಶ್ರೀ. ಜಿ. ಜಿ. ಹೆಗಡೆಯವರು ಈ ವರ್ಗವನ್ನು ಸುವ್ಯವಸ್ಥಿತವಾಗಿ ನಡೆಸುತ್ತಿದ್ದಾರೆ. ಅಲ್ಲಿ ಯಕ್ಷಗಾನದ ಕಾರ್ಯಕ್ರಮವೂ ಆಂದು ಜರುಗಿತು.

೫. **ಚರ್ಚಾಕೂಟ :** ಶ್ರೀ. ಕೃಷ್ಣರಾವ ಹೆಳದಿಪುರಕರ ವಕೀಲರ ಅಧ್ಯಕ್ಷತೆಯಲ್ಲಿ ಸಪ್ಟಂಬರ ೧೩ ರಿಂದ ಚರ್ಚಾ ಕೂಟವನ್ನು ಸ್ಥಾಪಿಸಲಾಯಿತು. ಆಂದು ಪುನಃ ಯಕ್ಷಗಾನದ ಕಾರ್ಯಕ್ರಮವಾಯಿತು. ಸಪ್ಟಂಬರ ೨೦ಕ್ಕೆ 'ಬ್ರಿಟಿಶರಿಂದ ಹಿಂದುಸ್ತಾನಕ್ಕೆ ಲಾಭವಾಗಿದೆ.' ಎಂಬ ವಿಷಯದ ಚರ್ಚೆಯಾಯಿತು.

೬. **ಗಾಂಧೀ ಸಪ್ತಾಹ :** ಗಾಂಧೀ ಜನ್ಮ ನಿಮಿತ್ತ ಅಕ್ಟೋಬರ ೨ರಿಂದ ಒಂದು ಅಖಂಡ ಸಪ್ತಾಹ ಸೂತ್ರ ಯಜ್ಞ ನಡೆಯಿತು. ಈ ಕಾರ್ಯಕ್ಕೆ ಪ್ರಿನ್ಸಿಪಾಲರೂ ಶಿಕ್ಷಕರೂ ಕಳಕಳಿಯಿಂದ ನೆರವಾದರು. ಹಗಲು ರಾತ್ರಿ ತಕಲಿ ಹಾಗೂ ರಾಟೆಗಳೂ ತಿರುಗುತ್ತಿರುವ ನೋಟ ಪ್ರಭಾವ ಶಾಲಿ ಹಾಗೂ ಭಾವಪ್ರಚೋದಕವಾಗಿತ್ತು. ೧೧ನೆಯ ತಾರೀಖಿಗೆ ಶ್ರೀ ಹೆಳದಿಪುರಕರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಾಂಧೀಜಿಯವರಿಗೆ ದೀರ್ಘಾಯುವನ್ನು ಕೋರಲಾಯಿತು. ಗಾಂಧೀಜಿಯವರ ವಯಸ್ಸಿಗೆ ಸರಿಯಾಗಿ ೭೪ ಲಡಿಗಳನ್ನು ಗಾಂಧೀಜಿಯನರಿಗೆ ಅರ್ಪಿಸಲಾಯಿತು. ಗಾಂಧೀಜಿಯವರು ಬಿರ್ಲಾರವರ ಮುಖಾಂತರ ಕಳಿಸಿದ ಸಂದೇಶವ ಮೆರೆಗೆ ಜವು ಸೇವಾಗ್ರಾಮಕ್ಕೆ ಕಳಿಸಲ್ಪಟ್ಟವೆಂಬುದು ಕಾಲೇಜಿಗೆ ಅಭಿಮಾನದ ಸಂಗತಿಯಾಗಿದೆ.

೭. **ನಾಡಹಬ್ಬ :** ಕಾರವಾರದ ಕರ್ನಾಟಕ ಸಂಘದೊಡನೆ ಶಿಕ್ಷಕವಿದ್ಯಾರ್ಥಿಗಳೂ ಅಧ್ಯಾಪಕೂ ಸೇರಿ ನಾಡಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು. ಮತ್ತು 'ಜಯಶ್ರೀ' ಎಂಬ ನಾಟಕವನ್ನು ಅಭಿನಯಿಸಿದರು.

೮. **ಗುಡ್ಡೆಹಳ್ಳಿಯ ಪ್ರವಾಸ :** ಅಕ್ಟೋಬರ ೨೭ನೆಯ ದಿನ ಅಧ್ಯಾಪಕರೂ ಶಿ. ವಿದ್ಯಾರ್ಥಿಗಳೂ ನಿಸರ್ಗಸುಂದರವಾದ ಗುಡ್ಡೆಹಳ್ಳಿಯ ಪ್ರವಾಸವನ್ನು ಮಾಡಿದರು. ಸಮುದ್ರಪಾತಳಿಯಿಂದ ಸುಮಾರು ೩೦೦ ಫೂಟು ಎತ್ತರವಿರುವ ಪರ್ವತ ಪ್ರದೇಶದ ಹಳ್ಳಿಯಿದು. ಅಲ್ಲಿ ವಿವಿಧವಿನೋದಾವಳಿಯನ್ನು ಜರುಗಿಸಲಾಯಿತು.

೯. **ವ್ಯಾಖ್ಯಾನ:** ನವ್ಹಂಬರ ೩೦ನೆಯ ದಿನ ಶ್ರೀ ಎಂ. ಎಂ. ಶಾನಭಾಗ ಎಂ. ಎಲ್. ಎ ಇವರು ' ವಿಶ್ವಭಾಷೆ ' ಎಂಬ ವಿಷಯವಾಗಿ ಮನೋರಂಜಕ ಭಾಷಣ ಮಾಡಿದರು.

೧೦. **ಶಾರೀರಕ ಶಿಕ್ಷಣ ದಿನಾಚರಣೆ:** ಡಿಸೆಂಬರ ೨೦ನೆಯ ದಿನ ಕಾಲೇಜದ ಶಿಕ್ಷಕ ವಿದ್ಯಾರ್ಥಿಗಳು ಪಟ್ಟಣದ ಇತರ ಶಿಕ್ಷಣ ಸಂಸ್ಥೆಗಳ ಜ್ಞಾನರ್ಜನಿಗಳೊಡನೆ ಶಾರೀರಕ ಶಿಕ್ಷಣ ದಿನಾಚರಣೆಯನ್ನು ವಿಜೃಂಭಣೆಯಿಂದ ಜರುಗಿಸಿದರು.

೧೧. **ಚಲಚ್ಚಿತ್ರ ಪ್ರದರ್ಶನ:** ೩-೩ ಸಲ ಕಾಲೇಜಿನ ಪರವಾಗಿ ಮಾಯಾಲಾಂದ್ರದ ಮುಖಾಂತರ ವಿವಿಧ ವಿಷಯಗಳ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಸೂಚನೆ

ಶಾಲೆಗಳಿಂದ ಬಂದ ಸುದ್ದಿಗಳನ್ನು ಸ್ಥಳಾಭಾವದ ಮೂಲಕ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವದು. --ಸಂಪಾದಕರು

ಶ್ರೀಮಾನ್ ಎಲ್. ಆಯ್. ಆಕಳವಾಡಿ, ಬಿ. ಎ. ಬಿ. ಕಾಮ್ ಅವರಿಂದ ರಚಿಸಲ್ಪಟ್ಟು ಸರಕಾರದಿಂದ ಮಾನ್ಯತೆ ಪಡೆದ ಪುಸ್ತಕಗಳು

ಪ್ರಾಥಮಿಕ ಶಾಲೆಗಳಿಗಾಗಿ ಪಠ್ಯ ಪುಸ್ತಕ

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	ಭಾಗ	೪
ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೫
ಸಚಿತ್ರ ಪೌರನೀತಿ ಮಾಲೆ	,,	೪
ಭೂಮಂಡಲ ಪರಿಚಯ	,,	೩
ಭೂಮಂಡಲ ಪರಿಚಯ	,,	೪
ಅಧುನಿಕ ರೈತ	,,	೨

ಪುರವಣಿ ಪುಸ್ತಕ ಹಾಗೂ ವಾಚನಾಲಯಗಳ

ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೩
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೪
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೫
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೬

ಶಿಕ್ಷಕರ ಹಾಗೂ ಬಾಲಕರ ವಾಚನಾಲಯಕ್ಕಾಗಿ

ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೧
ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೨
ಸಚಿತ್ರ ಸಾಮಾನ್ಯ ವಿಜ್ಞಾನ ಮಾಲೆ	,,	೩
ಸಚಿತ್ರ ಪೌರನೀತಿ ಮಾಲೆ	,,	೧
ಸಚಿತ್ರ ಪೌರನೀತಿ ಮಾಲೆ	,,	೨
ಸಚಿತ್ರ ಪೌರನೀತಿ ಮಾಲೆ	,,	೩
ಧಾರವಾಡ ಜಿಲ್ಲೆಯ ಭೂಗೋಲ		
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೧
ಭೌಗೋಲಿಕ ನಕಾಶ ಪುಸ್ತಕ ಮಾಲೆ	,,	೨

ರಾಮಾಶ್ರಯ ಬುಕ್ ಡಿಪೊ, ಧಾರವಾಡ

ಪ್ರಬಂಧ ಕುಸುಮಾವಲಿ.

ಶ್ರೀ. ಎಸ್. ಪ್ಹಿ. ಕಲ್ಮಠ, ಎಮ್. ಎ., ಬಿ. ಟಿ. ಗದಗ ಅವರು ಬರೆದುದು:—

೧ನೇ ಭಾಗದಲ್ಲಿ— ಬರಿಹದ ಗುಟ್ಟು, ಚಿತ್ರವಾಚನ, ಕಥೆ, ಭಾಷಣ, ಪತ್ರಲೇಖನ, ಕಾರ್ಯಕ್ರಮ, ಸರ್ಕ್ಯುಲರ, ಜಾಹೀರಾತು, ವೃತ್ತಪತ್ರಗಳಿಗೆ ಸುದ್ದಿಯನ್ನು ಕೊಡುವದು, ಅರ್ಜಿ ಹಾಗು ರಿಪೋರ್ಟುಗಳು ಇವೆ. ಪುಟ ೧೮೬, ಬೆಲೆ: ೧ ರೂ. ೮ ಆ.

೨ನೇ ಭಾಗದಲ್ಲಿ— ಅಲಂಕಾರಿಕ ಭಾಷೆಯ ವಾಕ್ಯಗಳನ್ನು ಸುಲಭ ಭಾಷೆಯಲ್ಲಿ ಬರೆಯುವದು, ಸಂಕ್ಷಿಪ್ತ ಸಂಗತಿಗಳನ್ನು ವಿಸ್ತರಿಸಿ ಬರೆಯುವದು. ವರ್ಣನಪರ, ಚಿಂತನಪರ, ಕಥನಪರ (ಆತ್ಮಚರಿತ್ರೆ-ಚರಿತ್ರೆ) ನಿಬಂಧಗಳು, ಭಾಷಣಗಳು, ಸಂಕ್ಷಿಪ್ತನಿಬಂಧಗಳು ಇವೆ. ಪುಟ ೧೯೦, ಬೆಲೆ: ೧ರೂ. ೮ ಆ.

ಎರಡೂ ಭಾಗಗಳಲ್ಲಿ ಹೆಣ್ಣು-ಗಂಡು ಹುಡುಗರ ಮುಲ್ಕೀಪರೀಕ್ಷೆಯ ಹಾಗು ಮಾಟ್ರಿಕ್ ಮೊದಲಾದ ಪರೀಕ್ಷೆಗಳ ಪ್ರಶ್ನೆಗಳಿಗೆ ಉತ್ತರಗಳಿವೆ. ಪ್ರತಿಯೊಂದು ವಿಷಯದ ಮೇಲೆ ಹೇರಳವಾದ ಅಭ್ಯಾಸಗಳಿವೆ ಕಲಿಸುವವರಿಗೂ ಕಲಿಯುವವರಿಗೂ ಸೂಚನೆಗಳಿವೆ. ಇಡೀ ಪುಸ್ತಕವು ಅಧುನಿಕ ಅಭ್ಯಾಸ ಪದ್ಧತಿಗನುಗುಣವಾಗಿ ಬರೆಯಲ್ಪಟ್ಟು ಶಿಕ್ಷಣ ತಜ್ಞರ ಸದಭಿಪ್ರಾಯಗಳನ್ನೊಳಗೊಂಡಿದೆ. ಗ್ರಾಹಕರು ತ್ವರೆ ಮಾಡಿರಿ—

ಪಿ ಸಿ. ಶಾಬಾದಿಮಠ, ಬುಕ್ ಡಿಪೊ, ಗದಗ

ಪಠ್ಯ ಪುಸ್ತಕವೆಂದು ಮಂಜೂರಾಗಿದೆ.

ಹೊಸ ಪದ್ಧತಿಯ

ಹಿಂದೀ ಜಮಾ ಖರ್ಚು

ಭಾಗ ೧.

(ಮನೆಯ ಮತ್ತು ವ್ಯಾಪಾರಿ ಜಮಾಖರ್ಚು)

ಸರಕಾರದಿಂದ ಈ ಪುಸ್ತಕವು ಪ್ರಾಯಮರಿ ಶಾಲೆಗಳಿಗೆ ಟೆಕ್ಸ್ಟ ಬುಕ್ ಎಂದು ಮಂಜೂರಾಗಿದೆ. ಇದರಲ್ಲಿ ಕೆದಿ, ಖತಾವಣಿ, ತೇರಿಜು, ಬಾಕಿಗಳ ತಾಳೆ ಉ—ಖ. ಖಾತೆ, ಲಾ. ಹಾ. ಖಾತೆ ಆಫಾವೆ. ತೊಂ. ವಿ. ಕೆದಿ, ಹುಂಡಿ, ಚೆಕ್ಕು. ಬಡ್ಡಿ ಆಕರಣೆ, ಒಕ್ಕಲ ತನದ ಒಲವಿನ ಶಾಲೆಯ ಜಮಾ ಖರ್ಚು, (ಕಲ್ಪಿವೇಶನ್ ಶೀಟು, ಲೇಬರ ಶೀಟ ಮುಂ.) ಪ್ರಶ್ನೆಗಳು, ಪ್ರಶ್ನ ಕಾಗದಗಳು, ಅವುಗಳ ಉತ್ತರಗಳು ಇರುವವು. ಇದು ಕನ್ನಡ ೫, ೬, ೭ನೆಯ ಇಯತ್ತೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೂ, ಅಗ್ರಿಕಲ್ಚರ ಬಾಯಸ್ ಕ್ಲಾಸಿನವರಿಗೂ, ಪ್ರಾ. ಶಾ. ಪ್ರ. ಪ ಪರೀಕ್ಷೆಯ ಉಮೇದವಾರರಿಗೂ ಟ್ರೇನಿಂಗ ಕಾಲೇಜ ಶಿಕ್ಷಕ ವಿದ್ಯಾರ್ಥಿಗಳಿಗೂ ಇದು ಬಹು ಉಪಯುಕ್ತವಿದೆ. ಬೆಲೆ: ೧ ರೂ.

(೨) **ಆರಂಭದ ಜಮಾ ಖರ್ಚು** (೪ನೆಯ ಇಯತ್ತೆಯವರಿಗೆ) ಬೆಲೆ: ೩ ಆಣೆ.

(೩) **ಅಂಗಸಾಧನ ಶಿಕ್ಷಕ** (P. T. Book) ಬೆಲೆ: ೪ ಆಣೆ

(೪) **ಗಣಿತ ಸಾರಸಂಗ್ರಹ** (ಹೊಸ ಪದ್ಧತಿಯ ಗಣಿತವಿರುವದರಿಂದ ಮುಲ್ಕೀ ಪರೀಕ್ಷೆಗೆ ಸಹಾಯಕ ವಿರುವದು) ಬೆಲೆ: ೬ ಆಣೆ.

ವಿಳಾಸ— ರಾ. ಸಿ. ಸಜ್ಜನ ಮಾಸ್ತರ,

ಚೋರಾಪುರಪೇಟೆ, ವಿಜಾಪುರ.

Printed by R. G. Hukkeri at the Yasant Printing Works, Dharwar.
Published by R. K. Lakkundi Esqr. B. A. B. T. Principal [illegible]

ಕನ್ನಡ

ಪ್ರಾಥಮಿಕ ಶಿಕ್ಷಣ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಮಹಾತ್ಮಾ ಗಾಂಧಿಯವರು

(ಪಡಿಯಚ್ಚು ಜಯಕರ್ನಾಟಕದ ಕೃಪೆಯಿಂದ)

★

ಪರಿವಿಡಿ.

೧. ರಾಷ್ಟ್ರಪಿತಾ.
೨. ಮಹಾತ್ಮಾ ಗಾಂಧಿ.
೩. ಮರೆಯಾದ ಮಹಾತ್ಮ.
೪ ವೈಧರ್ಮ್ಯಮೂಲಕ ಅಲಂಕಾರಗಳು.
೫. ನಮ್ಮನ್ನಗಲಿದ ಬಾಪೂ.
೬. ಮುಲ್ಕೀ ಪರೀಕ್ಷೆಯ ಕಾರ್ಯಕ್ರಮಗಳು.
೭. ವರ್ಧಪ್ಯಾಯಿಜ ಪರೀಕ್ಷೆಯ ನಿಯಮಗಳು.
೮. ಟ್ರೇನಿಂಗ ಕಾಲೇಜದ ಜಟುವಟಿಕೆಗಳು.

ಸಂಪಾದಕರು :

ರಂಗೋ ಕೃಷ್ಣ ಲಕ್ಕುಂಡಿ, ಬಿ. ಎ. (ಆನರ್ಸ), ಬಿ. ಟಿ. (ಫರ್ಸ್ಟ ಕ್ಲಾಸ)

ಜನೆವರಿ, ಫೆಬ್ರುವರಿ, ಮಾರ್ಚ, ೧೯೪೮.

ಆಕಳವಾಡಿ ಬುಕ್ ಡಿಪೋ.

ವಿಜಯ ಟಾಕೀಜದ ಎದುರಿಗೆ ಧಾರವಾಡ.

ನಮ್ಮಲ್ಲಿ ಶಾಲೋಪಯೋಗಿ ಪುಸ್ತಕಗಳೂ, ಜನರಲ್ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ, ಸರಕಾರಿ ಸಂಘದ ಪುಸ್ತಕಗಳೂ, ಫಾರ್ಮುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ. ವ್ಯಾಪಾರಿಗಳೂ ಇತರರೂ ಮೇಲಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕು.

ಆರ್. ಆರ್. ಆಕಳವಾಡಿ

ವಿವೇಕ

(ಏಕಾಂಕ ನಾಟಕ)

ಬರೆದವರು:—ಚೆ. ಬ. ಪಾವಟೆ, ಪ್ರ್ಯಾಕ್ಟೀಸಿಂಗ ಸ್ಕೂಲ ಧಾರವಾಡ. 'ವಿವೇಕ' ಎಂಬ ನಾಟಕವು "ಒಳ ಜಗಳ"ದ ಪರಿಣಾಮವನ್ನು ದರ್ಶಕರ ಮೇಲೆ ಬಿಂಬಿಸುವದು. ಮಕ್ಕಳು ಈ ನಾಟಕವನ್ನು ಅಭಿನಯಿಸಿ, ಸಮಾಜದ ಏಳಿಗೆಗೆ ಕಾರಣರಾಗಬಹುದು. ಪ್ರತಿಯೊಬ್ಬ ಶಿಕ್ಷಕರು ಇದರ ಲಾಭವನ್ನು ಜನತೆಗೆ ಮಾಡಿಕೊಡಬೇಕು. ಇದರ ಬೆಲೆ:ನಾಲ್ಕಾಣೆ ಮಾತ್ರ

ಪುಸ್ತಕ ದೊರೆಯುವ ಸ್ಥಳ:

ಕಸ್ತೂರಿ ಚೆನ್ನಪ್ಪ ಪಾವಟೆ,

ಮೊಖಾಸಿ ಚಾಳ, ಲೈನ ಬಜಾರ, ಧಾರವಾಡ.

ಪ್ರಾಥಮಿಕ (ಬೇಸಿಕ್ ಹಾಗೂ ಸಾಮಾನ್ಯ) ಶಾಲೆಗಳ ಹೊಸ ಅಭ್ಯಾಸ ಪತ್ರಿಕೆಯನ್ನು ಅನುಸರಿಸಿ ಬರೆದ

ಭೂಮಿತಿಯ ಪುಸ್ತಗಳು

* ವಿದ್ಯಾಖಾತೆಯಿಂದ ಪಠ್ಯ ಪುಸ್ತಕಗಳೆಂದು ಮಂಜುರಾಗಿವೆ.

ಲೇಖಕರು: ರಂ. ರಾ. ಶೇಲಾರ

* ಪ್ರಾಥಮಿಕ ಭೂಮಿತಿ (೪ನೆಯ ಇಯತ್ತೆ)	ಬೆಲೆ	೦ ೪ ೦
* ಪ್ರಾಥಮಿಕ ಭೂಮಿತಿ (೫ನೆಯ ಇಯತ್ತೆ)		೦ ೧೪ ೦
ಪ್ರಾಥಮಿಕ ಭೂಮಿತಿ (೬ನೆಯ ಇಯತ್ತೆ)		೧ ೬ ೦
ಪ್ರಾಥಮಿಕ ಭೂಮಿತಿ (೭ನೆಯ ಇಯತ್ತೆ)	ಅಚ್ಚಿನಲ್ಲಿದೆ.	

೪ನೆಯ ಪುಸ್ತಕವು ಬಾಲಕರ ವರ್ಗದಿಂದ ೭ನೆಯ ಇಯತ್ತೆಯ ವರೆಗಿನ ವಿಷಯವನ್ನೂ ಸಂಗ್ರಾಹಕರವಾಗಿ ಒಳಗೊಂಡಿದೆ.

ಪ್ರಾ. ಶಾ. ಪ್ರ. ಪರೀಕ್ಷೆಯ ವಿದ್ಯಾರ್ಥಿಗಳಿಗೆ ೫, ೬, ೭ನೆಯ ಪುಸ್ತಕಗಳು ಅವಶ್ಯ

ಸೋಲ ಡಿಸ್ಟ್ರಿಬ್ಯೂಟರ್ಸ :

ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಅಂಕಗಣಿತ

ಶ್ರೀ. ಎಚ್. ಬಿ. ಉಮಡಿಕರ, ಎಂ. ಎ.

ಅವರು ಬರೆದುದು:

ಬೆಲೆ ೧—೪—೦

ಕನ್ನಡ ೬, ೭ನೆಯ ಇಯತ್ತೆಯವರಿಗೂ ಪಠ್ಯ ಪುಸ್ತಕವೆಂದು ಮಂಜೂರಾಗಿದೆ.

ಟ್ರೇನಿಂಗ ಪಡೆಯುವವರಿಗೂ ಅತ್ಯುಪಯುಕ್ತ.

ಎಲ್ಲ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯುತ್ತವೆ.